ಬೆಂಗಳೂರು
ಶನಿವಾರ, 11 ಏಪ್ರಿಲ್ 2026
ಸಂಪುಟ 33, ಸಂಚಿಕೆ 160, ಪುಟಗಳು 16+4
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಮುಗಿಯದ ರಗಳೆ
ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ
• ಪುಟ 2

ಅರ್ಜಿದಾರರಿಗೆ ₹1 ಲಕ್ಷ ದಂಡ

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಿರುವ ಪಿಐಎಲ್ ವಜಾಗೊಳಿಸಿರುವ ಹೈಕೋರ್ಟ್, ಪ್ರಚಾರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಅರ್ಜಿದಾರರಿಗೆ ಬರೋಬ್ಬರಿ 1 ಲಕ್ಷ ರೂ.ದಂಡ ವಿಧಿಸಿ ಅರ್ಜಿ ವಜಾಗೊಳಿಸಿದೆ.

ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡುವುದಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ಪ್ರಸ್ತಾವ ಪ್ರಶ್ನಿಸಿ ಬೆಂಗಳೂರಿನ ಎಚ್.ಎನ್. ಚಂದನಾ ಮತ್ತು ಎಸ್.ವೆಂಕಟೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ವಜಾಗೊಳಿಸಿದೆ. ಸಚಿವರು ಆಕ್ಷೇಪಾರ್ಹವಾದ ಹೇಳಿಕೆ ನೀಡಿದ್ದು, ನ್ಯಾಯಾಲಯವು ವಿಶೇಷ ವ್ಯಾಪ್ತಿಯ ಅಧಿಕಾರ ಬಳಸಿ, ಹೇಳಿಕೆ ವಜಾಗೊಳಿಸಬೇಕು ಎಂದು ಕೋರಿದ್ದಾರೆ. ಇದೊಂದು ಪ್ರಚಾರ ಹಿತಾಸಕ್ತಿ ಹೊಂದಿರುವ ಅರ್ಜಿಯಾಗಿದ್ದು, ಅರ್ಜಿದಾರರಿಗೆ 50,000 ದಂಡ ವಿಧಿಸಿ ವಜಾಗೊಳಿಸಲಾಗಿದೆ. ಎರಡು ವಾರಗಳಲ್ಲಿ ಕಾನೂನು ಸೇವಾ ಪ್ರಾಧಿಕಾರಕ್ಕೆ ದಂಡದ ಮೊತ್ತ ಪಾವತಿಸಬೇಕು ಎಂದು ನಿರ್ದೇಶಿಸಿತು. ಇಲ್ಲವಾದಲ್ಲಿ ಅದನ್ನು ಭೂಕಂದಾಯ ಬಾಕಿಯಾಗಿ ವಸೂಲಿ ಮಾಡಲು ಜಿಲ್ಲಾಧಿಕಾರಿಗೆ ಆದೇಶ ಕಳುಹಿಸಿಕೊಡಲು ಸರ್ಕಾರಕ್ಕೆ ನಿರ್ದೇಶಿಸಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಹಿಂದಿಯನ್ನು ಕೈಬಿಡುವ ಆತಂಕ ವ್ಯಕ್ತಪಡಿಸಿದರು. ಅದಕ್ಕೆ ಪೀಠವು ಪತ್ರಿಕಾ ವರದಿಯಲ್ಲಿ ಮೂರು ಪದಗಳು ಮಾತ್ರ ಇವೆ. ಹಿಂದಿಯನ್ನು ಕೈಬಿಡುವ ಹೇಳಿಕೆಯೇ ವರದಿಯಲ್ಲಿಲ್ಲ, ಇದಕ್ಕಾಗಿ ದಂಡವನ್ನು 1 ಲಕ್ಷಕ್ಕೆ ಏರಿಸಲಾಗುತ್ತಿದೆ ಎಂದಿತು. ಆದೇಶದಲ್ಲಿ ಮಾರ್ಪಾಡು ಮಾಡಿದ ಪೀಠವು ದಂಡದ ಮೊತ್ತವನ್ನು 1 ಲಕ್ಷಕ್ಕೆ ಏರಿಕೆ ಮಾಡಿತು. ಅಲ್ಲದೇ, ಹಿಂದಿಯನ್ನು ಕೈಬಿಡಲಾಗುತ್ತದೆ ಎಂಬ ಹೇಳಿಕೆಯೇ ಉಲ್ಲೇಖಿತ ಪತ್ರಿಕಾ ವರದಿಯಲ್ಲಿಲ್ಲ, ಇದೊಂದು ಪ್ರಚಾರ ಹಿತಾಸಕ್ತಿ ಅರ್ಜಿಯಾಗಿದೆ ಎಂದು ಆದೇಶದಲ್ಲಿ ದಾಖಲಿಸಿತು. ವಿವಾದಾತ್ಮಕ ವಿಷಯ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ ಎಂಬುದನ್ನು ಗಮನಿಸಿ, ಹೇಳಿಕೆಯಲ್ಲದ ಹೇಳಿಕೆ ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಕೇವಲ ಮೂರು ಪದದ ಪತ್ರಿಕಾ ಹೇಳಿಕೆ! ಎಂದು ಕಿಡಿಕಾರಿತು.

ಅನಾವರಣ



ಬೆಂಗಳೂರು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನ ಉನ್ನತೀಕರಿಸಿದ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ ಅನ್ನು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಡಿ.ಕೆ.ಸುನೀಲ್ ಶುಕ್ರವಾರ ಅನಾವರಣಗೊಳಿಸಿದರು.

ಗ್ರಾಹಕರಿಗೆ ತೊಂದರೆ ನೀಡಿದ್ರೆ ಕ್ರಮ

• **ಬೆಂಗಳೂರು:** ಮಾರುಕಟ್ಟೆಯಲ್ಲಿ ಸರ್ಕಾರದ ದರದಂತೆ ಖಾಸಗಿ ಕಂಪನಿಗಳು ಗ್ಯಾಸ್ ವಿತರಿಸಬೇಕು. ಹೆಚ್ಚಿನ ದರ ವಿಧಿಸಿ ಗ್ರಾಹಕರಿಗೆ ತೊಂದರೆ ನೀಡದಿದ್ದಲ್ಲಿ ಅಂತಹ ಕಂಪನಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಸೀಜ್ ಮಾಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.



ಶುಕ್ರವಾರ ವಸಂತನಗರದಲ್ಲಿರುವ ಆಹಾರ ಭವನದಲ್ಲಿ ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಖಾಸಗಿ ಕಂಪನಿಗಳ ಹೆಚ್ಚಿನ ದರದಿಂದ ಗ್ರಾಹಕರಲ್ಲಿ ಗೊಂದಲ ಉಂಟಾಗಿದ್ದು ಅದನ್ನು ಕಡಿಮೆ ಮಾಡಿದರೆ ಗ್ರಾಹಕರಿಗೆ ಸಹಕಾರಿಯಾಗಲಿದ್ದು, ತಾವು ನಿರ್ಧಾರ ಮಾಡಬೇಕು ಎಂದು ಸೂಚಿಸಿದರು. ಮಾರುಕಟ್ಟೆಯಲ್ಲಿ ಗ್ರಾಹಕರು ನಿಮಗೆ ಅತ್ಯವಶ್ಯಕವಾಗಿದ್ದು ಈ ಕಷ್ಟದ ಸಂದರ್ಭದಲ್ಲಿ ಗ್ರಾಹಕರಿಗಾಗಿ ಧರ ಹೆಚ್ಚಿಸದೆ ಒಂದೆ ದರವನ್ನು ವಿಧಿಸಲು ನಿಮ್ಮ ಮಾಲೀಕರೊಂದಿಗೆ ಚರ್ಚಿಸಿ ಸರ್ಕಾರದ ದರವನ್ನು ಪಾಲಿಸುವಂತೆ ಮನವರಿಕೆ ಮಾಡಲು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ಹಂಚಿಕೆ ಮಾಡುವ ಇಂಧನವನ್ನು ನಾವು ರಾಜ್ಯದ ಗ್ರಾಹಕರಿಗೆ ವಿತರಣೆ ಮಾಡುವುದು ಮತ್ತು ಹೆಚ್ಚಿನ ಬೇಡಿಕೆಗೆ ಒತ್ತಡ ತಂದು ವಿತರಿಸಲು ನಾವು ಬದ್ಧರಾಗಿ ಕೆಲಸ ಮಾಡುತ್ತಿದ್ದೇವೆ. ಕಾಳಸಂತೆಯಲ್ಲಿ ಹೆಚ್ಚಿನ ಧರದಲ್ಲಿ ಮಾರಾಟ ಮಾಡುವ ಮಾಲೀಕರ ವಿರುದ್ಧ ಕಾನೂನು ಕ್ರಮವಹಿಸಲಾಗುತ್ತದೆ ಮತ್ತು ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ ಎಂದರು.

ನಿತ್ಯ 29 ಸಾವಿರ ವಾಣಿಜ್ಯ ಸಿಲಿಂಡರ್ ವಿತರಣೆ

ರಾಜ್ಯದಲ್ಲಿ ಗೃಹ ಬಳಕೆಯ ಎಲ್‌ಪಿಜಿ ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಿಲ್ಲ. ಇದುವರೆಗೆ ಒಟ್ಟು 88,99,796 ಗೃಹ ಸಿಲಿಂಡರ್‌ಗಳು ವಿತರಣೆಗೊಂಡಿವೆ. ಜತೆಗೆ 5,30,426 ವಾಣಿಜ್ಯ ಸಿಲಿಂಡರ್‌ಗಳು ಹಾಗೂ ಸುಮಾರು 1,17,522 ಆಟೋ ಎಲ್‌ಪಿಜಿ ಸಿಲಿಂಡರ್‌ಗಳು (2232.68 ಮೆಟ್ರಿಕ್ ಟನ್) ವಿತರಣೆಗೊಂಡಿವೆ. ರಾಜ್ಯದಲ್ಲಿ ನಿತ್ಯ 44,700 ವಾಣಿಜ್ಯ ಸಿಲಿಂಡರ್‌ಗಳ ಬೇಡಿಕೆ ಇದ್ದು, ಸರಾಸರಿ 29,463 ವಾಣಿಜ್ಯ ಸಿಲಿಂಡರ್‌ಗಳು ವಿತರಣೆಗೊಳ್ಳುತ್ತಿವೆ. ಆಟೋ ಎಲ್‌ಪಿಜಿ ಸರಬರಾಜು ಸರಾಸರಿ ಶೇ.98 ರಷ್ಟು ಇದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಕಿರುಸುದ್ದಿ

ಅಂಕಗಳ ಆಧಾರದ ಮೇಲೆ ಗ್ರೇಡ್

• **ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇತ್ತೀಚೆಗೆ ತೃತೀಯ ಭಾಷೆಯನ್ನು ಗ್ರೇಡ್‌ಗೆ ಸೀಮಿತಗೊಳಿಸಿದ್ದು, ಅಭ್ಯರ್ಥಿಯು ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಫಲಿತಾಂಶಗಳನ್ನು ಶ್ರೇಣಿಗಳಲ್ಲಿ (ಗ್ರೇಡ್) ಘೋಷಿಸಿ ಸರ್ಕಾರ ಆದೇಶಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಗಳಲ್ಲಿ ಪಡೆದ ಅಂಕಗಳನ್ನು ಶ್ರೇಣಿಗಳ ರೂಪದಲ್ಲಿ ಪ್ರಕಟಿಸಲಿದೆ. ಈ ವಿಷಯಗಳನ್ನು ಅಂಕಪಟ್ಟಿಯಲ್ಲಿ ಹೆಚ್ಚುವರಿ ವಿಷಯಗಳಾಗಿ ನಮೂದಿಬೇಕು ಮತ್ತು ಉತ್ತೀರ್ಣರಾಗಲು ಪರಿಗಣಿಸಲಾಗುವುದಿಲ್ಲ, ಇದು 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಿಂದ ಜಾರಿಗೆ ಬಂದಿದೆ. ತೃತೀಯ ಭಾಷೆಯಾದ ಹಿಂದಿ, ಅರೇಬಿಕ್, ಉರ್ದು, ಮರಾಠಿ ಸೇರಿದಂತೆ ಇತ್ಯಾದಿ ಅಂಕಗಳನ್ನು ಒಟ್ಟು ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ, ಬದಲಾಗಿ ತೃತೀಯ ಭಾಷೆಯಲ್ಲಿ ವಿದ್ಯಾರ್ಥಿಗಳು ಗಳಿಸುವ ಅಂಕಗಳ ಆಧಾರದ ಮೇಲೆ ಎ,ಬಿ,ಸಿ,ಡಿ ಶ್ರೇಣಿಗಳನ್ನು ನೀಡಲಾಗುತ್ತದೆ. ಅದರಂತೆ, ತೃತೀಯ ಭಾಷೆ ಪರೀಕ್ಷೆಯಲ್ಲಿ ಶೇಕಡಾವಾರು 80 ರಿಂದ 100 ರವರೆಗೆ ಎ ಶ್ರೇಣಿ, 50 ರಿಂದ 79ರವರೆಗೆ ಬಿ ಮತ್ತು 49ರವರೆಗೆ ಸಿ ಶ್ರೇಣಿಗಳನ್ನು ನೀಡಲಿದೆ. ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಒಟ್ಟಾರೆಯಾಗಿ ಶೇ.33 ಅಂಕಗಳನ್ನು ಪಡೆಯಬೇಕು ಹಾಗೂ ಅವರ ಒಟ್ಟು 525 ಅಂಕಗಳಲ್ಲಿ ಕನಿಷ್ಠ 173 ಅಂಕಗಳನ್ನು ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಪ್ರತಿಶತ ಅಂಕಗಳನ್ನು ಗಳಿಸಿದರೆ ಅಂತಹ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಘೋಷಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಸೂಚಿಸಿದ್ದಾರೆ.

ದೂರುದಾರರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಪ್ರಮಾಣಪತ್ರ

• **ಬೆಂಗಳೂರು:** ಕಾಂತಾರ ಚಾಪ್ಟರ್-1 ಸಿನಿಮಾದ ದೈವಪಾತ್ರದ ಕುರಿತು ಅಪಮಾನಕಾರಿ ಸನ್ನೆ ಮಾಡಿ ಮಾತನಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿ ಪರಿಷ್ಕೃತ ಕ್ಷಮಾಪಣಾ ಪ್ರಮಾಣ ಪತ್ರ ಸಲ್ಲಿಸುವುದಾಗಿ ನಟ ರಣವೀರ್ ಸಿಂಗ್ ಹೈಕೋರ್ಟ್‌ಗೆ ತಿಳಿಸಿದ್ದಾರೆ. ಗೋವಾದಲ್ಲಿ ಕೆಲ ತಿಂಗಳ ಹಿಂದೆ ನಡೆದ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಾಂತಾರ ಚಾಪ್ಟರ್-1 ಚಿತ್ರದ ಚಾಮುಂಡಿ ದೈವಕ್ಕೆ ಅಪಮಾನ ಮಾಡಿದ ಆರೋಪದಡಿ ದಾಖಲಾಗಿರುವ ಖಾಸಗಿ ದೂರು ಮತ್ತು ಅದರ ಮುಂದುವರಿದ ಭಾಗವಾಗಿ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ, ರಣವೀರ್ ಸಿಂಗ್ ಸಲ್ಲಿಸಿರುವ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ದೂರುದಾರರ ಪರ ವಕೀಲರು, ಅರ್ಜಿದಾರ ರಣವೀರ್ ಸಿಂಗ್ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಪಶ್ಚಾತ್ತಾಪವಿಲ್ಲ, ದೂರು ನೀಡಿರುವುದೇ ತಪ್ಪು ಎಂಬಂತೆ ಬಿಂಬಿಸಲಾಗಿದೆ ಎಂದು ಪೀಠಕ್ಕೆ ತಿಳಿಸಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು, ದೂರುದಾರರೊಂದಿಗೆ ಚರ್ಚಿಸಿ ಅವರಿಗೆ ತೃಪ್ತಿಯಾಗುವ ಭಾಷೆಯಲ್ಲಿಯೇ ಪರಿಷ್ಕೃತ ಪ್ರಮಾಣ ಪತ್ರ ಸಲ್ಲಿಸುವುದಾಗಿ ಹೇಳಿದರು.

ಕೆಪಿಸಿಎಲ್‌ನಿಂದ 15,509 ದಶಲಕ್ಷ ಯುನಿಟ್ ಜಲವಿದ್ಯುತ್ ಉತ್ಪಾದನೆ

ಸಾರ್ವಕಾಲಿಕ ವಿದ್ಯುತ್ ದಾಖಲೆ



• **ಬೆಂಗಳೂರು:** ಜಲ ವಿದ್ಯುತ್ ಉತ್ಪಾದನೆಯಲ್ಲಿ ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೆಪಿಸಿಎಲ್ 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯುನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಬರೆದಿದೆ.

ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರ ಸಚಿವಾಲಯ ವರದಿ ನೀಡಿತ್ತು. ಇದರ ಮಧ್ಯೆಯೇ 2025-26ನೇ ಸಾಲಿನಲ್ಲಿ ಕೆಪಿಸಿಎಲ್ ಈ ದಾಖಲೆ ನಿರ್ಮಿಸಿರುವುದು ಹೆಚ್ಚು ಮಹತ್ವ ಪಡೆದಿದೆ. ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆಯಾಗಿದೆ. 2024-25ನೇ ಸಾಲಿನಲ್ಲಿ 13,853 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

2025-26ನೇ ಸಾಲಿನಲ್ಲಿ ಸ್ಥಾವರಗಳ ವಿವರ

ವಿದ್ಯುತ್ ಸ್ಥಾವರದ ಹೆಸರು	ಸಿಇಎ ಗುರಿ	ಸಾಧನೆ
ಶರಾವತಿ ಕಣಿವೆ	4800 ದಶಲಕ್ಷ ಯುನಿಟ್	5642 ಮಿಲಿಯನ್ ಯುನಿಟ್ (ಶೇ. 17.54ರಷ್ಟು ಹೆಚ್ಚು)
ಮಹಾತ್ಮಾ ಗಾಂಧಿ	549 ದಶಲಕ್ಷ ಯುನಿಟ್	643 ದಶಲಕ್ಷ ಯುನಿಟ್ (ಶೇ. 17.15ರಷ್ಟು ಹೆಚ್ಚು)
ಗೇರುಸೊಪ್ಪ	1060 ದಶಲಕ್ಷ ಯುನಿಟ್	644 ದಶಲಕ್ಷ ಯುನಿಟ್ (ಹಿಂದಿನ ವರ್ಷಕ್ಕಿಂತ ಹೆಚ್ಚು)
ವರಾಹಿ	1060 ದಶಲಕ್ಷ ಯುನಿಟ್	1599 ದಶಲಕ್ಷ ಯುನಿಟ್ (ಶೇ. 50.85ರಷ್ಟು ಹೆಚ್ಚು)
ಭದ್ರಾ	55 ದಶಲಕ್ಷ ಯುನಿಟ್	68 ದಶಲಕ್ಷ ಯುನಿಟ್ (ಶೇ. 25.39ರಷ್ಟು ಹೆಚ್ಚು)
ಶಿಂಷಾ	47 ದಶಲಕ್ಷ ಯುನಿಟ್	66 ದಶಲಕ್ಷ ಯುನಿಟ್ (ಶೇ. 41.03ರಷ್ಟು ಹೆಚ್ಚು)
ಮಾಣಿ	24 ದಶಲಕ್ಷ ಯುನಿಟ್	32 ದಶಲಕ್ಷ ಯುನಿಟ್ (ಶೇ. 34.37ರಷ್ಟು ಹೆಚ್ಚು)

ಸ್ಥಾವರದಲ್ಲಿ ದಾಖಲೆ

ರಾಜ್ಯದ ವಿದ್ಯುತ್ ಸ್ಥಾವರಗಳು ಕೇಂದ್ರ ವಿದ್ಯುತ್ ಪ್ರಾಧಿಕಾರ(ಸಿಇಎ) ನೀಡಿದ ಗುರಿಗಿಂತಲೂ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಿವೆ. ರಾಜ್ಯದಲ್ಲಿ ಅತಿ ಹೆಚ್ಚು ಜಲ ವಿದ್ಯುತ್ ಉತ್ಪಾದನೆಯಾಗುವ ಶರಾವತಿ ಮತ್ತು ವಾರಾಹಿ ಕಣಿವೆಯ ವಿದ್ಯುತ್ ಸ್ಥಾವರಗಳಲ್ಲೂ 2025-26ನೇ ಸಾಲಿನಲ್ಲಿ ಒಟ್ಟಾರೆ 8,696 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ನಿರ್ಮಿಸಿವೆ. ಅಲ್ಲದೆ ಮಹಾತ್ಮಾ ಗಾಂಧಿ, ಗೇರುಸೊಪ್ಪ, ವರಾಹಿ ವಿದ್ಯುತ್ ಸ್ಥಾವರಗಳ ವಿದ್ಯುತ್ ಉತ್ಪಾದನೆಯಲ್ಲಿ ಹಿಂದಿನ ದಾಖಲೆಗಳನ್ನು ಮೀರಿ ಈ ಸಲ ಸಾರ್ವಕಾಲಿಕ ದಾಖಲೆ ನಿರ್ಮಾಣ ಮಾಡಿವೆ.

> ಕಳೆದ ವರ್ಷ ಸಾಕಷ್ಟು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ.
> ■ ಕೆ.ಜೆ.ಜಾರ್ಜ್, ಇಂಧನ ಸಚಿವ

> ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸಿದೆ. ಜಲವಿದ್ಯುತ್ ಕೇಂದ್ರಗಳ ಕಾರ್ಯಕ್ಷಮತೆ ಮತ್ತು ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ.
> ■ ಗೌರವ್ ಗುಪ್ತ, ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಖರ್ಗೆ ವಿರುದ್ಧ ದೂರು



• **ಹುಬ್ಬಳ್ಳಿ:** ಕಾಂಗ್ರೆಸ್ಸಿನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ, ಆರೆಸ್ಸೆಸ್ ಕುರಿತಾಗಿ ಆಡಿರುವ ದ್ವೇಷಪೂರಿತ ಭಾಷಣದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಿ ಕಾನೂನು ಕ್ರಮಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ಬಿಜೆಪಿ ದೂರು ದಾಖಲಿಸಿದೆ.

ಖರ್ಗೆ ಅವರು ಈ ರೀತಿ ಮಾತನಾಡುವ ಮೂಲಕ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡಿ ದ್ದಾರೆ. ಈ ಕೂಡಲೇ ಬಂಧಿಸುವಂತೆ ಬಿಜೆಪಿ ಯುವ ಮೋರ್ಚಾದಿಂದ ಹೊಸಪೇಟೆ ಪಟ್ಟಣದ ಠಾಣೆಗೆ ದೂರು ನೀಡಿ ಒತ್ತಾಯಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್ ಮಾತನಾಡಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಅಸ್ಸಾಂ ಚುನಾವಣಾ ಪ್ರಚಾರದಲ್ಲಿ ಭಾಷಣ ಮಾಡುತ್ತಾ, 'ಕುರಾನ್‌ನಲ್ಲಿ ಬರೆದಿದೆ, ನಮಾಜ್ ಮಾಡುವ ಸಂದರ್ಭದಲ್ಲಿ ವಿಷ ಸರ್ಪ ಕಂಡರೆ ಅದನ್ನು ಕೊಲ್ಲಬೇಕು. ಆರ್‌ಎಸ್‌ಎಸ್ ಹಾಗೂ ಬಿಜೆಪಿ ಅದೇ ರೀತಿಯ ವಿಷ ಸರ್ಪಗಳಿ ದ್ದಂತೆ. ನೀವು ಅದನ್ನು ಕೊಲ್ಲದಿದ್ದರೆ ಬದುಕುವುದಿಲ್ಲ ಎಂದು ಮುಸಲ್ಮಾನರಿಗೆ ಆರ್‌ಎಸ್‌ಎಸ್ ಸದಸ್ಯರನ್ನು ಕೊಲ್ಲಬೇಕು ಎಂದು ಪ್ರಚೋದಿಸಿದ್ದಾರೆ ಎಂದು ಆರೋಪ ಮಾಡಿದರು. ಖರ್ಗೆ ಮೇಲೆ ಕ್ರಮ ಆಗದಿದ್ದರೆ ತೀವ್ರ ಪ್ರತಿಭಟನೆಯ ದಾರಿ ಹಿಡಿಯುವುದಾಗಿ ಬಿಜೆಪಿ ಎಚ್ಚರಿಸಿದೆ. ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ, ಶಿರಸಿ, ದಾಂಡೇಲಿ ಮತ್ತಿತರ ಕಡೆ ಬಿಜೆಪಿ ಕಾರ್ಯಕರ್ತರು ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ದೂರು ದಾಖಲಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವು

• **ದಾವಣಗೆರೆ:** ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನವೆಂಬರ್‌ನಿಂದಲೇ ಹೇಳುತ್ತಿದ್ದಾರೆ. ಅದರ ಬಗ್ಗೆ ಹೆಚ್ಚು ಮಾತನಾಡಬೇಕಾಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಹರಿಹರ ತಾಲೂಕು ಬೆಳ್ಳೂಡಿ ಸಮೀಪದ ಕನಕ ಗುರುಪೀಠ ಶಾಖಾಮಠದ ಕಾರ್ಯಕ್ರಮಕ್ಕೆ ಶುಕ್ರವಾರ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಸದನದಲ್ಲೇ ಅದರ ಬಗ್ಗೆ ಉತ್ತರ ನೀಡಿದ್ದಾರೆ. ಉಪ ಚುನಾವಣೆ ಫಲಿತಾಂಶದ ಬಳಿಕ ರಾಜಕೀಯ ಜಂಗಿ ನಿಕಾಲಿ ಕುಸ್ತಿ ಎಂದೆಲ್ಲಾ ವಿಪಕ್ಷದವರು ಹೇಳುತ್ತಿದ್ದಾರೆ. ಆದರೆ, ವಿಪಕ್ಷದವರು ಅಂದಿದ್ದೆಲ್ಲಾ ಆಗುವುದಿಲ್ಲ ಎಂದರು. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲೂ ನಮ್ಮ ಪರ ಜನರ ಒಲವಿದ್ದು, ಕಾಂಗ್ರೆಸ್ ಗೆಲುವು ಸಾಧಿಸಲಿದೆ.



ಉಭಯ ಕ್ಷೇತ್ರಗಳಲ್ಲಿ ಶೇಕಡಾವಾರು ಮತದಾನ ಪ್ರಮಾಣ ಹೆಚ್ಚಾಗಿರುವುದು ಸಹ ನಮಗೆ ಪ್ಲಸ್ ಪಾಯಿಂಟ್ ಆಗಿದೆ. ಎರಡೂ ಕಡೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳೇ ಜಯ ಸಾಧಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧವೇ ಸ್ವಪಕ್ಷದ ನಾಯಕರು ಷಡ್ಯಂತ್ರ ಮಾಡಿದ್ದಾರೆಂಬ ವಿಧಾನ ಪರಿಷತ್ ವಿಪಕ್ಷ ನಾಯಕ ಸಲೀಂ ಅಹಮ್ಮದ್ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಲೀಂ ಅಹಮ್ಮದ್ ರ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಪ ಚುನಾವಣೆಗಳಲ್ಲಿ ನಮ್ಮೆಲ್ಲಾ ನಾಯಕರು, ಮುಖಂಡರು, ಕಾರ್ಯಕರ್ತರು ಒಗ್ಗಟ್ಟಿನಿಂದ ಪಕ್ಷದ ಗೆಲುವಿಗಾಗಿ ಕೆಲಸ ಮಾಡಿದ್ದೇವೆ ಎಂದು ಅವರು ತಿಳಿಸಿದರು.

ಕ್ಷೇತ್ರ ಪುನರ್ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಕುರಿತಂತೆ ಚರ್ಚಿಸಲು ಸಿಎಂ ದೆಹಲಿ ಪ್ರವಾಸ ಹೋಗಿದ್ದಾರೆ. ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಈಗಾಗಲೇ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಕೇಂದ್ರ ಸರ್ಕಾರ ಒಂದಿಷ್ಟು ವಿವರಣೆ ಕೇಳಿದ್ದು, ಕುರುಬ ಸಮಾಜವನ್ನು ಎಸ್ಟಿಗೆ ಸೇರ್ಪಡೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಕೇಂದ್ರದವರು ಏನು ಮಾಡುತ್ತಾರೋ ನೋಡಬೇಕು ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ದಾಖಲಾತಿಗೆ ವಿನಾಯಿತಿ

• **ಬೆಂಗಳೂರು:** 2026-27ನೇ ಶೈಕ್ಷಣಿಕ ಸಾಲಿಗೆ ಮಕ್ಕಳನ್ನು ಒಂದನೇ ತರಗತಿ ದಾಖಲಾತಿ ಮಾಡಲು 60 ದಿನಗಳ ವಯೋಮಿತಿ ಸಡಿಲಿಕೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶಿಸಿದೆ. ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಒಟ್ಟು 60 ದಿನಗಳು ವಿನಾಯಿತಿ ನೀಡಿದೆ.

ಕಳೆದ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯಲ್ಲಿಯೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅವರು, ಈ ವರ್ಷ ಒಂದನೇ ತರಗತಿ ದಾಖಲಾತಿಗೆ ಜೂ.1 ರಂದು ಆರು ವರ್ಷ ತುಂಬದ ಮಕ್ಕಳಿಗೆ 60 ದಿನಗಳ ವಯೋಮಿತಿ ನೀಡುವುದಾಗಿ ಪ್ರಕಟಿಸಿದ್ದರು. ಆದರೆ, ಸರ್ಕಾರ ಈ ತೀರ್ಮಾನ ಪ್ರಕಟಿಸುತ್ತಿದ್ದಂತೆ ಈ ವಯೋಮಿತಿ ಸಡಿಲಿಕೆಯನ್ನು 5.5 ವರ್ಷ ತುಂಬಿದ ಮಕ್ಕಳಿಗೂ ವಿಸ್ತರಿಸಬೇಕು ಎಂದು ಹಲವು ಪೋಷಕರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳನ್ನು ಭೇಟಿಯಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಸಿದ್ದರು. ಆದರೆ ಇದಕ್ಕೆ ಮಣಿಯದ ಶಿಕ್ಷಣ ಇಲಾಖೆ ಇದೀಗ ಜೂ.1ಕ್ಕೆ 6 ವರ್ಷ ಪೂರ್ಣಗೊಳ್ಳಲು ಗರಿಷ್ಠ 60 ದಿನ ಬಾಕಿ ಇರುವ ಮಕ್ಕಳನ್ನು ಸಹ ಈ ಬಾರಿ ಒಂದನೇ ತರಗತಿಗೆ ದಾಖಲಿಸಿಕೊಳ್ಳಲು ಅವಕಾಶ ನೀಡಿ ಆದೇಶಿಸಿದೆ. ಸರ್ಕಾರದ ಹೊಸ ಆದೇಶದ ಪ್ರಕಾರ, ಒಂದನೇ ತರಗತಿಗೆ ದಾಖಲಾಗಲು ಮಗುವಿಗೆ ಜೂ. 1 ರಂದು ಕಡ್ಡಾಯವಾಗಿ 6 ವರ್ಷ ತುಂಬಿರಬೇಕು ಎಂಬ ನಿಯಮ ಚಾಲ್ತಿಯಲ್ಲಿದೆ. ಆದರೆ, ಪೋಷಕರ ನಿರಂತರ ಮನವಿ ಹಾಗೂ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ, ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಕಲಂ 20ರ ಅಡಿಯಲ್ಲಿ ಈ ಬಾರಿ ವಿಶೇಷ ವಿನಾಯಿತಿ ನೀಡಲಾಗಿದೆ ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ. ಈ ಸಡಿಲಿಕೆಯು 2026-27ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರಲಿದೆ ಎಂದು ಆದೇಶದಲ್ಲಿ ಸರ್ಕಾರ ಸ್ಪಷ್ಟಪಡಿಸಿದೆ.

ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ

• **ಹೊಸದಿಲ್ಲಿ/ಬೆಂಗಳೂರು:** ಮಧ್ಯಪ್ರಾಚ್ಯ ಯುದ್ಧ ಪರಿಣಾಮ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನಗಳಿಲ್ಲದೆ ಜಗತ್ತೇ ತತ್ತರಿಸುತ್ತಿದ್ದರೆ, ಇತ್ತ ಭಾರತ ಹೊಸ ಹೊಸ ತಂತ್ರಜ್ಞಾನ, ಆವಿಷ್ಕಾರದೊಂದಿಗೆ ಒಂದೊಂದೇ ಸ್ವಾವಲಂಬನೆ ಹೆಜ್ಜೆ ಇರಿಸುತ್ತಿದೆ.

ಹೌದು, ಎಲ್‌ಪಿಜಿಗೆ ಪರ್ಯಾಯವಾಗಿ ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರ ಸಲಹೆಯಂತೆ ಕೇಂದ್ರ ಸರ್ಕಾರ ದೇಶದೆಲ್ಲೆಡೆ 50 ಲಕ್ಷ ಪಿಎನ್‌ಜಿ ಸಂಪರ್ಕಕ್ಕೆ ಪ್ರಾಶಸ್ತ್ಯ ನೀಡಿದ ಬೆನ್ನಲ್ಲೇ ಇದೀಗ ಗ್ಯಾಸ್ ಸ್ಟೌ ಮಾದರಿಯಲ್ಲೇ ಜ್ವಾಲೆ ಹರಡುವ ವಿದ್ಯುತ್ ಸ್ಟೌ ಅನ್ನು ಪರಿಚಯಿಸಿ ಅದರ ಉತ್ಪಾದನೆಗೆ ಆದ್ಯತೆ ನೀಡುವ ಚಿಂತನೆ ಸಹ ನಡೆಸುತ್ತಿದೆ.



ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಅವರು ಎಲ್‌ಪಿಜಿ ಇಲ್ಲದೆ ಜ್ವಾಲೆಯನ್ನು ಉತ್ಪಾದಿಸುವ ವಿನೂತನ ಮಾದರಿ, ತಂತ್ರಜ್ಞಾನದ ವಿದ್ಯುತ್ ಸ್ಟೌ ಅನ್ನು ಪ್ರದರ್ಶಿಸಿ, ಪರಿಚಯಿಸಿದ್ದಾರೆ. ಗ್ಯಾಸ್ ಸ್ಟೌ ರೀತಿಯೇ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ನೋಡಿ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಇದರ ಉತ್ಪಾದನೆಗೆ ಸಿದ್ಧತೆ ನಡೆಸುವಂತೆ ಗಮನ ಸೆಳೆದಿದ್ದಾರೆ. ಎಲ್‌ಪಿಜಿಯ ಅಗತ್ಯವಿಲ್ಲದೆ ಅನಿಲದಂತೆ ಉರಿಯುವ ಶುದ್ಧ ಇಂಧನ ಮೂಲವನ್ನು ಅರಸುತ್ತಿದ್ದ ಭಾರತೀಯರಿಗೆ ಇದೀಗ ಎಲ್‌ಪಿಜಿಯಂತೆ ಜ್ವಾಲೆ ಹರಡುವ ಈ ವಿದ್ಯುತ್ ಸ್ಟೌ ಅಡುಗೆ ಅನಿಲದ ಕೊರತೆ ನೀಗಿಸುವ ಆಶಾಭಾವನೆ ಮೂಡಿಸಿದೆ. ಹೋಟೆಲ್, ಬೇಕರಿ ಮುಂತಾದ ಆಹಾರೋದ್ಯಮಿಗಳಿಗೆ ಒಂದು ಪರ್ಯಾಯ ಇಂಧನ ಮೂಲದ ಒಲೆಯಾಗಿ ಕಾಣಿಸುತ್ತಿದೆ. ಎಲ್‌ಪಿಜಿ ಬಳಸದೆ ಜ್ವಾಲೆಯನ್ನು ಉತ್ಪಾದಿಸುವ ಈ ಸ್ಟೌವ್ ಅಂದುಕೊಂಡಂತೆ ಭಾರತದಲ್ಲೇ ದೊಡ್ಡ ಮಟ್ಟದಲ್ಲಿ ತಯಾರಾದರೆ ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಸಾಕಾರಕ್ಕೆ ಮತ್ತೊಂದು ಗರಿ ಎನ್ನುತ್ತಾರೆ ಸಚಿವ ಪ್ರಲ್ಹಾದ ಜೋಶಿ.

ಏನಿದರ ವಿಶೇಷತೆ:? ವಿದ್ಯುತ್ ಚಾಲಿತ ಈ ಸ್ಟೌವ್ ಅಲ್ಲಿ, ಎಲ್‌ಪಿಜಿ ಇಲ್ಲದೆಯೇ ಗ್ಯಾಸ್ ಒಲೆಯಂತೆಯೇ ಜ್ವಾಲೆ ಉತ್ಪಾದನೆ ಆಗುತ್ತದೆ. ಹೆಚ್ಚು ಶಾಖವೂ ಇರುತ್ತದೆ. ಮಾತ್ರವಲ್ಲದೆ, ಕಾರ್ಬನ್ ಸಹ ಹೊರ ಸೂಸುವುದಿಲ್ಲ, ನಿಜವಾಗಿ ನಾನು ಸಹ ಈ ಹೊಸ ತಂತ್ರಜ್ಞಾನದಿಂದ ಪ್ರಭಾವಿತನಾಗಿದ್ದೇನೆ ಎಂದಿದ್ದಾರೆ.

ಎಲ್‌ಪಿಜಿ ಗೆ ಪರ್ಯಾಯವಾಗಿ ದೇಶದಲ್ಲಿ ಮತ್ತೊಂದು ತಂತ್ರಜ್ಞಾನದ ಬಗ್ಗೆಯೂ ಚರ್ಚೆ ನಡೆದಿದೆ. LPG ಕೊರತೆ ಮತ್ತು ಬೆಲೆ ಏರಿಕೆ ಪರಿಣಾಮ ಹೈಡ್ರೋಜನ್ ಅಡುಗೆ ಘಟಕದ ಬಗ್ಗೆಯೂ ವ್ಯಾಪಕ ಚಿಂತನೆ ನಡೆದಿದೆ. ನೀರಿನಿಂದ ಅನಿಲ ಉತ್ಪಾದಿಸುವ ವಿಧಾನ ಇದಾಗಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಡಲ್ಲ: ಕೇಂದ್ರ ಸಚಿವ

ಡಿಕೆಶಿ ಪ್ರಯತ್ನ ಫಲಿಸುವುದಿಲ್ಲ: ಎಚ್‌ಡಿಕೆ

• **ಮೈಸೂರು:** ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡುವುದಿಲ್ಲ, ಅವರ ಸ್ವಭಾವ ನನಗೆ ಗೊತ್ತಿದೆ. ಸಿಎಂ ಗಾದಿಗಾಗಿಯೇ ಒಬ್ಬರು ಹೆಚ್ಚಾಗಿ ದೇವರ ಮೊರೆ ಹೋಗುತ್ತಿದ್ದಾರೆ. ದೇವರಿಗೆ ಪ್ರಾರ್ಥನೆಯನ್ನು ಮನಃಪೂರ್ವಕವಾಗಿ ಮಾಡಬೇಕು. ಸ್ವಾರ್ಥಕ್ಕೆ ಬೇಡಿಕೊಂಡರೆ ದೇವರು ಫಲ ಕೊಡುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಕೊನೆಯ ಮೊಳೆ ಹೊಡೆಯುವುದೇ ಇದೇ ಸಿದ್ದರಾಮಯ್ಯ. ಅವರನ್ನು ಕಂಡರೆ ಅಸೂಯೆ, ಹೊಟ್ಟೆಕಿಚ್ಚು ಇರುವುದು ನಮಗಲ್ಲ, ಕಾಂಗ್ರೆಸ್‌ನಲ್ಲೇ ಕೆಲವರಿಗೆ ಹೊಟ್ಟೆಕಿಚ್ಚಿದೆ' ಎಂದರು. ನಾನು ಅಹಿಂದ ಚಾಂಪಿಯನ್ ಎನ್ನುವ ಸಿದ್ದರಾಮಯ್ಯ, ಕಾಂಗ್ರೆಸ್ ಬಿಟ್ಟು ಹೊರ ಬಂದು 5-10 ಕ್ಷೇತ್ರಗಳಲ್ಲಿ ಅವರ ಅಭ್ಯರ್ಥಿಗಳನ್ನು ಗೆಲ್ಲಿಸಲಿ ನೋಡೋಣ ಎಂದು ಸವಾಲು ಹಾಕಿದರು. ರಾಜಕೀಯವೇ ಸಾಕೆಂದು ಕಣ್ಣೀರಿಟ್ಟಿದ್ದ ಸಿದ್ದರಾಮಯ್ಯಗೆ ಎಚ್.ಡಿ. ದೇವೇಗೌಡರು ಸಮಾಧಾನ ಪಡಿಸಿದ್ದರು. 1999ರ ಚುನಾವಣೆಯಲ್ಲಿ ಸಿದ್ದರಾಮಯ್ಯ ಸೇರಿದಂತೆ ನಾವೆಲ್ಲರೂ ಸೋತಿದ್ದವು. ಆಗ ಸಿದ್ದರಾಮಯ್ಯ, ಡಾ.ಎಚ್.ಸಿ. ಮಹದೇವಪ್ಪ ಇಬ್ಬರೂ ಎಚ್.ಡಿ.ದೇವೇಗೌಡರ ಮನೆಗೆ ಬಂದಿದ್ದರು. ನನಗೆ ರಾಜಕೀಯವೇ ಸಾಕೆಂದು ಸಿದ್ದರಾಮಯ್ಯ ಕಣ್ಣೀರಿಟ್ಟಿದ್ದರು. ಅಂದು ಅವರಿಟ್ಟಿದ್ದ ಕಣ್ಣೀರಿಗೆ ಬಕೆಟ್ ತುಂಬುತ್ತಿತ್ತು. ಆ ಘಟನೆಗೆ ನಾನೇ ಸಾಕ್ಷಿ. ಅವರಿಗೆ ಸಮಾಧಾನ ಮಾಡಿ, ಧೈರ್ಯ ತುಂಬಿ ಬೇರೆ ವ್ಯವಸ್ಥೆಯನ್ನು ದೇವೇಗೌಡರು ಮಾಡಿಕೊಟ್ಟಿದ್ದರು. ಅದನ್ನೆಲ್ಲ ಸಿದ್ದರಾಮಯ್ಯ ಮರೆತಿದ್ದಾರೆ ಎಂದರು.

2006ರಲ್ಲಿ ಸಿದ್ದರಾಮಯ್ಯ ಅಹಿಂದ ಹೆಸರಿನಲ್ಲಿ ನಮ್ಮ ಪಕ್ಷಕ್ಕೆ ಚೂರಿ ಹಾಕಿದರು. ಅವರು ನಮ್ಮ ಪಕ್ಷ ಬಿಟ್ಟಾಗ ಅವರೊಂದಿಗೆ ಹೋದವರು ಕೇವಲ 8 ಮಂದಿ. ಇದೆಲ್ಲಾ ಸಿದ್ದರಾಮಯ್ಯ ಅವರಿಗೆ ನೆನಪಿಲ್ಲವೇ ಎಂದು ಕೇಳಿದರು. ಸಿದ್ದರಾಮಯ್ಯ ಹಣ ವಸೂಲಿಗಾಗಿಯೇ ತಮ್ಮ ಮಗ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರರನ್ನು ನೇಮಿಸಿ ಕೊಂಡಿದ್ದಾರೆ ಎಂದರು.

ಸಿಎಂ ಆದದ್ದು ದೇವರ ಕೃಪೆಯಿಂದ

ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದು ದೇವರ ಕೃಪೆಯಿಂದ. ಒಮ್ಮೆಯೂ ನಮಗೆ ಬಹುಮತ ಬಂದಿರಲಿಲ್ಲ, ಕುಮಾರಸ್ವಾಮಿ ಸಿಎಂ ಆಗುತ್ತಾನೆಂದು ಯಾವ ಜ್ಯೋತಿಷಿಯೂ ಹೇಳಿರಲಿಲ್ಲ. ಆದರೂ ಎರಡು ಬಾರಿ ಮುಖ್ಯಮಂತ್ರಿಯಾದೆ. ಮುಂದೆಯೂ ದೇವರ ಕೃಪೆ ಇದ್ದರೆ ಆಗುತ್ತೇನೆ. ಅದು ನನ್ನ ಕೈಯಲ್ಲಿ ಇಲ್ಲ ಎಂದರು. ಶಾಸಕರು, ಕಾರ್ಯಕರ್ತರು ಪ್ರೀತಿಯಿಂದ ಮುಂದಿನ ಸಿಎಂ ಅಂತಾರೆ. ಸಿಎಂ ಆಗುವುದು ನನ್ನ ಕೈಯಲ್ಲಿಲ್ಲ ಭಗವಂತನ ಕೃಪೆ ಬೇಕು. ಹಿಂದೆ ಸಿಎಂ ಆದಾಗ ಯಾರೂ ಕೇಳಿರಲಿಲ್ಲ. ಮುಂದೆಯೂ ಅದೇ ರೀತಿ ಆಗುತ್ತದೆ ಎಂದರು.

ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ

ನಾಯಕತ್ವ ಬದಲಾವಣೆ ವರಿಷ್ಠರ ತೀರ್ಮಾನ

• **ಮಂಗಳೂರು:** ರಾಜ್ಯದಲ್ಲಿ ಉಪಚುನಾವಣೆ ಫಲಿತಾಂಶಕ್ಕೂ ನಾಯಕತ್ವ ಬದಲಾವಣೆಗೂ ಯಾವುದೇ ಸಂಬಂಧ ಇಲ್ಲ, ಈ ವಿಚಾರಗಳ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ದ.ಕ.ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗಳೂರಿನಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಮುಂತಾದ ವಿಚಾರಗಳ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ನಾವು ಚರ್ಚೆ ಮಾಡುವ ಅಗತ್ಯ, ಅನಿವಾರ್ಯತೆ, ಅವಶ್ಯಕತೆ ಇಲ್ಲ. ಉಪ ಚುನಾವಣೆ ನಡೆದ ಎರಡು ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವಿನ ಬಲವಾದ ನಿರೀಕ್ಷೆಗಳು ಇದೆ. ಒಳ್ಳೆಯ ಫಲಿತಾಂಶ ಬರುವ ಬಗ್ಗೆ ನೂರಕ್ಕೆ ನೂರು ವಿಶ್ವಾಸವಿದೆ ಎಂದರು.

ನಾವು ಎಲ್ಲ ವರ್ಗ, ಧರ್ಮದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇವೆ. ನಮ್ಮಲ್ಲಿ ಯಾರನ್ನು ದೂರ ಮಾಡುವ ಪ್ರಶ್ನೆ ಬರುವುದಿಲ್ಲ, ಒಂದು ಕೋಮು ಇನ್ನೊಂದು ಕೋಮು ಎಂದು ಸೀಮಿತ ಅಲ್ಲ, ಚುನಾವಣೆ ಸಂದರ್ಭ ಟಿಕೆಟ್ ಸಿಕ್ಕಿಲ್ಲ ಎಂದು ಕೆಲವು ಆಕಾಂಕ್ಷಿಗಳಿಗೆ ನೋವು ಇರಬಹುದು. ಅದರಿಂದ ದೊಡ್ಡ ಸಮಸ್ಯೆ ಆಗುವುದಿಲ್ಲ, ನಮ್ಮವರೆಲ್ಲಾ ಚುನಾವಣಾ ಪ್ರಚಾರದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಿದ್ದಾರೆ. ಬಿಜೆಪಿಯಲ್ಲಿ ಲಿಂಗಾಯತರಿಗೆ ಟಿಕೆಟ್ ಕೊಟ್ಟಿಲ್ಲ, ಹಾಗೆಂದು ಲಿಂಗಾಯತರು ಯಾರು ಓಟು ಹಾಕಿಲ್ಲ ಎಂದು ಹೇಳಲು ಆಗುತ್ತಾ? ದಾವಣಗೆರೆಯಲ್ಲಿ ಹೆಚ್ಚಿನ ಅಂತರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುತ್ತಾರೆ ಎಂದರು.

ಯುದ್ಧದ ಸನ್ನಿವೇಶದಿಂದಾಗಿ ಮಧ್ಯಪ್ರಾಚ್ಯದಿಂದ ಭಾರತಕ್ಕೆ ಬರುತ್ತಿದ್ದ ಕೆಲವು ಔಷಧಗಳ ಪೂರೈಕೆ ಆಗುತ್ತಿಲ್ಲ, ಔಷಧ ಪೂರೈಕೆಗೆ ಸ್ವಲ್ಪ ಸಮಯ ಕೇಳುತ್ತಿದ್ದಾರೆ. ಈ ಹಿಂದೆ ಕೊಟ್ಟಿರುವ ಆರ್ಡರ್‌ಗಳ ಡೆಲಿವರಿ ಮಾಡಲು ಆಗುತ್ತಿಲ್ಲ, 30 ದಿನ ಸಮಯ ಕೊಡಿ ಎಂದು ಕೇಳುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ

ರಾಜ್ಯದಲ್ಲಿ ಗ್ಯಾಸ್ ಸಮಸ್ಯೆ ಇದೆ ಎಂದು ಸ್ಪಷ್ಟವಾಗಿ ಹೇಳಬೇಕು. ಸುಮ್ಮನೆ ಸಮಸ್ಯೆ ಇಲ್ಲ ಎಂದು ಹೇಳಬಾರದು. ಅನೇಕ ಕಡೆ ಆಹಾರ ತಯಾರಿಕೆ ಶೇ.50 ಕ್ಕೆ ಇಳಿಸಿದ್ದಾರೆ. ಕೋವಿಡ್ ಸಂದರ್ಭದ ಪರಿಸ್ಥಿತಿಯಂತಾಗಿದೆ ಈಗ. ಹಾಗೆಂದು ಸಮಸ್ಯೆ ಇಲ್ಲ ಎಂದು ಹೇಳಬಾರದು. ಜನರಿಗೆ ಸ್ಪಷ್ಟವಾಗಿ ವಿಷಯ ತಿಳಿಸಬೇಕು. ಎಲ್ಲ ಚೆನ್ನಾಗಿದೆ ಎಂದು ಹೇಳಿ ಜನರನ್ನು ದಾರಿ ತಪ್ಪಿಸಬಾರದು. ನಾವು ಕೇಂದ್ರ ಸರ್ಕಾರವೇ ಹೊಣೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಸಮಸ್ಯೆ ಇಲ್ಲ ಎಂದು ಯಾಕೆ ಹೇಳಬೇಕು. ಪರ್ಯಾಯ ಕ್ರಮ, ನಿಜಾಂಶವನ್ನು ಜನರ ಮುಂದೆ ಇಡಬೇಕು. ಎಲ್ಲ ಕಡೆ ಕಮರ್ಷಿಯಲ್ ಗ್ಯಾಸ್‌ಗೆ ತೊಂದರೆ ಇದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ, ಸಮಸ್ಯೆ ಇದ್ದಾಗ ಇಲ್ಲ ಎಂದು ಹೇಳಿದರೆ ಏನು ಪ್ರಯೋಜನ ಎಂದು ಅವರು ಪ್ರಶ್ನಿಸಿದರು.

ಬೆಂಗಳೂರು
ಶನಿವಾರ, 11 ಏಪ್ರಿಲ್ 2026
ಸಂಪುಟ 33, ಸಂಚಿಕೆ 160, ಪುಟಗಳು 16+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಮಥುರಾ: ದೋಣಿ ಮುಳುಗಿ 10 ಜನ ಸಾವು | ೧೨
ಏರ್ ಡ್ರಾಪ್ ಟೆಸ್ಟ್ ಯಶಸ್ವಿ | ೧೨
ಗ್ಯಾಸ್ ಮಾದರಿ ವಿದ್ಯುತ್ ಜ್ವಾಲೆ ಸ್ಟೌ: ಜೋಶಿ | ೦೨

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಸುಖ ದುಃಖಗಳೆರಡನ್ನು ಅರಿಯದವನು ಜ್ಞಾನಿ ಎನಿಸಲಾರ.

▲ ಲಾವೋತ್ಸೆ

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

• **ಬೆಂಗಳೂರು:** ವಿಧಾನಸೌಧ ಸೇರಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ(ಜಿಬಿಎ) ಐದು ನಗರ ಪಾಲಿಕೆಗಳಲ್ಲಿನ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸೇವಾ ತೆರಿಗೆ ವಿಚಾರವಾಗಿ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತರು ಪಾಲಿಕೆಗಳಿಗೆ ಸೂಚನೆ ನೀಡಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿರುವ ಸರ್ಕಾರಿ ಕಟ್ಟಡಗಳಿಂದ ಬಾಕಿ ಇರುವ ಸುಮಾರು 473 ಕೋಟಿ ರೂ. ಸೇವಾ ತೆರಿಗೆ ವಸೂಲಿಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಐದು ಪಾಲಿಕೆಗಳ ಆಯುಕ್ತರಿಗೆ ಜಿಬಿಎ ಮುಖ್ಯ ಆಯುಕ್ತರು ಕಚೇರಿ ಟಿಪ್ಪಣಿ ಹೊರಡಿಸಿದ್ದಾರೆ. ➡ಪುಟ ೭

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

• **ಶಿವಮೊಗ್ಗ:** ಜಿಲ್ಲೆಯ ಹೊಸನಗರ ತಾಲೂಕಿನ ಹುಲಿಕಲ್ ಘಾಟ್‌ನಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ವೇಳೆ ಗುರುವಾರ ಗುಡ್ಡ ಕುಸಿದು ಮೂವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ಕಾರ್ಮಿಕರನ್ನು ರಾಘವೇಂದ್ರ(37), ರಾಜು(30) ಮತ್ತು ಶಬ್ಬೀರ್(40) ಎಂದು ಗುರುತಿಸಲಾಗಿದೆ. ಮೃತರ ಕುಟುಂಬ ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ. ➡ಪುಟ ೭

ಪಾಕಿಸ್ತಾನ ಬೆಂಬಲಿತ 11 ಶಂಕಿತ ಉಗ್ರರ ಬಂಧನ

• ಪುಟ ೧೨

ಅರ್ಜಿದಾರರಿಗೆ 1 ಲಕ್ಷ ರೂ. ದಂಡ ವಿಧಿಸಿದ ಹೈಕೋರ್ಟ್

• ಪುಟ ೨

ಜೆ.ಡಿ. ವ್ಯಾನ್ಸ್ ಹೊರಟಿದ್ದರೂ ಇರಾನ್ ಸುದ್ದಿಯೇ ಇಲ್ಲ


ಮುಗಿಯದ ರಗಳೆ

• **ಇಸ್ಲಾಮಾಬಾದ್:** ಪಶ್ಚಿಮ ಏಷ್ಯಾದ ಉದ್ವಿಗ್ನತೆಗೆ ತೆರೆ ಎಳೆಯುವ ನಿರ್ಣಾಯಕ ರಾಜತಾಂತ್ರಿಕ ಪ್ರಯತ್ನವಾಗಿ ಕಾಣಲಾಗುತ್ತಿರುವ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನಕ್ಕೆ ಆಗಮಿಸುತ್ತಿದ್ದು, ಇರಾನ್ ಪ್ರತಿನಿಧಿ ಮಂಡಳಿಯ ಆಗಮನದ ಕುರಿತು ಇನ್ನೂ ಅನಿಶ್ಚಿತತೆ ಮುಂದುವರಿದಿದೆ. ಈ ಬೆಳವಣಿಗೆಯ ನಡುವೆ ಇಸ್ಲಾಮಾಬಾದ್‌ನ್ನು ಕಟ್ಟುನಿಟ್ಟಿನ ಭದ್ರತಾ ವಲಯಕ್ಕೆ ಒಳಪಡಿಸಲಾಗಿದೆ. ಎರಡು ವಾರಗಳ ಯುದ್ಧ ವಿರಾಮ ಘೋಷಿಸಿದ್ದ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್, ಅಮೆರಿಕ ಮತ್ತು ಇರಾನ್ ನಡುವಿನ ಮಹತ್ವದ ಮಾತುಕತೆ ಪಾಕಿಸ್ತಾನದ ರಾಜಧಾನಿ ಯಲ್ಲಿ ನಡೆಯಲಿದೆ ಎಂದು ಪ್ರಕಟಿಸಿದ್ದರು. ➡ಪುಟ ೭



ಜಗತ್ತಿನ ಕಣ್ಣು ಪಾಕ್ ಮೇಲೆ

ಈ ಮಾತುಕತೆಯ ಫಲಿತಾಂಶ ಪಶ್ಚಿಮ ಏಷ್ಯಾದ ಭದ್ರತೆ, ಜಾಗತಿಕ ತೈಲ ಮಾರುಕಟ್ಟೆ ಹಾಗೂ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮೀಕರಣಗಳನ್ನು ನಿರ್ಧರಿಸಬಹುದಾದ ಮಹತ್ವದ್ದಾಗಿರುವುದರಿಂದ ವಿಶ್ವದ ಗಮನ ಈಗ ಇಸ್ಲಾಮಾಬಾದ್ ಕಡೆ ನೆಟ್ಟಿದೆ.



» ಪಶ್ಚಿಮ ಏಷ್ಯಾ ಉದ್ವಿಗ್ನತೆ ತಣಿಸುವ ನಿರ್ಣಾಯಕ ಕ್ಷಣ

» ಲೆಬನಾನ್ ದಾಳಿ ನಿಲ್ಲದಿದ್ದರೆ ಹಿಂದೆ ಸರಿಯುವ ಎಚ್ಚರಿಕೆ ನೀಡಿದ ಇರಾನ್

ಇಸ್ಲಾಮಾಬಾದ್‌ನಲ್ಲಿ 2 ದಿನಗಳ ಲಾಕ್‌ಡೌನ್

ಮಾತುಕತೆ ಹಿನ್ನೆಲೆ ರಾಜಧಾನಿಯಲ್ಲಿ ರೆಡ್ ಅಲರ್ಟ್ ಜಾರಿಗೊಂಡಿದ್ದು, 10,000ಕ್ಕೂ ಅಧಿಕ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ಸೇನೆ, ರೇಂಜರ್ಸ್ ಹಾಗೂ ಪೊಲೀಸ್ ಪಡೆಗಳ ಸಹಾಯದಿಂದ ರೆಡ್ ಝೋನ್ ಸಂಪೂರ್ಣ ಸೀಲ್ ಮಾಡಲಾಗಿದೆ. ಕೇವಲ ಅಧಿಕೃತ ಅಧಿಕಾರಿಗಳು ಮತ್ತು ಈ ಸ್ಥಳಗಳಲ್ಲಿ ವಾಸ ಮಾಡುತ್ತಿರುವ ಮಂದಿಗೆ ಪ್ರವೇಶ ನೀಡಲಾಗಿದೆ. ಇಡೀ ಇಸ್ಲಾಮಾಬಾದ್‌ನಲ್ಲಿ ಎರಡು ದಿನಗಳ ಲಾಕ್‌ಡೌನ್ ಘೋಷಿಸಲಾಗಿದೆ.

ಮಾತುಕತೆ ವಿಫಲವಾದರೆ ಮತ್ತೊಮ್ಮೆ ದಾಳಿ: ಟ್ರಂಪ್

• **ವಾಷಿಂಗ್ಟನ್/ಇಸ್ಲಾಮಾಬಾದ್:** ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಿನ ಉದ್ವಿಗ್ನತೆ ಮತ್ತಷ್ಟು ಗಂಭೀರವಾಗಿದ್ದು, ಮಾತುಕತೆ ವಿಫಲವಾದರೆ ಹೊಸ ದಾಳಿಗಳನ್ನು ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಅಮೆರಿಕದ ಯುದ್ಧನೌಕೆಗಳಿಗೆ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ತುಂಬಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ➡ಪುಟ ೭

ಜೆಡಿಎಸ್‌ಗೆ 25 ವರ್ಷ ಹಿನ್ನೆಲೆ ಕಾರ್ಯಕ್ರಮ

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು

• **ಬೆಂಗಳೂರು:** ಜನತಾದಳ(ಜಾತ್ಯಾತೀತ) ಪಕ್ಷ ಉದಯವಾಗಿ 25 ವರ್ಷವಾದ ಹಿನ್ನೆಲೆಯಲ್ಲಿ ಬೆಳ್ಳಿ ಹಬ್ಬದ ಸಂಭ್ರಮ ಜನತಾ ಸಮಾವೇಶವನ್ನು ಆಯೋಜಿಸಲಾಗಿದ್ದು, ಜೆಡಿಎಸ್ ಘಟಾನುಘಟಿ ನಾಯಕರು ಪಾಲ್ಗೊಳ್ಳಲಿದ್ದಾರೆ.

ಕೆಂಗೇರಿ ಹತ್ತಿರವಿರುವ ಕೊಮ್ಮಘಟ್ಟ ನೈಸ್ ಗ್ರೌಂಡ್‌ನಲ್ಲಿ ಶನಿವಾರ(ಏ.11) ಬೆಳಗ್ಗೆ 10.30ಕ್ಕೆ ನಡೆಯಲಿರುವ ಈ ಬೆಳ್ಳಿ ಹಬ್ಬ ಜನತಾ ಸಮಾವೇಶದಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ಸೇರಿಸಲು ಸಿದ್ಧತೆ ನಡೆಸಲಾಗಿದೆ. ವಿಶೇಷವಾಗಿ ಮುಂಬರುವ ಜಿಬಿಎ ಚುನಾವಣೆಗೆ ಎನ್‌ಡಿಎ ಮಿತ್ರ ಪಕ್ಷವಾದ ಜನತಾದಳ ನಿಲುವು ಏನೆಂದು ಕಾರ್ಯಕರ್ತರಿಗೆ ತಿಳಿಸಿ ಈಗಿನಿಂದಲೇ ಪಕ್ಷ ಸಂಘಟನೆ ಮಾಡಿ ತಯಾರಾಗಿ ಎಂಬ ಕರೆ ಕೊಡಲಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಎಂಟು ಕಡೆ ಸಮಾವೇಶಗಳನ್ನು ಆಯೋಜಿಸಲಾಗುತ್ತಿದ್ದು, ಶನಿವಾರ ಬೆಂಗಳೂರಿನಿಂದ ಆರಂಭವಾಗಲಿದೆ. ತುಮಕೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ರಜತ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ➡ಪುಟ ೭





ಸಮಾವೇಶಕ್ಕೆ 1 ಲಕ್ಷಕ್ಕೂ ಅಧಿಕ ಜನ

ಸಮಾವೇಶದ ಪೂರ್ವಸಿದ್ಧತೆ ಪರಿಶೀಲನೆ ನಡೆಸಲು ಶುಕ್ರವಾರ ಸ್ಥಳಕ್ಕೆ ಆಗಮಿಸಿದ್ದ ನಿಖಿಲ್ ಕುಮಾರ್ ಅವರು, ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜನತಾ ಸಮಾವೇಶ ಹೊಸ ನಾಯಕತ್ವಕ್ಕೆ ಹೊಸ ಹುರುಪು ತುಂಬಲಿದೆ. 1 ಲಕ್ಷಕ್ಕೂ ಅಧಿಕ ಜನರು ಭಾಗವಹಿಸುವ ವಿಶ್ವಾಸವಿದೆ. ದೇವೇಗೌಡರು ಸಮಾವೇಶ ಉದ್ಘಾಟನೆ ಮಾಡಲಿದ್ದಾರೆ ಎಂದು ತಿಳಿಸಿದರು. ಜಿಬಿಎ ಚುನಾವಣೆ ಹಿನ್ನೆಲೆ ಪಕ್ಷವನ್ನು ಸಂಘಟಿತಗೊಳಿಸುವ ಕಾರ್ಯ ನಡೆಯುತ್ತಿದೆ. ➡ಪುಟ ೭

ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ

ನಾಡೋಜ ಡಾ.ರಾಮಸ್ವಾಮಿ ನಿಧನ

• **ಬೆಂಗಳೂರು:** ಪತ್ರಕರ್ತ, ಲೇಖಕ, ಚಿಂತಕ, ವಿಮರ್ಶಕ, ಪರಿಸರ ಹೋರಾಟಗಾರ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರು ಶುಕ್ರವಾರ ಬೆಳಗ್ಗೆ ಬೆಂಗಳೂರಿನ ಶಂಕರಪುರಂನ ರಂಗರಾವ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾದರು. ಕೆಲ ಸಮಯದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 88 ವರ್ಷ ವಯಸ್ಸಾಗಿತ್ತು. ಸೊಂಡೆಕೊಪ್ಪ ರಾಮಚಂದ್ರಶಾಸ್ತ್ರಿ ರಾಮಸ್ವಾಮಿ ಅವರು 1937ರ ಅಕ್ಟೋಬರ್ 29ರಂದು ಬೆಂಗಳೂರಿನಲ್ಲಿ ಜನಿಸಿದರು. 1950ರ ದಶಕದಲ್ಲಿ ಪತ್ರಿಕೋದ್ಯಮ ಪ್ರವೇಶಿಸಿದ ಅವರು, 1972ರಿಂದ 79ರವರೆಗೆ ಸುಧಾ ವಾರಪತ್ರಿಕೆಯ ಮುಖ್ಯ ಉಪಸಂಪಾದಕರಾಗಿ ಸೇವೆ ಸಲ್ಲಿಸಿದ್ದರು. ➡ಪುಟ ೭





ಸಾರಸ್ವತ ಲೋಕದ ಧೀಮಂತ ಎಸ್.ಆರ್. ರಾಮಸ್ವಾಮಿ • ಪುಟ ೩

ಪ.ಬಂಗಾಳ: ಏನಾಸಂ ಸೇರಿ 15 ಅಂಶಗಳ ಬಿಜೆಪಿ ಪ್ರಣಾಳಿಕೆ

ಮಹಿಳೆಯರಿಗೆ 3000 ರೂ. ನೆರವು

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದು ಅಧಿಕಾರಕ್ಕೆ ಬಂದಲ್ಲಿ, ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ(ಏನಾಸಂ) ಜಾರಿ, ಅಕ್ರಮ ನುಸುಳುವಿಕೆಗೆ ತಡೆ, ಯುವವರ್ಗ ಮತ್ತು ಮಹಿಳೆಯರು, ರೈತರು, ರಾಜ್ಯ ಸರ್ಕಾರಿ ನೌಕರರಿಗೆ ಕಲ್ಯಾಣ ಪ್ಯಾಕೇಜ್‌ಗಳ ಭರವಸೆ ಸೇರಿದಂತೆ 15 ಅಂಶಗಳ ಮಹತ್ವದ ಮೆಗಾ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆಗೊಳಿಸಿದೆ. ಮಹಿಳೆಯರಿಗೆ ಮತ್ತು ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ ತಲಾ 3000 ರೂ. ಆರ್ಥಿಕ ನೆರವಿನ ಭರವಸೆ ನೀಡಿದೆ. ➡ಪುಟ ೭



ರೈತರಿಗೆ ವಾರ್ಷಿಕ ₹9 ಸಾವಿರ • ಪುಟ ೭

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಮಹಿಳೆಯರು, ಯುವಶಕ್ತಿ, ರೈತರಿಗಾಗಿ ಹಲವು ಕಲ್ಯಾಣ ಯೋಜನೆಗಳನ್ನು ಪ್ರಕಟಿಸಿದ ಬಿಜೆಪಿಯು, ಪಕ್ಷ ಅಧಿಕಾರಕ್ಕೆ ಬಂದಲ್ಲಿ ಮಹಿಳೆಯರಿಗೆ ತಿಂಗಳಿಗೆ 3000 ರೂ., ಹಾಗೆಯೇ ನಿರುದ್ಯೋಗಿ ಯುವಜನತೆಗೆ ತಿಂಗಳಿಗೆ 3000 ರೂ. ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಗಾಗಿ 15000 ರೂ.ಗಳ ಭರವಸೆ ನೀಡಿದೆ. ➡ಪುಟ ೭

ಶ್ರೀನಂದಾ ಶವವಾಗಿ ಪತ್ತೆ



ಮಾಣಿಕ್ಯಧಾರ ಜಲಪಾತ ಬಳಿ ನಾಪತ್ತೆಯಾಗಿದ್ದ ಬಾಲಕಿ

• **ಚಿಕ್ಕಮಗಳೂರು:** ಕಳೆದ ನಾಲ್ಕು ದಿನಗಳ ಹಿಂದೆ ಚಂದ್ರದ್ರೋಣ ಪರ್ವತದ ಮಾಣಿಕ್ಯಧಾರ ಜಲಪಾತದ ಬಳಿ ನಿಗೂಢವಾಗಿ ನಾಪತ್ತೆಯಾಗಿದ್ದ ಕೇರಳ ಮೂಲದ ಬಾಲಕಿ ಶ್ರೀನಂದಾ ಶುಕ್ರವಾರ ಶವವಾಗಿ ಪತ್ತೆಯಾಗಿದ್ದಾಳೆ. ಕುಟುಂಬದವರೊಂದಿಗೆ ಪ್ರವಾಸಕ್ಕೆ ಬಂದಾಕೆ ದಿಢೀರನೆ ಕಣ್ಮರೆಯಾಗಿದ್ದ ಹಿನ್ನೆಲೆಯಲ್ಲಿ ಪ್ರಕರಣ ಹತ್ತು ಹಲವು ಸಂಶಯಗಳನ್ನು ಹುಟ್ಟುಹಾಕಿತ್ತು. ಇದೀಗ ಬಾಲಕಿ ಮೃತದೇಹ ಪತ್ತೆಯಾಗುವ ಮೂಲಕ ಶೋಧ ಕಾರ್ಯಕ್ಕೆ ತೆರೆಬಿದ್ದಿದೆ ಆದರೂ ಆಕೆಯ ಸಾವಿನ ಬಗ್ಗೆ ಹಲವು ಪ್ರಶ್ನೆಗಳು ಹಾಗೆಯೇ ಉಳಿದಿರುವ ಕಾರಣ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದಾರೆ. ➡ಪುಟ ೭

ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಮಹಾನ್ ಚೇತನ

▸ **ನರೇಂದ್ರ ಮೋದಿ, ಪ್ರಧಾನಿ**



ಇಂದು, ಏಪ್ರಿಲ್ 11, ನಮ್ಮೆಲ್ಲರಿಗೂ ಅತ್ಯಂತ ವಿಶೇಷವಾದ ದಿನ. ಇದು ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು ಮತ್ತು ತಲೆಮಾರುಗಳಿಗೆ ಮಾರ್ಗದರ್ಶಕರಾಗಿರುವ ಮಹಾತ್ಮ ಜ್ಯೋತಿರಾವ್ ಫುಲೆ ಅವರ ಜನ್ಮದಿನೋತ್ಸವ. ಪ್ರಸಕ್ತ ವರ್ಷ ಈ ಸಂದರ್ಭವು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ, ಏಕೆಂದರೆ ಇದು ಅವರ 200ನೇ ಜಯಂತಿ ಆಚರಣೆಯ ಆರಂಭವನ್ನು ಸೂಚಿಸುತ್ತದೆ.

ಮಹಾತ್ಮ ಫುಲೆ ಅವರು ಕೇವಲ ಒಬ್ಬ ಮಹಾನ್ ಸುಧಾರಕರಷ್ಟೇ ಅಲ್ಲ, ಅವರ ಜೀವನವು ನೈತಿಕ ಧೈರ್ಯ, ನಿರಂತರ ಅನ್ವೇಷಣೆ ಮತ್ತು ಸಾಮಾಜಿಕ ಒಳಿತಿಗಾಗಿ ಅಚಲವಾದ ಬದ್ಧತೆಯಿಂದ ಕೂಡಿತ್ತು. ತಾವು ಕಟ್ಟಿದ ಸಂಸ್ಥೆಗಳು ಮತ್ತು ಮುನ್ನಡೆಸಿದ ಚಳವಳಿಗಳಿಗಾಗಿ ಮಹಾತ್ಮ ಫುಲೆ ಅವರು ಸ್ಮರಣೀಯರು. ಅದೇ ಸಮಯದಲ್ಲಿ, ನಮ್ಮ ನಾಗರಿಕತೆಯ ಪಯಣಕ್ಕೆ ಅವರ ದೊಡ್ಡ ಕೊಡುಗೆಯೆಂದರೆ? ಅವರು ಜನರಲ್ಲಿ ಮೂಡಿಸಿದ ಭರವಸೆ, ತುಂಬಿದ ಆತ್ಮವಿಶ್ವಾಸ ಮತ್ತು



ಅವರ ಪ್ರಖರ ಆಲೋಚನೆಗಳು ಇಂದಿಗೂ ದೇಶದ ಕೋಟ್ಯಂತರ ಜನರಿಗೆ ನೀಡುತ್ತಿರುವ ಅತೀವ ಶಕ್ತಿಯಾಗಿದೆ.

1827ರಲ್ಲಿ ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಮಹಾತ್ಮ ಫುಲೆ ಅವರು ಸಾಮಾನ್ಯ ಹಿನ್ನೆಲೆಯಿಂದ ಬಂದವರು. ಆದರೆ ಅವರ ಆರಂಭಿಕ ಸಂಕಷ್ಟಗಳು ಅವರ ಕಲಿಕೆ, ಧೈರ್ಯ ಅಥವಾ ಸಮಾಜದ ಬಗೆಗಿನ ಬದ್ಧತೆಗೆ ಎಂದಿಗೂ ಅಡ್ಡಿಯಾಗಲಿಲ್ಲ, ಸವಾಲುಗಳು ಏನೇ ಇರಲಿ, ಕಷ್ಟಪಟ್ಟು ಕೆಲಸ ಮಾಡಬೇಕು, ಜ್ಞಾನವನ್ನು ಪಡೆಯಬೇಕು ಮತ್ತು ಸುಮ್ಮನೆ ಕುಳಿತುಕೊಳ್ಳುವ ಬದಲಿಗೆ ಆ ಸವಾಲುಗಳನ್ನು ಎದುರಿಸಬೇಕು ಎಂಬುದು ಅವರ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ ಗುಣವಾಗಿತ್ತು. ➡ಪುಟ ೬

ಕೆಪಿಸಿಎಲ್ ಸಾರ್ವಕಾಲಿಕ ದಾಖಲೆ

• **ಬೆಂಗಳೂರು:** ಜಲ ವಿದ್ಯುತ್ ಉತ್ಪಾದನೆಯಲ್ಲಿ, ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ.

ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೆಪಿಸಿಎಲ್ 2025–26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಬರೆದಿದೆ. ಕರ್ನಾಟಕವು 3.63 ಗಿಗಾವ್ಯಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ ಎಂದು ಇತ್ತೀಚೆಗೆ ಕೇಂದ್ರ ಸಚಿವಾಲಯ ವರದಿ ನೀಡಿತ್ತು. • ವಿವರ ಪುಟ ೨

CHANGE OF NAME

I, **DEVAKI KANUVANAGHATTA NAGARAJ**, aged about 66 Years, W/o. Kanuvanaghatta Nanjappa Nagaraj Gowda, Residing At No.196, 1st Block, 7th Cross, Vishwapriya Nagar, Begur, Bengaluru-560068, Karnataka, do hereby declare that I have changed my name from **DEVAKI KANNUGHATTA NAGARAJ & DEVIKI HASSAN MANJAPPA** (Old Name) to **DEVAKI KANUVANAGHATTA NAGARAJ** (New Name), henceforth I shall be known and called as **DEVAKI KANUVANAGHATTA NAGARAJ** (New Name) for all purposes, vide affidavit dated 7-4-4026, sworn before Advocate and Notary **GANGARAJU .B.N** at Bangalore.

CHANGE OF NAME

I, ABY VALSAN MANGALASSERIL, aged about 49 years, F/O JASON ABY, Residing at: No. 18, Mangalaserril House, 24th A Cross Road, 1st Main Road, Maruthi Nagar, Yelahanka, Bangalore - 560064, have changed my minor son's name from **JASON ABY** to **JASON ABY MANGALASERRIL**, vide affidavit dated 9/4/2026 sworn to before G R Ravichandra Reddy Advocate and Notary Bengalore.

CHANGE OF NAME

I, **ANANTH KUMAR G**, S/o Late P.H. Gangadhara Sa, age 50 years, R/at No.18, 5thCross, Agrahara Dasarahalli, Basaveshwaranagar, Bengaluru-560 079 do hereby declare that both the names i.e. **ANANTH KUMAR G** and **ANANTHA KUMAR G** are one and the same and refers to me only, but my correct name si **ANANTH KUMAR G**, vide affidavit dated 09-04-2026, sworn before Advocate and Notary **A. PRABHAKAR** at Bangalore.

CHANGE OF NAME

I, **YOGESH GOWDA KANUNGATTA NAGARAJ** (Old Name), S/o KANUVANAGHATTA NANJAPPA NAGARAJ GOWDA, Aged about 42 years Resident at NO.196, 1ST BLOCK, 7TH CROSS, VISHWAPRIYA NAGAR, BEGUR, BENGALURU-560068, KARNATAKA declare that I have changed my name from **YOGESH GOWDA KANUNGATTA NAGARAJ** (Old Name) to **YOGESH GOWDA KANUVANAGHATTA NAGARAJ** (New Name), henceforth I shall be known and called as **YOGESH GOWDA KANUVANAGHATTA NAGARAJ** (New Name) for all my personal, official & legal purpose, vide Affidavit dated : 07/04/2026 before Notary **GANGARAJU.B.N.** at BENGALURU

CHANGE OF NAME

I, **Mallikarjunayya Basayya Mata (Old name)** S/o. Basayya R/o. Atavi Swamy Mata, Chikkatotlukere Post, Kora Hobli, Tumakuru Taluk & District. I have changed my name as **SRI SRI SRI ATAVI MALLIKARJUNA SWAMIGALU (New name)** vide affidavit dated 09/04/2026 sworn before Advocate & Notary Shivaramaiah, Tumakuru.

CHANGE OF NAME

I, **Chandrayya Swami Tavagmath (Old name)** S/o. Chidanand Swami R/o. Tore mata, Gubbi, Gubbi Tq., Tumkuru Dist. I have changed my name as **SRI SRI SRI ATAVI CHANNABASAVA SWAMIGALU (New name)** vide affidavit dated 09/04/2026 sworn before Advocate & Notary Shivaramaiah, Tumakuru.

ಸಾರ್ವಜನಿಕ ಪ್ರಕಟಣೆ

[illegible]

ಸಿ.ಮಿಸ್. ಸಂಖ್ಯೆ 168/2026

[illegible]

ಸಿ.ಮಿಸ್.ನಂ. 144/2026

[illegible]

IN THE COURT OF THE HON'BLE PRL. SENIOR CIVIL JUDGE AND J.M.F.C. AT ANEKAL

O.S. No. 605/2022

PLAINTIFFS : Smt. CHINNAMMA AND OTHERS

V/s

DEFENDANTS : Sri. GUMMATIGA AND OTHERS

Notice to the Defendant No. 1 to 5 under order 5 rule 20 (1-A) of CPC

The address of the Defendant No.1 to 5 as follows:-

1. Sri. GUMMATIGA, S/o. Gumutappa Aged about 94 years, Residing at: Surajakkanahalli, Kasaba Hobli, Anekal Taluk, Bengaluru Urban Dist.

2. Sri. B.M. SRIKANTAPPA S/o. Late Bengaluru Mariyappa, Aged about 84 years, Residing at: Therupete, Anekal Town, Anekal, Bengaluru Urban Dist.

3. Sri. B.M. PAPANNA S/o. Late Bengaluru Mariyappa, Aged about 80 years, Residing at: Therupete, Anekal Town, Anekal, Bengaluru Urban Dist.

4. Sri. N. VASUDEVARAJU S/o. Late Katappa Aged about 70 years, Residing at: No.2966, 16th Cross, K.R. Road, BSK 2nd Stage, Bengaluru-560070.

5. Smt. SUMAN GOYAL W/o. Devilal Goyal, Aged about 50 years, Residing at: No. 176, Classic Arcade, I Phase, Hulimavu, Bengaluru-560076.

PUBLIC NOTICE

WHEREAS, the plaintiffs have filed the above Original Suit No.605/2022 against you before Prl. Senior Civil Judge and JMFC at Anekal, seeking a relief of Declaration and other consequential relief in respect of schedule property as below:-

All that part and parcel of the property bearing Sy. No. 120, measuring 1 acre 1½ Guntas, situated at Surajakkanahalli Village, Kasaba Hobli, Anekal Taluk, Bengaluru Urban Dist and bounded on East by: Private Land, West by: Land belongs to Gullappa, North by: Land Belongs to Obala Raj and South by: Land belongs to Appaiah Reddy.

You all are hare by summoned to appear before the above said court in person or by pleader at **11.00 AM on 16.06.2026.**

Take notice that in default of your appearance on the said date and time the case will be heard and determined in your absence.

Given under my hand and seal of court this 10th April 2026.

By Order of the Court,
Chief Ministerial Officer,
Senior Civil Judge & JMFC Court, Anekal

ADVOCATE FOR PLAINTIFFS :
SRI. SHIVANNA .R, Advocate
No.1, 3rd Floor, Dharmashastha Building, Attibele Road, Anekal Town, Bengaluru-562106.

IN THE COURT OF THE PRINCIPAL JUNIOR CIVIL JUDGE AND JMFC AT ANEKAL

C.MIS No.622/2026

BETWEEN: P. RAGHU, S/O Pillappa, Aged about 30 years, **ASHA**, W/o Late Pillappa, Aged about 50 years, R/at. Muthagatti Village, Anekal Taluk, Bangalore District. ... **PETITIONER**

AND: The Thashildhar, Anekal ... **RESPONDENT**

NOTICE

Whereas the petitioners have filed the above petition for seeking the death certificate of father of the petitioner namely PILLAPPA S/o Late Yallappa was died on 29/05/2016, at Muttagatti, Kasaba Hobali, Anekal Taluk, Bangalore Urban District before the Principal Civil Judge and JMFC at Anekal, whereas the above petition is fixed for hearing date: **07-05-2026** anybody interest in this matter regard to appear in this court in personally or by a pleader to file objections the same of you failing which the petition will be disposed on enquiry and determine ex-parte.

Given under my hand and seal of the Court on 10-04-2026.

By order of the court, Sheristedar, Civil Judge Jr Dvn and JMFC Court at Anekal.

ನಮೂನೆ ಸಂಖ್ಯೆ -18

ಮೊಕದ್ದಮೆ ನೋಟೀಸ್ – ಆದೇಶ 41 ನಿಯಮ 14 ಸಿ.ಪಿ.ಸಿ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ನಿಯಮಗಳ IV ನೇ ಅಧ್ಯಾಯದ 1,2,4 ಮತ್ತು 11 ನಿಯಮಗಳ ಅನ್ವಯ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ಎಂ.ಎಫ್.ಎ. ನಂ: 3875/2024

(ಎಂವಿ/ಎಸ್.ಜೆ)

[illegible]

ದಿನಾಂಕ: 30/04/2026 ರಂದು ಬೆಳಗ್ಗೆ 10.30 ಗಂಟೆಗೆ [illegible]

ನನ್ನ ಸಹಿ ಮತ್ತು ಈ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 07/04/2026 ರಂದು ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ, ಸಹಾಯಕ ವಿಲೇಖನಾಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

IN THE COURT OF THE PRINCIPAL CIVIL JUDGE AND J.M.F.C AT HOSKOTE

C.mis Petition No. 190/2026

BETWEEN: Naveen Kumar N, S/o Late Nagarajappa, and late Rathnamma, aged about 28 years, R/at: Doddanalurahalli Village, Jadigenahalli Hobli, Hoskote Taluk, Bangalore Rural District ... **PETITIONER**

AND: The Tahasildar, Hoskote Taluk, Hoskote ... **RESPONDENT**

GENERAL PUBLIC NOTICE

Whereas The Petitioners Have Filed The Above Petition For Seeking An Order To The Tahsildar, Hoskote Taluk, To Issue The Death Certificate Of petitioner sister namely Lakshmidevi D/o Late Nagarajappa died on 04-10-2022 at Doddanalurahalli Village, Jadigenahalli Hobli, Hoskote Taluk, Bangalore Rural District. The Case Is Posted For The Appearance For Interested Partice /Public On **11/05/2026** at **11:00 A.M.** Hence Interested Parties Are Hereby Required to Appear Either in person or through Pleader Property Instructed in this behalf On **11/05/2026** at **11:00 A.M.** Before The Hon'ble Principal Civil Judge And JMFC at Hoskote Bangalore Rural District. Failing Of which the above case will be heard and decide in your absence.

Given under my hand and seal of this Court on this 10/04/2026 at Hoskote

By order of the Court, Sheristedar, Civil Judge & J.M.F.C Hoskote

ARUNA .V, Advocate
Lubi Showroom, Ground Floor, Kote Beedi, Sulibele Road, Hoskote-562114. Email: legaladvice2051@gmail.com Mobile: 8971425339

IN THE COURT OF THE PRINCIPAL CIVIL JUDGE AT NELAMANGALA

O.S. No. 183/2006

BETWEEN: Sri Honnappa, Since deceased by his LRS ... **PLAINTIFF**

AND: Smt. Venkatamma and others ... **DEFENDANTS**

LEGAL HEIRS OF DEFENDANT No.4 LATE CHIKKAMUNIYAPPA

4(b) Smt. Siddamma @Kumari, W/o Gurusiddappa, D/o late Chikkamuniyappa, aged about 51 years, R/at Kodipalya Village, Madavara Post, Dasanapura Hobli, Bengaluru North Taluk-562123.

LEGAL HEIRS OF DEFENDANT No.5 LATE CHIKKAHONNAPPA

5(a) Smt. Gangamma, W/o Venkatappa, D/o late Chikkahonnappa, aged about 61 years. **5(b) Smt. Siddamma**, W/o Mariyappa, D/o late Chikkahonnappa, aged about 58 years, R/at Ulaganahalli Village, Dasanapura Hobli, Bengaluru North Taluk-562102. **5(c) Smt. Yashoda**, D/o late Chikkahonnappa, aged about 55 years, R/at Beside Railway Gate, Chowdeshwari Temple, Darabanahalli Village, Hesaraghatta Hobli, Bengaluru Rural District-560088.

SUMMONS/NOTICE TO THE DEFENDANT No. 4 (b), 5(a), 5(b) AND 5 (c)

WHEREAS, the plaintiff filed a suit for Partition and separate possession and other consequential relief against you and the defendants in respect of the below mentioned immovable property of the LRs of plaintiff.

You are hereby summoned to appear before this Hon'ble Court in person or by a Pleader duly instructed and able to answer all material questions relating to the suit or who shall be accompanied by some person able to answer all such questions on **01/06/2026** at **11.00 A.M.** to answer all the same, failing which the suit will be disposed of/decreed exparte.

SCHEDULE

Immovable property bearing Sy. No. 46/1, 46/2 and 46/3 measuring 1 acre 1 guntas situated at Sreekantapura @ Anchepalya village, Dasanapura Hobli, Bangalore North Taluk, bounded on: **East by:** Land of Narasegowda, **West by:** Land of Gopalaiah, **North by:** Land of Narasegowda, **South by:** Land of Naresegowda.

Given under my hand and seal of the court on this 07/04/2026

By order of the Court, Chief Ministerial Officer, Court of the Civil Judge, Junior Division and J.M.F.C Nelamangala

M. PRABHU, Advocate
No. 34/1, 2nd Floor, 1st Main, (Kalidasa Marg), Opp: Commercial tax Offices, Gandhinagar, Bengaluru-560 009. Mob: 9972930500.

ಗೌರವಾನ್ವಿತ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರು

ಜಿ ಅಂಡ್ ಡಬ್ಲ್ಯು ನಂ : 3 /2026

[illegible]

ಪತ್ರಿಕಾ ಪ್ರಕಟಣೆ

[illegible] ದಿನಾಂಕ: 24/04/26 ರಂದು ಬೆಳಗ್ಗೆ 11.00 ಗಂಟೆಗೆ [illegible]

ಷೆಡ್ಯೂಲ್ ಸ್ವತ್ತಿನ ವಿವರ

[illegible]

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ: 9.04.26ರಂದು ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ, ಶಿರಸ್ತೇದಾರರು, ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮದ್ದೂರು

[illegible]

ಶೀಘ್ರ ಮೊಕದ್ದಮೆ [illegible] ನ್ಯಾಯಾಲಯ, [illegible]

[illegible] ದಿನಾಂಕ: 16.05.2026 [illegible]

SPECIAL SUB JUDGE COURT NO. 1 SALEM

I.A. No. 1 /2025

MCOP No. 2270 /2024

Rajendran, S/o. Manoharan, No. 26/45-A, Kollam Pattarai Theru, Namakkal Taluk, Namakkal Dt. ... **PETITIONERS**

-V/s-

Kaliyappan, S/o. Chinnapaiyappa, No.203/1, TVS Main Road, Attibele Anekal TQ, Karnataka, Bangalore- 562 107. ... **3rd Respondent**

NOTICE TO THE 3rd RESPONDENT

Take Notice that the above named claimants has filed the a Compensation claim petition against you before this Honorable Court. If you have got any objection, you may either directly or through a lawyer appear before this Honorable Court on **27.04.2026**, at **10:30 A.M.** and file your objections. Failing which the case will be decided exparte in the above main petition.

P. SUBRAMANI, Advocate
No. 320/1, S.P. Puthur, Paramathi Road, Namakkal.

UJJIVAN SMALL FINANCE BANK

[illegible]

ಸ್ವಾಧೀನ ನೋಟೀಸ್ (ಸ್ಥಿರಾಸ್ತಿಗಳಿಗಾಗಿ) [ನಿಯಮ 8(1)] ಅನ್ವಯ

[illegible] ದಿನಾಂಕ 08ನೇ ಏಪ್ರಿಲ್ 2026 [illegible]

[illegible] ಡಿಮ್ಯಾಂಡ್ ನೋಟೀಸ್ ದಿನಾಂಕ: 30.12.2025 [illegible] 22.12.2025ಕ್ಕೆ [illegible] ರೂ.7,40,142 [illegible]

[illegible] 19.01.2026 [illegible] ರೂ.4,47,631 [illegible]

[illegible] 1529000102800600315 [illegible]

ದಿನಾಂಕ: 08.04.2026 ಸಹಿ/- ಅಧಿಕೃತ ಅಧಿಕಾರಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ) (ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ) ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: GL6/190/2023-24 ದಿನಾಂಕ: 09.04.2026

ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ಖರೀದಿಸಲು ವಾರ್ಷಿಕ ದರ ಒಪ್ಪಂದದ ಪ್ರಕಾರ ಒಂದು ವರ್ಷದ ಅವಧಿಗೆ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ **e-procurement portal** ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆ :**UOM/2025-26/IND0063/Call-2** ಹಾಗೂ ಮರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:15.04.2026 ಸಂಜೆ 5:30.ರವರೆಗೆ.

ಸೂಚನೆ: ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: 0821-2419361/222ರಲ್ಲಿ ಅಥವಾ ವೆಬ್ ಸೈಟ್ (**http://kppp.karnataka.gov.in**)ರಲ್ಲಿ ಪಡೆಯಬಹುದಾಗಿದೆ.

ವಾಹಿಕಾ/ಮೈಸೂರು/ಜಿಲ್ಲೆ/44/2026-27 ಸಹಿ/- ಕುಲಸಚಿವರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ. ದೂರವಾಣಿ ಸಂ:08194-200187 Email ID:ubpeediv07@gmail.com

ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಜಿ/2026-27/ 2 & 3 ದಿನಾಂಕ:08.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ನಂ.148 ಎಂಬೇಸಿ ಸ್ಕ್ವೇರ್, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು 560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್;ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳ ದ್ವಿ-ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದವರೆಗೆ ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194-200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಲೆಕ್ಕಶೀರ್ಷಿಕೆ	ಟೆಂಡರ್ ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಬಿಡ್ಡನ್ನು ತೆರೆಯುವ ದಿನಾಂಕ
1	VJNL/2025-26/BD/ WORK_INDENT 497	4701 V.V.Sagara	41,69,280.73	17.04.2026 @ 5.00 PM	18.04.2026 @ 5.30 PM
2	VJNL/2025-26/BD/ WORK_INDENT 496	4701 V.V.Sagara	41,44,032.78	17.04.2026 @ 5.00 PM	18.04.2026 @ 5.30 PM

DIPR/CHITRADURGA/KSMCA/17/2026-27

ಸಹಿ/- ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ., ಭ.ಮೇ.ಯೋ., ವಿಭಾಗ ನಂ.07, ಹಿರಿಯೂರು.

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ

ಮೈಸೂರು ಜಿಲ್ಲೆ - 571107, ದೂ: 08223-273036

ಇ-ಮೇಲ್: itstaff_ulb_periyapatna@yahoo.com

ಸಂಖ್ಯೆ: ಪಿಪುಸ/ಪ.ಅ/ಟೆಂಡರ್-01-04/2026-27 ದಿನಾಂಕ: 09.04.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಪಿರಿಯಾಪಟ್ಟಣ ಪುರಸಭೆಯ ವಿವಿಧ ಸೇವೆಗಳನ್ನು ಅರ್ಹರಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. 1) ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 24.04.2026 ಸಂಜೆ 5:00 ಗಂಟೆಯವರೆಗೆ.** 2) ಟೆಂಡರ್ ತೆರೆಯುವ **ದಿನಾಂಕ: 27.04.2026ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ.	ವಿವರ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
1	DMA/2026-27/SE7686	16.10	40250	12 ತಿಂಗಳು
2	DMA/2026-27/SE7677	29.10	58200	12 ತಿಂಗಳು
3	DMA/2026-27/SE7676	16.50	41250	12 ತಿಂಗಳು
4	DMA/2026-27/SE7671	6.38	15970	12 ತಿಂಗಳು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

DIPR/MYS/42/SA/2026-27

ಸಹಿ/-
ಮುಖ್ಯಾಧಿಕಾರಿ
ಪುರಸಭೆ, ಪಿರಿಯಾಪಟ್ಟಣ

ತಾಲೂಕಾ ಆಸ್ಪತ್ರೆ ಜೋಯಿಡಾ-581186

E-mail:- talukahospitaljoidaa@gmail.com Ph. No:- 08383-282703

ಸಂ.ತಾಆಜೋ/ಪಥ್ಯಾಹಾರ/347/2025-26 ದಿ: 09/04/2026

-: ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ :-

ಉತ್ತರ ಕನ್ನಡ ಜಿಲ್ಲೆಯ ರಾಜ್ಯ ವಲಯದ ತಾಲೂಕಾ ಆಸ್ಪತ್ರೆ ಜೋಯಿಡಾದಲ್ಲಿ 2026-27 ನೇ ಸಾಲಿಗೆ ಒಳರೋಗಿಗಳಿಗೆ ಸಿದ್ಧಪಡಿಸಿದ ಪಥ್ಯಾಹಾರ (ಆಹಾರ) ಪದಾರ್ಥಗಳು ಹಾಗೂ ಬ್ರೆಡ್ ಪದಾರ್ಥಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31/03/2027 ರ ವರೆಗೆ ಅಥವಾ ಈ ಕಛೇರಿಯ ಮುಂದಿನ ಆದೇಶದ ವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ ಅಂದಾಜು ಮೌಲ್ಯ 12 ತಿಂಗಳಿಗೆ ರೂ. 13,41,720/- ಇದ್ದು ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ. ದ್ವಿ-ಲಕೋಟೆ ಪದ್ಧತಿಯಲ್ಲಿ ಸಿದ್ಧಪಡಿಸಿದ ಪಥ್ಯಾಹಾರ (Prepared Meal) ಹಾಗೂ ಬ್ರೆಡ್ ಪೂರೈಕೆಗಾಗಿ Karnataka Public Procurement Portal (https://kppp.karnataka.gov.in)

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂ:ತಾಆಜೋ/ಪಥ್ಯಾಹಾರ/347/2025-26,ದಿನಾಂಕ: 09/04/2026		
2	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ	ಕ್ರ.ಸಂ.	ವಿವರ	ಟೆಂಡರ್ ಬಿಡ್ ಮೊತ್ತ (ರೂ. ಗಳಲ್ಲಿ)
		1	Group-A Prepaied Meal	ರೂ. 12,06,720/-
		2	Group-B Bread	ರೂ. 1,35,000/-
3	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ	10/04/2026		
4	KPPP-Portal ನಲ್ಲಿ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ಪ್ರಾರಂಭಿಸುವ ದಿನಾಂಕ & ಸಮಯ	ದಿನಾಂಕ: 24-04-2026ರ ಸಂಜೆ 04-00 ವರೆಗೆ		
5	KPPP-Portal ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ: 27-04-2026ರ ಮಧ್ಯಾಹ್ನ 03-00 ಗಂಟೆಗೆ		
6	ಮಾದರಿ ಸಲ್ಲಿಸುವ ದಿನಾಂಕ (Sample Submission Date)	30/04/2026 0 5 11:00 ಅಥವಾ ತಾಂತ್ರಿಕ ಬಿಡ್‌ನಲ್ಲಿ ಅರ್ಹ ಇರುವ ಸಂಸ್ಥೆಗಳಿಗೆ ದಿನಾಂಕ ಮತ್ತು ಸಮಯ ಇ-ಮೇಲ್ ಮೂಲಕ ಸೂಚಿಸಲಾಗುವುದು.		
7	KPPP-Portal ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ	ದಿನಾಂಕ : 04/05/2026 ರ ಅಪರಾಹ್ನ 3:00 ಗಂಟೆಗೆ ಅಥವಾ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ (KPPP-Portal ನಲ್ಲಿ)		
8	ಇಎಮ್‌ಡಿ (ಶೇ. 2.5%)	ಅನುಬಂಧ-1 ರ ನಮೂನೆಯಲ್ಲಿ EMD Declaration ಸಹಿಯೊಂದಿಗೆ ಸಲ್ಲಿಸುವದು.		
9	ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ 9 ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಆಸ್ಪತ್ರೆ, ಜೋಯಿಡಾ (ಉ.ಕ) ದೂ.ಸಂ. : 08383-282703 Email ID: talukahospitaljoida@gmail.com		

ಸಹಿ/- ಆಡಳಿತ ವೈದ್ಯಾಧಿಕಾರಿ,
ತಾಲೂಕಾ ಆಸ್ಪತ್ರೆ, ಜೋಯಿಡಾ

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1907

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ☎ 26678572 : 26600512 : 26609066 : 57765582
ವೆಬ್: bccbl.co.in, ಇ-ಮೇಲ್ ಐಡಿ : recovery@bccbl.co.in

ನಿಯಮ 8(1) **ಸ್ವಾಧೀನ ಸೂಚನೆ** (ಸ್ಥಿರ ಆಸ್ತಿಗಾಗಿ)(ಸಾಂಕೇತಿಕವಾಗಿ)

[illegible]

ಸ್ಥಿರ ಆಸ್ತಿಗಳ ವಿವರಣೆ

ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ಸ್ಥಿರಾಸ್ತಿಗಳ ವಿವರ ಮತ್ತು ಅಳತೆ
ವಿಜಯನಗರ ಶಾಖೆ:			
01	ಶ್ರೀ. ಮುನಿರತ್ನಂ ಅಲಿಯಾಸ್ ಮುನಿರತ್ನಂ ವಿ.	ತಗಾದೆ ನೋಟೀಸ್ ದಿನಾಂಕ : 03.01.2026 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ 06.04.2026-ಕ್ಕೆ ರೂ 9,56,875/-	[illegible] ಹೊಸ ಪುರಸಭೆ ನಂ.50, (ಹಳೆಯ ನಂ.13/ಬಿ) [illegible] ವಾರ್ಡ್ ನಂ.29, ಪಿಐಡಿ ನಂ.29-29-50, ಬೆಂಗಳೂರು. [illegible] 40 ಅಡಿ [illegible] 15.6 ಅಡಿ: 14.6 ಅಡಿ [illegible] ಸಂಖ್ಯೆ 11, [illegible] ಸಂಖ್ಯೆ 14, [illegible] ಸಂಖ್ಯೆ 13A
02	ಶ್ರೀಮತಿ ಗುಲ್ನಾಜ್ ಬೇಗಂ	ತಗಾದೆ ನೋಟೀಸ್ ದಿನಾಂಕ : 29.12.2025 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ 06.04.2026 ಕ್ಕೆ ರೂ 3,01,995/-	[illegible] ಸಂಖ್ಯೆ 3, ಹಳೆಯ ಸಂಖ್ಯೆ 23, 4ನೇ 'ಎ' ಕ್ರಾಸ್, [illegible] BBMP ವಾರ್ಡ್ ನಂ. 43 [illegible] PID No.18, 43 [illegible] ಬೆಂಗಳೂರು-43 [illegible] 17.6 ಅಡಿ [illegible] 20 ಅಡಿ [illegible]
03	ಶ್ರೀಮತಿ ಸರಸ್ವತಿ	ತಗಾದೆ ನೋಟೀಸ್ ದಿನಾಂಕ : 16.01.2026 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ 6,65,722/-	[illegible] ಸಂಖ್ಯೆ 61 & 62 [illegible] ಸಂಖ್ಯೆ 1/61-62-1, ಪಿಐಡಿ ಸಂಖ್ಯೆ 29-46-1/61-62-1 [illegible] ಸಂಖ್ಯೆ 29 [illegible] ಸಂಖ್ಯೆ 120, ಬೆಂಗಳೂರು. [illegible] 14 ಅಡಿ [illegible] 45 ಅಡಿ [illegible]
04	ಶ್ರೀ. [illegible]	ತಗಾದೆ ನೋಟೀಸ್ ದಿನಾಂಕ : 31.12.2025 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 9,46,503/-	[illegible] ನಂ.43, [illegible] 13 ನೇ ಕ್ರಾಸ್, [illegible] ವಾರ್ಡ್ ನಂ.44, [illegible] ಪಿಐಡಿ ನಂ.44-7-43 [illegible] ವಾರ್ಡ್ ನಂ.135, ಬೆಂಗಳೂರು. [illegible] 15 ಅಡಿ [illegible] 32.6 ಅಡಿ [illegible] ಸಂಖ್ಯೆ 43 [illegible]
05	ಶ್ರೀ.ಶಿವಶಂಕರ್ ಎಸ್ ಮತ್ತು ಶ್ರೀಮತಿ ವೆಂಕಟಲಕ್ಷ್ಮಿ	ತಗಾದೆ ನೋಟೀಸ್ ದಿನಾಂಕ : 16.01.2026 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 10,66,285/-	[illegible] ಹೊಸ ಸಂಖ್ಯೆ 19, ಹಳೆಯ ಸಂಖ್ಯೆ 482, [illegible] 482/19, 1ನೇ ಕ್ರಾಸ್, [illegible] ವಾರ್ಡ್ ಸಂಖ್ಯೆ 44, [illegible] ಸಂಖ್ಯೆ 137, ಪಿಐಡಿ ಸಂಖ್ಯೆ 44-36-19, ಬೆಂಗಳೂರು. [illegible] 18 ಅಡಿ [illegible] 25 ಅಡಿ [illegible] ಸಂಖ್ಯೆ 481, [illegible] ಸಂಖ್ಯೆ 501, [illegible]
[illegible] ಶಾಖೆ:			
06	ಶ್ರೀ.ಪುರುಷೋತ್ತಮನ್ ಎ.ಡಿ. [illegible]	ತಗಾದೆ ನೋಟೀಸ್ ದಿನಾಂಕ : 28.01.2026 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 35,21,579/-	[illegible] ನಂ.1/1, ಹಳೆಯ ನಂ.10 [illegible] ನಂ.61/1, [illegible] ವಾರ್ಡ್ ನಂ.86 [illegible] ವಾರ್ಡ್ ನಂ.59, PID No.86-34-1/1, ಬೆಂಗಳೂರು. [illegible] 18 ಅಡಿ, [illegible] 40 ಅಡಿ [illegible] 31 ಅಡಿ [illegible] 370 ಅಡಿ [illegible] 993.25 [illegible]
ಚಾಮರಾಜಪೇಟೆ (ಪಶ್ಚಿಮ) ಶಾಖೆ:			
07	ಶ್ರೀಮತಿ [illegible]	ತಗಾದೆ ನೋಟೀಸ್ ದಿನಾಂಕ : 03.02.2026 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 1,60,815/-	[illegible] ಹೊಸ ಸಂಖ್ಯೆ 18, [illegible] ವಾರ್ಡ್ ನಂ. 25, [illegible] ಪಿಐಡಿ ಸಂಖ್ಯೆ 25-65-18, ಬೆಂಗಳೂರು-23 [illegible] 20 ಅಡಿ [illegible] 30 ಅಡಿ [illegible]
08	ಶ್ರೀ ಎಸ್ [illegible]	ತಗಾದೆ ನೋಟೀಸ್ ದಿನಾಂಕ : 18.12.2025 ಸ್ವಾಧೀನತೆ ನೋಟೀಸ್ ದಿನಾಂಕ : 06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 4,11,611/-	[illegible] ನಂ.68, ಹಳೆಯ ನಂ.23, 20ನೇ ಕ್ರಾಸ್, [illegible] ವಾರ್ಡ್ ಸಂಖ್ಯೆ 32 [illegible] ಪಿಐಡಿ ಸಂಖ್ಯೆ 32-28-68, ಬೆಂಗಳೂರು. [illegible] 10 ಅಡಿ [illegible] 20+25/2 ಅಡಿ [illegible]
09	ಶ್ರೀ [illegible]	ತಗಾದೆ ನೋಟೀಸ್ ದಿನಾಂಕ : 03.02.2026 ಸ್ವಾಧೀನತೆ ನೋಟೀಸ್ ದಿನಾಂಕ :06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 15,03,612/-	[illegible] ನಂ. 44, 9ನೇ [illegible] ವಾರ್ಡ್ ನಂ. 44, [illegible] ಸಂಖ್ಯೆ44-4-44, ಬೆಂಗಳೂರು. [illegible] 15 ಅಡಿ [illegible] 38 ಅಡಿ. [illegible] ಸಂಖ್ಯೆ 22, [illegible] ಸಂಖ್ಯೆ 24 [illegible]
[illegible] ಶಾಖೆ			
10	[illegible]	ತಗಾದೆ ನೋಟೀಸ್ ದಿನಾಂಕ : 09.01.2026 ಸ್ವಾಧೀನತೆ ನೋಟೀಸ್ ದಿನಾಂಕ :06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 48,83,445/-	[illegible] ನಂ.28, [illegible] 8954452946, [illegible] 42-52-28, [illegible] ವಾರ್ಡ್ ಸಂಖ್ಯೆ 133, [illegible] ಬೆಂಗಳೂರು-45 [illegible] 30 ಅಡಿ [illegible] 20 ಅಡಿ [illegible] ಸಂಖ್ಯೆ 37, [illegible] ಸಂಖ್ಯೆ 29, [illegible] ಸಂಖ್ಯೆ 27
[illegible] ಶಾಖೆ			
11	ಶ್ರೀಮತಿ [illegible]	ತಗಾದೆ ನೋಟೀಸ್ ದಿನಾಂಕ : 28.01.2026 ಸ್ವಾಧೀನತೆ ನೋಟೀಸ್ ದಿನಾಂಕ :06.04.2026 ಬಾಕಿ ಇರುವ ಮೊತ್ತ : ದಿನಾಂಕ : 06.04.2026 ಕ್ಕೆ ರೂ. 60,76,460/-	[illegible] ಸಂಖ್ಯೆ 3066, [illegible] ನಂ. 6560, [illegible] ವಾರ್ಡ್ ನಂ. 08, [illegible] 8-3-551-115 [illegible] 60 ಅಡಿ [illegible] 40 ಅಡಿ [illegible]

ಸ್ಥಳ : ಬೆಂಗಳೂರು
ದಿನಾಂಕ : 10.04.2026

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 11 ಏಪ್ರಿಲ್ 2026
ಬೆಂಗಳೂರು

ಸಾರಸ್ವತ ಲೋಕದ ಧೀಮಂತ ಎಸ್.ಆರ್.ರಾಮಸ್ವಾಮಿ





ದು.ಗು. ಲಕ್ಷ್ಮಣ, ಹಿರಿಯ ಪತ್ರಕರ್ತ

ಅವರದು ಯಾವಾಗಲೂ ಪಂಚೆ ಹಾಗೂ ಜುಬ್ಬದ ಅಪ್ಪಟ ಖಾದಿ ಉಡುಪು. ಹೆಗಲಿಗೊಂದು ನೇತಾಡುವ ಭಾರವಾದ ಚೀಲ. ಆ ಚೀಲದಲ್ಲಿ ಕಾಫಿ ಫ್ಲಾಸ್ಕ್, ಸುಗಂಧಭರಿತ ಅಡಿಕೆಪುಡಿ, ಒಂದಷ್ಟು ಪುಸ್ತಕಗಳು ಇತ್ಯಾದಿ. ಕಣ್ಣಿಗೊಂದು ದಪ್ಪ ಕನ್ನಡಕ. ಅವರು ನಮ್ಮನ್ನು ನೋಡುತ್ತಿದ್ದಾರೋ ಅಥವಾ ಬೇರೆ ಯಾರನ್ನಾದರೂ ದೃಷ್ಟಿಸುತ್ತಿದ್ದಾರೋ ಎಂಬ ಗೊಂದಲದ ನೋಟ. ಅವರು ನೋಡುತ್ತಿದ್ದುದೇ ಹಾಗೆ. ಅದೊಂದು ಗಂಭೀರ ನೋಟ. ಅವರ ಪರಿಚಯ ಇಲ್ಲದಿರುವವರಿಗೆ ಇವರೊಬ್ಬ ಗಂಭೀರ ಸ್ವಭಾವದ ವ್ಯಕ್ತಿ ಎನಿಸುತ್ತಿತ್ತು. ಪರಿಚಯವಿರುವವರಿಗೆ ಮಾತ್ರ ಸ್ನೇಹಮಯ ವ್ಯಕ್ತಿಯಾಗಿ ಕಾಣುತ್ತಿದ್ದರು. ಗಾಂಧಿ ಬಜಾರಿನ ತರಕಾರಿ ಅಂಗಡಿಯ ಬಳಿ ಅಥವಾ ಬ್ಯುಲ್‌ಟೆಂಪಲ್ ರಸ್ತೆಯಲ್ಲಿ ಹೆಗಲಿಗೆ ಚೀಲ ಏರಿಸಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಇಳಿವಯಸ್ಸಿನಲ್ಲೂ ನಡೆದುಕೊಂಡೇ ಓಡಾಡುತ್ತಿದ್ದ ದೃಶ್ಯ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

'ಹೇಗಿದ್ದೀರಿ ಸಾರ್ ?' ಎಂದು ಆತ್ಮೀಯರು ಪ್ರಶ್ನಿಸಿದರೆ, ಅಷ್ಟೇ ಗಂಭೀರವಾಗಿ 'better than tomorrow' ಎಂಬ ಉತ್ತರ. ಈ ಉತ್ತರದಲ್ಲಿ ಒಂದು ಬಗೆಯ ತಿಳಿಹಾಸ್ಯ. ನಾಳೆಗಿಂತ ಇಂದು ಆರೋಗ್ಯ ಉತ್ತಮ ಎಂಬುದು ಅದರ ಅರ್ಥ. ಆದರೆ, ಅವರ ಈ ಮಾತನ್ನು ಅರ್ಥ ಮಾಡಿಕೊಳ್ಳಲು ಪ್ರಶ್ನೆ ಕೇಳಿದವರಿಗೆ ಒಂದೆರಡು ನಿಮಿಷಗಳಾದರೂ ಬೇಕಾಗುತ್ತಿತ್ತು. ತನಗಿಂತ ಕಿರಿಯರು ಭೇಟಿಯಾದಾಗ ಹೆಗಲ ಮೇಲೆ ಕೈಹಾಕಿ ಪ್ರೀತಿಯಿಂದ ಮಾತನಾಡಿಸುವ ಸ್ವಭಾವ. ಗಣ್ಯರು, ಹಿರಿಯರೊಂದಿಗಾದರೆ ಅಷ್ಟೇ ಗೌರವ. ಗಂಭೀರ ವರ್ತನೆ. ತನ್ನ ವಯಸ್ಸಿನ ಕಾಲು ಭಾಗವೂ ಆಗಿರದ ಪ್ರಾಯದ ಪಡ್ಡೆ ಹುಡುಗರೊಂದಿಗೆ ನಗುನಗುತ್ತಾ ಕೆಲವೊಮ್ಮೆ ಮಸಾಲೆಭರಿತ ನಾಟಕ, ಸಿನೆಮಾ ನೋಡಲು ಹೋಗುತ್ತಿದ್ದ ಅವರು, ಉಳಿದ ವೇಳೆಯಲ್ಲಿ ಶ್ರೀಮದ್ಗಾಂಭೀರ್ಯದ ಮೂರ್ತಿ. ಅನೇಕರಿಗೆ ಇವರು ಹೀಗೇಕೆ ಎಂಬ ಪ್ರಶ್ನೆ. ಆದರೆ, ಅವರ ಅಂತರಂಗವನ್ನು ಅರಿತವರಿಗೆ ಅವರೆಷ್ಟು ಹೃದಯವಂತರು, ಆತ್ಮೀಯರು ಎಂಬ ಉಲ್ಲಾಸದ ಆಪ್ತ ಅನುಭವ.

ಶುಕ್ರವಾರ ಬೆಳಗ್ಗೆ ನಿಧನರಾದ ಎಸ್.ಆರ್. ರಾಮಸ್ವಾಮಿ ಅವರನ್ನು ಹತ್ತಿರದಿಂದ ಬಲ್ಲವರಿಗೆ ಮೇಲಿನ ಮಾತುಗಳು ಅದೆಷ್ಟು ಅನ್ವರ್ಥವೆಂದು ಅನಿಸದಿರದು. ಅವರೊಬ್ಬ ಅಸಾಧಾರಣ ಪಾಂಡಿತ್ಯದ ಗಣಿ. ಪ್ರಬುದ್ಧ ವಿದ್ವಾಂಸ. ಜ್ಞಾನದ ಭಂಡಾರ. ಅವರ ಅರಿವಿಗೆ ನಿಲುಕದ ವಿಷಯಗಳೇ ಬಹುಶಃ ಇದ್ದಿರಲಿಕ್ಕಿಲ್ಲ. ಸಂಸ್ಕೃತ, ಹಿಂದಿ, ಕನ್ನಡ, ತೆಲುಗು, ಮರಾಠಿ, ಗುಜರಾತಿ, ಬಂಗಾಳಿ, ಇಂಗ್ಲಿಷ್... ಹೀಗೆ ಹಲವು ಭಾಷೆಗಳ ಮೇಲೆ ಹಿಡಿತ. ಅಧ್ಯಯನದ ಕ್ಷೇತ್ರಗಳು ಹತ್ತಾರು. ಆದರೂ ಅವರು ತಮ್ಮನ್ನು ವಿಶೇಷವಾಗಿ ಗುರುತಿಸಿಕೊಂಡದ್ದು ಅಭ್ಯುದಯ ಅರ್ಥಶಾಸ್ತ್ರ, ಪತ್ರಿಕೋದ್ಯಮ ಮತ್ತು ಭಾರತೀಯ ಸಂಸ್ಕೃತಿಯ ವಿವಿಧ ರಂಗಗಳಲ್ಲಿ. ಈ ಕಾರಣಕ್ಕಾಗಿಯೇ ಅವರ ಓದು – ಬರಹಗಳಿಗೆ ಎಣೆಯಿಲ್ಲದ ಆಳ– ಅಗಲ, ಅಧಿಕೃತತೆ ಮತ್ತು ಸಮಗ್ರತೆಗಳ ಹದ. ಅವರ ಕನ್ನಡ – ಇಂಗ್ಲಿಷ್ ಭಾಷಾಶೈಲಿ ಗಂಭೀರವಾದ ವಿಷಯಗಳನ್ನು ದೀರ್ಘಕಾಲ ನಿಲ್ಲುವಂತೆ ಹೇಗೆ ಹೇಳಬಹುದೆಂಬ ಕಲೆಗೆ ನಿದರ್ಶನ.



ರಾಮಸ್ವಾಮಿಗಳು ಸುಪ್ರಸಿದ್ಧ ಪಂಡಿತವಂಶವಾದ ಮೋಟಗಾನ ಹಳ್ಳಿಯ ಕುಟುಂಬಕ್ಕೆ ಸೇರಿದವರು. ಸೊಂಡೇಕೊಪ್ಪದ ಮೂಲದವರು. ಅವರ ಕುಟುಂಬದ ಹಿರಿಯರಲ್ಲಿ ವಿದ್ವತ್ತು, ಪಾಂಡಿತ್ಯ, ಕಲಾಸಕ್ತಿ ಮತ್ತು ಸಾಹಸ ಸಾಮಾನ್ಯವೆಂಬಂತೆ ಸದ್ಗುಣಗಳಾಗಿದ್ದವು. ಚತುಶ್ಶಾಸ್ತ್ರ ಪಂಡಿತರು, ವೇದ ಪಾರಂಗತರು, ಸೋಮಯಾಜಿಗಳು, ಪಂಡಿತ ಕವಿಗಳು, ಗೀತ ನಾಟಕ ಪ್ರವೀಣರು.... ಹೀಗೆ ಹಲವರು ಅವರ ತಾಯಿ – ತಂದೆಯ ವಂಶದಲ್ಲಿ ಆಗಿ ಹೋದವರು. ಅದೇ ಸದ್ಗುಣಗಳು ರಾಮಸ್ವಾಮಿ ಅವರಲ್ಲೂ ಹರಿದು ಬಂದಿರಬಹುದು. ರಾಮಸ್ವಾಮಿ ಅವರು ಚಿಕ್ಕ ವಯಸ್ಸಿಗೇ ವೇದಾಧ್ಯಯನ ಮಾಡಿದವರು. ವ್ಯಾಕರಣ ಕಲಿಕೆ, ಜೊತೆಗೆ ಜರ್ಮನ್, ಫ್ರೆಂಚ್, ಸ್ಪಾನಿಷ್, ಇಟಾಲಿಯನ್ ಭಾಷೆಗಳ ಪರಿಚಯ ಪಡೆದಿದ್ದರು. ಇವೆಲ್ಲಕ್ಕಿಂತ ಮುಖ್ಯವಾಗಿ ಅವರು ಡಿವಿಜಿ ಅವರ ಕಣ್ಣು ಹಾಗೂ ಕೈ ಆಗಿದ್ದರು. ಡಿವಿಜಿ ಅವರು ಉಕ್ತ ಲೇಖನದ ರೂಪದಲ್ಲಿ ಹೇಳುತ್ತಿದ್ದುದನ್ನು ಅಚ್ಚುಕಟ್ಟಾಗಿ ಬರೆದು, ಪ್ರತಿಮಾಡಿ, ಅಚ್ಚಿನ ಮನೆಯ ಎಲ್ಲ ಹಂತಗಳ ಕರಡನ್ನು ತಿದ್ದಿ ಅದಕ್ಕೊಂದು ಅಂತಿಮರೂಪವನ್ನು ನೀಡುತ್ತಿದ್ದವರು ಇವರೇ. ಡಿವಿಜಿ ಅವರ ಪ್ರತಿ ಪುಸ್ತಕದ ಮುನ್ನುಡಿಯಲ್ಲಿ ಸಾಮಾನ್ಯವಾಗಿ ತಪ್ಪದೇ ಇಣುಕುತ್ತಿದ್ದ ಹೆಸರು ರಾಮಸ್ವಾಮಿ ಅವರದು. ಡಿವಿಜಿ ಅವರಷ್ಟೇ ಅಲ್ಲ, ವಿ.ಸೀ., ಮಾಸ್ತಿ, ರಾಳ್ಳಪಲ್ಲಿ, ವೀರಕೇಸರಿ ಸೀತಾರಾಮಶಾಸ್ತ್ರಿ, ದೇವುಡು ನರಸಿಂಹ ಶಾಸ್ತ್ರಿ, ರಾಜರತ್ನಂ, ತಿ. ಕೋದಂಡರಾವ್, ಯಾದವ ರಾವ್ ಜೋಶಿ ಮುಂತಾದ ಪ್ರಾತಃಸ್ಮರಣೀಯರೊಂದಿಗೂ ನಿರಂತರ ಸಾಹಚರ್ಯ. ಜೊತೆಗೆ ಎನ್. ಚೆನ್ನಕೇಶವಯ್ಯ, ವೀಣಾ ರಾಜಾರಾವ್, ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಶೇಷಾದ್ರಿ ಗವಾಯಿ, ರಾಮರಾವ್ ನಾಯಕ್ ಮುಂತಾದ ಅಸಂಖ್ಯ ಸಂಗೀತ ದಿಗ್ಗಜರೊಂದಿಗೆ ಸ್ನೇಹದ ಒಡನಾಟ.

ಇಷ್ಟೆಲ್ಲ ಮೇರು ವ್ಯಕ್ತಿಗಳ ಒಡನಾಟದಲ್ಲಿ ಅರಳಿದ ರಾಮಸ್ವಾಮಿ ಅವರಿಗೆ ಶಾಲಾ ಕಾಲೇಜುಗಳ ಶಿಕ್ಷಣ ನೀರಸವೆನಿಸಿದ್ದರೆ ಆಶ್ಚರ್ಯವಿಲ್ಲ, ಅವರು ಕಾಲೇಜು ವಿಶ್ವವಿದ್ಯಾಲಯಗಳ ಮೆಟ್ಟಿಲು ತುಳಿದಿದ್ದು ಡಿಗ್ರಿಗಳ ಪ್ರಾಪ್ತಿಗಾಗಿ ಅಲ್ಲ, ಆದರೆ, ವಿಶೇಷ ಉಪನ್ಯಾಸಕರಾಗಿ ಅಥವಾ ಇನ್ನುವುದೋ ಗೌರವ ಡಾಕ್ಟರೇಟ್, ಡಿ.ಲಿಟ್ ಪದವಿ ಸ್ವೀಕರಿಸುವುದಕ್ಕಾಗಿ ವಿವಿಗಳಿಗೆ ಎಡತಾಕಿದ್ದು ಉಂಟು.

1972 ರಿಂದ 1979ರ ವರೆಗೆ 'ಸುಧಾ' ಕನ್ನಡ ವಾರ ಪತ್ರಿಕೆಯಲ್ಲಿ ಪ್ರಧಾನ ಉಪಸಂಪಾದಕರಾಗಿ ದುಡಿಮೆ. ಅನಂತರ 1979ರಿಂದ ಇದುವರೆಗೂ ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ 'ಉತ್ಥಾನ' ಕನ್ನಡ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿ ಅಹರ್ನಿಶಿ ಸೇವೆ. ನಿಜಕ್ಕೂ ಅದು ಸೇವೆಯೆ. ಏಕೆಂದರೆ ರಾಷ್ಟ್ರೋತ್ಥಾನ ಪರಿಷತ್ತಿಗೆ ಕಾಲಿಟ್ಟಾಗ ನನಗೆಷ್ಟು ವೇತನ ಕೊಡುತ್ತೀರಿ ಎಂದು ಅವರು ಯಾರನ್ನೂ ಕೇಳಿರಲಿಲ್ಲ.

ಪರಿಷತ್ತಿನ ಕಾರ್ಯ ನಿರ್ವಹಿಸುತ್ತಲೇ ಅವರು ಐವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿದ್ದು ಅವರ ಅದ್ಭುತ ಲೇಖನ ಸಾಮರ್ಥ್ಯಕ್ಕೆ ಸಾಕ್ಷಿ. ಗ್ರಂಥ ಸಂಪಾದನೆ, ಹಸ್ತಪ್ರತಿ ಪರಿಷ್ಕರಣೆ, ವಿವಿಧ 'ನಾಗರಿಕತೆಗಳ ಸಂಘರ್ಷ', 'ಭಾರತದಲ್ಲಿ ಸಮಾಜ ಕಾರ್ಯ: ಹಿನ್ನೆಲೆ –ಮುನ್ನೋಟ', 'ಸ್ವದೇಶಿ ಜಾಗೃತಿ' 'ಆರ್ಯರ ಆಕ್ರಮಣ: ಬುಡವಿಲ್ಲದ ವಾದ' ಹೀಗೆ ಹಲವು ಮೌಲಿಕ ಕೃತಿಗಳ ಅಸಾಮಾನ್ಯ ದಾಖಲೆ.

ರಾಮಸ್ವಾಮಿ ಎಂದರೆ ಶಿಸ್ತಿಗೆ ಇನ್ನೊಂದು ಹೆಸರು. ನಿಗದಿತ ಸಮಯಕ್ಕಿಂತ ಮೊದಲೇ ಕೆಲಸ ನಿರ್ವಹಿಸುವುದು ಅವರ ಸ್ವಭಾವ. ಯಾವುದೇ ಕೆಲಸ ಇರಲಿ ಪೂರ್ವ ಸಿದ್ಧತೆ ಇಲ್ಲದೆ ಅವರು ಹೋಗುತ್ತಿರಲಿಲ್ಲ, ಸಭೆಯಲ್ಲಿ ಒಬ್ಬರ ಪರಿಚಯ ಮಾಡಿಕೊಡುವುದಿದ್ದರೂ ಅವರ ಬಗ್ಗೆ ವಿವರಗಳನ್ನು ಸಂಗ್ರಹಿಸಿ, ಆನಂತರ ಅದನ್ನು ಅಚ್ಚುಕಟ್ಟಾಗಿ ಬರೆದು, ಸೊಗಸಾಗಿ ನಿರೂಪಿಸುತ್ತಿದ್ದರು. ಬರವಣಿಗೆ, ಭಾಷಣ, ಲೇಖನ ಪರಿಷ್ಕರಣೆ, ಅಧ್ಯಯನ –ಎಲ್ಲದರಲ್ಲೂ, ಈ ಶಿಸ್ತು ಎದ್ದು ಕಾಣುತ್ತಿತ್ತು.

ಗುರುವಾರ ರಾತ್ರಿ ಊಟ ಮುಗಿಸಿ ಐಪಿಎಲ್ ಪಂದ್ಯ ವೀಕ್ಷಿಸಿ, ಆ ಪಂದ್ಯದ ಬಗ್ಗೆ ತಮ್ಮದೇ ಕೆಲವು ಅಭಿಪ್ರಾಯ ತಿಳಿಸಿ ಮಲಗಿದ ರಾಮಸ್ವಾಮಿ ಅವರು ಎಷ್ಟು ಹೊತ್ತಿಗೆ ಉಸಿರು ನಿಲ್ಲಿಸಿದರೋ ಯಾರಿಗೂ ಗೊತ್ತಾಗಲಿಲ್ಲ, ಬೆಳಗ್ಗೆ ಅವರು 5ಕ್ಕೆ ಏಳದಿದ್ದಾಗಲೇ ಮನೆಯವರಿಗೆ ಅವರಿಲ್ಲವೆಂಬುದು ತಿಳಿದದ್ದು. ಕೊನೆಯುಸಿರಿನವರೆಗೂ ಅವರದು ಸಕ್ರಿಯ ಬದುಕು.

1999 ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ 'ಕಾರ್ಗಿಲ್ ಕಂಪನ' ಕೃತಿ ರಚನೆಯಲ್ಲಿ ರಾಮಸ್ವಾಮಿ ಅವರ ಜೊತೆ ಕೈಜೋಡಿಸುವ ಭಾಗ್ಯ ನನ್ನದಾಗಿತ್ತು. ಪ್ರತ್ಯಕ್ಷ ರಣರಂಗದ ವಿದ್ಯಮಾನ, ಸೈನಿಕರ ವೀರಾವೇಶದ ಹೋರಾಟ ಕುರಿತು ಬರೆಯುವ ಹೊಣೆ ನನಗೆ ವಹಿಸಿದ್ದರು. ಒಂದು ವಾರದಲ್ಲೇ 90 ಪುಟಗಳ ಪುಸ್ತಕ ಸಿದ್ಧಪಡಿಸಿ ಅವರಿಗೆ ನೀಡಿದಾಗ, ರಾಮಸ್ವಾಮಿ ಅವರ ಮುಖದಲ್ಲಿ ಕಂಡೂಕಾಣದಂತೆ ತೇಲಿ ಹೋದ ಸಣ್ಣದೊಂದು ನಗು ನನಗೆ ಸ್ಫೂರ್ತಿ ನೀಡಿತ್ತು. ಸಾರಸ್ವತ ಲೋಕದ ಉಜ್ವಲ ನಕ್ಷತ್ರವಾಗಿದ್ದ ರಾಮಸ್ವಾಮಿ ಅವರಿಗೆ ಯಾವುದೇ ವಶೀಲಿಬಾಜಿ ಇಲ್ಲದೆ, ಅವರ ಅಗಾಧ ವಿದ್ವತ್ತನ್ನು ಪರಿಗಣಿಸಿ ನಾಡೋಜ, ಗೌರವ ಡಾಕ್ಟರೇಟ್, ಡಿ.ಲಿಟ್ ಇತ್ಯಾದಿ ಉನ್ನತ ಪದವಿಗಳು ಅರಸಿಕೊಂಡು ಬಂದಿವೆ. ಆದರೆ, ಅವರೆಂದೂ ತಮ್ಮ ಹೆಸರಿನ ಹಿಂದೆ ನಾಡೋಜ ಎಂದಾಗಲಿ, ಡಾ. ರಾಮಸ್ವಾಮಿ ಎಂದಾಗಲಿ ಉಪಾಧಿಗಳನ್ನು ಅಂಟಿಸಿಕೊಳ್ಳಲಿಲ್ಲ. ಯಾರೋ ಒಬ್ಬರು ಕಾರ್ಯಕ್ರಮದ ಆಮಂತ್ರಣ ಪತ್ರದಲ್ಲಿ 'ಡಾ.ಎಸ್.ಆರ್. ರಾಮಸ್ವಾಮಿ' ಎಂದು ಪ್ರಕಟಿಸುವ ಮಾತನಾಡಿದಾಗ ''ಖಂಡಿತ ಕೂಡದು. ಹಾಗೆಲ್ಲ ಪ್ರಕಟಿಸಬೇಡಿ'' ಎಂದು ಖಡಕ್ಕಾಗಿ ಎಚ್ಚರಿಕೆ ನೀಡಿದ್ದರು.

ರಾಮಸ್ವಾಮಿ ಅವರ ಸರಳತೆ, ಪ್ರಾಮಾಣಿಕತೆ, ಹಮ್ಮುಬಿಮ್ಮುಗಳಿಲ್ಲದ ನೇರವಂತಿಕೆ, ವಿನೋದ ಸ್ವಭಾವವನ್ನು ಬಲು ಹತ್ತಿರದಿಂದ ಗಮನಿಸಿದವರಿಗೆ ಇವರು ಅಷ್ಟು ದೊಡ್ಡ ವಿದ್ವಾಂಸರೆ ಎಂಬ ಸಂಶಯ ಬರುತ್ತಿದ್ದುದು ಸಹಜ. ಆದರೆ, ಅವರೊಬ್ಬ ಸಾರಸ್ವತ ಲೋಕದ ಉಜ್ವಲ ನಕ್ಷತ್ರ ಎಂಬುದರಲ್ಲಿ ಅನುಮಾನವೇ ಇಲ್ಲ, ಕಣ್ಣು ಮಂಜಾಗಿದ್ದರೂ, ಕೈಗಳು ನಡುಗುತ್ತಿದ್ದರೂ ರಾಮಸ್ವಾಮಿ ಅವರ ಬರವಣಿಗೆ ಕಾರ್ಯಕ್ಕೆ ವಿಶ್ರಾಂತಿಯೇ ಇರಲಿಲ್ಲ, ಮುಂದಿನ ಪೀಳಿಗೆಯವರಿಗೆ ಅವರೊಬ್ಬ ಅದ್ಭುತ ಪ್ರೇರಣಾಸ್ರೋತ. ಹೌದು, ಅವರ ಹೆಸರಿನಲ್ಲೇ ಇರುವಂತೆ ಅವರು ಎಂದೆಂದ 'ಎಸ್ಸಾರ್!' 'ನೋ ಸರ್' ಎಂಬುದು ಅವರ ಬರವಣಿಗೆಗಿಲ್ಲ, ಇಂಥವರೊಬ್ಬರು ನಮ್ಮ ನಡುವೆ ಬದುಕಿದ್ದರು ಎಂಬುದೇ ನಮ್ಮೆಲ್ಲರ ಪುಣ್ಯವಿಶೇಷ.

ಪರಿಸರ ಆಂದೋಲನಗಳಲ್ಲಿ ಸಕ್ರಿಯ

ಬೆಂಗಳೂರು: ಎಸ್.ಆರ್. ರಾಮಸ್ವಾಮಿ ಅವರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಜನಪರ-ಆರ್ಥಿಕ-ಸಾಮಾಜಿಕ ನಿಲುವನ್ನೂ; ಪರಿಸರ, ಸ್ವಾಸ್ಥ್ಯ ಪೋಷಕ ಚಿಂತನೆಯನ್ನೂ ಪ್ರತಿಪಾದಿಸಿ, ಪರಿಸರ ಆಂದೋಲನಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಅರಣ್ಯ ಇಲಾಖೆ ನೀತಿಗಳಿಂದ ರೈತರಿಗೆ ಭೂಮಿ ಮೇಲಿನ ಹಕ್ಕು ಕೈತಪ್ಪುವುದನ್ನು ಖಂಡಿಸಿ ಸುಮಾರು ಮೂರು ದಶಕಗಳ ಕಾಲ ಹೋರಾಡಿದವರು. ಸರ್ಕಾರದ ಅರಣ್ಯ ನೀತಿಯ ವಿರುದ್ಧ, ಸುಮಾರು 30,000 ಹೆಕ್ಟೇರ್ ಮೀಸಲು ಅರಣ್ಯ ರಕ್ಷಣೆಗಾಗಿ ಪ್ರಸಿದ್ಧ ಕನ್ನಡ ಲೇಖಕ ಶಿವರಾಮ ಕಾರಂತರ ಜೊತೆ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಹೋರಾಟ ನಡೆಸಿದರು. 'ಸಮಾಜ ಪರಿವರ್ತನ ಸಮುದಾಯ' ಎಂಬ ಸ್ವಯಂಸೇವಾ ಸಂಘಟನೆಯನ್ನು ಕಟ್ಟಿ ಗ್ರಾಮೀಣ ಅಭಿವೃದ್ಧಿ, ಬುಡಕಟ್ಟು ಜನರ ಉನ್ನತಿ ಮತ್ತು ನಾಗರಿಕ ಹಕ್ಕುಗಳ ಸಬಲೀಕರಣಕ್ಕಾಗಿ ಅವರು ದುಡಿದರು.

ಕನ್ನಡ ಸಾಹಿತ್ಯಲೋಕಕ್ಕೆ ಅವರು 55 ಗ್ರಂಥಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅನೇಕ ಹಿರಿಯ ಸಾಹಿತಿಗಳ ಒಡನಾಟದಲ್ಲಿದ್ದ ರಾಮಸ್ವಾಮಿ ಅವರು ಡಿ.ವಿ. ಗುಂಡಪ್ಪ, ವಿ. ಸೀತಾರಾಮಯ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ವೀರಕೇಸರಿ ಸೀತಾರಾಮಶಾಸ್ತ್ರಿ ಮೊದಲಾದ ಧೀಮಂತರನ್ನು ಕುರಿತು ಬರೆದ ದೀವಟಿಗೆಗಳು ಹಾಗೂ ಪತ್ರಕರ್ತ ತಿ.ತಾ. ಶರ್ಮ, ತೋಟಗಾರಿಕೆ ಋಷಿ ಎಂ.ಎಚ್. ಮರಿಗೌಡ ಮೊದಲಾದ ಆರು ಮಂದಿ ಸಾಧಕರನ್ನು ದೀಪ್ತಿಮಂತರು ಮೂಲಕ ಪರಿಚಯಿಸಿದ್ದಾರೆ. ಸುಭಾಷಚಂದ್ರ ಬೋಸ್ ಅವರ ಸಮಗ್ರ ಜೀವನಚರಿತ್ರೆ ಕೋಲ್ಮಿಂಚು, ಜಯಪ್ರಕಾಶ್ ನಾರಾಯಣ್ ಸಹಿತ 12 ಜನರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಭಾರತದಲ್ಲಿ ಸಮಾಜಕಾರ್ಯ, ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು, ಆರ್ಥಿಕತೆಯ ಎರಡು ಧ್ರುವ, ಶತಮಾನದ ತಿರುವಿನಲ್ಲಿ ಭಾರತ, ಕೆಲವು ಇತಿಹಾಸ– ಪರ್ವಗಳು ಸಹಿತ ಅನೇಕ ಸ್ವತಂತ್ರ ಅವಲೋಕನ ಪ್ರಬಂಧಗಳನ್ನು ರಚಿಸಿದ್ದಾರೆ.



ರಾಮಸ್ವಾಮಿ ನಿಧನಕ್ಕೆ ಆರ್‌ಎಸ್‌ಎಸ್ ಸಂತಾಪ

ಬೆಂಗಳೂರು: ನಾಡಿನ ಹಿರಿಯ ಸಾಹಿತಿ, ಸಂಶೋಧಕ, ವಿದ್ವಾಂಸ, ಪತ್ರಕರ್ತ, ಪರಿಸರವಾದಿಯೂ ಆಗಿದ್ದ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರ ನಿಧನಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ತೀವ್ರ ಸಂತಾಪ ವ್ಯಕ್ತಪಡಿಸಿದೆ. ರಾಮಸ್ವಾಮಿ ಅವರ ನಿಧನದ ಸುದ್ದಿ ಅತ್ಯಂತ ದುಃಖವನ್ನುಂಟುಮಾಡಿದೆ ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮತ್ತು ಕ್ಷೇತ್ರೀಯ ಸಂಘಚಾಲಕ ಡಾ. ಪಿ. ವಾಮನ್ ಶೆಣೈ ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ನಾಡಿನ ಸಾಂಸ್ಕೃತಿಕ, ವೈಚಾರಿಕ ಹಾಗೂ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿದ ಅವರು ಕಳೆದ 6 ದಶಕಗಳ ಕಾಲ ಪತ್ರಿಕೋದ್ಯಮ ಹಾಗೂ ಬರವಣಿಗೆಯ ಕ್ಷೇತ್ರದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದವರು. 1966ರಿಂದ ವರ್ತಮಾನದವರೆಗೂ ರಾಷ್ಟ್ರೋತ್ಥಾನ ಪರಿಷತ್‌ನ ಜೊತೆಗೆ 60 ವರ್ಷಗಳ ಸುದೀರ್ಘ ಒಡನಾಟ. ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿ, 1979ರಿಂದ ಉತ್ಥಾನ ಮಾಸಪತ್ರಿಕೆ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಧಾನ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದವರು. ಅನೇಕ ಪ್ರಕಲ್ಪಗಳನ್ನು ನೀರೆರೆದು ಬೆಳೆಸಿದವರು ಎಂದು ಸ್ಮರಿಸಿದ್ದಾರೆ.

ತಮ್ಮ 50ಕ್ಕೂ ಹೆಚ್ಚು ವಿದ್ವತ್ ಪೂರ್ಣ ಗ್ರಂಥಗಳು, ಸಾವಿರಕ್ಕೂ ಅಧಿಕ ಲೇಖನಗಳಲ್ಲಿ ಭಾರತೀಯ ವೈಚಾರಿಕ ಪರಂಪರೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ತಮ್ಮ ಬರಹದ ಶಕ್ತಿಯನ್ನು ಸಮಾಜಮುಖಿಯಾಗಿ ಬಳಸಿಕೊಂಡು ಸಾಹಿತ್ಯ, ಆರ್ಥಿಕತೆ, ಸಮಾಜ, ಪರಿಸರ, ಪತ್ರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಚಿಂತನೆಯನ್ನು ಮೂಡಿಸಿದವರು. ಡಿ.ವಿ.ಜಿ. ಅವರ ಶಿಷ್ಯರಾಗಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಚಟುವಟಿಕೆಗಳ ಮೂಲಕ ವೈಚಾರಿಕ ಕಾರ್ಯಗಳಿಗೆ ಬಲತುಂಬಿ ದವರು. ಡಿವಿಜಿ ಮತ್ತಿತರ ಹಿರಿಯ ಸಾಹಿತಿಗಳು, ಚಿಂತಕರ ಶ್ರೇಷ್ಠ ಪೀಳಿಗೆಯ ಸಮರ್ಥ ವಾರಸಿಕೆಯ ಪ್ರತಿನಿಧಿ, ನಾಡು ನುಡಿಗಳ ಅನನ್ಯ ಸೇವಕ, ಸಾಮಾಜಿಕ ಸಂವೇದನೆಯ ಕ್ರಿಯಾಶೀಲ ಸಾಧಕ, ರಾಷ್ಟ್ರೀಯ ಜಾಗರಣದ ದಣಿವರಿಯದ ಯೋಧ, ಸರಳ ಜೀವನದ ಆದರ್ಶ, ರಾಮಸ್ವಾಮಿ ಅವರ ವ್ಯಕ್ತಿತ್ವ ಕರ್ತೃತ್ವಗಳು ಚಿರಕಾಲ ನೆನಪುಳಿಯುತ್ತವೆ ಎಂದು ನುಡಿನಮನ ಸಲ್ಲಿಸಿದ್ದಾರೆ. ಸ್ವಯಂ ಸಂಘವನ್ನು ಒಪ್ಪಿ ಪ್ರವೇಶಿಸಿ ಸಂಘದ ಎಲ್ಲ ಆಯಾಮಗಳನ್ನು ಆಳವಾಗಿ ಅರಿತಿದ್ದಲ್ಲದೇ ಸಂಘದ ಕಾರ್ಯಕರ್ತರಿಗೂ ಸಮಾಜದ ಜನತೆಗೂ ಸಂಘವನ್ನು ವಿವರಿಸಿದ ನಿಷ್ಠಾವಂತ ಸ್ವಯಂಸೇವಕ.

ಅವರ ಸರಳ ಜೀವನ, ಕ್ರಿಯಾಶೀಲ ಬದುಕು, ಅಧ್ಯಯನಪೂರ್ಣ ಬರಹ ಮುಂದಿನ ಪೀಳಿಗೆಗೆ ಸದಾ ಆದರ್ಶ ಎಂದು ಬಣ್ಣಿಸಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರವಾಗಿ ನಾಡೋಜ ಡಾ. ಎಸ್.ಆರ್. ರಾಮಸ್ವಾಮಿ ಅವರ ನಿಧನಕ್ಕೆ ಸಂತಾಪಗಳನ್ನು ವ್ಯಕ್ತಪಡಿಸುತ್ತಾ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇವೆ. ಅವರ ಕುಟುಂಬ ಮತ್ತು ಅಸಂಖ್ಯ ಅಭಿಮಾನಿಗಳಿಗೆ ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಹಾಗೂ ಅಗಲಿದ ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ ಎಂದು ಉಭಯರು ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.





ರಾಷ್ಟ್ರೋತ್ಥಾನ ಪರಿಷತ್ತಿನಿಂದ ಶ್ರದ್ಧಾನಮನ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಾರಂಭದಿಂದಲೂ ಪ್ರಕಾಶನ ವಿಭಾಗದ ವಿವಿಧ ಕೆಲಸಗಳಲ್ಲಿ ಸಹಕಾರ ನೀಡಿ, 48 ವರ್ಷಗಳ ಕಾಲ ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆಗಳ ಗೌರವ ಪ್ರಧಾನ ಸಂಪಾದಕರಾಗಿ, ಕೆಲಕಾಲ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಡಾ. ಎಸ್. ಆರ್. ರಾಮಸ್ವಾಮಿ ಅವರ ನಿಧನಕ್ಕೆ ಪರಿಷತ್ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಮನೆಯ ಹಿರಿಯರಂತೆ ಅವರು ಪರಿಷತ್ತಿನ ಕಾರ್ಯಕರ್ತರೆಲ್ಲರಿಗೂ ಮಾರ್ಗದರ್ಶಕರಾಗಿದ್ದರು; ಮಾದರಿಯಾಗಿದ್ದರು. ಸಾಹಿತ್ಯ, ಸಂಗೀತ, ಪತ್ರಿಕೋದ್ಯಮ, ಸಮಾಜ ಸಂಘಟನೆ, ಗ್ರಾಮೀಣಾಭಿವೃದ್ಧಿ, ಗ್ರಾಹಕ ಚಳವಳಿ, ಪರಿಸರ ರಕ್ಷಣೆ, ಫೋಟೋಗ್ರಫಿ, ಸಂಸ್ಥೆಗಳ ನಿರ್ವಹಣೆ ಸೇರಿದಂತೆ ಜೀವನದ ಹಲವು ಕ್ಷೇತ್ರಗಳಲ್ಲಿ, ಹಲವು ಮುಖಗಳಲ್ಲಿ ನಿರಂತರ ಕೆಲಸ ಮಾಡಿದ ರಾಮಸ್ವಾಮಿ ಅವರು ಓರ್ವ ಶ್ರೇಷ್ಠ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಅವಶ್ಯಕತೆ ಇರುವಲ್ಲಿ ಯಾರದೋ ಯಾಚನೆಗೋ ಅಥವಾ ಇನ್ಯಾರದೋ ಸಲಹೆಗೋ ಕಾಯದೆ, ಸದ್ದುಗದ್ದಲವೂ ಇಲ್ಲದೆ, ಶಕ್ತಿಮೀರಿ ನೆರವಿಗೆ ನಿಲ್ಲುವುದು ಅವರ ಸಹಜ ಸ್ವಭಾವವಾಗಿತ್ತು; ಅದರಲ್ಲೇ ಅವರು ನೆಮ್ಮದಿ ಕಾಣುತ್ತಿದ್ದರು.

ಸರಳ ಜೀವನ; ಉನ್ನತ ಚಿಂತನೆ ಎಂಬುದರ ಮೂರ್ತರೂಪರಾಗಿದ್ದ ರಾಮಸ್ವಾಮಿ ಅವರ ದೂರದೃಷ್ಟಿ, ಸಮಾಜದ ಸ್ಥಿತಿಗತಿಗಳನ್ನು ಕುರಿತ ಸೂಕ್ಷ್ಮ ಒಳನೋಟಗಳು, ಸಾಮಾಜಿಕ ಅಗತ್ಯಗಳನ್ನು ಅವರು ಗ್ರಹಿಸುತ್ತಿದ್ದ ರೀತಿ ಮತ್ತು ಅದಕ್ಕಾಗಿ ನಾವೇನು ಮಾಡಬೇಕಾಗಬಹುದು ಎಂಬುದನ್ನು ಪ್ರತಿ ಹಂತದಲ್ಲೂ ನಮಗೆಲ್ಲ ವಿವರಿಸುತ್ತಿದ್ದ ಕ್ರಮ – ಇವು ಸದಾ ಮಾರ್ಗದರ್ಶಿಯಾದಂಥವು. ಅವರ ಹಠಾತ್ ನಿರ್ಗಮನ ಅತ್ಯಂತ ದುಃಖದಾಯಕ ಸಂಗತಿ. ಇಂತಹ ಸಮಯದಲ್ಲಿ ನಮಗೆ ಸ್ಥೈರ್ಯ– ಸಮಾಧಾನ ನೀಡಲೆಂದೇ ಆದರ್ಶಮಯ ಬದುಕನ್ನು ಬಾಳಿದ್ದ ರಾಮಸ್ವಾಮಿ ಅವರು ಅದರ ಮಧುರ ಸ್ಮೃತಿಯನ್ನು ನಮ್ಮೆಲ್ಲರಲ್ಲಿ ಬಿತ್ತಿ ಹೋಗಿದ್ದಾರೆ. ಈ ನೆನಪುಗಳೇ ನಮಗೆಲ್ಲ ಮುಂದಿನ ಪಯಣಕ್ಕೆ ದಾರಿದೀಪವಾಗಿದೆ. ಆ ಮೂಲಕ ಅವರು ನಮ್ಮೆಲ್ಲರಲ್ಲೂ ಜೀವಂತವಾಗಿರುತ್ತಾರೆ. ಪರಿಷತ್ತಿನ ಎಲ್ಲ ಕಾರ್ಯಕರ್ತರ ಪರವಾಗಿ ರಾಮಸ್ವಾಮಿ ಅವರಿಗೆ ಶ್ರದ್ಧಾನಮನಗಳನ್ನು ಅರ್ಪಿಸುತ್ತಿದ್ದೇವೆ ಎಂದು ಪರಿಷತ್ತಿನ ಅಧ್ಯಕ್ಷ ಎಂ.ಪಿ. ಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ತಿಳಿಸಿದ್ದಾರೆ.





ಸಂಪಾದಕೀಯ

ಮಾತುಕತೆ ಯಶಸ್ವಿಯಾದೀತೇ?

ಅಮೆರಿಕ-ಇರಾನ್ ಯುದ್ಧ ವಿರಾಮದ ಭವಿಷ್ಯ ಹಾಗೂ ಪಶ್ಚಿಮ ಏಷ್ಯಾದ ಸ್ಥಿರತೆಯನ್ನು ನಿರ್ಧರಿಸಬಲ್ಲ ಮಹತ್ವದ ಮಾತುಕತೆಗಳ ಹೊಣೆಗಾರಿಕೆಯನ್ನು ಹೊತ್ತು ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಪಾಕಿಸ್ತಾನದತ್ತ ಬರುತ್ತಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇಡೀ ಶಾಂತಿ ಮಾತುಕತೆಯ ಹೊಣೆಯನ್ನು ವ್ಯಾನ್ಸ್‌ಗೆ ವಹಿಸಿರುವುದು ಅಚ್ಚರಿಯ ವಿಚಾರವೇ.

ಆದರೂ, ಇವರಿಗೆ ವಹಿಸಿರುವುದು ಟ್ರಂಪ್ ಅವರ ತಂತ್ರಾತ್ಮಕ ನಡೆ ಎಂದೇ ಹೇಳಬೇಕು. ಇರಾನ್ ಜೊತೆಗಿನ ಉದ್ವಿಗ್ನತೆ ಆರು ವಾರಗಳ ಯುದ್ಧದ ಬಳಿಕ ತಾತ್ಕಾಲಿಕ ಯುದ್ಧ ವಿರಾಮಕ್ಕೆ ಬಂದಿದ್ದರೂ, ನೆಲಮಟ್ಟದ ವಾಸ್ತವಿಕತೆ ಇನ್ನೂ ಅತೀ ನಾಜೂಕಾಗಿದೆ. ಇಂತಹ ಸಂದರ್ಭದಲ್ಲಿ 'ಸದಭಿಪ್ರಾಯದಿಂದ ಮಾತುಕತೆಗೆ ಬನ್ನಿ; ಇಲ್ಲವಾದರೆ ಅಮೆರಿಕೆಯನ್ನು ಆಟವಾಡಲು ಯತ್ನಿಸಬೇಡಿ' ಎಂಬ ವ್ಯಾನ್ಸ್ ಎಚ್ಚರಿಕೆ, ವಾಷಿಂಗ್ಟನ್‌ನ ನಿಲುವು ಕಠಿಣವಾಗಿಯೇ ಉಳಿದಿದೆ ಎಂಬ ಸಂದೇಶ ನೀಡುತ್ತದೆ.

ಆದರೆಪ್ರಶ್ನೆಯೇನಂದರೆಮಾತುಕತೆಯಿಂದನಿಜವಾದಶಾಂತಿಸಾಧ್ಯವೇ? ಇರಾನ್‌ನ ಅಣು ಹಾಗೂ ಕ್ಷಿಪಣಿ ಕಾರ್ಯಕ್ರಮ, ಮಧ್ಯಪ್ರಾಚ್ಯದ ಪ್ರತಿನಿಧಿ ಸಶಸ್ತ್ರ ಗುಂಪುಗಳಿಗೆ ಅದರ ಬೆಂಬಲ, ಹಾರ್ಮುಜ್ ಜಲಸಂಧಿಯಂತಹ ತಂತ್ರಾತ್ಮಕ ಮಾರ್ಗಗಳ ಭದ್ರತೆ ಇವೆಲ್ಲವೂ ಮಾತುಕತೆ ಮೇಜಿನ ಮೇಲೆ ಒಂದೇ ಸಮಯದಲ್ಲಿ ಬಗೆಹರಿಯಬೇಕಾದ ಗಂಭೀರ ವಿಷಯಗಳು. ಈ ಸಮಸ್ಯೆಗಳಿಗೆ ತಾತ್ಕಾಲಿಕ ಒಪ್ಪಂದ ಸಾಲದು; ಪರಸ್ಪರ ವಿಶ್ವಾಸ ಮತ್ತು ಸ್ಪಷ್ಟ ಭದ್ರತಾ ಖಾತರಿ ಅಗತ್ಯ. ಆದರೆ, ಜಾಗತಿಕ ಭಯೋತ್ಪಾದನೆಯ ಕೇಂದ್ರ ಬಿಂದು ಎನ್ನಿಸಿಕೊಂಡಿರುವ ಪಾಕ್ ಅನ್ನು ಶಾಂತಿ ಮಾತುಕತೆಗೆ ಆಯ್ಕೆ ಮಾಡಿಕೊಂಡಿರುವುದೇ ವಿಚಿತ್ರವಾಗಿದೆ.

ವ್ಯಾನ್ಸ್ ಅವರ ರಾಜತಾಂತ್ರಿಕ ಅನುಭವ ಸೀಮಿತವಾಗಿರುವುದು ಈ ಮಾತುಕತೆಗಳ ಯಶಸ್ಸಿನ ಬಗ್ಗೆ ಅನುಮಾನ ಮೂಡಿಸುತ್ತದೆ. ಆದರೆ ಟ್ರಂಪ್ ಆಡಳಿತವು ಅವರನ್ನು ಮುಂಚೂಣಿಗೆ ತಂದುಕೊಂಡಿರುವುದು, ಕಠಿಣ ನಿಲುವು ಮತ್ತು ಸಂಧಾನ ಮನೋಭಾವ ಎರಡನ್ನೂ ಸಮತೋಲನಗೊಳಿಸುವ ಪ್ರಯತ್ನವೆಂದು ಕಾಣುತ್ತದೆ. ಈ ಮಾತುಕತೆಗಳು ವಿಫಲವಾದರೆ ಪಶ್ಚಿಮ ಏಷ್ಯಾ ಮತ್ತೊಮ್ಮೆ ದೊಡ್ಡ ಮಟ್ಟದ ಅಸ್ಥಿರತೆಯತ್ತ ಜಾರಬಹುದು; ಯಶಸ್ವಿಯಾದರೆ ಅದು ಕೇವಲ ಯುದ್ಧವಿರಾಮವಲ್ಲ, ಹೊಸ ಶಾಂತಿ ಸಮೀಕರಣಕ್ಕೂ ದಾರಿ ಮಾಡಬಹುದು.

ಆದರೆ, ಪಾಕಿಸ್ತಾನದಲ್ಲಿ ನಡೆಯುತ್ತಿರುವ ಮಾತುಕತೆಗೆ ಮುನ್ನವೇ ಹಲವಾರು ಸಂದೇಹಗಳು, ವಿಘ್ನಗಳು ಕಾಣಿಸಿಕೊಳ್ಳುತ್ತಿವೆ. ಲೆಬನಾನ್ ಮೇಲಿನ ಇಸ್ರೇಲ್ ದಾಳಿ, ಮಾತುಕತೆಯ ದಿಕ್ಕು ಬದಲಿಸಿದೆ. ವ್ಯಾನ್ಸ್, ಕದನ ವಿರಾಮದಲ್ಲಿ ಲೆಬನಾನ್ ದಾಳಿ ವಿಚಾರ ಸೇರಿಲ್ಲ ಎಂದಿದ್ದರೆ, ಪಾಕಿಸ್ತಾನ ಸೇರಿದೆ ಎನ್ನುತ್ತಿದೆ. ಇರಾನ್ ಕೂಡ ಲೆಬನಾನ್ ಮೇಲೆ ದಾಳಿ ನಿಲ್ಲಿಸಿದರಷ್ಟೇ ಮಾತುಕತೆ ಅಂತ ಹೇಳುತ್ತಿದೆ. ಒಟ್ಟಾರೆಯಾಗಿ ಈ ಮಾತುಕತೆ ಎತ್ತ ಸಾಗುತ್ತಿದೆ ಎಂಬುದೇ ಅರಿವಿಲ್ಲದ ಸಂಗತಿಯಾಗಿದೆ.

ಹೀಗಾಗಿ ಈ ಎಲ್ಲ ಮಾತುಕತೆಗಳು ಕೇವಲ ಅಮೆರಿಕಾ-ಇರಾನ್ ಸಂಬಂಧಗಳ ವಿಷಯವಲ್ಲ; ಅವು ಜಾಗತಿಕ ಇಂಧನ ಭದ್ರತೆ, ಪಶ್ಚಿಮ ಏಷ್ಯಾದ ರಾಜಕೀಯ ಸಮತೋಲನ ಮತ್ತು ವಿಶ್ವಶಾಂತಿಯ ಭವಿಷ್ಯವನ್ನೇ ಸ್ಪರ್ಶಿಸುವ ಮಹತ್ವದ ಘಟ್ಟವಾಗಿವೆ.

ಹಸ್ತದಲ್ಲಿ ಸೂರ್ಯ ರೇಖೆ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಹಸ್ತ ಸಾಮುದ್ರಿಕಾ ಶಾಸ್ತ್ರದ ಪ್ರಕಾರ, ಹಸ್ತದಲ್ಲಿರುವ ಸೂರ್ಯ ರೇಖೆಯನ್ನು ಅತ್ಯಂತ ಶ್ರೇಷ್ಠವಾದ ರೇಖೆ ಎನ್ನಲಾಗುತ್ತದೆ. ಇದು ಎಲ್ಲಾ ಕಾಲದಲ್ಲೂ ಶುಭದಾಯಕ. ಮಂಗಳದಾಯಕ. ಯಶಸ್ಸನ್ನು ನೀಡುವಂತಹಾ ರೇಖೆ. ಸನ್‌ಲೈನ್ ಅಥವಾ ಅಪೋಲೋ ಲೈನ್ ಎಂದು ಕರೆಯಲಾಗುವ ಇದು ನಿಮ್ಮ ಹಸ್ತದ ಉಂಗುರ ಬೆರಳಿನ ಕೆಳಗೆ ನೇರವಾಗಿದೆ. ಉಂಗುರ ಬೆರಳಿನ ಕೆಳಗೆ ಉಬ್ಬಿರುವ ಪ್ರದೇಶವನ್ನು ಸೂರ್ಯ ಪರ್ವತ ಎನ್ನಲಾಗುತ್ತದೆ. ಆದರೆ.....ಈ ರೇಖೆಯು ನೀವು ಎಣಿಸಿದಂತೆ ಉಂಗುರ ಬೆರಳಿನಿಂದ ಕೆಳಗೆ ಇಳಿದಿದ್ದಲ್ಲ!! ನಿಮ್ಮ ಆಯುಸ್ಸು ರೇಖೆ, ಹೃದಯ ರೇಖೆ ಅಥವಾ ಬುದ್ಧಿ ರೇಖೆಯಿಂದ ಪ್ರಾರಂಭವಾಗಿ ಉಂಗುರ ಬೆರಳಿನ ಕಡೆ ಸಾಗಿದೆ. ಈ ರೇಖೆ ನಿಮ್ಮ ಯಶಸ್ಸನ್ನು, ಅದೃಷ್ಟವನ್ನು, ಕೀರ್ತಿಯನ್ನು ಮತ್ತು ಸಾಧನೆಯನ್ನು ಸೂಚಿಸುತ್ತದೆ.

ಕೆಲವರಿಗೆ ಈ ರೇಖೆಯು ಮಣಿಕಟ್ಟಿನಿಂದ ಸಾಗಿರುವುದೂ ಇದೆ. ಅಥವಾ ಅಂಗೈ ಮಧ್ಯದಿಂದ ಸಾಗಿರುತ್ತದೆ. ಹೀಗೆ ಸಾಗಿದ ರೇಖೆಯು ನೋಡಲು ಸ್ಪಷ್ಟವಾಗಿ, ದಪ್ಪಗೆ, ಎಲ್ಲೂ ತಡೆಗಳಿಲ್ಲದೇ ನೇರವಾಗಿ ಉಂಗುರ ಬೆರಳಿನವರೆಗೆ ಅಂದರೆ ಸೂರ್ಯ ಪರ್ವತವನ್ನು ಏರಿ ಸಾಗಿದರೆ, ಅಂತಹವರು ಗೌರವ, ಕೀರ್ತಿ, ಅದೃಷ್ಟ ಮತ್ತು ಉನ್ನತ ಸ್ಥಾನವನ್ನು ಪಡೆದುಕೊಂಡೇ ಹುಟ್ಟಿರುತ್ತಾರೆ.

ಹೀಗೆ ಸಾಗಿದ ರೇಖೆಯು ದಾರಿಯಲ್ಲಿ ತ್ರಿಕೋಣಗಳು, ಚತುಷ್ಕೋಣಗಳು ಇದ್ದರೆ ಅವರನ್ನು ಜೀವನ ಪೂರ್ತಿ ಯಶಸ್ಸಿನ ದಾರಿಯಲ್ಲಿ ಸಾಗುವುದನ್ನು ಯಾರಿಗೂ ತಡೆಯಲು ಆಗದು. ಅಥವಾ ಸೂರ್ಯ ಪರ್ವತವು ಏರಿದ್ದರೂ ಅಂದರೆ ಉಬ್ಬಿದ್ದರೂ ಸಾಕು ಅಂತಹಾ ವ್ಯಕ್ತಿಯ ಜೀವನದಲ್ಲಿ ಸದಾ ಒಳಿತೇ ಆಗುತ್ತದೆ. ಸರ್ಕಾರಿ ಉದ್ಯೋಗ, ಕಲೆ, ರಾಜಕೀಯ ಮತ್ತು ವ್ಯವಹಾರಗಳಲ್ಲಿ ಅವರಿಗೆ ತುಂಬಾ ಶ್ರೇಯಸ್ಸು ದೊರೆಯುತ್ತದೆ. ಸೂರ್ಯ ಪರ್ವತದ ಮೇಲೆ ತ್ರಿಕೋಣಗಳು, ಚತುಷ್ಕೋಣಗಳು ಇದ್ದರೆ ಆಗ ಉನ್ನತ ಶ್ರೇಣಿಯನ್ನು ಪಡೆಯುತ್ತಾರೆ. ಅವರಿಗೆ ಪ್ರತಿಷ್ಠೆ ಮತ್ತು ಸನ್ಮಾನಗಳು ಹುಡುಕಿಕೊಂಡು ಬರುತ್ತವೆ.

ಅದೇ ದಪ್ಪವಾಗಿ ಇದ್ದರೆ ಅವರು ಹೆಚ್ಚು ಆಲೋಚನೆ ಮಾಡುವುದಿಲ್ಲ, ತಕ್ಷಣದ ತೀರ್ಮಾನಗಳನ್ನು ತೆಗೆದುಕೊಳ್ಳುವವರಾಗಿರುತ್ತಾರೆ. ಪ್ರತ್ಯುತ್ಪನ್ನ ಮತಿಗಳು, ಮಾಡಿದ್ದಕ್ಕೆ ಪಶ್ಚಾತ್ತಾಪ ಪಡದಿರುವವರು ಆಗಿರುತ್ತಾರೆ. ಸೂರ್ಯ ರೇಖೆಯು ಬುದ್ಧಿ ರೇಖೆಯಿಂದ ಹೊರಟಿದ್ದರೆ, ಅಂತಹಾ ವ್ಯಕ್ತಿಗಳು ತಮ್ಮ ಎಲ್ಲಾ ಕೆಲಸಗಳಿಗೆ ಬುದ್ಧಿಯನ್ನು ಉಪಯೋಗಿಸುತ್ತಾರೆ. ಹೆಚ್ಚು ಓದದಿದ್ದರೂ ಮಹಾ ಬುದ್ಧಿಶಾಲಿ ಗಳಾಗಿರುತ್ತಾರೆ. ಸದಾ ಪರನಿಂದಕರು, ಯಾರು ಯಾವ ಕೆಲಸವನ್ನು ಮಾಡಿ ದರೂ ಅದು ಸರಿಯಾಗಿಲ್ಲ ಎಂದು ನಿಂದಿಸುವವರೂ, ಕುಹಕಿಗಳೂ ಸಹಾ ಆಗಿರುತ್ತಾರೆ.

ಸೂರ್ಯ ರೇಖೆಯು ಶಿಲುಬೆಯಂತೆ ಇದ್ದರೆ, ಅಂತಹವರು ಕಠಿಣ ಪರಿಶ್ರಮಿ ಗಳು ಆಗಿರುತ್ತಾರೆ. ಪಕ್ಕದ ಕಿರುಬೆರಳಿನ ಕೆಳಗಿರುವ ಬುಧ ಪರ್ವತಕ್ಕೆ ವಾಲಿದ್ದರೆ, ಅವರು ಉತ್ತಮ ವಾಗ್ಮಿಗಳು, ಯಶಸ್ವೀ ಉದ್ಯಮಿಗಳೂ, ಉನ್ನತ ಆಡಳಿತಾಧಿಕಾರಿಗಳೂ ಆಗಿರುತ್ತಾರೆ. ತೋರು ಬೆರಳಿನ ಕೆಳಗಿರುವ ಗುರು ಪರ್ವತವನ್ನು ತಲುಪಿದರೆ, ಅಂತಹಾ ವ್ಯಕ್ತಿಗಳು ರಾಜಕೀಯದಲ್ಲಿ ಬಲಾಢ್ಯರಾಗಿ ರುತ್ತಾರೆ. ಕೆಲಸ ಮಾಡುವುದರಲ್ಲಿ ಮತ್ತು ಮಾಡಿಸುವುದರಲ್ಲಿ ಮುಂದೆ. ತುಂಬಾ ಮಹತ್ವಾಕಾಂಕ್ಷಿಗಳು ಆಗಿರುತ್ತಾರೆ.

ಮಂಗಳ ಪರ್ವತವನ್ನು ಸೂರ್ಯ ರೇಖೆಯು ಮುಟ್ಟಿದ್ದರೆ, ಅಂತಹಾ ವ್ಯಕ್ತಿಗಳು ಧೈರ್ಯಶಾಲಿಗಳು ಮತ್ತು ಯಾವುದೇ ಕೆಲಸಕ್ಕೆ ಮುನ್ನುಗ್ಗುವವರು ಆಗಿರುತ್ತಾರೆ. ತಾವು ಸಾಧಿಸಲು ಬಯಸಿದ್ದನ್ನು ಹಠ ಹಿಡಿದು ಸಾಧಿಸುತ್ತಾರೆ. ಸೂರ್ಯನ ಪರ್ವತದಿಂದ ಯಾವುದೇ ರೇಖೆಯು ಮಧ್ಯದ ಬೆರಳಿನ ಕೆಳಭಾಗ ದಲ್ಲಿರುವ ಶನಿ ಪರ್ವತಕ್ಕೆ ಸಾಗಿದ್ದರೆ ಅಥವಾ ಶನಿ ಪರ್ವತದಿಂದ ಸೂರ್ಯ ಪರ್ವತಕ್ಕೆ ಯಾವುದಾದರೂ ರೇಖೆ ಬಂದಿದ್ದರೆ ಅಂಥಹಾ ವ್ಯಕ್ತಿಗಳು ವಿಶೇಷ ವ್ಯಕ್ತಿಗಳಾಗಿರುತ್ತಾರೆ. ಅವರಿಗೆ ಅನೇಕ ಸಿದ್ಧಿಗಳು ಲಭ್ಯವಾಗುತ್ತವೆ. ಜನರನ್ನು ನೋಡಿದಾಕ್ಷಣದಲ್ಲೇ ಅವರ ಮನದಲ್ಲಿ ಇರುವುದು ತಿಳಿಯುತ್ತದೆ. ಹಾಗೂ ಅದನ್ನು ತಿಳಿದುಕೊಂಡು ತಮ್ಮ ಮತ್ತು ಅವರೊಂದಿಗಿನ ವ್ಯವಹಾರ, ಸಂಬಂಧ ಗಳನ್ನು ನಿರ್ಧರಿಸುತ್ತಾರೆ. ಇವರು ವಕೀಲರಾಗುತ್ತಾರೆ. ನ್ಯಾಯಾಧೀಶರಂತೆ ವರ್ತಿಸುತ್ತಾರೆ. ಪ್ರಾಮಾಣಿಕರೂ, ನಂಬಿಕೆಗೆ ಯೋಗ್ಯರೂ ಆಗಿರುತ್ತಾರೆ.

ಹೆಬ್ಬೆರಳ ಕೆಳಗಿರುವ ಶುಕ್ರಪರ್ವತದಿಂದ ಸೂರ್ಯ ರೇಖೆಯು ಹೊರಟಿದ್ದರೆ, ಅವರು ತುಂಬಾ ಐಷಾರಾಮಿ ಜೀವನವನ್ನು ನಡೆಸುವವರಾಗಿರುತ್ತಾರೆ. ಸೌಂದರ್ಯಾರಾಧಕರು, ಕಾಮವನ್ನು ಅತಿಯಾಗಿ ಬಯಸುವವರೂ ಆಗಿರುತ್ತಾರೆ. ಅದೇ ಅದರ ಪಕ್ಕದಲ್ಲಿ ಇರುವ ಚಂದ್ರ ಪರ್ವತದಿಂದ ಸೂರ್ಯರೇಖೆಯು ಹೊರಟಿದ್ದರೆ, ಅವರು ಸದಾ ಪ್ರಯಾಣ ಮಾಡುವವರೂ, ಹೆಚ್ಚು ಹೆಚ್ಚು ಭ್ರಮಾಲೋಕದಲ್ಲಿ ಬದುಕುವವರೂ, ಮಾನಸಿಕವಾಗಿ ತುಂಬಾ ಪ್ರಬಲರೂ ಆಗಿರುತ್ತಾರೆ. ಚಂದ್ರ ರೇಖೆಯಿಂದ ಹೊರಟ ಸೂರ್ಯ ರೇಖೆಯ ಮಧ್ಯೆ ಯಾವುದಾದರೂ ದ್ವೀಪ ರಚನೆಯಾಗಿದ್ದರೆ, ಕತ್ತರಿಸಿದ್ದರೆ, ಮಚ್ಚೆಗಳೇನಾದರೂ ಇದ್ದರೆ ಅಂತಹಾ ವ್ಯಕ್ತಿಗಳು ಮಾನಸಿಕವಾಗಿ ಅಸ್ವಸ್ಥರಾಗುತ್ತಾರೆ. ಸೂರ್ಯ ಪರ್ವತ ಅಥವಾ ಸೂರ್ಯ ರೇಖೆಯ ಮೇಲೆ ಗುಣಾಕಾರದ ಚಿಹ್ನೆ ಇದ್ದರೆ ಅಂತಹಾ ವ್ಯಕ್ತಿಗಳಿಗೆ ಪ್ರತಿಯೊಂದು ವ್ಯವಹಾರದಲ್ಲೂ ನಷ್ಟವೇ ಆಗುತ್ತದೆ. ಬಿಂದು ಅಥವಾ ವೃತ್ತವಿದ್ದರೆ ಅವರಿಗೆ ಕಣ್ಣಿನ ದೋಷ ಉಂಟಾಗುತ್ತದೆ.



ಸೂರ್ಯ ರೇಖೆಯು ನೇರವಾಗಿ ಮತ್ತು ಸ್ಪಷ್ಟವಾಗಿ ನೋಡಿದ ಕೂಡಲೇ ಎದ್ದು ಕಾಣುವಂತೆ ಇದ್ದರೆ ಅಂತಹಾ ವ್ಯಕ್ತಿಗಳು ಸಾರ್ವಜನಿಕ ಜೀವನದಲ್ಲಿ ತುಂಬಾ ಹೆಸರು ಗಳಿಸುತ್ತಾರೆ. ಸೇವಾ ಕಾರ್ಯಗಳಲ್ಲಿ ಸದಾ ಮುಂದಿರುತ್ತಾರೆ. ಆರ್ಥಿಕ ವಾಗಿ ಸಮೃದ್ಧರಾಗಿರುತ್ತಾರೆ. ಆದರೆ ಅವರು ಮಕ್ಕಳ ವಿಷಯದಲ್ಲಿ ಅದೃಷ್ಟಹೀನ ರಾಗಿರುತ್ತಾರೆ. ಇವರಿಗೆ ಮಕ್ಕಳು ಇದ್ದರೂ ತುಂಬಾ ಐಷಾರಾಮಿ ಗಳೂ, ದುರಹಂ ಕಾರಿಗಳೂ ಮತ್ತು ಸಕಲ ದುಷ್ಟ ಚಟಗಳಿಂದ ಕೂಡಿರುವವರೂ ಆಗಿರುತ್ತಾರೆ.

ಅಂಗಾದಿತ್ಯ ಮತ್ತು ಸೂರ್ಯ ರೇಖೆ

ನಿಮ್ಮ ಭವಿಷ್ಯವನ್ನು ನಕ್ಷತ್ರಗಳು, ಗ್ರಹಗಳು, ವಾರ, ತಿಥಿ, ಮಾಸ, ಯೋಗ, ಕರಣ ಮುಂತಾದವುಗಳೊಂದಿಗೆ ಹಸ್ತ ರೇಖೆಗಳೂ ಸಹಾ ರೂಪಿಸುತ್ತವೆ. ಅಂಗಾದಿತ್ಯನ ಸ್ಥಾನವು ಯಾವುದು ಎನ್ನುವುದರ ಮೇರೆಗೆ ಅವೆಲ್ಲಾ ನಿರ್ಧಾರ ಗಳಾಗುತ್ತವೆ. ಅಂಗಾದಿತ್ಯ ತಲೆಯ ಮೇಲಿದ್ದರೆ ಸೂರ್ಯ ರೇಖೆಯು ಪ್ರಜ್ವಲಿಸು ತ್ತದೆ. ಅವರ ಕೆಲಸಗಳೆಲ್ಲಾ ಪ್ರಖರತೆಯಿಂದ ಕೂಡಿರುತ್ತದೆ. ಅದೇ ಅಂಗಾ ದಿತ್ಯನು ಮುಖದ ಮೇಲಿದ್ದರೆ ಅವರು ಹೊಳಪಿನಿಂದ ಸದಾ ಲವಲವಿಕೆಯಿಂದ ಕೂಡಿರುತ್ತಾರೆ. ಅದರಲ್ಲೂ ಸೂರ್ಯ ರೇಖೆ ಚೆನ್ನಾಗಿದ್ದರೆ ಅಂತಹಾ ವ್ಯಕ್ತಿಗಳು ಜೀವಮಾನ ಸಾಧನೆ ಮಾಡುತ್ತಾರೆ. ಅಂಗಾದಿತ್ಯನ ಸ್ಥಾನವು ಹೊಟ್ಟೆಯಾಗಿದ್ದರೆ, ಸೂರ್ಯ ರೇಖೆಯು ಸಹಾ ಸೂಕ್ತವಾದ ಸ್ಥಳದಲ್ಲಿ ಇದ್ದರೆ, ಅವರಿಗೆ ಸಂಪತ್ತಿನ ಧಾರೆಯೇ ಹರಿದು ಬರುತ್ತವೆ. ಹಿಂದೆ ಕೊಡಬೇಕಿದ್ದ ಸಾಲವೆಲ್ಲಾ ವಸೂಲಾಗುತ್ತದೆ.

ಕೆಲವು ಟಿಪ್ಪಣಿಗಳು

ಸೂರ್ಯ ರೇಖೆಯು ವಿಧಿ ರೇಖೆಯ ಸಹೋದರಿ

ಸೂರ್ಯ ರೇಖೆಯು ವಿಧಿ ರೇಖೆಯನ್ನು ಉತ್ತೇಜನಗೊಳಿಸುತ್ತದೆ.

ಮಣಿಕಟ್ಟಿನಿಂದ ಸೂರ್ಯ ರೇಖೆ ಪ್ರಾರಂಭವಾಗಿದ್ದರೆ, ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಪ್ರಖ್ಯಾತರಾಗುತ್ತಾರೆ. ಹೃದಯ ರೇಖೆಯಿಂದ ಸೂರ್ಯ ರೇಖೆ ಶುರುವಾಗಿದ್ದರೆ, ಅವರು ಪ್ರೀತಿಸಿಯೇ ಮದುವೆಯಾಗುವುದು. 40 ವರ್ಷಗಳ ಬಳಿಕ ಪ್ರಸಿದ್ಧ ವ್ಯಕ್ತಿಗಳಾಗುತ್ತಾರೆ.

ಸೂರ್ಯ ರೇಖೆಯು ದಪ್ಪವಾಗಿದ್ದರೆ, ಬರಹಗಾರರು, ಸಂಗೀತಗಾರರು, ಕಲಾವಿದರು, ಶ್ರೀಮಂತರು ಆಗಿರುತ್ತಾರೆ.

ಎರಡು ಸೂರ್ಯ ರೇಖೆಗಳು ಇದ್ದರೆ ಇವರು ಸವ್ಯಸಾಚಿಗಳಾಗುತ್ತಾರೆ. ಎರಡು ಸಂಗತಿಗಳಲ್ಲಿ ಒಂದೇ ರೀತಿಯ ಅತ್ಯುನ್ನತ ಪ್ರಖ್ಯಾತಿಯನ್ನು ಪಡೆಯುತ್ತಾರೆ. ಲಾಟರಿಯಲ್ಲಿ, ಶೇರು ಹೂಡಿಕೆಯಲ್ಲಿ, ಜೂಜಿನಿಂದ, ಹೆಂಡತಿಯ ಕಡೆಯಿಂದ, ಅಪ್ಪನ ಅಥವಾ ಅಮ್ಮನ ಕಡೆಯಿಂದ ಪ್ರತ್ಯೇಕವಾದ ಆಸ್ತಿ ಲಭ್ಯವಾಗುತ್ತದೆ.

ಸೂರ್ಯ ರೇಖೆಯು ಇಲ್ಲದಿದ್ದರೆ ಅದು ಅವರ ದುರದೃಷ್ಟವನ್ನು ಸೂಚಿಸು ತ್ತದೆ. ಜೀವನವು ಸಾಮಾನ್ಯವಾಗಿ ಕೊರತೆಗಳ ಮಧ್ಯೆ ಸಾಗುತ್ತದೆ.

ಸೂರ್ಯ ರೇಖೆಯ ಮೇಲೆ ದ್ವೀಪಗಳಿದ್ದರೆ ಅಂತಹವರು ಖಿನ್ನತೆಗೆ ಒಳಗಾಗುತ್ತಾರೆ. ಸೂರ್ಯ ರೇಖೆಯು ಕತ್ತರಿಸಿದ್ದರೆ ಅಂತಹಾ ವ್ಯಕ್ತಿಗಳ ಬದುಕು ತೊಡಕುಗಳಿಂದ ಕೂಡಿರುತ್ತದೆ. ಸೂರ್ಯ ರೇಖೆಯ ಮೇಲಿನ ನಕ್ಷತ್ರಗಳು ಅವರ ಭವಿಷ್ಯವನ್ನೂ ಸೂಚಿಸುತ್ತವೆ. ಸೂರ್ಯ ರೇಖೆಯು ನೇರವಾಗಿ ದಪ್ಪ ಇದ್ದರೆ, ಅವರಿಗೆ ಬಂದ ಖ್ಯಾತಿಯು ಶಾಶ್ವತವಾಗಿ ಉಳಿಯುತ್ತದೆ.

ಸೂರ್ಯರೇಖೆಯ ಮಧ್ಯದಲ್ಲಿ ಎಲ್ಲಿಯಾದರೂ ಮಚ್ಚೆಗಳಿದ್ದರೆ, ನಿಮ್ಮ ಖ್ಯಾತಿಗೆ ಅಸೂಯೆ ಪಡುವ ಶತ್ರುಗಳನ್ನು ಸೂಚಿಸುತ್ತದೆ. ಸೂರ್ಯ ರೇಖೆಯು ಚಂದ್ರ ಪರ್ವತದ ಬಳಿ ಹೋದರೂ ಸಾಕು ಅದರ ಶಕ್ತಿಯು ನಿಮಗೇ ಅಂಟಿಕೊಳ್ಳುತ್ತದೆ. ಅವರು ಜನಪ್ರಿಯ ಭಾಷಣಕಾರನಾಗುತ್ತಾರೆ. ಗಾಯಕ, ಮತ್ತು ಚಿತ್ರ ಬಿಡಿಸುವುದರಲ್ಲಿ ಪರಿಣತರಾಗಿರುತ್ತಾರೆ.

ಸೂರ್ಯ ರೇಖೆಯ ಬುಡ ಮತ್ತು ತುದಿಗಳು ಕವಲೊಡೆದಿದ್ದರೆ ಅಥವಾ ಯಾವುದಾದರೊಂದು ಭಾಗ ಘಾಸಿಗೆ ಒಳಗಾಗಿದ್ದರೆ, ಆಗ ಸಂತೋಷಕ್ಕೆ ಮತ್ತು ಹಣಕ್ಕೆ ಯಾವುದೇ ಕೊರತೆಯಾಗುವುದಿಲ್ಲ.

ಸೂರ್ಯ ಮತ್ತು ಜೀವನ ರೇಖೆಗಳು ಸೇರಿದ್ದರೆ, ಅಂತಹಾ ವ್ಯಕ್ತಿಗಳು ಪ್ರಸಿದ್ಧರಾಗುತ್ತರೆ. ಸೂರ್ಯರೇಖೆಯು ಸರಪಳಿಯಂತೆ ರೂಪುಗೊಂಡಿದ್ದರೆ, ಶಿಕ್ಷಣದಲ್ಲಿ ಹಿನ್ನಡೆ ಉಂಟಾಗುತ್ತದೆ. ಸೂರ್ಯ ರೇಖೆಯ ಮೇಲಿರುವ ನಕ್ಷತ್ರಗಳು ಅವರ ಸಾಮರ್ಥ್ಯವನ್ನು, ಶಕ್ತಿಯನ್ನು, ಸಮೃದ್ಧಿ ಯನ್ನು ಹೀಗೆ ಎಲ್ಲವನ್ನೂ ಸೂಚಿಸುತ್ತದೆ. ಸೂರ್ಯ ರೇಖೆ ಮತ್ತು ವಿಧಿ ರೇಖೆಯು ಒಂದರ ಮೇಲೊಂದು ಕೂತಿದ್ದರೆ, ಮಹಡಿಗಳನ್ನು ಕಟ್ಟಲು ಸಾಧ್ಯವಾಗುವುದಿಲ್ಲ.

ಸೂರ್ಯ ರೇಖೆಯು ಹಾವು ಹರಿದಂತೆ ಇದ್ದರೆ, ಅಂತಹಾ ವ್ಯಕ್ತಿಗಳು ಮೋಸರನ್ನು ದೂರ ಇಡುತ್ತಾರೆ. ಶುಕ್ರ ರೇಖೆಯು ಸೂರ್ಯ ರೇಖೆಯನ್ನು ತುಂಡರಿಸಿದರೆ, ಅಂತಹಾ ವ್ಯಕ್ತಿಗಳು, ಪ್ರೇಮಕ್ಕೆ ಒಳಗಾಗುತ್ತಾರೆ.

ಜ್ಯೋತಿರಾವ್ ಫುಲೆ: ಭಾರತಕ್ಕೆ ದಾರಿ ದೀಪವಾಗಿರುವ ಮಹಾನ್ ಚೇತನ

ಪುಟ ೧ ➡ ತಮ್ಮ ಶಾಲಾ ದಿನಗಳಿಂದಲೂ, ಯುವ ಜ್ಯೋತಿರಾವ್ ಅವರು ತೀವ್ರ ಕುತೂಹಲಿಗಳಾಗಿದ್ದರು ಮತ್ತು ಅತೀವ ಓದುಗರಾಗಿದ್ದರು; ಅವರು ತಮ್ಮ ವಯಸ್ಸಿನ ಮಕ್ಕಳು ಓದಬೇಕೆಂದು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಪುಸ್ತಕಗಳನ್ನು ಓದುತ್ತಿದ್ದರು. ನಾವು ಎಷ್ಟು ಹೆಚ್ಚು ಪ್ರಶ್ನೆಗಳನ್ನು ಹುಟ್ಟುಹಾಕುತ್ತೇವೆಯೋ, ಅಷ್ಟು ಹೆಚ್ಚು ಜ್ಞಾನವು ಅವುಗಳಿಂದ ಹೊರಹೊಮ್ಮುತ್ತದೆ ಎಂದು ಅವರು ಹೇಳುತ್ತಿದ್ದರು. ಬಾಲ್ಯದಿಂದಲೇ ಅವರಿಗೆ ಲಭಿಸಿದ್ದ ವಿಮರ್ಶಾ ಮನೋಭಾವವು ಅವರ ಪ್ರಯಾಣದುದ್ದಕ್ಕೂ ಸ್ಥಿರವಾಗಿ ಉಳಿದಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ತಮ್ಮ ಜೀವನದುದ್ದಕ್ಕೂ ಕಲಿಕೆ ಮತ್ತು ಶಿಕ್ಷಣವು ಮಹಾತ್ಮ ಫುಲೆ ಅವರ ಉದ್ದೇಶದ ಕೇಂದ್ರಬಿಂದುವಾಗಿತ್ತು. ಜ್ಞಾನವು ಕೇವಲ ಕೆಲವರ ಪಾಲಿನ ಸ್ವತ್ತಲ್ಲ, ಬದಲಾಗಿ ಅದು ಎಲ್ಲರಿಗೂ ಹಂಚಲ್ಪಡಬೇಕಾದ ಶಕ್ತಿ ಎಂಬುದನ್ನು ಅವರು ಬಹಳ ಸ್ಪಷ್ಟವಾಗಿ ಗುರುತಿಸಿದ್ದರು. ಕಲಿಕೆಯ ಅವಕಾಶವು ಅನೇಕರಿಗೆ ನಿರಾಕರಿಸಲ್ಪಟ್ಟಿದ್ದ ಕಾಲದಲ್ಲಿ, ಅವರು ಹೆಣ್ಣುಮಕ್ಕಳಿಗಾಗಿ ಮತ್ತು ಔಪಚಾರಿಕ ಶಿಕ್ಷಣದಿಂದ ಹೊರಗುಳಿದವರಿಗಾಗಿ ಶಾಲೆಗಳನ್ನು ತೆರೆದರು. ತಾಯಂದಿರ ಮೂಲಕ ಮಕ್ಕಳಲ್ಲಿ ಉಂಟಾಗುವ ಯಾವುದೇ ಸುಧಾರಣೆಯು ಅತ್ಯಂತ ಅಮೂಲ್ಯವಾದುದು. ಆದ್ದರಿಂದ, ಶಾಲೆಗಳನ್ನು ತೆರೆಯುವುದಾದರೆ, ಅವುಗಳನ್ನು ಮೊದಲು ಹೆಣ್ಣುಮಕ್ಕಳಿಗಾಗಿ ತೆರೆಯಬೇಕು ಎಂದು ಅವರು ಹೇಳುತ್ತಿದ್ದರು. ತರಗತಿಯು ನ್ಯಾಯ ಮತ್ತು ಸಮಾನತೆಯ ಸಾಧನವಾಗುವಂತಹ ಹೊಸ ಸಾಮಾಜಿಕ ಕಲ್ಪನೆಯನ್ನು ಸೃಷ್ಟಿಸಲು ಅವರು ಕೆಲಸ ಮಾಡಿದರು.

ಶಿಕ್ಷಣದ ಬಗ್ಗೆ ಅವರಿಗಿದ್ದ ದೂರದೃಷ್ಟಿಯು ನಮಗೆ ಹೆಚ್ಚಿನ ಸ್ಫೂರ್ತಿ ನೀಡುತ್ತದೆ. ಕಳೆದ ದಶಕದಲ್ಲಿ, ನಾವು ಸಂಶೋಧನೆ ಮತ್ತು ನಾವೀನ್ಯತೆಯನ್ನು ಭಾರತದ ಯುವಜನರ ಮೂಲಾಧಾರವನ್ನಾಗಿ ಮಾಡಲು ಕೆಲಸ ಮಾಡಿದ್ದೇವೆ. ಯುವ ಮನಸ್ಸುಗಳನ್ನು ಪ್ರಶ್ನಿಸಲು, ಅನ್ವೇಷಿಸಲು ಮತ್ತು ಆವಿಷ್ಕರಿಸಲು ಪ್ರೋತ್ಸಾಹಿಸುವ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ. ಜ್ಞಾನ, ಕೌಶಲ ಮತ್ತು ಅವಕಾಶಗಳಲ್ಲಿ ಹೂಡಿಕೆ ಮಾಡುವ ಮೂಲಕ, ಭಾರತವು ತನ್ನ ಯುವಜನತೆಯ ಸಮಸ್ಯೆಗಳನ್ನು ಬಗೆಹರಿಸುವವರನ್ನಾಗಿ ಮತ್ತು ರಾಷ್ಟ್ರೀಯ ಪ್ರಗತಿಯ ಚಾಲಕರನ್ನಾಗಿ ಸಬಲೀಕರಿಸುತ್ತಿದೆ.



ತಮ್ಮ ಜ್ಞಾನ ಮತ್ತು ಬುದ್ಧಿವಂತಿಕೆಯಿಂದಾಗಿ ಮಹಾತ್ಮ ಫುಲೆ ಅವರು ಕೃಷಿ, ಆರೋಗ್ಯ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಬಲವಾದ ತಿಳುವಳಿಕೆಯನ್ನು ಬೆಳೆಸಿಕೊಂಡಿದ್ದರು. ನಮ್ಮ ರೈತರು ಮತ್ತು ಕಾರ್ಮಿಕರಿಗೆ ಆಗುವ ಅನ್ಯಾಯವು ನಮ್ಮ ಸಮಾಜವನ್ನು ದುರ್ಬಲಗೊಳಿಸುತ್ತದೆ ಎಂದು ಅವರು ಆಗಾಗ್ಗೆ ಹೇಳುತ್ತಿದ್ದರು. ಸಾಮಾಜಿಕ ಅಸಮಾನತೆಗಳು ಹೊಲಗಳಲ್ಲಿ ಅಥವಾ ಹಳ್ಳಿಗಳಲ್ಲಿ ದೈನಂದಿನ ಜೀವನದಲ್ಲಿ ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಅವರು ಕಂಡಿದ್ದರು. ಆದ್ದರಿಂದ, ಅವರು ಬಡವರು, ತುಳಿತಕ್ಕೊಳಗಾದವರು ಮತ್ತು ಸಮಾಜದ ಅಂಚಿನಲ್ಲಿರುವವರಿಗೆ ಘನತೆಯನ್ನು ಖಚಿತಪಡಿಸಿಕೊಳ್ಳಲು ತಮ್ಮನ್ನು ತೊಡಗಿಸಿಕೊಂಡರು. ಅದೇ ಸಮಯದಲ್ಲಿ, ಸಾಮಾಜಿಕ ಸಾಮರಸ್ಯವನ್ನು ಕಾಪಾಡಲು ಅವರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರು.

ಮಹಾತ್ಮ ಫುಲೆ ಅವರು ಅಭಿಪ್ರಾಯಪಟ್ಟಂತೆ, ಸಮಾಜದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗುವವರೆಗೆ ನಿಜವಾದ ಸ್ವಾತಂತ್ರ್ಯ ಸಿಗುವುದಿಲ್ಲ, ಅದಕ್ಕಾಗಿ, ಅವರು ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರುವಂತಹ ಸಂಸ್ಥೆಗಳನ್ನು ಕಟ್ಟಿದರು, ಸಮ ಸಮಾಜ ಕ್ಕೆ ಕೊಡುಗೆ ನೀಡಿದರು. ಅವರು ಸ್ಥಾಪಿಸಿದ 'ಸತ್ಯಶೋಧಕ ಸಮಾಜ'ವು ಆಧುನಿಕ ಭಾರತದ ಪ್ರಮುಖ ಸಮಾಜ ಸುಧಾರಣಾ ಚಳವಳಿಗಳಲ್ಲಿ ಒಂದಾಗಿದೆ. ಇದು ಸಮಾಜ ಸುಧಾರಣೆ, ಸಮುದಾಯ ಸೇವೆ ಮತ್ತು ಮಾನವ ಘನತೆಯನ್ನು ಹೆಚ್ಚಿಸುವಲ್ಲಿ ಮುಂಚೂಣಿಯಲ್ಲಿತ್ತು. ಇದು ಮಹಿಳೆಯರು, ಯುವಕರು ಮತ್ತು ಹಳ್ಳಿಗಳಲ್ಲಿ ವಾಸಿಸುವವರ ಪರಿಣಾಮಕಾರಿ ಧ್ವನಿಯಾಯಿತು. ನ್ಯಾಯ, ಪ್ರತಿಯೊಬ್ಬ ವ್ಯಕ್ತಿಯ ಗೌರವ ಮತ್ತು ಸಾಮೂಹಿಕ ಪ್ರಗತಿಯ ಮನೋಭಾವವನ್ನು ಕೇಂದ್ರದಲ್ಲಿ ಇರಿಸುವ ಮೂಲಕ ಸಮಾಜವನ್ನು ಬಲಪಡಿಸಬಹುದು ಎಂಬ ಮಹಾತ್ಮ ಫುಲೆ ಅವರ ಅಚಲ ನಂಬಿಕೆಯನ್ನು ಈ ಚಳವಳಿಯು ಪ್ರತಿಬಿಂಬಿಸಿತು.

ಅವರ ವೈಯಕ್ತಿಕ ಜೀವನವೂ ಸಹ ಧೈರ್ಯದ ಮಹಾನ್ ಪಾಠಗಳನ್ನು ಒಳಗೊಂಡಿದೆ. ಸದಾ ಜನರ ನಡುವೆ ಇರುತ್ತಾ, ಅವರಿಗಾಗಿ ಅಹೋರಾತ್ರಿ ಶ್ರಮಿಸಿದ್ದು ಫುಲೆ ಅವರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರಿತು. ಆದರೆ ಎಂತಹ ಗಂಭೀರ ಆರೋಗ್ಯ ಸವಾಲುಗಳೂ ಅವರ ಸಂಕಲ್ಪವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ, ಪಾರ್ಶ್ವವಾಯುವಿನಂತಹ ಕಠಿಣ ಸ್ಥಿತಿಗೆ ಒಳಗಾದ ನಂತರವೂ, ಅವರು ತಮ್ಮ ದೂರದೃಷ್ಟಿಯ ಗುರಿಗಳನ್ನು ಈಡೇರಿಸಲು ಕೆಲಸ ಮಾಡುವುದನ್ನು ಮುಂದುವರಿಸಿದರು. ಹೌದು, ಅವರ ದೇಹಕ್ಕೆ ಕಠಿಣ ಪರೀಕ್ಷೆ ಎದುರಾಗಿತ್ತು, ಆದರೆ ಸಮಾಜದ ಬಗೆಗಿನ ಅವರ ಬದ್ಧತೆ ಮಾತ್ರ ಕಿಂಚಿತ್ತೂ ಕದಲಲಿಲ್ಲ, ಇಂದಿಗೂ, ವಿಶೇಷವಾಗಿ ಸಂಘರ್ಷಗಳ ನಡುವೆ ಧೈರ್ಯವನ್ನು ಹುಡುಕುವ ಕೋಟ್ಯಂತರ ಜನರಿಗೆ ಅವರ ಜೀವನದ ಈ ಆಯಾಮವು ಅತ್ಯಂತ ಶಕ್ತಿಶಾಲಿ ಪ್ರೇರಣೆಯಾಗಿದೆ.

ಮಹಾತ್ಮ ಫುಲೆ ಅವರ ಸ್ಮರಣೆಯು ನಮ್ಮ ರಾಷ್ಟ್ರದ ಶ್ರೇಷ್ಠ ಸುಧಾರಕರಲ್ಲಿ ಒಬ್ಬರಾದ ಸಾವಿತ್ರಿಬಾಯಿ ಫುಲೆ ಅವರ ಉಲ್ಲೇಖವಿಲ್ಲದೆ ಎಂದಿಗೂ ಪೂರ್ಣಗೊಳ್ಳದು. ಭಾರತದ ಪ್ರವರ್ತಕ ಮಹಿಳಾ ಶಿಕ್ಷಕಿಯಾಗಿ, ಅವರು ಹೆಣ್ಣುಮಕ್ಕಳ ಶಿಕ್ಷಣದ ಕ್ರಾಂತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದರು ಮತ್ತು ಅವರ ಕನಸುಗಳಿಗೆ ರೆಕ್ಕೆ ಕಟ್ಟಿದರು. ಮಹಾತ್ಮ ಫುಲೆ ಅವರ ನಿಧನದ ನಂತರವೂ ಸಾವಿತ್ರಿಬಾಯಿ ಅವರು ಸುಧಾರಣೆಯ ಆ ಜ್ಯೋತಿಯನ್ನು ಎತ್ತಿ ಹಿಡಿದರು. 1897ರಲ್ಲಿ ಪ್ಲೇಗ್ ಸಾಂಕ್ರಾಮಿಕ ಹರಡಿದಾಗ, ಅವರು ರೋಗಪೀಡಿತರ ಸೇವೆಗೆ ಎಷ್ಟರಮಟ್ಟಿಗೆ ಸಮರ್ಪಿಸಿಕೊಂಡರೆಂದರೆ, ಅವರು ಸ್ವತಃ ಅದೇ ಕಾಯಿಲೆಗೆ ತುತ್ತಾಗಿ ಕೊನೆಗೆ ತಮ್ಮ ಪ್ರಾಣವನ್ನೇ ಅರ್ಪಿಸಿದರು.

ನಮ್ಮ ಪುಣ್ಯಭೂಮಿಯು ಕಾಲಕಾಲಕ್ಕೆ ಮಹಾನ್ ಪುರುಷರು ಮತ್ತು ಮಹಿಳೆಯರ ಆಶೀರ್ವಾದಕ್ಕೆ ಪಾತ್ರವಾಗಿದೆ; ಇವರು ತಮ್ಮ ಉದಾತ್ತ ಆಲೋಚನೆ, ಅಪ್ರತಿಮ ತ್ಯಾಗ ಮತ್ತು ಕರ್ತವ್ಯನಿಷ್ಠೆಯ ಮೂಲಕ ಸಮಾಜವನ್ನು ಬಲಪಡಿಸಿದ್ದಾರೆ. ಇವರು ಬದಲಾವಣೆಗಾಗಿಯಾರೋಬರುತ್ತಾರೆಂದು ಕಾಯಲಿಲ್ಲ, ಬದಲಾಗಿ ತಾವೇ ಆ ಬದಲಾವಣೆಯ ಮೂಲಶಕ್ತಿಯಾದರು. ನೂರಾರು ವರ್ಷಗಳಿಂದ ನಮ್ಮ ನಾಡಿನಲ್ಲಿ ಸಾಮಾಜಿಕ ಸುಧಾರಣೆಯ ಕರೆಯು ಸಮಾಜದ ಒಳಗಿನಿಂದಲೇ ಮೊಳಗುತ್ತಾ ಬಂದಿದೆ. ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳನ್ನು ಕಣ್ಣಾರೆ ಕಂಡು, ಅದನ್ನು 'ಹಣೆಬರಹ' ಎಂದು ಒಪ್ಪಿಕೊಳ್ಳಲು ನಿರಾಕರಿಸಿದ ಧೀಮಂತ ವ್ಯಕ್ತಿಗಳಿಂದ ಈ ಕ್ರಾಂತಿ ಉದ್ಭವಿಸಿದೆ. ಮಹಾತ್ಮ ಜ್ಯೋತಿರಾವ್ ಫುಲೆ ಅಂತಹ ಕ್ರಾಂತಿಕಾರಿ ಧ್ವನಿಗಳಲ್ಲಿ ಒಬ್ಬರು.

2022ರಲ್ಲಿ ಪುಣೆಗೆ ಭೇಟಿ ನೀಡಿದಾಗ ಅಲ್ಲಿನ ಅವರ ಭವ್ಯ ಪ್ರತಿಮೆಗೆ ನಾನು ಗೌರವ ಸಲ್ಲಿಸಿದ್ದನ್ನು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇನೆ. ನಾವು ಅವರ ದ್ವಿಶತಮಾನೋತ್ಸವದ ವರ್ಷದ ಆರಂಭವನ್ನು ಗುರುತಿಸುತ್ತಿರುವಾಗ, ಮಹಾತ್ಮ ಜ್ಯೋತಿರಾವ್ ಫುಲೆ ಅವರಿಗೆ ಸಲ್ಲಿಸುವ ಅತ್ಯಂತ ಸೂಕ್ತ ಗೌರವವೆಂದರೆ 'ನವೀಕರಣ'. ಅವರಿಗೆ ಹತ್ತಿರವಾದ ಶಿಕ್ಷಣದಂತಹ ವಿಷಯಗಳಿಗೆ ನಮ್ಮ ಬದ್ಧತೆಯನ್ನು ನವೀಕರಿಸುವುದು. ಅನ್ಯಾಯದ ಬಗ್ಗೆ ನಮ್ಮ ಸಂವೇದನಾಶೀಲತೆಯನ್ನು ನವೀಕರಿಸುವುದು. ಸಮಾಜವು ಒಳಗಿನಿಂದಲೇ ತನ್ನನ್ನು ತಾನು ಸುಧಾರಿಸಿಕೊಳ್ಳಬಲ್ಲದು ಎಂಬ ನಮ್ಮ ನಂಬಿಕೆಯನ್ನು ನವೀಕರಿಸುವುದು. ನೈತಿಕ ಸ್ಪಷ್ಟತೆ ಮತ್ತು ಸಾರ್ವಜನಿಕ ಉದ್ದೇಶದೊಂದಿಗೆ ಸೇರಿದಾಗ ಸಮುದಾಯದ ಶಕ್ತಿಯು ಭಾರತದಲ್ಲಿ ಅದ್ಭುತಗಳನ್ನು ಸಾಧಿಸಬಲ್ಲದು ಎಂದು ಅವರ ಜೀವನ ನಮಗೆ ಹೇಳುತ್ತದೆ. ಅದಕ್ಕಾಗಿಯೇ ಅವರು ಇಂದಿಗೂ ಲಕ್ಷಾಂತರ ಜನರಿಗೆ ಶಕ್ತಿ ನೀಡುತ್ತಾರೆ. ಅದಕ್ಕಾಗಿಯೇ ಅವರ ಮಾತುಗಳು ಮತ್ತು ಕೆಲಸಗಳು ಇಂದಿಗೂ ಭರವಸೆಯನ್ನು ನೀಡುತ್ತವೆ ಮತ್ತು ಅದಕ್ಕಾಗಿಯೇ, ಅವರು ಜನಿಸಿದ ಎರಡು ನೂರು ವರ್ಷಗಳ ನಂತರವೂ ಮಹಾತ್ಮ ಜ್ಯೋತಿರಾವ್ ಫುಲೆ ಅವರು ಕೇವಲ ಭೂತಕಾಲದ ವ್ಯಕ್ತಿಯಲ್ಲ, ಬದಲಾಗಿ ಭಾರತದ ಭವಿಷ್ಯಕ್ಕೆ ದಾರಿದೀಪವಾಗಿದ್ದಾರೆ.

ರಾಷ್ಟ್ರಹಿತ ಮರೆತ ಕಾಂಗ್ರೆಸಿನ ತುಷ್ಟೀಕರಣ ನೀತಿ

ಕಾಂಗ್ರೆಸಿನ ಅಲ್ಪಸಂಖ್ಯಾತ ತುಷ್ಟೀಕರಣ ನೀತಿಯಿಂದಾಗಿ ದೇಶಕ್ಕೆ ಬಹಳಷ್ಟು ಪ್ರತಿಕೂಲವಾಗಿದೆ.

ಒಳನೋಟ


• ಹೆ.ಬಾ. ಮಲ್ಯ



ಭಯೋತ್ಪಾದನೆ ಮತಾಂತರಗಳು ಭಾರತಕ್ಕೆ ಮಾತ್ರ ಸೀಮಿತವಲ್ಲ, ಜಗತ್ತಿನ ಹೆಚ್ಚುಕಮ್ಮಿ ಎಲ್ಲಾ ದೇಶಗಳು ಈ ಪೀಡೆಗೆ ಒಳಗಾಗಿವೆ. ಜಗತ್ತಿನಲ್ಲಿ ಕಳೆದ ಎರಡುಸಹಸ್ರಮಾನಗಳಿಂದಈಬಗೆಯಅಶಾಂತಿನಿರ್ಮಾಣವಾಗಿರುವುದು ಕಂಡುಬರುತ್ತದೆ. ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿಗಳಿಂದ ಗ್ರೀಕ್, ರೋಮ್, ಈಜಿಪ್ಟ್ ಮೊದಲಾದ ನಾಗರಿಕತೆಗಳು ನಾಶವಾದಾಗ ಆ ದೇಶಗಳು ಕ್ರೈಸ್ತ ಮತ್ತು ಇಸ್ಲಾಮಿಕ್ ದೇಶಗಳಾದವು. ಜಿಹಾದ್ ಮತ್ತು ಕ್ರುಸೇಡ್ಸ್ ಯುರೋಪಿನಾದ್ಯಂತ ರಕ್ತದ ಕೋಡಿಯನ್ನು ಹರಿಸಿದ್ದು ಇತಿಹಾಸದಿಂದ ತಿಳಿದು ಬರುತ್ತದೆ. ನಂತರ ಪೋಪ್ ಹಾಗೂ ಕ್ರೈಸ್ತ ಅರಸೊತ್ತಿಗೆಗಳ ವಿರುದ್ಧ ಸಿಡಿದೆದ್ದ ಸಂಘರ್ಷದಿಂದ ಯುರೋಪಿನಲ್ಲಿ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆದ ಪರಿವರ್ತನೆಯು ಬಂಡವಾಳಶಾಹಿ ವ್ಯವಸ್ಥೆ ಹಾಗೂ ಕ್ರಮೇಣ ಸಾಮ್ರಾಜ್ಯವಾದಕ್ಕೆ ಜನ್ಮ ನೀಡಿತು. ನಂತರ ಇದರ ವಿರುದ್ಧ ಕಮ್ಯುನಿಸಂ ಹುಟ್ಟಿಕೊಂಡಿತು. ಬಂಡವಾಳಶಾಹಿ ಮತ್ತು ಕಮ್ಯುನಿಸಂ ಈ ಎರಡು ವ್ಯವಸ್ಥೆಗಳು ಕೂಡಾ ಮತಕ್ಕೆ ಸಮಾನವಾಗಿವೆ. ಹೀಗೆ ಈ ನಾಲ್ಕು ಸಿದ್ಧಾಂತಗಳ ಮೂಲ ಉದ್ದೇಶ ಒಂದೇ. ಜಗತ್ತಿನ ಮೇಲೆ ಬಲಾತ್ಕಾರದಿಂದ ತಮ್ಮ ಅಧಿಕಾರ ಹೇರುವುದು. ಈ ನಾಲ್ಕು ಸಿದ್ಧಾಂತಗಳು ಕಳೆದ ಅನೇಕ ಶತಮಾನಗಳಿಂದ ಜಗತ್ತಿನ ನೆಮ್ಮದಿಯನ್ನು ಹಾಳು ಮಾಡಿದ್ದು, ಭಾರತವೂ ಈ ನಾಲ್ಕು ಪೀಡೆಗಳಿಂದ ನಲುಗಿದೆ. ಭಾರತದ ಆತ್ಮಜಾಗೃತಿಗೆ, ಪುನರುತ್ಥಾನಕ್ಕೆ ಈ ನಾಲ್ಕು ಸಿದ್ಧಾಂತಗಳು ಅಡ್ಡಿಯಾಗಿ ನಿಂತಿವೆ.

1947ರಲ್ಲಿ ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವೇನೊ ಸಿಕ್ಕಿತು. ಆದರೆ ಬಳಿಕವೂ ಭಾರತವು ಭಾರತವಾಗಿ ರೂಪುಗೊಳ್ಳಲಿಲ್ಲ, ಬ್ರಿಟಿಷರು ಬಿತ್ತಿದ ವಿಭಜನವಾದಿ ವಿಷಬೀಜ ಹಾಗೂ ಮೆಕಾಲೆ ಶಿಕ್ಷಣದಿಂದ ನಿರ್ಮಾಣವಾಗಿರುವ ಮಸ್ತಿಷ್ಕಕ್ಷಾಳನ (Brain washing)ದಿಂದ ಭಾರತೀಯರು ಭಾರತೀಯರಾಗಿ ಉಳಿದಿಲ್ಲ, ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಶಾಶ್ವತವಾಗಿ ನೆಲೆಗೊಳಿಸಲು ಅನುಸರಿಸಿದ ಒಡೆದಾಳುವ ನೀತಿಯನ್ನು ಹಾಗೂ ಮುಸ್ಲಿಂ ತುಷ್ಟೀಕರಣ ನೀತಿಯನ್ನು ಸ್ವಾತಂತ್ರ್ಯೋತ್ತರ ದಲ್ಲಿ ಅಧಿಕಾರಕ್ಕೆ ಬಂದ ನೆಹರು ಕಾಂಗ್ರೆಸ್ ಅನುಸರಿಸಿ ಅಲ್ಪಸಂಖ್ಯಾತರ ತುಷ್ಟೀಕರಣಕ್ಕೆ 'ಜಾತ್ಯತೀತವಾದ', 'ಸೆಕ್ಯುಲರಿಸಂ' ಎಂಬ ಆಕರ್ಷಕ ಹೆಸರಿಟ್ಟಿತು.

ಸರ್ವಾಧಿಕಾರಿಗಳು ತಮ್ಮ ಅಧಿಕಾರವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಒಂದು ಕಾಲ್ಪನಿಕ ಭೂತವನ್ನು ನಿರ್ಮಿಸಿ ಒಂದು ವರ್ಗದ ಜನರಲ್ಲಿ ಶಾಶ್ವತವಾಗಿ ಭಯವನ್ನು ಹುಟ್ಟಿಸುತ್ತಾರೆ. ಹಿಟ್ಲರ್ ಯಹೂದಿಗಳ ಬಗ್ಗೆ ಅಂತಹ ಭಯ ಹುಟ್ಟಿಸಿದ. ಕಮ್ಯುನಿಸ್ಟ್ ನಾಯಕರು ಬಂಡವಾಳಶಾಹಿ ಅಮೆರಿಕನ್ನರ ಬಗ್ಗೆ ಭಯ ಹುಟ್ಟಿಸಿದರೆ, ಬಂಡವಾಳಶಾಹಿ ಅಮೆರಿಕಾ ತನ್ನ ಹಿತ ಉಳಿಸಿಕೊಳ್ಳಲು ಕಮ್ಯುನಿಸ್ಟ್ ಭೂತದ ಬಗ್ಗೆ ಭಯ ಹುಟ್ಟಿಸಿತು. ಆದರೆ ಕಾಂಗ್ರೆಸ್ ಪಕ್ಷವು ತನ್ನ ವಿರೋಧಿಯಾಗಿ ಬಳಸಿಕೊಂಡುದು ರಾಷ್ಟ್ರೀಯ ಸ್ವಯಂಸೇವಕ ಸಂಘ, ಜನಸಂಘ (ಇಂದಿನ ಬಿಜೆಪಿ) ಹಾಗೂ ಅವುಗಳ ನಾಯಕರನ್ನು. ಆರೆಸ್ಸೆಸ್ ಕೋಮುವಾದಿಯೆಂದೂ, ಅದರ ನಾಯಕರು ಹಿಟ್ಲರ್ ಎಂದೂ, ಮುಸ್ಲಿಂ ವಿರೋಧಿ ಗಳೆಂದೂ, ಗಾಂಧಿಯನ್ನು ಅವರು ಕೊಂದಿದ್ದಾರೆಂದೂ, ಇನ್ನು ಮುಸ್ಲಿಮರನ್ನು ಅವರು ಬಿಡುವರೇನು ಎಂಬುದಾಗಿ ಸುಳ್ಳು ಆರೋಪಗಳನ್ನು ಮಾಡುತ್ತಾ ಮುಸ್ಲಿಮರಲ್ಲಿ ಆರೆಸ್ಸೆಸ್, ಬಿಜೆಪಿ ಬಗ್ಗೆ ಇನ್ನಿಲ್ಲದ ಭಯ ಹುಟ್ಟಿಸುತ್ತಾ ಬಂತು. ಇತ್ತೀಚೆಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ''ವಿಷ ಸರ್ಪವನ್ನು ಕೊಂದಂತೆ ಆರೆಸ್ಸೆಸ್, ಬಿಜೆಪಿ ಎಂಬ ವಿಷ ಸರ್ಪವನ್ನು ಕೊಲ್ಲಿ'' ಎಂದು ಬಹಿರಂಗವಾಗಿ ಅಸ್ಸಾಂನ ರ‍್ಯಾಲಿಯೊಂದರಲ್ಲಿ ದ್ವೇಷ ಭಾಷಣ ಮಾಡಿದ್ದು ಎಲ್ಲರೂ ಗಮನಿಸಿದ್ದಾರೆ. ನಾಮಾವಶೇಷವಾಗುತ್ತಿರುವ ಕಾಂಗ್ರೆಸ್‌ನ ಅಸ್ತಿತ್ವವನ್ನು ಹೇಗಾದರೂ ಮಾಡಿ ಉಳಿಸಿಕೊಂಡು ಮತ್ತೆ ಅಧಿಕಾರಕ್ಕೆ ಬರುವಂತೆ ಮಾಡಲು ಕಾಂಗ್ರೆಸಿಗರು ಕೋಮು ದ್ವೇಷಕ್ಕೆ ಪ್ರಚೋದನೆ ನೀಡುವ ಕೆಲಸ ಮಾಡುತ್ತಿದ್ದಾರೆ.



ಪಾಕಿಸ್ತಾನ ನಿರ್ಮಾಣದ ನಂತರ ಭಾರತದಲ್ಲಿ ಉಳಿದ ಮುಸಲ್ಮಾನರ ಮನಸ್ಥಿತಿ ಹೆದರಿದ ಕುರಿಯಂತಾಗಿತ್ತು. ತಮ್ಮ ಬಗ್ಗೆ ಹಿಂದುಗಳಲ್ಲಿ ಆಕ್ರೋಶದ ಭಾವನೆ ಇದೆ ಎಂದು ಗುರುತಿಸಿದ ಮುಸ್ಲಿಮರು ಸ್ವಲ್ಪಕಾಲ ತೆಪ್ಪಗಿದ್ದರು.ಇಲ್ಲಿನ ಸರಕಾರ ಏನೇ ಷರತ್ತು ವಿಧಿಸಿದರೂ ಕೇಳುವ ಮನಸ್ಥಿತಿಯಲ್ಲಿದ್ದರು. ಅಂತಹ ಸಂದರ್ಭದಲ್ಲಿ ಭಾರತದ ನಾಯಕರು ಅವರನ್ನು ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ತರುವ ಪ್ರಯತ್ನ ಆರಂಭಿಸಬೇಕಾಗಿತ್ತು. ಅವರ ಪೂರ್ವಜರು ಅರೇಬಿಯಾ, ಮಕ್ಕಾದಿಂದ ಬಂದವರಲ್ಲವೆಂದೂ, ಅಲ್ಲಿಂದ ಬಂದ ಹಿಡಿಯಷ್ಟು ಮಂದಿ ಕ್ರೂರಿ ದೊರೆಗಳ ಬಲವಂತದಿಂದಲೋ, ಆಮಿಷದಿಂದಲೋ ಮತಾಂತರವಾದವರು ಎಂದು ತಿಳಿಹೇಳಬೇಕಾಗಿತ್ತು. ಅವರಿಗೆ ಮರಳಿ ಹಿಂದೂ ಧರ್ಮಕ್ಕೆ ಬರಲು ಅಥವಾ ತಮ್ಮ ಮನೆಗಳಲ್ಲಿ ತಮ್ಮ ಮತವನ್ನು ಪಾಲಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ತಿಳಿಸಿ ಹೇಳಬೇಕಾಗಿತ್ತು. ಭಾರತವು ಮೂಲತಃ ಹಿಂದೂಗಳ ದೇಶವೆಂದೂ, ಹಿಂದು ಧರ್ಮ, ಸಂಸ್ಕೃತಿ, ಭಾಷೆ, ಮಹಾಪುರುಷರು, ಗ್ರಂಥಗಳೇ ಇಲ್ಲಿ ಪ್ರಧಾನವೆಂದೂ, ಅವುಗಳಿಗೆ ಗೌರವ ನೀಡುತ್ತಾ ತಮ್ಮ ಮತೀಯ ಆರಾಧನಾ ಪದ್ಧತಿಯನ್ನು ಅನುಸರಿಸಿಕೊಂಡು ಹೋಗಲು ಅಡ್ಡಿಯಿಲ್ಲವೆಂದು ಭರವಸೆ ನೀಡಿ, ತಿಳಿಸಿಹೇಳಿದ್ದಲ್ಲಿ ಕ್ರಮೇಣ ಅವರಲ್ಲಿ ಒಂದು ಬಹು ದೊಡ್ಡ ಜನವರ್ಗ ಅರ್ಥ ಮಾಡಿಕೊಂಡು ಹಿಂದೂಗಳೊಡನೆ ಹೊಂದಿಕೊಂಡು ಬಾಳುವ ಸಾಧ್ಯತೆ ಇತ್ತು. ಆದರೆ ಕಾಂಗ್ರೆಸ್ ನಾಯಕರು ಹಾಗಾಗಲು ಬಿಡಲಿಲ್ಲ, ಅವರಿಗೆ ಹಿಂದು ಹಿತ, ರಾಷ್ಟ್ರ ಹಿತಕ್ಕಿಂತ ತಮ್ಮ ಸ್ವಾರ್ಥ, ಅಧಿಕಾರ ಲಾಲಸೆಗಳೇ ಮುಖ್ಯವಾದವು. ಹಿಂದೂ ರಾಷ್ಟ್ರೀಯತೆ ಬೆಳೆಯಲು ಬಿಟ್ಟರೆ ತಮ್ಮ ಬೇಳೆ ಬೇಯುವುದಿಲ್ಲ ಎಂಬುದು ಅವರ ಭಾವನೆಯಾಗಿತ್ತು. ಅದಕ್ಕಾಗಿ ಹಿಂದು ವಿರೋಧ, ಆರೆಸ್ಸೆಸ್ ವಿರೋಧ, ಬಿಜೆಪಿ ವಿರೋಧಗಳನ್ನೇ ತಮ್ಮ ಮುಖ್ಯ ಕಾರ್ಯಸೂಚಿಯನ್ನಾಗಿ ಮಾಡಿಕೊಂಡರು. ಜಾತಿವಾರು, ಭಾಷಾವಾರು, ಉತ್ತರ -ದಕ್ಷಿಣ, ಆರ್ಯ- ದ್ರಾವಿಡ, ಬ್ರಾಹ್ಮಣ-ದಲಿತ ಭೇದಭಾವಗಳಿಗೆ ಇಂಬು ಕೊಟ್ಟು ಹಿಂದು ಸಮಾಜ ದುರ್ಬಲವಾಗಿರುವಂತೆ ನೋಡಿಕೊಂಡರು.

ಚುನಾವಣೆಯಲ್ಲಿ ಗೆಲ್ಲಲು ಜನಗಳ ಮತಗಳೇ ಮುಖ್ಯ. ಅದಕ್ಕಾಗಿ ಅಲ್ಪಸಂಖ್ಯಾತರನ್ನು, ಅದರಲ್ಲೂ ಸಗಟು ಮತ ನೀಡುವ ಮುಸ್ಲಿಮರನ್ನು ಇನ್ನಿಲ್ಲದಂತೆ ತುಷ್ಟೀಕರಿಸಲು ಪ್ರಯತ್ನಶೀಲರಾದರು. ಜೊತೆಗೆ ಹಿಂದುಗಳಲ್ಲಿರುವ ಹಿಂದುಳಿದ ವರ್ಗಗಳವರ ಮನದಲ್ಲಿ ತಪ್ಪು ಭಾವನೆ ಬೆಳೆಸಿ ತಮ್ಮ ಮತಬ್ಯಾಂಕಿಗೆ ಸೇರಿಸಿಕೊಂಡರು. ಹೀಗೆ ಆರೆಸ್ಸೆಸ್ - ಬಿಜೆಪಿ ಏಕಾಂಗಿಯಾದವು.

ಆದರೆ ಸಂಘದ ನೂರು ವರ್ಷಗಳ ಸತತ ಪ್ರಯತ್ನ, ದೇಶ ಒಡೆಯುವವರ ವಿರುದ್ಧ ಹೋರಾಟದ ಫಲವಾಗಿ ಕ್ರಮೇಣ ಹಿಂದುಗಳಲ್ಲಿನ ಒಂದು ದೊಡ್ಡ ವರ್ಗವು ಹಿಂದು ಸಂಘಟನೆಯ ಬೆನ್ನಿಗೆ ನಿಂತಿತು. ವಾಜಪೇಯಿ, ಮೋದಿಯವರಂಥ ಆರೆಸ್ಸೆಸ್ ಪ್ರಚಾರಕರು ಪ್ರಧಾನಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಆದರೆ ಕಾಂಗ್ರೆಸ್ ನಿರಂತರ ಬ್ರೈನ್ ವಾಶ್ ಮಾಡಿಟ್ಟಂತಹ ಮುಸ್ಲಿಂ ಸಮುದಾಯ ಅವರ ಸುಳ್ಳುಗಳನ್ನು ನಂಬಿ ಮತ್ತೆ ಸಂಘಟಿತವಾಯಿತು. 70 ವರ್ಷ ಸತತ ಅಧಿಕಾರದಲ್ಲಿದ್ದ ಕಾಂಗ್ರೆಸಿನ ಓಲೈಕೆಯಿಂದಾಗಿ ಧೈರ್ಯ ತುಂಬಿಕೊಂಡ ಮುಸ್ಲಿಂ ಸಮುದಾಯದ ಒಂದು ವರ್ಗವು ಹಿಂದು ವಿರೋಧ, ಆರೆಸ್ಸೆಸ್ ವಿರೋಧದಲ್ಲಿ ಬಹಿರಂಗವಾಗಿ ತೊಡಗಿತು. ಮದರಸಾಗಳಲ್ಲಿ ಕೂಡಾ ಹಿಂದು ದ್ವೇಷವನ್ನು ಹರಡಲಾಯಿತು. ಇದೀಗ ಭಾರತದ ಮುಸ್ಲಿಮರ ಒಂದು ಸಣ್ಣ ವರ್ಗ, ವಿಶೇಷವಾಗಿ ಶಿಕ್ಷಿತ ಎಳೆಪೀಳಿಗೆಯವರು ಉಗ್ರವಾದಿ ಮನಸ್ಥಿತಿ ಬೆಳೆಸಿಕೊಳ್ಳುತ್ತಿದ್ದಾರೆ.

ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ಸರಕಾರವು ಜಮ್ಮು ಕಾಶ್ಮೀರಕ್ಕೆ 370 ವಿಧಿ ಮೂಲಕ ವಿಶೇಷ ಸ್ಥಾನಮಾನ ನೀಡಿತು. ಕಾಶ್ಮೀರಿ ಪಂಡಿತರ ನರಮೇಧದ ನೋಡಿಯೂ ಕ್ರಮ ತೆಗೆದುಕೊಳ್ಳಲಿಲ್ಲ, ಒರ್ವ ಬಿಂದ್ರನ್‌ವಾಲೆಯನ್ನು ಸೃಷ್ಟಿಸಿ ಪಂಜಾಬಿನ ಸಿಕ್ಖರು ಮತ್ತು ಹಿಂದುಗಳ ಮಧ್ಯೆ ಒಡಕು ಸೃಷ್ಟಿಸಿತು. ಪಂಜಾಬಿನಲ್ಲಾದ ಖಲಿಸ್ತಾನಿ ಭಯೋತ್ಪಾದನೆ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಂತರ ದಿಲ್ಲಿಯಲ್ಲಿ ಸಾವಿರಾರು ಸಿಕ್ಖರ ನರಮೇಧ ನಡೆಯಿತು. ಇದಕ್ಕೆ ಕಾಂಗ್ರೆಸ್ ನಾಯಕರೇ ಕಾರಣ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗೆ ಪಾಕಿಸ್ತಾನ ವಿಭಜನೆ, ಹಿಂದು ಮಾರಣ ಹೋಮ, ಕಾಶ್ಮೀರಿ ಪಂಡಿತರ ನರಮೇಧ ಇವುಗಳಿಂದ ಕಾಂಗ್ರೆಸ್ ನಾಯಕರ ಕೈ ರಕ್ತಸಿಕ್ತವಾಗಿದೆ.

ಈಗ ಕಾಂಗ್ರೆಸ್ ಪಕ್ಷವು ಅಧಿಕಾರ ಕಳೆದುಕೊಂಡರೂ ಅದರ ತುಷ್ಟೀಕರಣದಿಂದಾಗಿ ಬೆಳೆದ ಇಸ್ಲಾಮಿಕ್ ಭಯೋತ್ಪಾದನೆಯು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಪಾಕಿಸ್ತಾನ ಹಾಗೂ ವಿದೇಶಗಳಿಂದ ದೊಡ್ಡಮಟ್ಟದ ಹಣವೂ ಹರಿದು ಬರುತ್ತಿದೆ. ಜೊತೆಗೆ ಹಿಂದುಗಳ ಒಂದು ವರ್ಗ, ಅಂದರೆ ಕಾಂಗ್ರೆಸ್ ಮತ್ತು ಪ್ರಾದೇಶಿಕ ವಿರೋಧ ಪಕ್ಷಗಳ ಬೆಂಬಲವೂ ತಮಗಿದೆ ಎಂಬ ಭರವಸೆ ಈ ಭಯೋತ್ಪಾದಕರಿಗೆ ಇದೆ.

ಸದ್ಯ ಮೋದಿ ಸರಕಾರ ಇರುವುದರಿಂದ, ಅಮಿತ್ ಶಾ, ಅಜಿತ್ ದೋವಲ್‌ರಂತಹ ಸಮರ್ಥ ನಾಯಕರು ಇರುವುದರಿಂದ ಭಯೋತ್ಪಾದಕರನ್ನು ಮಟ್ಟ ಹಾಕಲಾಗುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪರಿವರ್ತನೆ ತರಲಾಗುತ್ತಿದೆ. ಅಲ್ಪಸಂಖ್ಯಾತರೂ ಹಿಂದುಗಳೇ ಎಂಬುದಾಗಿ ಹಿಂದು ನಾಯಕರು ಹೇಳಿಕೆ ನೀಡುತ್ತಿದ್ದಾರೆ.

ಯಾವ ರೀತಿಯಲ್ಲಿ ಹಿಂದು ಸಮಾಜದ ಅಸಂಘಟನೆಯಿಂದ ಹಿಂದುಗಳಲ್ಲಿ ದೌರ್ಬಲ್ಯ ಆವರಿಸಿತೋ ಅದನ್ನು ಮೊದಲು ದೂರ ಮಾಡಬೇಕಾಗಿದೆ. ಹಿಂದು ಸಮಾಜದಲ್ಲಿ ಐಕ್ಯತೆ ಮೂಡಿಸಿ, ಗುಲಾಮಿ ಮಾನಸಿಕತೆಯಿಂದ, ಸ್ವಾರ್ಥಪರತೆಯಿಂದ ಅವರನ್ನು ಹೊರತರಬೇಕಾಗಿದೆ. ಅದಕ್ಕೆ ಇಂದು ವಾತಾವರಣ ಅನುಕೂಲಕರವಾಗಿದೆ. ಸರಕಾರವೂ ಅನುಕೂಲಕರವಾಗಿದೆ.

ಎರಡು ಹೈಸ್ಪೀಡ್ ರೈಲು ಮಾರ್ಗ

- ಚೆನ್ನೈ-ಮೈಸೂರು, ಚೆನ್ನೈ-ಬೆಂಗಳೂರು ಆಗಿ ಬದಲು
- ಬೆಂಗಳೂರು-ಹೈದರಾಬಾದ್ ನಡುವೆ ಹೊಸ ಮಾರ್ಗ



ಹೊಸದಿಲ್ಲಿ: ಕೇಂದ್ರ ಸರ್ಕಾರ ಘೋಷಿಸಿರುವ ಹೊಸ ಹೈ-ಸ್ಪೀಡ್ ರೈಲು ಕಾರಿಡಾರ್ ಯೋಜನೆಗಳಲ್ಲಿ ಕರ್ನಾಟಕಕ್ಕೆ ಮಹತ್ವದ ಎರಡು ವೇಗ ರೈಲು ಮಾರ್ಗಗಳು ಲಭಿಸಿರುವುದು ವಿಶೇಷವಾಗಿದ್ದು, ಹೈದರಾಬಾದ್-ಬೆಂಗಳೂರು ಹಾಗೂ ಚೆನ್ನೈ-ಬೆಂಗಳೂರು ಕಾರಿಡಾರ್‌ಗಳಿಗೆ ಆದ್ಯತೆ ನೀಡಲಾಗಿದೆ.

ಹಿಂದಿನ ವಿಸ್ತೃತ ಯೋಜನಾ ವರದಿಗಳ (ಡಿಪಿಆರ್) ಆಧಾರದ ಮೇಲೆ ರೂಪುಗೊಂಡಿದ್ದ ಏಳು ಹೈ-ಸ್ಪೀಡ್ ಕಾರಿಡಾರ್‌ಗಳ ಪಟ್ಟಿಯನ್ನು ಕೇಂದ್ರ ಸರ್ಕಾರ ಮರುಪರಿಶೀಲನೆ ಮಾಡಿ, ಹಲವು ಮಾರ್ಗಗಳಲ್ಲಿ ಬದಲಾವಣೆ ಮಾಡಿದ ಬಳಿಕ ಅಂತಿಮ ರೂಪುರೇಷೆ ಪ್ರಕಟಿಸಿದೆ.

ಈ ಪ್ರಕ್ರಿಯೆಯಲ್ಲಿ ದೆಹಲಿ-ಅಹಮದಾಬಾದ್ ಮಾರ್ಗದ ಬದಲು ಹೈದರಾಬಾದ್-ಬೆಂಗಳೂರು ಕಾರಿಡಾರ್ ಸೇರಿಸಲ್ಪಟ್ಟರೆ, ಚೆನ್ನೈ-ಮೈಸೂರು ಮಾರ್ಗವನ್ನು ಪರಿಷ್ಕರಿಸಿ ಚೆನ್ನೈ-ಬೆಂಗಳೂರು ಕಾರಿಡಾರ್ ಆಗಿ ರೂಪಿಸಲಾಗಿದೆ. ಇದರಿಂದ ದಕ್ಷಿಣ ಭಾರತದ ಪ್ರಮುಖ ಐಟಿ ಮತ್ತು ಕೈಗಾರಿಕಾ ಕೇಂದ್ರವಾದ ಬೆಂಗಳೂರಿಗೆ ಎರಡು ವೇಗ ರೈಲು ಸಂಪರ್ಕ ಸಿಗುವಂತಾಗಿದೆ.

ರೈಲ್ವೆ ವಲಯದ ತಜ್ಞರ ಪ್ರಕಾರ, ಈ ಎರಡೂ ಕಾರಿಡಾರ್‌ಗಳು ಜಾರಿಯಾದರೆ ಬೆಂಗಳೂರು-ಹೈದರಾಬಾದ್ ಹಾಗೂ ಬೆಂಗಳೂರು-ಚೆನ್ನೈ ನಡುವಿನ ಪ್ರಯಾಣ ಸಮಯದಲ್ಲಿ ಭಾರೀ ಇಳಿಕೆ ಸಂಭವಿಸುವುದರ ಜೊತೆಗೆ, ಕೈಗಾರಿಕೆ, ಐಟಿ, ಲಾಜಿಸ್ಟಿಕ್ಸ್ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ.

ಇದಲ್ಲದೆ ಮೂಲ ಯೋಜನೆಗಳಲ್ಲಿ ಪ್ರಸ್ತಾಪವಾಗಿದ್ದ ಹಲವಾರು ಮಾರ್ಗಗಳಿಗೆ ತಿದ್ದುಪಡಿ ಮಾಡಲಾಗಿದೆ. ದಿಲ್ಲಿ-ವಾರಾಣಸಿ ಕಾರಿಡಾರ್ ಮಾತ್ರ ಮೂಲ ರೂಪದಲ್ಲೇ ಉಳಿದಿದ್ದು, ಉಳಿದ ಆರು ಮಾರ್ಗಗಳಲ್ಲಿ ಬದಲಾವಣೆ ಅಥವಾ ಪರ್ಯಾಯ ಮಾರ್ಗಗಳನ್ನು ಕೇಂದ್ರ ಸರ್ಕಾರ ಅಂತಿಮಗೊಳಿಸಿದೆ.

ಮುಗಿಯದ ರಗಳೆ

ಪುಟ ೧ ➡ ವಾರ್‌ಗೆ ತೆರಳುವ ಮುನ್ನ ವ್ಯಾನ್ಸ್ ಕಠಿಣ ಸಂದೇಶ ರವಾನಿಸಿದ್ದು, 'ಇರಾನ್ ಉತ್ತಮ ಸಂಕಲ್ಪದಿಂದ ಬಂದರೆ ಅಮೆರಿಕ ಮಾತುಕತೆಗೆ ಸಿದ್ಧ; ಆದರೆ ನಮ್ಮ ಜತೆ ಆಟವಾಡಲು ಬಯಸಿದರೆ ನಮ್ಮ ಪ್ರತಿಕ್ರಿಯೆ ಗಟ್ಟಿಯಾಗಿರಲಿದೆ' ಎಂದು ಎಚ್ಚರಿಸಿದರು. ಇದಕ್ಕೆ ಪ್ರತಿಯಾಗಿ, ಲೆಬನಾನ್ ಮೇಲಿನ ಇಸ್ರೇಲ್ ದಾಳಿ ತಕ್ಷಣ ನಿಲ್ಲದಿದ್ದರೆ ಮಾತುಕತೆಯಿಂದ ಹಿಂದೆ ಸರಿಯುವುದಾಗಿ ಇರಾನ್ ಘೋಷಿಸಿದೆ. ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್, 'ಲೆಬನಾನ್ ಯುದ್ಧ ವಿರಾಮ ಮತ್ತು ಇರಾನ್‌ನ ಸ್ಥಗಿತ ಆಸ್ತಿಗಳ ಬಿಡುಗಡೆ ಆಗುವವರೆಗೂ ಮಾತುಕತೆ ಆರಂಭವೇ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ. ಇದಕ್ಕೂ ಮೊದಲು ಪಾಕಿಸ್ತಾನದಲ್ಲಿನ ಇರಾನ್ ರಾಯಭಾರಿ ರೆಜಾ ಅಮಿರ್ ಮೋಗ್ದಮ್ 10 ಸದಸ್ಯರ ಪ್ರತಿನಿಧಿ ಮಂಡಳಿ ಇಸ್ಲಾಮಾಬಾದ್‌ಗೆ ಆಗಮಿಸಲಿದೆ ಎಂದು ಹೇಳಿದ್ದರೂ, ನಂತರ ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದು ಕುತೂಹಲ ಹೆಚ್ಚಿಸಿದೆ.


ಟ್ರಂಪ್‌ಗೆ ಟೆನ್ಶನ್

ಸದ್ಯ ಇರಾನ್-ಅಮೆರಿಕ ನಡುವೆ ಕದನ ವಿರಾಮ ಏರ್ಪಟ್ಟಿದ್ದರೂ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿರುವುದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಟೆನ್ಷನ್ ತಂದಿದೆ ಎಂದು ಮೂಲಗಳು ಹೇಳಿವೆ. ಇದರ ಬೆನ್ನಲ್ಲೇ ಅವರು, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಕರೆ ಮಾಡಿ, ದಾಳಿ ನಿಲ್ಲಿಸುವಂತೆ ಹೇಳಿದ್ದಾರೆ. ಇದಾದ ಬಳಿಕ ನೆತನ್ಯಾಹು ಲೆಬನಾನ್ ಮೇಲೆ ದಾಳಿ ಮಾಡುವುದಿಲ್ಲ ಎಂದು ಹೇಳಿ ಕದನ ವಿರಾಮ ಘೋಷಿಸಿದ್ದಾರೆ. ಅಲ್ಲದೆ, ಶಾಂತಿ ಮಾತುಕತೆಯಲ್ಲಿ ಭಾಗಿಯಾಗುವ ಬಗ್ಗೆ ಲೆಬನಾನ್ ಕೂಡ ಇಚ್ಛೆ ವ್ಯಕ್ತಪಡಿಸಿದೆ.

ಮಾತುಕತೆ ವಿಫಲವಾದರೆ ಮತ್ತೊಮ್ಮೆ ದಾಳಿ: ಟ್ರಂಪ್

ಪುಟ ೧ ➡ ಪಾಕಿಸ್ತಾನದಲ್ಲಿ ನಡೆಯಲಿರುವ ಮಾತುಕತೆಗಳು ಯಾವುದೇ ಒಪ್ಪಂದಕ್ಕೆ ದಾರಿ ಮಾಡಿಕೊಡದಿದ್ದರೆ, ಈ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಲಾಗುವುದು ಎಂದು ಟ್ರಂಪ್ ಹೇಳಿದ್ದಾರೆ.

'ನಾವು ಒಂದು ಹೊಸ ಆರಂಭವನ್ನು ಮಾಡುತ್ತಿದ್ದೇವೆ. ನಮ್ಮ ನೌಕೆಗಳನ್ನು ಅತ್ಯುತ್ತಮ ಗುಂಡುಮದ್ದು ಮತ್ತು ಶಸ್ತ್ರಾಸ್ತ್ರಗಳಿಂದ ತುಂಬುತ್ತಿದ್ದೇವೆ. ಹಿಂದಿನದಕ್ಕಿಂತಲೂ ಹೆಚ್ಚು ಶಕ್ತಿಶಾಲಿ ಸಜ್ಜುಗೊಳಿಸಿದ್ದೇವೆ,' ಎಂದು ಅವರು ನ್ಯೂಯಾರ್ಕ್ ಪೋಸ್ಟ್‌ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. 'ಒಪ್ಪಂದವಾಗದಿದ್ದರೆ, ನಾವು ಅವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸುತ್ತೇವೆ,' ಎಂದು ಅವರು ಎಚ್ಚರಿಸಿದ್ದಾರೆ. ಇದಕ್ಕೂ ಮೊದಲು, ತಮ್ಮ ಸಾಮಾಜಿಕ ಜಾಲತಾಣ ಟ್ರುತ್ ಸೋಶಿಯಲ್ ನಲ್ಲಿ ಟ್ರಂಪ್ 'ವಿಶ್ವದ ಅತ್ಯಂತ ಶಕ್ತಿಶಾಲಿ ರೀಸೆಟ್' ಎಂಬ ಸಂಕ್ಷಿಪ್ತ ಸಂದೇಶವನ್ನು ಹಂಚಿಕೊಂಡಿದ್ದರು.



ನಿತ್ಯ 15 ಶಿಪ್‌ಗೆ ಒಪ್ಪಿಗೆ

ಇಸ್ರೇಲ್‌ನಿಂದ ಲೆಬನಾನ್ ಮೇಲೆ ದಾಳಿ ಮುಂದುವರಿದಿರುವಂತೆಯೇ, ಇರಾನ್ ಹಾರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಿದೆ. ಅಲ್ಲದೆ, ಮುಂದೆಯೂ ದಿನಕ್ಕೆ ಕೇವಲ 15 ಶಿಪ್‌ಗಳಿಗಷ್ಟೇ ಇಲ್ಲಿಂದ ತೆರಳಲು ಅವಕಾಶ ನೀಡುವುದಾಗಿ ಅದು ಹೇಳಿದೆ. ಅಮೆರಿಕ ಮತ್ತು ಇರಾನ್ ದೇಶಗಳು ಕದನ ವಿರಾಮ ಘೋಷಿಸಿದ್ದರೂ, ಇಸ್ರೇಲ್ ಲೆಬನಾನ್ ಮೇಲೆ ದಾಳಿ ಮುಂದುವರಿಸಿತ್ತು. ಸಿಟ್ಟಿಗೆದ್ದಿದ್ದ ಇರಾನ್, ಶಾಂತಿ ಮಾತುಕತೆಗೆ ಬರುವುದಿಲ್ಲ ಎಂಬ ಎಚ್ಚರಿಕೆ ನೀಡಿತ್ತು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

0 ಬಿಜೆಪಿ ಆರೆಸ್ಸೆಸ್ಸನ್ನು ವಿಷದ ಸರ್ಪ ಎನ್ನುವ ಹಾಗೆ ಖರ್ಗೆಯವರು ಮಂಗಳೂರಿನಲ್ಲಿ ಕುಕ್ಕರ್ ಸ್ಫೋಟ ಮಾಡಿದವರು ಯಾರು ಎಂಬುದನ್ನು ತಿಳಿಸಲಿ, ಇವರಿಗೆ ನಕ್ಸಲರು, ಭಯೋತ್ಪಾದಕರು ದೇವದೂತರಂತೆ ಕಾಣಿಸುತ್ತಾರೆ -ಆರ್.ಅಶೋಕ್
-ನಾವೆಲ್ಲ ಭಕ್ತಿಯಿಂದ ಪೂಜಿಸುವ ನಾಗರ ಹಾವಿಗೆ ವಿಷವಿದೆ ನಿಜ, ಅದಿಲ್ಲದೆ ಹೋಗಿದ್ದಲ್ಲಿ ಅದನ್ನು ಬದುಕಲು ದುರ್ಜನರು ಬಿಡುತ್ತಿರಲಿಲ್ಲ, ಆದರೆ ಅದು ಸುಮ್ಮನಿರುವ ಸಜ್ಜನರ ತಂಟೆಗೆ ಬರುವುದಿಲ್ಲ, ತೊಂದರೆ ಮಾಡುವ ದುರ್ಜನರ ಮೇಲೆ ವಿಷವನ್ನು ಕಾರದೆ ಬಿಡುವುದಿಲ್ಲ!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ, ಖಾಸಗಿಯಾಗಿಯೂ ನಿಮ್ಮ ಹಿತಾಸಕ್ತಿಗೆ ಧಕ್ಕೆ ಒದಗಲಿದೆ. ತಾಳ್ಮೆಯಿಂದ ಪರಿಸ್ಥಿತಿ ನಿಭಾಯಿಸಿ. ದುಡುಕಿನ ವರ್ತನೆ ತೋರದಿರಿ.

ವೃಷಭ ವೈಯಕ್ತಿಕವಾಗಿ ಅನಿರೀಕ್ಷಿತ ಸನ್ನಿವೇಶ. ವೃತ್ತಿ ಸಂಬಂಧಿತ ಪ್ರಯಾಣ ಸುಖಕರ, ಉದ್ದೇಶ ಸಾಧನೆ. ಆಪ್ತರೊಬ್ಬರು ಮುನಿಸು ತೋರಿಯಾರು.

ಮಿಥುನ ಕೆಲ ವಿಷಯದಲ್ಲಿ ಅತಿರೇಕದ ಉತ್ಸುಕತೆ ತೋರದಿರಿ. ಬಳಿಕ ನಿರಾಶೆ ಆದೀತು. ಆಹಾರದಲ್ಲಿ ಹಿತಮಿತ ಸಾಧಿಸಿ. ಧನವ್ಯಯ ನಿಯಂತ್ರಣ.

ಕಟಕ ಅಹಿತಕರ ಭಾವ. ಮಾಡುವ ಕೆಲಸದಲ್ಲಿ ಅನಿಶ್ಚಿತತೆ. ಅಧಿಕ ಕೆಲಸದ ಒತ್ತಡ. ಆತುರ ತೋರದೆ ಸಮಾಧಾನದಿಂದ ವ್ಯವಹರಿಸಿ.

ಸಿಂಹ ನಿಮ್ಮ ಕಾರ್ಯಶೈಲಿಗೆ ಇನ್ನಷ್ಟು ಹೊಸತನ ಅಳವಡಿಸಿ. ಕೆಲಸದಲ್ಲಿ ಸದಾ ಧಾವಂತ ತೋರುವ ನೀವು ಸ್ವಲ್ಪ ನಿಧಾನಗತಿ ತೋರುವುದು ಒಳಿತು.

ಕನ್ಯಾ ನಿರ್ವಹಣೆಯಿಂದ ಇತರರನ್ನು ಮೆಚ್ಚಿಸುವ ಪ್ರಯತ್ನ ಫಲ ನೀಡಲಿದೆ. ಆದರೆ ವಿನಯ ಬಿಡದಿರಿ. ಅಹಂಭಾವದ ವರ್ತನೆ ಟೀಕೆಗೆ ಗುರಿಯಾದೀತು.

ತುಲಾ ವೃತ್ತಿಯಲ್ಲಿ ನಿಮಗೆ ಪೂರಕ ಬೆಳವಣಿಗೆ. ಬುದ್ಧಿವಂತಿಕೆಯಿಂದ ಹಣ ವ್ಯಯಿಸಿ. ಆತ್ಮೀಯರ ಸಂಗದಲ್ಲಿ ಹರುಷ. ಖರ್ಚು ನಿಯಂತ್ರಣ.

ವೃಶ್ಚಿಕ ಹೆಚ್ಚು ಹೊಣೆ. ನೆರವು ಯಾಚಿಸಲು ಹಿಂಜರಿಕೆ ಬೇಡ. ಅವಿವಾಹಿತರಿಗೆ ಸಂಗಾತಿ ಹುಡುಕಾಟ ಕಷ್ಟವೆನಿಸಲಿದೆ. ದೇವರ ಪ್ರಾರ್ಥನೆ ಮಾಡಿರಿ.

ಧನು ಅಧಿಕ ಕೆಲಸದ ನಡುವೆಯೂ ಸಂತೋಷ ಆಚರಣೆಯ ಅವಕಾಶ. ಪ್ರೀತಿಯಲ್ಲಿ ಯಶಸ್ಸು, ಕೌಟುಂಬಿಕ ಸಾಮರಸ್ಯ. ಆಪ್ತರಿಂದ ಧನಪ್ರಾಪ್ತಿ.

ಮಕರ ಆಪ್ತರ ಸಾಮೀಪ್ಯದಲ್ಲಿ ಖುಷಿ ಕಾಣುವಿರಿ. ಆದರೆ ಅವರ ಮೇಲೆ ಅಧಿಪತ್ಯ ಸಾಧಿಸುವ ಪ್ರಯತ್ನ ಬೇಡ. ಸೌಹಾರ್ದದಿಂದ ಕಾರ್ಯ ಸಾಧಿಸಿರಿ.

ಕುಂಭ ಆತ್ಮವಿಶ್ವಾಸ ಮತ್ತು ಸಮರ್ಥ ನಿರ್ವಹಣೆ ನಿಮ್ಮ ಕುರುಹಾಗಲಿದೆ. ಅನ್ಯರ ದೌರ್ಬಲ್ಯವನ್ನು ನಿಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುವಿರಿ.

ಮೀನ ಏರುಪೇರು ಇಲ್ಲದ ಸಾಧಾರಣ ದಿನ. ಹಾಗಾಗಿ ದೊಡ್ಡ ಕಾರ್ಯಕ್ಕೆ ಕೈ ಹಾಕದಿರಿ. ವಿವಾಹಿತರಿಗೆ ಶುಭ ಬೆಳವಣಿಗೆ. ಆರ್ಥಿಕ ಪ್ರಗತಿಗೆ ಅಡ್ಡಿ ತೋರಲಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30
ಅದೃಷ್ಟ ಸಂಖ್ಯೆ: 8,2,5.0

ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಕಿವಿಮಾತು

ಬಲವರ್ಧನೆಗೆ ಸಂಕಲ್ಪ ಮಾಡಿ



ವಿಜಯನಗರ: ರಾಷ್ಟ್ರವಾದದ ನೆಲೆಗಟ್ಟಿನಲ್ಲಿ ಸ್ಥಾಪನೆಗೊಂಡಿರುವ ರಾಷ್ಟ್ರೀಯ ಸಹಕಾರ ಭಾರತಿ ಇನ್ನೆರಡು ವರ್ಷಗಳಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಿದೆ. ಅದಕ್ಕೂ ಮುನ್ನವೇ ಸಹಕಾರ ಭಾರತಿಯನ್ನು ಮತ್ತಷ್ಟು ವಿಸ್ತರಣೆಯೊಂದಿಗೆ ಬಲವರ್ಧನೆಗೆ ಎಲ್ಲರೂ ಪಣತೊಡಬೇಕು ಎಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಉದಯ್ ಜೋಶಿ ಹೇಳಿದರು.

ಹೊಸಪೇಟೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಹಕಾರ ಭಾರತಿಯ ರಾಜ್ಯ ಕಾರ್ಯಕಾರಿ ಹಾಗೂ ಪ್ರಮುಖ ಸಹಕಾರಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವೆಯಲ್ಲಿರುವ ಪ್ರಮುಖ ಪ್ರಕೋಷ್ಠಗಳಲ್ಲಿ ಸಹಕಾರ ಭಾರತಿಯೂ ಒಂದು. ಆದರೆ, ಇದು ಆರಂಭಗೊಂಡಾಗ ಆರ್‌ಎಸ್‌ಎಸ್‌ನ ಶೇ.30ರಷ್ಟು ಜನರು ಸಹಕಾರ ರಂಗದಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಈಗ ಎಲ್ಲೆಡೆ ಸಹಕಾರ ಭಾರತಿ ಸಹಯೋಗದಲ್ಲಿ ಎಲ್ಲೆಡೆ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಸಹಕಾರ ಭಾರತಿ ಸಂಸ್ಥೆಯೂ ದೇಶಾದ್ಯಂತ ವಿಸ್ತಾರಗೊಂಡಿದೆ. ಸಹಕಾರ ಭಾರತಿ ಪರಿಶ್ರಮದಿಂದಾಗಿ ಕೇಂದ್ರ ಸರ್ಕಾರ ಪ್ರತ್ಯೇಕವಾದ ಸಹಕಾರ ಸಚಿವಾಲಯವನ್ನೂ ಸ್ಥಾಪಿಸಿ, ಸಚಿವರನ್ನೂ ನೇಮಿಸಿತು. ಪರಿಣಾಮ ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಸಾಧ್ಯವಾಗುತ್ತಿದೆ. ಇದು ನಮ್ಮ ಸಂಸ್ಥೆಯ ಹೆಮ್ಮೆ ಎಂದು ತಿಳಿಸಿದರು.

ನಮ್ಮ ಸಂಸ್ಕೃತಿ, ಇತಿಹಾಸ, ಪರಂಪರೆಯ ಬಗ್ಗೆ ನಾವು ಮಾತನಾಡುವುದನ್ನು ಬಿಡಬಾರದು. ಇಂತಹ ಚರ್ಚೆ, ಸಂವಾದಗಳೇ ನಮ್ಮ ಸಂಸ್ಕೃತಿಯನ್ನು ಉಳಿಸಲು ಇರುವ ದಾರಿ. ಸಂಸ್ಕೃತಿ ಗಟ್ಟಿಯಾದಷ್ಟೂ ಸಹಕಾರ ಚಳವಳಿಯೂ ಪ್ರಬಲವಾಗುತ್ತದೆ. ಸಹಕಾರ ಕ್ಷೇತ್ರದಲ್ಲಿರುವ ಅನೇಕ ಲೋಪದೋಷಗಳು, ಸಮಸ್ಯೆ, ಸವಾಲುಗಳನ್ನು ಮೆಟ್ಟಿನಿಲ್ಲುವ ಜೊತೆಗೆ ದೇಶದ ಅಭಿವೃದ್ಧಿಗೆ ತನ್ನದೇ ಆದ ಯೋಗದಾನ ನೀಡಬೇಕು. ಅದಕ್ಕಾಗಿ ಸಂಸ್ಥೆ 50 ವರ್ಷ ಪೂರ್ಣಗೊಳಿಸುವ ವೇಳೆಗೆ ಸಂಘಟನೆಯನ್ನು ಬಲಪಡಿಸಬೇಕು. ವಿಸ್ತರಿಸುವ ಜೊತೆಗೆ ಬಿನಾ ಸಂಸ್ಕಾರ ನಹಿ ಸಹಕಾರ್, ಬಿನಾ ಸಹಕಾರ್ ನಹೀ ಉದ್ಧಾರ್ ಎಂಬ ಸಂಕಲ್ಪವನ್ನು ಸಾಕಾರಗೊಳಿಸಬೇಕು ಎಂದು ಸಲಹೆ ನೀಡಿದರು.

ಕೊಟ್ಟೂರು ಸಂಸ್ಥಾನ ಮಠದ ಜ.ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಹಕಾರ ಎಂಬುದೇ ಮಾನವ ಬದುಕಿನ ಮೂಲ ತಿರುಳು. ಸಹಕಾರವಿಲ್ಲದೇ ಜೀವನದಲ್ಲಿ ಯಾರೂ, ಏನನ್ನೂ ಸಾಧಿಸಲಾರರು. ಪರಸ್ಪರ ಸಹಕಾರದೊಂದಿಗೆ ಎಲ್ಲರೂ ದೇಶ ಕಟ್ಟುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೆಂಡೆ, ಸಹಕಾರ ಭಾರತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭುದೇವ ಚೌರಾಸಿಯಾ, ರಾಜ್ಯ ಪ್ರಧಾನ ಕಾರ್ಯದರ್ಶಿ ನರಸಿಂಹ ಕಾಮತ್, ಕಾರ್ಯಕಾರಿಣಿ ಸಮಿತಿ ಸಂಚಾಲಕ ಜಿ.ನಂಜನಗೌಡ, ರಾಜ್ಯ ಮಹಿಳಾ ಪ್ರಮುಖ್ ವಿದ್ಯಾವೈ, ವಿಜಯನಗರ ಜಿಲ್ಲಾ ಅಧ್ಯಕ್ಷ ಕಿರಿಬಸವರಾಜ್ ಬದಾಮಿ ಉಪಸ್ಥಿತರಿದ್ದರು.

ಆರು ಜಿಲ್ಲೆಗಳಲ್ಲಿ ಮಹಿಳಾ ಸಮಿತಿ

ಈ ಅವಧಿಯಲ್ಲಿ ಎರಡನೇ ಬಾರಿಗೆ ರಾಜ್ಯ ಕಾರ್ಯ ಕಾರಿ ಸಮಿತಿ ಸಭೆ ನಡೆಯುತ್ತಿದೆ. ಸಹಕಾರ ಭಾರತಿಯನ್ನು ಬೇರು ಮಟ್ಟದಿಂದ ಬಲಪಡಿಸಲು ಈಗಾಗಲೇ ರಾಜ್ಯದ 24 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು, ಜಿಲ್ಲಾ ಮಟ್ಟದ ಅಭ್ಯಾಸ ವರ್ಗವನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. 6 ಜಿಲ್ಲೆಗಳಲ್ಲಿ ಮಹಿಳಾ ಸಮಿತಿಗಳನ್ನು ರಚಿಸಿದ್ದು, 2 ಜಿಲ್ಲೆಗಳಲ್ಲಿ ಮಹಿಳಾ ಅಭ್ಯಾಸ ವರ್ಗ ನಿರ್ವಹಿಸಲಾಗಿದೆ ಎಂದು ಸಹಕಾರ ಭಾರತಿ ರಾಜ್ಯ ಅಧ್ಯಕ್ಷ ಪ್ರಭುದೇವ ಮಾಗನೂರ್ ಮಾಹಿತಿ ನೀಡಿದರು.

ಬೆಳ್ಳಿ ಹಬ್ಬದ ಜನತಾ ಸಮಾವೇಶ ಇಂದು

ಪುಟ ೧ ➡ ಮುಂಬರುವ ಗ್ರೇಟರ್ ಬೆಂಗಳೂರು ಚುನಾವಣೆ ಸೇರಿದಂತೆ ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ಜೆಡಿಎಸ್ ಗ್ರೇಟರ್ ಬೆಂಗಳೂರು ಸಮಾವೇಶವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಪಕ್ಷದ ಮುಖಂಡರು ಕಾರ್ಯಕರ್ತರ ಜತೆಗೆ ಮಹತ್ವದ ಸಭೆ ನಡೆಸಿದ್ದಾರೆ. ಈ ಜನತಾ ಸಮಾವೇಶವು ಬೆಂಗಳೂರು ಹಾಗೂ ಪಕ್ಷದ ಬೆಳ್ಳಿ ಹಬ್ಬದ ಸಂಭ್ರಮವಾಗಿದ್ದು, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪಕ್ಷದ ನಾಯಕರು, ಶಾಸಕರು ಮತ್ತು ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಲಾಗಿದೆ.



ಬೆಂಗಳೂರು ನಗರಕ್ಕೆ ದೇವೇಗೌಡರು ಮತ್ತು ಕುಮಾರಸ್ವಾಮಿ ಅವರ ಕೊಡುಗೆ ಅಪಾರವಾಗಿದೆ. ಬೆಂಗಳೂರು ನಗರದಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂದು ಕಾಂಗ್ರೆಸ್‌ನ ಕೆಲವರು ಹೇಳುತ್ತಿದ್ದಾರೆ. ಅವರಿಗೆ ಜಿಬಿಎ ಚುನಾವಣೆ ನಂತರ ಉತ್ತರ ನೀಡುತ್ತೇನೆ.
■ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಸಮಾವೇಶಕ್ಕೆ 1 ಲಕ್ಷಕ್ಕೂ ಅಧಿಕ ಜನ

ಪುಟ ೧ ➡ ಮಾಜಿ ಪ್ರಧಾನಮಂತ್ರಿ ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರು ಸಿಎಂ ಆಗಿದ್ದ ಅವಧಿಯಲ್ಲಿ ಬೆಂಗಳೂರಿಗೆ ನೀಡಿದ ಕೊಡುಗೆಗಳನ್ನು ಜನರಿಗೆ ತಿಳಿಸಲಾಗುವುದು ಎಂದು ತಿಳಿಸಿದ್ದಾರೆ. ಜಿಬಿಎ ಚುನಾವಣೆಯಲ್ಲೂ ಹೆಚ್ಚಿನ ಸದಸ್ಯರನ್ನು ಹೊಂದುವ ಗುರಿಯೊಂದಿಗೆ ಪಕ್ಷ ಸಂಘಟನೆ ಬಲಪಡಿಸಲು ಈ ಸಮಾವೇಶಗಳು ನೆರವಾಗಲಿವೆ. ಬೆಂಗಳೂರಿನಲ್ಲಿ ಜೆಡಿಎಸ್ ಶಕ್ತಿ ಕುಂದಿದೆ ಎಂಬ ಟೀಕೆಗಳಿಗೆ ಉತ್ತರವಾಗಿ, ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯರಾದ ಶರವಣ, ಟಿ.ಎನ್. ಜವರಾಯಿಗೌಡ, ಮಾಜಿ ಶಾಸಕರಾದ ವೈ.ಎಸ್.ವಿ.ದತ್ತ, ಕೃಷ್ಣಾರೆಡ್ಡಿ, ಮುಖಂಡರಾದ ಚೇತನ್‌ಗೌಡ, ಎಸ್. ಕೇಶವ ಮೂರ್ತಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಯರಿಗೆ 3000 ರೂ. ನೆರವು

ಪುಟ ೧ ➡ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು 'ಸಂಕಲ್ಪ ಪತ್ರ'- ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿ ಇದು 'ಸೋನಾರ್ ಬಾಂಗ್ಲಾ'ಕ್ಕಾಗಿ ಇರುವ ಮಾರ್ಗಸೂಚಿ ಎಂದು ಬಣ್ಣಿಸಿದರು. ಟಿಎಂಸಿಯ 15 ವರ್ಷಗಳ ಆಡಳಿತ ಪಶ್ಚಿಮ ಬಂಗಾಳದ ಜನತೆಯ ಪಾಲಿಗೆ ಒಂದು 'ದುಃಸ್ವಪ್ನ'ವಾಗಿತ್ತು ಎಂದ ಅವರು, ದುರಾಡಳಿತಕ್ಕಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ತೀವ್ರ ತರಾಟೆಗೆತ್ತಿಕೊಂಡರು.

ಟಿಎಂಸಿಯ ಜನವಿರೋಧಿ ಆಡಳಿತದಿಂದ ಬಂಗಾಳದ ಜನತೆ ರೋಸಿ ಹೋಗಿದ್ದು, ಈ ಚುನಾವಣೆಯನ್ನು ಟಿಎಂಸಿಯ ಭ್ರಷ್ಟಾಚಾರ, ರಾಜಕೀಯ ಹಿಂಸಾಚಾರ, ಅಕ್ರಮ ನುಸುಳುವಿಕೆ ಮತ್ತು ನಿರುದ್ಯೋಗದ ಮೇಲಿನ ಜನಮತ ಸಂಗ್ರಹವಾಗುವಂತೆ ಪರಿವರ್ತಿಸಬೇಕೆಂದು ಕರೆ ನೀಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಅಕ್ರಮ ನುಸುಳುಕೋರರ ವಿರುದ್ಧ ''ಪತ್ತೆ, ಅಳಿಸಿ ಮತ್ತು ಗಡೀಪಾರುಗೊಳಿಸಿ'' ನೀತಿಯನ್ನು ಅನುಸರಿಸಲಿದೆ. ಬಂಗಾಳದಲ್ಲಿ ಬಿಜೆಪಿಗೆ ಜನಾಶೀರ್ವಾದ ಲಭಿಸಿದಲ್ಲಿ ಅಕ್ರಮ ನುಸುಳುವಿಕೆಯ ಬಗೆಗೆ ಶೂನ್ಯ ಸಹಿಷ್ಣುತೆಯ ನೀತಿಯನ್ನು ಹೊಂದಲಿದೆ ಎಂದ ಅಮಿತ್ ಶಾ ಅವರು, ಟಿಎಂಸಿಯ ಹಿಂಸಾಯುಕ್ತ ದುರಾಡಳಿತದ ವಿರುದ್ಧ ಬಿಜೆಪಿಯ ಬಲವಾದ ನಿಲುವನ್ನು ಪ್ರಕಟಿಸಿದರು. ರಾಜ್ಯದ ಗಡಿಗಳನ್ನು ಸುರಕ್ಷಿತವಾಗಿರಿಸುವ ಭರವಸೆ ನೀಡಿರುವ ಪಕ್ಷವು, ಗೋವುಗಳ ಕಳ್ಳಸಾಗಣೆಯನ್ನು ತಡೆದು ಸರ್ಕಾರಿ ಭೂಮಿಯನ್ನು ಅತಿಕ್ರಮಣಕಾರರು ಮತ್ತು ನುಸುಳುಕೋರರಿಂದ ಮುಕ್ತಗೊಳಿಸ ಲಾಗುವುದು ಎಂದಿದೆ. ವಿಶೇಷವಾಗಿ ಉತ್ತರ 24 ಪರಗಣಾಸ್, ನಾಡಿಯಾ, ಮಾಲ್ಡಾ, ಮುರ್ಷಿದಾಬಾದ್ ಮತ್ತು ಉತ್ತರ ಬಂಗಾಳದ ಜನತೆಗೆ ಭದ್ರತೆಯ ಭರವಸೆಯನ್ನು ನೀಡಿದೆ. ವಿಶೇಷವಾಗಿ ನಿರಾಶ್ರಿತ ಮತುವಾ, ದಲಿತರನ್ನೊಳಗೊಂಡ ಹಿಂದು ಮತದಾರರಿಗೆ ಸುರಕ್ಷತೆಯ ಖಾತ್ರಿಯನ್ನು ನೀಡುವ ನಿಲುವನ್ನು ವ್ಯಕ್ತಪಡಿಸಿದೆ. ಬಿಜೆಪಿ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲಾಗುವುದು, ಈ ಮೂಲಕ ರಾಜ್ಯದ ಎಲ್ಲ ನಾಗರಿಕ ಪ್ರಜೆಗಳಿಗೂ ಒಂದೇ ಕಾನೂನನ್ನು ಅನ್ವಯಿಸಲಾಗುವುದು. ಇದೇ ವೇಳೆ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೂ ತಮ್ಮ ಮತ, ಧರ್ಮಗಳ ಆಚರಣೆಗೆ ಮುಕ್ತ ಸ್ವಾತಂತ್ರ್ಯ ನೀಡಲಾಗುವುದು ಎನ್ನುವ ಮೂಲಕ ಅಲ್ಪಸಂಖ್ಯಾತರಲ್ಲಿ ಬಿಜೆಪಿ ವಿರೋಧಿಗಳು ಬಿತ್ತಿರುವ ಆತಂಕವನ್ನು ನಿವಾರಿಸುವ ಯತ್ನವನ್ನೂ ಬಿಜೆಪಿ ಮಾಡಿದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆಗಾಗಿ ₹15000

ಪುಟ ೧ ➡ ಪೊಲೀಸ್ ಸೇರಿದಂತೆ ಎಲ್ಲ ಸರ್ಕಾರಿ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ.33ರ ಮೀಸಲಾತಿ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಉಚಿತ ಪ್ರಯಾಣದ ಭರವಸೆ ನೀಡಲಾಗಿದೆ. ಟಿಎಂಸಿ ಸರ್ಕಾರವು ಮಹಿಳೆಯರನ್ನು ಸೆಳೆಯಲು ಲಕ್ಷ್ಮೀರ್ ಭಾಂಡರ್ ಯೋಜನೆಯಲ್ಲಿ ಸಾಮಾನ್ಯ ವರ್ಗದ ಮಹಿಳೆಯರಿಗೆ ತಿಂಗಳಿಗೆ 1500 ರೂ. ಮತ್ತು ಪರಿಶಿಷ್ಟ ಜಾತಿ, ವರ್ಗದ ಮಹಿಳೆಯರಿಗೆ 1700 ರೂ.ಗಳ ನೆರವನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಈ ಭರವಸೆ ನೀಡಿದೆ. ಮಮತಾ ಸರ್ಕಾರದ ಶಾಲಾ ನೇಮಕಾತಿ ಹಗರಣದಲ್ಲಿ ಉದ್ಯೋಗ ಕಳೆದುಕೊಂಡವರಿಗೆ ವಯೋಮಿತಿಯನ್ನು 5 ವರ್ಷಗಳಷ್ಟು ವಿಸ್ತರಿಸುವ ಭರವಸೆ ನೀಡಿದೆ.

ರೈತರಿಗೆ ವಾರ್ಷಿಕ 9 ಸಾವಿರ ರೂ.

ರೈತರಿಗೆ ಪಿಎಂ ಕಿಸಾನ್ ಯೋಜನೆಯಲ್ಲಿ ಕೇಂದ್ರದ 6000 ರೂ.ಗಳಿಗೆ ರಾಜ್ಯ ಸರ್ಕಾರದ ಕಡೆಯಿಂದ 3000 ರೂ.ಗಳನ್ನು ಸೇರಿಸಿ 9000 ರೂ.ಗಳಿಗೆ ಹೆಚ್ಚಿಸಲಾಗುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ವ್ಯತ್ಯಯವನ್ನು ಸರಿಪಡಿಸಿ 7ನೇ ವೇತನಾ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವುದಾಗಿಯೂ ಬಿಜೆಪಿ ಹೇಳಿದೆ. ರಸ್ತೆ, ಬಂದರು ಅಭಿವೃದ್ಧಿ ಸೇರಿದಂತೆ ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗುವುದು. ಉತ್ತರ ಬಂಗಾಲದ ವಿವಿಧೆಡೆ ಎಐಐಎಂಎಸ್, ಐಐಟಿ, ಐಐಎಂ, ಅತ್ಯಾಧುನಿಕ ಸೌಕರ್ಯಗಳುಳ್ಳ ಹೊಸ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣದ ಭರವಸೆಯನ್ನೂ ನೀಡಲಾಗಿದೆ. ಕೋಲ್ಕತ್ತಾಕ್ಕಾಗಿ 10 ವರ್ಷಗಳ ಕ್ರಿಯಾ ಯೋಜನೆಯೊಂದನ್ನು ಪ್ರಕಟಿಸಲಾಗಿದೆ. ಚೈತನ್ಯ ಮಹಾಪ್ರಭು ಆಧ್ಯಾತ್ಮಿಕ ಸರ್ಕ್ಯೂಟ್, ರವೀಂದ್ರನಾಥ ಟಾಗೋರ್ ಹೆಸರಿನಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪನೆ, ವಂದೇಮಾತರಂ ಮ್ಯೂಸಿಯಂ ಸ್ಥಾಪನೆಯ ಬಗೆಗೂ ಭರವಸೆ ನೀಡಲಾಗಿದೆ. ಮಮತಾ ಸರ್ಕಾರದಲ್ಲಿ ಸಂದೇಶಖಾಲಿಯಲ್ಲಿ ನಡೆದ ಮಹಿಳೆಯರ ವಿರುದ್ಧದ ದೌರ್ಜನ್ಯ ಸೇರಿದಂತೆ ರಾಜಕೀಯ ಹಿಂಸಾಚಾರಗಳ ತನಿಖೆಗೆ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುವುದು ಎಂದಿದೆ.

ಸರ್ಕಾರಿ ಕಟ್ಟಡಗಳಿಂದ ಸೇವಾ ತೆರಿಗೆ ವಸೂಲಿ

ಪುಟ ೧ ➡ 473 ಕೋಟಿ ಬಾಕಿ ವಸೂಲಿ ಜತೆಗೆ, ಅಗತ್ಯಬಿದ್ದರೆ ವಿಧಾನಸೌಧ, ವಿಕಾಸಸೌಧದಂತಹ ಪ್ರಮುಖ ಕಟ್ಟಡಗಳನ್ನೇ ಜಪ್ತಿ ಮಾಡುವ ಬಗ್ಗೆ ದೂರುದಾರರು ಪ್ರಸ್ತಾಪಿಸಿದ್ದು, ಇದನ್ನು ಸಹ ನಿಯಮಾನುಸಾರ ಪರಿಶೀಲಿಸುವಂತೆ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ಕಚೇರಿಗಳು ಬಾಕಿ ಉಳಿಸಿಕೊಂಡಿರುವ ಬೃಹತ್ ಮೊತ್ತದ ಕುರಿತು ಮೌನ ವಹಿಸಿರುವ ಜಿಬಿಎ ಬಗ್ಗೆ ಬಿಜೆಪಿ ನಾಯಕ ಎನ್.ಆರ್.ರಮೇಶ್ ಸರ್ಕಾರಿ ಕಟ್ಟಗಳ ಸೇವಾ ತೆರಿಗೆ ಬಾಕಿ ವಸೂಲಿ ಕ್ರಮ ವಹಿಸುವಂತೆ ಜಿಬಿಎ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು.

ಗುಡ್ಡ ಕುಸಿದು ಕಾರ್ಮಿಕರ ಸಾವು; ಪರಿಹಾರ ಘೋಷಣೆ

ಪುಟ ೧ ➡ ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟಿ ತಿರುವಿನಲ್ಲಿ ರಸ್ತೆ ತಡೆಗೋಡೆ ನಿರ್ಮಾಣ ಕಾಮಗಾರಿಯ ವೇಳೆ ಮಣ್ಣು ಕುಸಿದು ಮೂವರು ಕಾರ್ಮಿಕರು ಮೃತಪಟ್ಟ ಸುದ್ದಿ ಕೇಳಿ ದುಃಖವಾಯಿತು. ಮೃತ ಕಾರ್ಮಿಕರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ಸದಸ್ಯರಿಗೆ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ. ಘಟನೆ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಾದ ಮಧು ಬಂಗಾರಪ್ಪ ಅವರೊಂದಿಗೆ ಮಾತುಕತೆ ನಡೆಸಿ, ಮಾಹಿತಿ ಪಡೆದಿದ್ದೇನೆ. ಕುಟುಂಬಕ್ಕೆ ಆಧಾರವಾಗಿದ್ದ ದುಡಿಯುವ ಜೀವಗಳು ಈ ಘಟನೆಯಲ್ಲಿ ಬಲಿಯಾಗಿದ್ದು, ಮಾನವೀಯ ನೆಲೆಯಲ್ಲಿ ಮೃತ ಕಾರ್ಮಿಕರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಶ್ರೀನಂದಾ ಶವವಾಗಿ ಪತ್ತೆ

ಪುಟ ೧ ➡ ಶ್ರೀನಂದಾ ಜೀವಂತವಾಗಿರಲಿ ಎಂಬ ನೂರಾರು ಜನರ ಪ್ರಾರ್ಥನೆಗೆ ಕೊನೆಗೂ ಫಲ ಸಿಗಲಿಲ್ಲ, ಆಕೆಯ ನಾಪತ್ತೆ ಪ್ರಕರಣದ ಕುರಿತು ವ್ಯಕ್ತವಾದ ಬೇರೆ ಬೇರೆ ವ್ಯಾಖ್ಯಾನಗಳಾವುವೂ ನಿಜವಾಗಲೂ ಇಲ್ಲ, ಆಕೆ ಸಾವಿಗೆ ನಿಖರವಾದ ಕಾರಣ ಏನು ಎನ್ನುವುದಕ್ಕೆ ಸಿಸಿ ಕ್ಯಾಮೆರಾ ಸೇರಿದಂತೆ ಸ್ಥಳದಲ್ಲಿ ಯಾವುದೇ ಸ್ಪಷ್ಟ ಸಾಕ್ಷ್ಯಗಳೂ ಇಲ್ಲದಿರುವುದರಿಂದ ಈಗ ಅದನ್ನು ಪತ್ತೆ ಹಚ್ಚುವ ಜವಾಬ್ದಾರಿ ಪೊಲೀಸರ ಹೆಗಲಮೇಲಿದೆ.

ಮೇಲ್ನೋಟಕ್ಕೆ ಶ್ರೀನಂದಾ ಕಾಲು ಜಾರಿ ಬಿದ್ದಿರಬಹುದು ಅಥವಾ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಅನಿಸಿಕೆಗಳನ್ನು ಘಟನೆ ನಡೆದಿರುವ ಸ್ಥಳವು ಹುಟ್ಟುಹಾಕುತ್ತದೆ. ದೂರದ ಕೇರಳದಿಂದ ಬಂದು ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತಹದ್ದು ಏನಿತ್ತು? ಎನ್ನುವ ಪ್ರಶ್ನೆ ಎದುರಾದರೆ, ಅದು ಆತ್ಮಹತ್ಯೆಯೇ ಆಗಿದ್ದರೆ ಅದರ ಹಿಂದೆ ಏನಾದರೂ ಕಾರಣ ಇರಲೇ ಬೇಕಾಗುತ್ತದೆ. ಅದು ಗೊತ್ತಾಗುವವರೆಗೆ ಸಂಶಯಗಳು ಹಾಗೇ ಉಳಿಯುತ್ತವೆ ಎನ್ನುವ ಅಭಿಪ್ರಾಯಗಳು ವ್ಯಕ್ತವಾಗಿವೆ. ಮಾಣಿಕ್ಯಧಾರದ ಬಳಿ ಕುಟುಂಬದವರೆಲ್ಲರೂ ಬಂದ ಸಂದರ್ಭದಲ್ಲಿ ಶ್ರೀನಂದಾ ತನ್ನ ಬಳಿ ಇದ್ದ ಮೊಬೈಲ್‌ನ್ನು ತಾಯಿಯ ಕೈಗಿತ್ತು, ನಾನು ಜಲಪಾತದ ಬಳಿ ಬರುವುದಿಲ್ಲ, ನೀವು ಬರುವವರೆಗೆ ಇಲ್ಲೇ ಇರುತ್ತೇನೆ ಎಂದು ಒಬ್ಬಳೇ ಉಳಿದುಕೊಂಡಿದ್ದಾಳೆ. ಕುಟುಂಬದವರು ಹಿಂತಿರುಗಿ ಬರುವಷ್ಟರಲ್ಲಿ ಆಕೆ ನಾಪತ್ತೆಯಾಗಿದ್ದಾಳೆ. ಈ ಅಂಶಗಳನ್ನೂ ಆಧಾರವಾಗಿಟ್ಟುಕೊಂಡು ಪೊಲೀಸ್ ತನಿಖೆ ನಡೆಯುತ್ತಿದೆ.

ನಿಗೂಢವಾಗಿ ಕಣ್ಮರೆಯಾದ ಮಗಳನ್ನು ಜೀವಂತವಾಗಿ ಕಾಣಲು ಕಾತುರದಿಂದ ಕಾಯುತ್ತಿದ್ದ ತಂದೆ ರಮೇಶ್‌ಗೆ ಆಕೆ ಸಾವಿನ ವಿಷಯ ಕೇಳಿ ಜಂಘಾಬಲವೇ ಕುಸಿದಂತಾಯಿತು. ಅದರೂ ಹತ್ತಾರು ಕಿ.ಮೀ. ದುರ್ಗಮ ಮಾರ್ಗವನ್ನು ಸಿಬ್ಬಂದಿಯ ಜತೆ ಕ್ರಮಿಸಿ ಶವವಾಗಿ ಮಲಗಿದ್ದ ಮಗಳನ್ನು ಕಂಡು ಕಣ್ಣೀರಿಟ್ಟರು. ಅತ್ತ ತಾಯಿ ರೋಷಿಣಿ ಅವರು ಮಾಣಿಕ್ಯಧಾರದ ಬಳಿ ಮಗಳ ಅಗಲಿಕೆ ವಿಚಾರ ಕೇಳಿ ಕುಸಿದುಬಿದ್ದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತು.

ಡ್ರೋನ್ ಕ್ಯಾಮೆರಾದಲ್ಲಿ ಪತ್ತೆ

ಚಂದ್ರದ್ರೋಣ ಪರ್ವತದ ಮಾಣಿಕ್ಯಧಾರದ ಬಳಿ ನಾಲ್ಕು ದಿನಗಳ ಹಿಂದೆ ನಾಪತ್ತೆಯಾಗಿದ್ದ ಕೇರಳದ ಬಾಲಕಿ ಶ್ರೀನಂದಾ ಕೊನೆಯದಾಗಿ ನಿಂತಿದ್ದ ಸ್ಥಳದ ಪಕ್ಕದಲ್ಲೇ ಪ್ರಪಾತಕ್ಕೆ ಬಿದ್ದಿರುವುದು ಅರಣ್ಯ ಇಲಾಖೆಯ ಥರ್ಮಲ್ ಡ್ರೋನ್ ಕ್ಯಾಮೆರಾದಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಪತ್ತೆಯಾಗಿದೆ. ಆಕೆಯ ಶವ ಸಾವಿರಾರು ಅಡಿ ಆಳದ ಮರವೊಂದರ ಬಳಿ ಕಂಡುಬಂದಿದೆ. ಕೂಡಲೇ ಶವವನ್ನು ಮೇಲೆತ್ತುವ ಕಾರ್ಯಾಚರಣೆ ಆರಂಭವಾಯಿತಾದರೂ ಸತತ ಆರು ಗಂಟೆಗಳ ಸವಾಲಿನ ಕಾರ್ಯಾಚರಣೆ ನಂತರ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಶವ ಕೊಳೆತಿದ್ದ ಕಾರಣ ಅದನ್ನು ಮೇಲ್ಮುಖವಾಗಿ ಹೊರತರಲು ಸಾಧ್ಯವಿರಲಿಲ್ಲ, ಅಲ್ಲದೆ ಶವವಿದ್ದ ಸ್ಥಳಕ್ಕೆ ಹಗ್ಗ ಕಟ್ಟಿ ಇಳಿಯುವುದಕ್ಕೂ ಆಗುತ್ತಿರಲಿಲ್ಲ, ಈ ಕಾರಣಕ್ಕೆ ಸಿಬ್ಬಂದಿ ಮಲ್ಲೇನಹಳ್ಳಿ ಮಾರ್ಗದ ಹರಿಹರಗುಪ್ಪೆ ಭಾಗದಿಂದ ಸಾವಿರಾರು ಅಡಿ ಎತ್ತರದ ಬೆಟ್ಟವನ್ನು ಹರಸಾಹಸ ಪಟ್ಟು ಏರುವ ಮೂಲಕ ಸ್ಥಳಕ್ಕೆ ತಲುಪಬೇಕಾಯಿತು. ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಅಗ್ನಿಶಾಮಕ, ಎಸ್‌ಡಿಆರ್‌ಎಫ್, ಎಎನ್‌ಎಫ್ ಸಿಬ್ಬಂದಿ ಸೇರಿ ಚಿಕ್ಕಮಗಳೂರು ಅಡ್ವೆಂಚರ್ ಸ್ಪೋರ್ಟ್ಸ್ ಕ್ಲಬ್ ಸದಸ್ಯರು ಸ್ಥಳೀಯರು ಶ್ರೀನಂದಾ ಪತ್ತೆಗಾಗಿ ನಾಲ್ಕು ದಿನ ಶ್ರಮಪಟ್ಟರು. ಅಂತಿಮವಾಗಿ ಆಕೆ ಶವವಾಗಿ ಪತ್ತೆಯಾಗಿದ್ದು ಮಾತ್ರ ಎಲ್ಲರ ಬೇಸರಕ್ಕೆ ಕಾರಣವಾಯಿತು. ಸೋಕೋ ತಂಡದ ಸಿಬ್ಬಂದಿ ಹಾಗೂ ಎಫ್‌ಎಸ್‌ಎಲ್ ಪರೀಕ್ಷಾ ಸಿಬ್ಬಂದಿಯೊಂದಿಗೆ ತೆರಳಿದ್ದ ಡಿವೈಎಸ್ಪಿ ನಾಗರಾಜ್ ಅವರು ಸ್ಥಳಮಹಜರು ನಡೆಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ದಯಾಮ, ಜಿಲ್ಲಾಧಿಕಾರಿ ಎನ್.ಎಂ. ನಾಗರಾಜು ಸ್ಥಳದಲ್ಲೇ ಇದ್ದು ಶೋಧ ಕಾರ್ಯದ ಮೇಲ್ವಿಚಾರಣೆ ನೋಡಿಕೊಂಡರು. ಸಂಜೆ 6 ಗಂಟೆ ವೇಳೆಗೆ ಶ್ರೀನಂದಾ ಮೃತದೇಹವನ್ನು ಅರಿಶಿನಗುಪ್ಪೆ ಮಾರ್ಗವಾಗಿ ಕೈಮರ ಮುಖಾಂತರ ನಗರದ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ತಂದು ಶವಪರೀಕ್ಷೆ ನಂತರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ನಾಡೋಜ ಡಾ.ರಾಮಸ್ವಾಮಿ ನಿಧನ

ಪುಟ ೧ ➡ 1980ರಲ್ಲಿ, ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಮಾಸಪತ್ರಿಕೆಯ ಗೌರವ ಪ್ರಧಾನ ಸಂಪಾದಕರಾಗಿ ನಿಧನರಾಗುವವರೆಗೂ ಆ ಹುದ್ದೆಯಲ್ಲಿ ಸೇವಾನಿರತರಾಗಿದ್ದರು.

ರಾಮಸ್ವಾಮಿ ಅವರು 1966ರಿಂದ ರಾಷ್ಟ್ರೋತ್ಥಾನ ಪರಿಷತ್‌ನ ನಿಕಟ ಸಂಪರ್ಕ ಹೊಂದಿದ್ದರು. ಅಲ್ಲದೇ ರಾಷ್ಟ್ರೋತ್ಥಾನ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾಗಿದ್ದರು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ (ಜಿಐಪಿಎ) ಗೌರವ ಕಾರ್ಯದರ್ಶಿಯಾಗಿಯೂ ಸಾಮಾಜಿಕ ಕಾರ್ಯಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು.

ಬಹುಭಾಷಾ ಪರಿಣಿತ: ರಾಮಸ್ವಾಮಿ ಅವರು ಕನ್ನಡ, ತೆಲುಗು, ಸಂಸ್ಕೃತ, ಹಿಂದಿ, ಇಂಗ್ಲಿಷ್, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸುಮಾರು 55ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿರುವ ಅವರು ಸಾವಿರಾರು ಲೇಖನ ಬರೆದಿದ್ದಾರೆ. ಐದು ದಶಕಗಳ ಸಾಹಿತ್ಯ ಮತ್ತು ಪತ್ರಿಕೋದ್ಯಮ ಜೀವನದ ನಡುವೆ ಸ್ವದೇಶಿ ಚಳವಳಿಯ ಬಲವಾದ ಪ್ರತಿಪಾದಕರೂ ಆಗಿದ್ದರು.

ಡಿ.ವಿ.ಗುಂಡಪ್ಪ ಮತ್ತಿತರ ಶ್ರೇಷ್ಠ ಚಿಂತಕರ ಒಡನಾಟ ಇವರಿಗೆ ಲಭಿಸಿತ್ತು. ಡಿ.ವಿ.ಜಿ. ಅವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದ ಅವರು, ಡಿವಿಜಿ ಅವರ ಅತ್ಯಮೂಲ್ಯ ಗ್ರಂಥವಾದ ಜೀವನಧರ್ಮಯೋಗ ಸೇರಿದಂತೆ ಅನೇಕ ಗ್ರಂಥಗಳ ಪ್ರಕಾಶನಕ್ಕೆ ಬಹುಮುಖವಾಗಿ ಶ್ರಮಿಸಿದವರು.

ರಾಮಸ್ವಾಮಿ ಅವರು ಬರೆದ ಶತಮಾನದ ತಿರುವಿನಲ್ಲಿ ಭಾರತ ಕೃತಿಗೆ 1992ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಗಣ್ಯರಿಂದ ಸಂತಾಪ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಹಸರಕಾರ್ಯವಾಹ ಮುಕುಂದ ಸಿ.ಆರ್., ಕ್ಷೇತ್ರೀಯ ಸಂಘಚಾಲಕ ಡಾ. ಪಿ.ವಾಮನ್ ಶೆಣೈ, ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ, ಪ್ರಾಂತ ಕಾರ್ಯವಾಹ ಡಾ. ಎಂ. ಜಯಪ್ರಕಾಶ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಅನೇಕ ಗಣ್ಯರು ಡಾ. ಎಸ್.ಆರ್. ರಾಮಸ್ವಾಮಿ ಅವರ ಅಗಲಿಕೆಗೆ ಸಂತಾಪ ಸೂಚಿಸಿದ್ದಾರೆ.

ಅಂತಿಮ ದರ್ಶನ-ಅಂತ್ಯಕ್ರಿಯೆ: ಶುಕ್ರವಾರ ಬೆಳಗ್ಗೆ 10.30ರಿಂದ 12ಗಂಟೆಯವರೆಗೆ ಕೆಂಪೇಗೌಡನಗರದ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರ ಕಚೇರಿ ಕೇಶವಶಿಲ್ಪ ಸಭಾಂಗಣದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್, ಕ್ಷೇತ್ರೀಯ ಕಾರ್ಯಕಾರಿಣಿ ಸದಸ್ಯ ವಿ. ನಾಗರಾಜ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ.ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ, ಸೇರಿದಂತೆ ಅನೇಕ ಗಣ್ಯರು ಅಂತಿಮ ದರ್ಶನ ಪಡೆದರು. ಬಳಿಕ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕಿರುಸುದ್ದಿ

ರಾಮಮೂರ್ತಿಗೆ ಗೌರವ ಡಾಕ್ಟರೇಟ್ ಪದವಿ

ತಾವರೆಕೆರೆ: ಹೊಸಕೋಟೆ ತಾಲೂಕಿನ ಜಡಿಗೇನಹಳ್ಳಿ ಹೋಬಳಿಯ ನಿಡಘಟ್ಟ ಗ್ರಾಮದ ಬಿಲ್ಲೆ ಮನೆ ನಂಜಪ್ಪರವರ ಮಗ ಶ್ರೀರಾಮ ಎಜುಕೇಶನ್ ಸೊಸೈಟಿ ಅಧ್ಯಕ್ಷ ಬಿಲ್ಲೆ ಮನೆ ರಾಮಮೂರ್ತಿರವರಿಗೆ ತಮಿಳುನಾಡಿನ ಏಷಿಯಾ ಇಂಟರ್ ನ್ಯಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದ್ದಾರೆ.



ಡಾ. ರಾಮಮೂರ್ತಿರವರು 43 ವರ್ಷದಿಂದ ಆಧ್ಯಾತ್ಮಿಕ ಸೇವೆ, ಶೈಕ್ಷಣಿಕ, ಸಾಮಾಜಿಕ ಸೇವೆಯಿಂದಾಗಿ ಪದವಿಗೆ ಭಾಜನರಾಗಿದ್ದಾರೆ. ಇದೇ ಸಂದರ್ಭದಲ್ಲಿ ಎಸ್‌ಆರ್‌ಇಎಸ್ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಶಾಲಾ ಶಿಕ್ಷಕ ವೃಂದ, ವಿದ್ಯಾರ್ಥಿಗಳು, ನಿಡಘಟ್ಟ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಪಟಾಲಮ್ಮ ದೇವಿಗೆ ಅಲಂಕಾರ

ತಾವರೆಕೆರೆ: ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದೇವತೆ ಶ್ರೀ ಪಟಾಲಮ್ಮ ದೇವಿ ಹಾಗೂ ಮುತ್ಯಾಲಮ್ಮ ದೇವಿಗೆ ಶುಕ್ರವಾರದಂದು ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದಲೇ ಭಕ್ತರು ದೇವಾಲಯಕ್ಕೆ ಬಂದು ದೇವಿಯರ ದರ್ಶನ ಪಡೆದರು. ಮಹಾಮಂಗಳಾರತಿ ನಂತರ ಅರ್ಚಕರಾದ ಟಿ.ಎಂ. ಅಶ್ವಥ್‌ನಾರಾಯಣ್ ತೀರ್ಥ, ಪ್ರಸಾದವನ್ನು ನೀಡಿದರು.

ವಾರದಲ್ಲಿ 3 ದಿನ ಪ್ರಸೂತಿ ವೈದ್ಯರ ಕರ್ತವ್ಯ

ವಿಜಯಪುರ: ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಾರದಲ್ಲಿ ಮೂರು ದಿನ ಕರ್ತವ್ಯ ನಿರ್ವಹಿಸಲು ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಕೆ.ಪ್ರಭಾ ಅವರನ್ನು ನಿಯೋಜಿಸಲಾಗಿದೆ. ವಿಜಯಪುರ ಪಟ್ಟಣದ ಸಮುದಾಯ ಆಸ್ಪತ್ರೆಯಲ್ಲಿ ಗರ್ಭಿಣಿಯರಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಯಾವುದೇ ತೊಂದರೆ ಆಗದಂತೆ ಜಿಲ್ಲಾಧಿಕಾರಿಗಳ ಆದೇಶದಂತೆ, ವಾರದಲ್ಲಿ ಸೋಮವಾರ, ಬುಧವಾರ ಮತ್ತು ಶುಕ್ರವಾರ ಒಟ್ಟು ಮೂರು ದಿನ ಡಾ.ಕೆ.ಪ್ರಭಾ ಅವರಿಗೆ ಕರ್ತವ್ಯ ನಿರ್ವಹಿಸಲು ಜಿಲ್ಲಾ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಸಾರ್ವಜನಿಕರ ಆರೋಗ್ಯ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಡಾ.ಮಂಜುಶ್ರೀ, ಮಕ್ಕಳ ತಜ್ಞ ಡಾ.ಸುದರ್ಶನ್ ಅವರನ್ನು ಜಿಲ್ಲಾ ಆರೋಗ್ಯ ಇಲಾಖೆ ನಿಯೋಜಿಸಿ ಆದೇಶ ಹೊರಡಿಸಿದೆ.

ಕೇಶವಪ್ಪ ಸವಿತಾ ಸಮಾಜ ಅಧ್ಯಕ್ಷ

ವಿಜಯಪುರ: ಹೋಬಳಿಯ ಹಳಿಯೂರು ಗ್ರಾಮದ ಕೇಶವಪ್ಪ ಅವರನ್ನು ದೇವನಹಳ್ಳಿ ತಾಲೂಕು ಸವಿತಾ ಸಮಾಜ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ತಾಲೂಕು ಸವಿತಾ ಸಮಾಜದ ಅಧ್ಯಕ್ಷರ ಆಯ್ಕೆ ವಿಚಾರವಾಗಿ ಈಚೆಗೆ ದೇವನಹಳ್ಳಿ ಪ್ರವಾಸಿ ಮಂದಿರದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ತಾಲೂಕು ಹಾಗೂ ಜಿಲ್ಲಾ ಮುಖಂಡರ ಸಮ್ಮುಖದಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಹಳಿಯೂರು ಗ್ರಾಮದ ಕೇಶವಪ್ಪ ತಿಳಿಸಿದ್ದಾರೆ.

ಕೆಐಎಡಿಬಿ ಫಲವತ್ತಾದ 2,100 ಎಕರೆ ಕೃಷಿ ಭೂಮಿ ಸ್ವಾಧೀನಕ್ಕೆ ವಿರೋಧ | ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ಚಾಲನೆ

ರೈತರ ಹೋರಾಟ ತೀವ್ರ: ಹನುಮಂತರಾಯ

ದೊಡ್ಡಬಳ್ಳಾಪುರ: ಅಭಿವೃದ್ಧಿಗೆ ನಾವು ವಿರೋಧಿಗಳಲ್ಲ, ಆದರೆ ಎಲ್ಲಾ ಭೂಮಿಯನ್ನು ನಮ್ಮ ತಾಲೂಕಿನ ರೈತರಿಂದಲೇ ಕಸಿದುಕೊಂಡು ಇಲ್ಲಿನ ರೈತರು ಗುಳೆ ಹೋಗುವಂತೆ ಮಾಡುವ ಸರ್ಕಾರದ ಅವೈಜ್ಞಾನಿಕ ಕ್ರಮವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹಿರಿಯ ವಕೀಲರು ಹಾಗೂ ಸ್ಥಳೀಯ ರೈತ ಹನುಮಂತರಾಯ ಹೇಳಿದರು.

ಅವರು ತಾಲೂಕಿನ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ, ಸೋಣ್ಣೇನಹಳ್ಳಿ, ನಾರಾನಹಳ್ಳಿ ಸುತ್ತಮುತ್ತ ಕೆಐಎಡಿಬಿ ಫಲವತ್ತಾದ 2,100 ಎಕರೆ ಕೃಷಿ ಭೂಮಿ ಸ್ವಾಧೀನ ಮಾಡಿಕೊಳ್ಳುವುದನ್ನು ವಿರೋಧಿಸಿ ರೈತರು ಪ್ರಾರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ಚಾಲನೆ ನೀಡಿ ಮಾತನಾಡಿದರು.

ಐದು ಸಾವಿರ ಎಕರೆ ಪ್ರದೇಶದಲ್ಲಿ ಕ್ವಿನ್ ಸಿಟಿ ಅಭಿವೃದ್ಧಿಗೆ ಸ್ವಾಧೀನಪಡಿಸಿಕೊಳ್ಳುತ್ತಿರುವ ಶೇ.80ರಷ್ಟು ಕೃಷಿ ಭೂಮಿಯು ದೊಡ್ಡಬೆಳವಂಗಲ ಹೋಬಳಿಯದ್ದೇ ಆಗಿದೆ. ಇದಿಷ್ಟೇ ಸಾಲದೆಂಬಂತೆ ಈಗ ಅಡಕೆ, ತೆಂಗು ಇರುವ ಫಲವತ್ತಾದ 2,100 ಎಕರೆ ಭೂಮಿಯನ್ನು ಇದೇ ಹೋಬಳಿಯಲ್ಲಿ ಸ್ವಾಧೀನಪಡಿಸಿಕೊಳ್ಳುತ್ತಿರುವುದು ಖಂಡನೀಯ.

ಕೆಐಎಡಿಬಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕನಿಷ್ಠ ನಿಯಮಗಳನ್ನು ಸಹ ಪಾಲಿಸದೇ ಇಲ್ಲಿನ ಕೃಷಿ ಭೂಮಿ ಉದ್ಯಮಿಗಳ ಪಾಲಾಗುವಂತೆ ಮಾಡುವ ಹುನ್ನಾರ ರೂಪಿಸಿದೆ. ಸ್ಥಳೀಯ ಜನಪ್ರತಿಧಿಗಳು ರೈತರ ಭೂಮಿ ಉಳಿಸಲು ಎದೆಗಾರಿಕೆ ತೋರಬೇಕು. ಇದಕ್ಕೆ ಪೂರಕಾಗಿ ಸ್ಥಳೀಯ ರೈತರು ಯಾವುದೇ ರೀತಿಯ ಗೊಂದಲಗಳಿಗೆ ಒಳಗಾಗದೇ ಜನಪ್ರತಿನಿಧಿಗಳಿಗೆ ಬೆಂಬಲವಾಗಿ ನಿಂತು ಧರಣಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ನಮ್ಮ ಪೂರ್ವಜರ ಕಾಲದಿಂದಲೂ ಬೆಳೆ ಬೆಳೆಯುತ್ತ ಬಂದಿರುವ ಕೃಷಿ ಭೂಮಿಯನ್ನು ಖಾಲಿ ಭೂಮಿ ಎಂದು ಕಂದಾಯ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇದರ ವಿರುದ್ಧ ಸೂಕ್ತ ವೇದಿಕೆಯಲ್ಲಿ ಪ್ರಶ್ನಿಸಲಾಗುವುದು. ರೈತರು ಆತಂಕ ಪಡದೆ ಒಗ್ಗಟ್ಟಿನಿಂದ ಮಾನಸಿಕವಾಗಿ ಹೋರಾಟಕ್ಕೆ ಸಜ್ಜಾಗಬೇಕು ಎಂದರು.

ಜೆಡಿಎಸ್ ಹಿರಿಯ ಮುಖಂಡ ಹರೀಶ್ ಗೌಡ ಮಾತನಾಡಿ, ಕೆಐಎಡಿಬಿ ಅಧಿಕಾರಿಗಳು ರೈತರೊಂದಿಗೆ ಚರ್ಚೆ ನಡೆಸದೆ ಭೂಮಿ ಸ್ವಾಧೀನಕ್ಕೆ ಸಿದ್ಧತೆ ನಡೆಸಿರುವುದು ಖಂಡನೀಯ, ಈ ಆತಂಕ ಕೇವಲ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ, ಸೋಣ್ಣೇನಹಳ್ಳಿ, ನಾರಾನಹಳ್ಳಿ ಮಾತ್ರ ಸೀಮಿತವಾಗಿಲ್ಲ, ಸುತ್ತಮುತ್ತಲಿನ ಗ್ರಾಮಗಳು ಸೇರಿದಂತೆ ಅನೇಕರು ಸಮಸ್ಯೆ ಎದುರಿಸಬೇಕಿದೆ. ಏಕೆಂದರೆ ದಾಬಸ್‌ಪೇಟೆಯಿಂದ ಆರಂಭವಾಗಿ ಭೂ ಸ್ವಾಧೀನ ಈ ದೊಡ್ಡಬೆಳವಂಗಲವರೆಗೂ ಬಂದಿದ್ದು ಮುಂದಿನ ದಿನಗಳಲ್ಲಿ ಹುಸ್ಕೂರುವರೆಗೂ ವ್ಯಾಪಿಸುವ ಆತಂಕ ಇದೆ ಎಂದು ಹೇಳಿದರು.

ಬುಧವಾರ ಸಂಜೆಯಿಂದ ಪ್ರಾರಂಭವಾಗಿರುವ ನಿರಂತರ ಧರಣಿ ಸತ್ಯಾಗ್ರಹದಲ್ಲಿ ವಕೀಲರಾದ ರುದ್ರಾರಾಧ್ಯ, ಕೇಶವಕುಮಾರ್, ಸ್ಥಳೀಯ ಮುಖಂಡರಾದ ಪ್ರಭಬೆಳವಂಗಲ, ಎಂ.ಗೋವಿಂದರಾಜು, ಆರ್.ಚಂದ್ರತೇಜಸ್ವಿ, ಸುನಿಲ್ ಕುಮಾರ್, ತಿಮ್ಮೇಗೌಡ, ರಂಗನಾಥ್ ಸಿ., ವಿಜಯ್ ಕುಮಾರ್, ಡಿ.ಸಿ.ರಾಮೇಗೌಡ, ಡಿ.ಸಿ.ನಾಗರಾಜು, ಕಿಶೋರ್ ಕುಮಾರ್ ಇದ್ದರು.



ಡ್ರೋನ್ ಮೂಲಕ ಸರ್ವೆ ಕಾರ್ಯ: ಆತಂಕ

ಕೆಐಎಡಿಬಿ ಕಣ್ಣು ಸಾಸಲು ಹೋಬಳಿ ಮೇಲೆ ಬಿದ್ದಿಲ್ಲ, ಏಕೆಂದರೆ ಬೆಂಗಳೂರಿನ ತ್ಯಾಜ್ಯ ಸುರಿದು ಅಲ್ಲಿನ ಅಂತರ್ಜಲವನ್ನು ಮಲಿನ ಮಾಡಿದ್ದಾರೆ. ಈ ವ್ಯಾಪ್ತಿಯಲ್ಲಿ ಡ್ರೋನ್ ಮೂಲಕ ಸರ್ವೆ ಕಾರ್ಯ ನಡೆಸಿದ್ದಾರೆ ಎಂಬ ಆತಂಕ ರೈತರದ್ದಾಗಿದೆ. ದೊಡ್ಡಬಳ್ಳಾಪುರದ ಎಸಿ ರೈತರ ಪರವಾಗಿ ಅಲ್ಲದೆ ಬಂಡವಾಳಶಾಹಿಗಳ ಪರ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪ ವ್ಯಾಪಕವಾಗಿದೆ.

ಭೂ ಸ್ವಾಧೀನ ವಿರೋಧಿಸಿ ಆರಂಭವಾಗಿರುವ ಹೋರಾಟ ಕ್ಷಿಪ್ರ ಬೆಳವಣಿಗೆ ಕಂಡು ತ್ವರಿತವಾಗಿ ಅಂತ್ಯಗೊಳ್ಳಬೇಕಿದೆ. ನಿಮ್ಮ ಹೋರಾಟಕ್ಕೆ ಮಧುರೆ ಹೋಬಳಿ ರೈತರ ಸಂಪೂರ್ಣ ಬೆಂಬಲವಿದೆ. ಸರ್ಕಾರದ ಈ ನಿಲುವಿನ ವಿರುದ್ಧ ಹೋರಾಟಕ್ಕೆ ಕೇವಲ 5 ಗ್ರಾಮಕ್ಕೆ ಮಾತ್ರ ಸೀಮಿತವಾಗದೆ ಇಡೀ ಕರ್ನಾಟಕಕ್ಕೆ ಮಾದರಿಯಾಗುವಂತೆ ರೂಪುರೇಷೆ ಸಿದ್ಧಪಡಿಸಬೇಕಿದೆ.

■ ಹರೀಶ್ ಗೌಡ, ಜೆಡಿಎಸ್ ಹಿರಿಯ ಮುಖಂಡ

ಪಿಯುಸಿ ಫಲಿತಾಂಶ: 6ನೇ ಸ್ಥಾನಕ್ಕೆ ಜಿಗಿದ ಬೆಂ.ಗ್ರಾ.ಜಿಲ್ಲೆ

ದೊಡ್ಡಬಳ್ಳಾಪುರ: ಗುರುವಾರ ಪ್ರಕಟವಾದ 2025-26ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಶೇ.91 ಪಡೆಯುವ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ 6ನೇ ಸ್ಥಾನ ಪಡೆದಿದೆ. ಕಳೆದ ವರ್ಷಕ್ಕಿಂತ ಎರಡು ಸ್ಥಾನ ಮೇಲಕ್ಕೇರಿದೆ.

2024-25ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯ ಫಲಿತಾಂಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಶೇ.79.70 ರಷ್ಟು ಫಲಿತಾಂಶ ಪಡೆಯುವ ಮೂಲಕ ರಾಜ್ಯದಲ್ಲಿ 8ನೇ ಸ್ಥಾನವನ್ನು ಪಡೆದಿತ್ತು. ಆದರೆ ಈ ವರ್ಷ ಶೇಕಡಾ 91 ರಷ್ಟು ಫಲಿತಾಂಶ ಪಡೆಯುವ ಮೂಲಕ 6ನೇ ಸ್ಥಾನಕ್ಕೇರಿದೆ. 2025-26ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ-01ಕ್ಕೆ ಹೊಸ ವಿದ್ಯಾರ್ಥಿಗಳು 10,821, ಖಾಸಗಿ ವಿದ್ಯಾರ್ಥಿಗಳು 166, ಪುನರಾವರ್ತಿತ ವಿದ್ಯಾರ್ಥಿಗಳು 578 ಸೇರಿ ಪರೀಕ್ಷೆಗೆ 11,565 ವಿದ್ಯಾರ್ಥಿಗಳು ನೋಂದಾಯಿತರಾಗಿದ್ದರು.

ಕಲಾ ವಿಭಾಗದಲ್ಲಿ 833 ವಿದ್ಯಾರ್ಥಿಗಳು, ವಾಣಿಜ್ಯ ವಿಭಾಗದಲ್ಲಿ 5405, ವಿಜ್ಞಾನ ವಿಭಾಗದಲ್ಲಿ 4583, ಸರ್ಕಾರಿ ಕಾಲೇಜುಗಳಲ್ಲಿ 1,724 ವಿದ್ಯಾರ್ಥಿಗಳು, ಅನುದಾನಿತ ಕಾಲೇಜಿನಲ್ಲಿ 1,074, ಅನುದಾನರಹಿತ ಕಾಲೇಜಿನಲ್ಲಿ 8,023 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದರು.



ವಿಜ್ಞಾನ ವಿಭಾಗ: ನೆಲಮಂಗಲದ ಖಾಸಗಿ ಪಿಯು ಕಾಲೇಜು ವಿದ್ಯಾರ್ಥಿ ಬಿಂದು ಎ. ವಿಜ್ಞಾನ ವಿಭಾಗದಲ್ಲಿ 600ಕ್ಕೆ 597 ಅಂಕ ಪಡೆದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಹೊಸಕೋಟೆಯ ಖಾಸಗಿ ಪಿಯು ಕಾಲೇಜು ವಿದ್ಯಾರ್ಥಿ ಜೀವಿತ ಎಚ್.ಎಸ್ ಅವರು ವಾಣಿಜ್ಯ ವಿಭಾಗದಲ್ಲಿ 600ಕ್ಕೆ 597 ಅಂಕ ಪಡೆದು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ರಥೋತ್ಸವಕ್ಕೆ ಸಾಕ್ಷಿಯಾದ ಭಕ್ತರು | ವಿಧಿವತ್ತಾಗಿ ಜರುಗಿದ ಪೂಜಾ ಕೈಂಕರ್ಯ

ವಿಜೃಂಭಣೆಯ ಹೊನ್ನಾದೇವಿ ರಥೋತ್ಸವ

ದಾಬಸ್‌ಪೇಟೆ: ಐತಿಹಾಸಿಕ ಹಿನ್ನೆಲೆ ಇರುವ ದಕ್ಷಿಣಕಾಶಿ ಶಿವಗಂಗೆಯ ಶ್ರೀ ಹೊನ್ನಾದೇವಿ ಅಮ್ಮನವರ ಬ್ರಹ್ಮರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಧಾರ್ಮಿಕ ಪೂಜಾ ವಿಧಿವಿಧಾನದೊಂದಿಗೆ, ಹೋಮ ಹವನದ ನಂತರ ವಿಜೃಂಭಣೆಯಿಂದ ನಡೆಯಿತು.

ಗಣ್ಯವ್ಯಕ್ತಿಗಳು, ದಾನಿಗಳು, ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿಯ ನಮನಗಳನ್ನು ಸಲ್ಲಿಸಿದರು. ಸಾಂಸ್ಕೃತಿಕ ಕಲಾಮೇಳಗಳಾದ ವೀರಗಾಸೆ ಕುಣಿತ, ನಂದಿಧ್ವಜ, ಭಜನೆ ರಥೋತ್ಸವಕ್ಕೆ ಮೆರಗು ನೀಡಿದವು. ಭಕ್ತರು ದವನ ಕಟ್ಟಿದ ಸೂರುಬಾಳೆಯನ್ನು ರಥದ ಮೇಲೆ ಎಸೆ ಯುವುದರ ಮೂಲಕ ತಮ್ಮ ಇಷ್ಟಾರ್ಥದ ಕೋರಿಕೆಯನ್ನು ಅರ್ಪಿಸಿದರು.

ಭಕ್ತರು ಹೆಸರುಬೇಳೆ, ಮಜ್ಜಿಗೆ, ಪಾನಕ ವನ್ನು ವಿತರಿಸಿದರು. ಊಟದ ವ್ಯವಸ್ಥೆ ಮಾಡಲಾಗಿತ್ತು. ಹೋಮ ಮತ್ತು ಪೂಜೆಯನ್ನು ಆಗಮಿಕರಾದ ಡಾ ಸೋಮಸುಂದರ ದೀಕ್ಷಿತ್, ಉಮೇಶ್ ದೀಕ್ಷಿತ್ ತಂಡದವರು ನೆರವೇರಿಸಿಕೊಟ್ಟರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಪ್ರೇಮ ತೀರ್ಥಪ್ರಸಾದ್, ಸಮಾಜಸೇವಕ ರಾಮಣ್ಣ, ದೇವಾಲಯ ಸಮಿತಿಯ ಮಾಜಿ ಅಧ್ಯಕ್ಷ ರೇಣುಕೇಶ್ವರ್, ವಿಎಸ್‌ಎಸ್‌ಎನ್ ನಿರ್ದೇಶಕ ಶಶಿಧರ್, ಹೊನ್ನೇನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಉಮೇಶ್, ಧಾರ್ಮಿಕದತ್ತಿ ಇಲಾಖೆ ತಹಸೀಲ್ದಾರ್ ಜಿ.ಜೆ.ಹೇಮಾವತಿ, ಉಪತಹಸೀಲ್ದಾರ್ ಶಶಿಧರ್, ಕಾರ್ಯ ನಿರ್ವಾಹಕ ಅಧಿಕಾರಿ ಎಂ.ಎನ್. ಬೃಂದ, ಪಾರುಪತ್ತೆದಾರ ಟಿ.ಸುಮ, ಅರ್ಚಕರಾದ ಶ್ಯಾಮ್‌ಪ್ರಸಾದ್ ದೀಕ್ಷಿತ್, ನವೀನ್ ದೀಕ್ಷಿತ್, ರಾಘು ದೀಕ್ಷಿತ್, ಡಿ.ವಿ.ಶ್ರೀಧರ್, ಎಲ್.ವಸಂತಕುಮಾರ್ ದೀಕ್ಷಿತ್, ಸೇವಾಕರ್ತರಾದ ಜಿ.ನಂಜುಂಡಯ್ಯ, ಹೊನ್ನಗಂಗಶೆಟ್ಟಿ, ಯಡಿಯೂರಪ್ಪನವರ ಕುಟುಂಬ, ಶಶಿ ಶೇಖರ್, ನಾಗೇಂದ್ರ ಪ್ರಸನ್ನ ಲೋಕೇಶ್, ಸಿದ್ದರಾಜು ಶಿವಗಂಗೆ, ಹರ್ಷಿತ ವಿಜಯ್, ಎಸ್. ಎಚ್. ರುದ್ರೇಶ್, ಹರ್ಷ ಹೆಡೆಹಳ್ಳಿ, ಧನಲಕ್ಷ್ಮೀ ಹನುಮಂತರಾಜು, ಎಸ್.ಎಸ್.ಚಂದ್ರ ಕುಮಾರ್, ಅನಂತರಾಮು, ಎಸ್.ಆರ್. ಸುರೇಶ್, ಶಿವರುದ್ರಮ್ಮ, ಮನೋಹರ್ ಬಿ.ಎನ್., ಗಂಗಾಧರಯ್ಯ ಎಸ್.ಜಿ., ರಂಗಸಮಯ್ಯ, ಮಣಿಕಂಠ, ಮುದ್ದಪ್ಪ, ಮಲ್ಲಯ್ಯ, ತುಳಸೀಧರ, ಹೇಮಂತ್, ಮಂಜುನಾಥ್, ವಸಂತಕುಮಾರ್, ಬರಗೇನ ಹಳ್ಳಿ ಪರಮೇಶ್ವರ್, ಯಶವಂತ್ ಗೌಡ ಭಾಗವಹಿಸಿದ್ದರು.



ವಿದ್ಯಾನಿಧಿ ಸ್ವತಂತ್ರ ಪಿಯು ಕಾಲೇಜಿಗೆ 95% ಫಲಿತಾಂಶ

ದೊಡ್ಡಬಳ್ಳಾಪುರ: ನಗರದ ವಿದ್ಯಾನಿಧಿ ಸ್ವತಂತ್ರ ಪಿಯು ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.95.26ರಷ್ಟು ಫಲಿತಾಂಶ ಪಡೆದುಕೊಂಡಿದೆ. ಈ ಬಾರಿ ಪರೀಕ್ಷೆಯಲ್ಲಿ ಕಾಲೇಜಿನ 232 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 221 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶೇ.97.25, ವಾಣಿಜ್ಯ ವಿಭಾಗದಲ್ಲಿ ಶೇ.93.5ರಷ್ಟು ಫಲಿತಾಂಶ ಪಡೆದುಕೊಂಡಿದ್ದಾರೆ. ಕಾಲೇಜಿನಲ್ಲಿ 73 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 136 ವಿದ್ಯಾರ್ಥಿಗಳು ಫಸ್ಟ್ ಕ್ಲಾಸ್ ಫಲಿತಾಂಶ ಪಡೆದು ಸಾಧನೆ ಮಾಡಿದ್ದಾರೆ. ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ದೀಕ್ಷಿತಾ ಎಸ್. 583 ಅಂಕ ಪಡೆದಿದ್ದು, ಸೈಯದಾ ಸುಮೇರಾ 582 ಅಂಕ ಪಡೆದಿದ್ದಾರೆ. ಇನ್ನೂ ವಾಣಿಜ್ಯ ವಿಭಾಗದಲ್ಲಿ ಮೆಹ್ರೀನ್ ಹಜ್ರ 573 ಅಂಕದೊಂದಿಗೆ ಶೇ.95.5ರಷ್ಟು ಫಲಿತಾಂಶ ಪಡೆದುಕೊಂಡಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿನಲ್ಲಿ ಹಿಂದಿ, ಸಂಸ್ಕೃತ, ಅರ್ಥಶಾಸ್ತ್ರ, ಲೆಕ್ಕಾಶಾಸ್ತ್ರ, ಜೀವಶಾಸ್ತ್ರದಲ್ಲಿ ವಿದ್ಯಾರ್ಥಿಗಳು ಶೇ.100ರಷ್ಟು ಫಲಿತಾಂಶ ಪಡೆದಿದ್ದು, ಕನ್ನಡದಲ್ಲಿ ಶೇ.99.47, ಇಂಗ್ಲಿಷ್ ಶೇ.97.41, ವ್ಯವಹಾರ ಅಧ್ಯಯನ ಶೇ.99.19, ಭೌತಶಾಸ್ತ್ರ ಶೇ.98.17, ರಸಾಯನಶಾಸ್ತ್ರ ಶೇ.97.25, ಗಣಿತ ಶೇ.99.08, ಕಂಪ್ಯೂಟರ್ ಸೈನ್ಸ್ ಶೇ.99.35 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಉತ್ತಮ ಫಲಿತಾಂಶ ಪಡೆದ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ, ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಅಭಿನಂಧಿಸಿದ್ದಾರೆ.



ಪ್ರಗತಿ ಕಾಲೇಜಿಗೆ ಉತ್ತಮ ಸಾಧನೆ



ವಿಜಯಪುರ: ಇಲ್ಲಿನ ಪ್ರಗತಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ದ್ವಿತೀಯ ಪಿ.ಯು.ಸಿ ಪರೀಕ್ಷಾ ಫಲಿತಾಂಶದಲ್ಲಿ ಉನ್ನತ ಸಾಧನೆ ತೋರಿದ್ದಾರೆ. ಪರೀಕ್ಷೆಗೆ ಹಾಜರಾದ 170 ವಿದ್ಯಾರ್ಥಿನಿಯರ ಪೈಕಿ 63 ವಿದ್ಯಾರ್ಥಿನಿಯರು ಅತ್ಯುನ್ನತ ಶ್ರೇಣಿ ಪಡೆದಿದ್ದು, 96 ವಿದ್ಯಾರ್ಥಿನಿಯರು ಪ್ರಥಮ ಶ್ರೇಣಿ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ರಮೀಜಾ ಸಿಮ್ರಾನ್ ಹಾಗೂ ವಿ.ಚೈತ್ರ 581 (ಶೇ.96.83) ಅಂಕ ಗಳಿಸಿದರೆ, ವಾಣಿಜ್ಯ ವಿಭಾಗದಲ್ಲಿ ಖುಷಿ ಹಾಗೂ ಎನ್.ಎ.ತ್ರಿಷಾ 578 (ಶೇ.96.33), ವಾಣಿಜ್ಯ ವಿಭಾಗದಲ್ಲಿ ಕೆ.ಬಿಂದುಶ್ರೀ ಹಾಗೂ ಎಸ್.ರಜನಿ ಅವರು 577 (ಶೇ.96.16) ಅಂಕ ಪಡೆದಿದ್ದಾರೆ.

ಕನ್ನಡ, ಭೌತಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಲೆಕ್ಕಶಾಸ್ತ್ರ, ಗಣಕ ವಿಜ್ಞಾನ, ಹಿಂದಿ ವಿಷಯಗಳಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದ್ದು, ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಅಧ್ಯಕ್ಷ ಎಂ.ಸತೀಶ್ ಕುಮಾರ್ ಹಾಗೂ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದ್ದಾರೆ.

ಮೂರು ದಿನ ಕಾರ್ಯಾಗಾರ

ಮೈಸೂರು: ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ, ಭೋಪಾಲ್‌ನ ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ ಹಾಗೂ ಆಂಥ್ರೋಪೋಸ್ ಇಂಡಿಯಾ ಫೌಂಡೇಶನ್ ಇವರ ಸಹಯೋಗದಲ್ಲಿ "ಎಥ್ನೋಗ್ರಫಿ ಮತ್ತು ಸಂಸ್ಕೃತಿ ದಾಖಲಾತಿ" ವಿಷಯದ ಮೇಲೆ ಮೂರು ದಿನಗಳ ಕಾರ್ಯಾಗಾರವನ್ನು ಏಪ್ರಿಲ್ 12ರಿಂದ 14ರವರೆಗೆ ಭಾರತೀಯ ಭಾಷಾ ಸಂಸ್ಥಾನದಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಾಗಾರವು ಭಾರತದ ಪಶ್ಚಿಮ ಮತ್ತು ದಕ್ಷಿಣ ಭಾಗಗಳ ಸಂಶೋಧಕರು ಹಾಗೂ ಪಂಡಿತರ ಸಂಶೋಧನಾ ಕೌಶಲ್ಯಗಳನ್ನು ಬಲಪಡಿಸುವ ಉದ್ದೇಶದಿಂದ ನಡೆಯುತ್ತಿರುವ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮದ ಒಂದು ಭಾಗವಾಗಿದೆ.

ಸಿಗುವ ಅವಕಾಶ ಬಳಸಿಕೊಳ್ಳಿ: ರಾಜೇಂದ್ರ



ಉಪನ್ಯಾಸಕರ ನೆರವು ಅವಿಸ್ಮರಣೀಯ

ತಾಲೂಕಿಗೆ ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ತೇಜಸ್ವಿನಿ ಮಾತನಾಡಿ, ನನ್ನ ಫಲಿತಾಂಶಕ್ಕೆ ಉಪನ್ಯಾಸಕರ ನೆರವು ಅವಿಸ್ಮರಣೀಯ. ಕಲಿಕೆಗೆ ಜಾಲಪ್ಪ ಶಿಕ್ಷಣ ಸಂಸ್ಥೆ ಸಾಕಷ್ಟು ಪೂರಕ ವಾತಾವರಣ ಒದಗಿಸಿದೆ. ಗ್ರಾಮೀಣ ಮಕ್ಕಳಿಗೆ ಸಿಇಟಿ, ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗೆ ಕಲಿಸಿಕೊಡುವ ಕೆಲಸ ಆಗುತ್ತಿದ್ದು, ಸಹಕಾರಿಯಾಗುತ್ತಿದೆ. ಶಿಕ್ಷಣ ಸಂಸ್ಥೆಯಲ್ಲಿ ಕಲಿಕೆಗೆ ಸಾಕಷ್ಟು ಅವಕಾಶಗಳು ಇವೆ ಎಂದರು.

ದೊಡ್ಡಬಳ್ಳಾಪುರ: ಜಾಲಪ್ಪ ಅವರ ಆಶಯದಂತೆ ಎಲ್ಲಾ ವಿದ್ಯಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಎಸ್ಸೆಸ್ಸೆಲ್ಸಿಯಲ್ಲಿ ಉತ್ತೀರ್ಣರಾಗಿ ಯಾರು ಮೊದಲು ಬರುತ್ತಾರೋ ಅಂತಹ ವಿದ್ಯಾರ್ಥಿಗಳಿಗೆ ಪಿಯುಗೆ ಮೊದಲ ಅವಕಾಶ ನೀಡಲಾಗುತ್ತಿದೆ ಎಂದು ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಜೆ.ರಾಜೇಂದ್ರ ತಿಳಿಸಿದರು.

ಅವರು ನಗರದ ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಉತ್ತಮ ಫಲಿತಾಂಶ ಪಡೆದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಬಾರಿಯ ದ್ವಿತೀಯ ಪಿಯುಸಿ ಫಲಿತಾಂಶ ಸಂತಸ ತಂದಿದೆ. ಪರೀಕ್ಷೆಯಲ್ಲಿ ನಮ್ಮ ಪಿಯು ಕಾಲೇಜಿನ 230 ವಿದ್ಯಾರ್ಥಿಗಳು ಭಾಗಿಯಾಗಿದ್ದು, 50 ಮಂದಿ ಡಿಸ್ಟಿಂಕ್ಷನ್, 118 ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಿಕ್ಷಣ ಸಂಸ್ಥೆಯ ಸಂಸ್ಥಾಪಕರಾದ ಜಾಲಪ್ಪ ಅವರು ಹೇಳಿದಂತೆ ಯಾವುದೇ ಕಾರಣಕ್ಕೂ ಯಾವುದೇ ಮಾನದಂಡ ಹಾಕದೆ ಮೊದಲು ಬರುವವರಿಗೆ ದಾಖಲಾತಿಗೆ ಅವಕಾಶ ಕೊಡಲು ಹೇಳಿದ್ದರು. ಅದರಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿನಿ ತೇಜಸ್ವಿನಿ ವಿಜ್ಞಾನ ವಿಭಾಗದಲ್ಲಿ ಶೇ.98.8 ಫಲಿತಾಂಶ ಪಡೆದು ತಾಲೂಕಿಗೆ ಮೊದಲ ಹಾಗೂ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾರೆ. ಜತೆಗೆ ಪೂಜಾಶ್ರೀ ವಾಣಿಜ್ಯ ವಿಭಾಗದಲ್ಲಿ 588 ಅಂಕವನ್ನು ಪಡೆದಿದ್ದಾರೆ ಎಂದರು. ನಮ್ಮಲ್ಲಿ ಕೂಡ ಪಿಯು ಪಾಸ್ ಆದವರಿಗೆ ಪಾಲಿಟೆಕ್ನಿಕ್, ಡಿಗ್ರಿ, ಇಂಜಿನಿಯರಿಂಗ್ ಸೇರಿದಂತೆ ಸಾಕಷ್ಟು ಅವಕಾಶವಿದೆ. ಇಲ್ಲಿಯೇ ಕೈಗೆಟುಕುವ ದರದಲ್ಲಿ ಉನ್ನತ ಶಿಕ್ಷಣ ದೊರೆಯುತ್ತಿದೆ. ಇದರ ಉಪಯೋಗವನ್ನು ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು. ಈ ವರ್ಷದಿಂದ ಕಾನೂನು ಶಿಕ್ಷಣ ಕಾಲೇಜು ತೆರೆಯಲಾಗಿದೆ, ಅದನ್ನು ಕೂಡ ಬಳಸಿಕೊಳ್ಳಬಹುದಾಗಿದೆ ಎಂದರು.

ಈ ವೇಳೆ ಶ್ರೀ ದೇವರಾಜ್ ಅರಸ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ಬಾವಿಕಟ್ಟಿ, ಕೋಆರ್ಡಿನೇಟರ್ ಭಾಸ್ಕರ್, ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರೊ. ಕೆ.ಆರ್.ರವಿಕಿರಣ್, ಉಪನ್ಯಾಸಕರಾದ ಚಂದ್ರಶೇಖರ್, ಆನಂದ್ ಕುಮಾರ್, ಜ್ಯೋತಿ, ಅನಿಲ್‌ಕುಮಾರ್ ಹಾಜರಿದ್ದರು.

ಒತ್ತುವರಿ ಮಾಡಿದ ವೈನ್ ಸ್ಟೋರ್ ಜಾಗದಲ್ಲಿ ಬಾರ್ ನಿರ್ಮಾಣಕ್ಕೆ ಯತ್ನ

ಕಾಮಗಾರಿ ಸ್ಥಗಿತಕ್ಕೆ ಸ್ಥಳೀಯರ ಒತ್ತಾಯ

ಹೊಸಕೋಟೆ: ನಗರದ 14ನೇ ವಾರ್ಡ್ 2ನೇ ಕ್ರಾಸ್‌ನಲ್ಲಿ ಸಾರ್ವಜನಿಕ ರಸ್ತೆಯನ್ನು ಕೆಲವರು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ವೈನ್ ಸ್ಟೋರ್ ನಡೆಸುವ ಜಾಗದಲ್ಲಿ ಬಾರ್, ಅಂಗಡಿಗಳನ್ನು ನಿರ್ಮಿಸುತ್ತಿದ್ದು, ಇದರಿಂದ ಈ ಭಾಗದ ಜನರಿಗೆ, ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ.

ಈ ಬಗ್ಗೆ ಹೊಸಕೋಟೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸ್ಥಳೀಯ ಮುಖಂಡ ಕಾಶಿ ಚಂದ್ರಶೇಖರ್ ಮಾತನಾಡಿ, ಬಿಎಂಟಿಸಿ ಡಿಪೋ ಪಕ್ಕದ 14ನೇ ವಾರ್ಡ್ 2ನೇ ಕ್ರಾಸ್‌ನಲ್ಲಿ 12 ಅಡಿ ಸಾರ್ವಜನಿಕ ರಸ್ತೆಯಿದ್ದು, ಈ ರಸ್ತೆಯ ಅಕ್ಕಪಕ್ಕದಲ್ಲಿ ವೈನ್ ಸ್ಟೋರ್ ಹಾಗೂ ಅಂಗಡಿಗಳನ್ನು ನಿರ್ಮಿಸುತ್ತಿರುವವರು ಒತ್ತುವರಿ ಮಾಡಿಕೊಂಡು ಕಬ್ಬಿಣದ ಸಜ್ಜಾಗಳನ್ನು ಹಾಕಿಕೊಂಡಿರುವುದಲ್ಲದೆ ಅಂಗಡಿ, ಮನೆಗಳ ಮುಂದೆ ವಾಹನಗಳನ್ನು ನಿಲ್ಲಿಸುತ್ತಿದ್ದಾರೆ. ಇದರಿಂದ ರಸ್ತೆಯಲ್ಲಿ ವಾಹನಗಳು ಸಂಚರಿಸಲು ತೊಂದರೆಯಾಗುತ್ತಿದೆ. ಸಾರ್ವಜನಿಕರಿಗೆ ಬಿಎಂಟಿಸಿ ಬಸ್ ನಿಲ್ದಾಣ ಹತ್ತಿರವಾಗಿದ್ದು, ಎದುರು, ಬದುರು ವಾಹನಗಳ ಬಂದಾಗ ಓಡಾಟ ನಡೆಸಲು ಕಷ್ಟವಾಗುತ್ತಿದೆ. ಕಿರಿದಾದ ರಸ್ತೆ ಬದಿಯಲ್ಲಿ ವೈನ್ ಸ್ಟೋರ್ ಜಾಗದಲ್ಲಿ ಬಾರ್ ನಿರ್ಮಾಣ ಮಾಡಿ ಗ್ರಾಹಕರಿಗೆ ಅಲ್ಲಿಯೇ ಕುಡಿಯಲು ಅವಕಾಶ ಮಾಡಿಕೊಟ್ಟಿದ್ದು ಗ್ರಾಹಕರು ರಸ್ತೆಗಳಲ್ಲಿ ವಾಹನ ನಿಲ್ಲಿಸಿ ಅಲ್ಲಿಯೇ ಕುಡಿದು ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡುತ್ತಿದ್ದಾರೆ. ಇದರಿಂದ ಈ ಭಾಗದಲ್ಲಿ ಸಂಚಾರಿಸುವ ಹೆಣ್ಣು ಮಕ್ಕಳು, ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿದ್ದಾರೆ.



ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ

ವೈನ್ ಸ್ಟೋರ್ ಜಾಗದಲ್ಲಿ ಬಾರ್ ನಿರ್ಮಾಣ ಮಾಡಿದ್ದೂ ಅಲ್ಲದೆ ಅಲ್ಲಿಯೇ ಅಕ್ರಮವಾಗಿ ಮದ್ಯ ಸೇವನೆಗೆ ಅವಕಾಶ ನೀಡಲಾಗಿದೆ. ಕುಡುಕರ ಕಾಟದಿಂದ ಈ ರಸ್ತೆಯಲ್ಲಿ ಮಹಿಳೆಯರು ಓಡಾಟ ನಡೆಸದಂತೆ ಪರಿಸ್ಥಿತಿಯಿದೆ. ಅಬಕಾರಿ ಅಧಿಕಾರಿಗಳು ಹಾಗೂ ನಗರಸಭೆ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ, ನಮ್ಮ ಸಮಸ್ಯೆ ಕೇಳೋರಿಲ್ಲ, ಬಗೆಹರಿಸುವ ಇಚ್ಛಾಶಕ್ತಿಯನ್ನು ಸ್ಥಳೀಯ ಆಡಳಿತಾಧಿಕಾರಿಗಳು ಮಾಡುತ್ತಿಲ್ಲ ಎಂದು ಸ್ಥಳೀಯ ಮುಖಂಡರು ತಿಳಿಸಿದ್ದಾರೆ.

ಮನೆಗೆ ಭೇಟಿ ನೀಡಿ ವಿದ್ಯಾರ್ಥಿನಿಯ ಪೋಷಕರಿಗೂ ಶುಭ ಕೋರಿದ ಶ್ರೀನಿವಾಸ್

ಟಾಪರ್ ಬಿಂದುಗೆ ಶಾಸಕರ ಅಭಿನಂದನೆ

ನೆಲಮಂಗಲ: ಹೊಯ್ಸಳ ಕಾಲೇಜಿನ ಬಿಂದು.ಎ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಶೇ.99.5(597) ಅಂಕ ಪಡೆದು ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿರುವ ಹಿನ್ನಲೆ ನೆಲಮಂಗಲ ಶಾಸಕ ಎನ್.ಶ್ರೀನಿವಾಸ್ ವಿದ್ಯಾರ್ಥಿನಿ ಮನೆಗೆ ಭೇಟಿ ನೀಡಿ ಅಭಿನಂದನೆ ಸಲ್ಲಿಸಿದರು.

ನಗರಸಭೆ ವ್ಯಾಪ್ತಿಯ ಸುಭಾಷ್‌ನಗರದಲ್ಲಿರುವ ವಿದ್ಯಾರ್ಥಿನಿ ಬಿಂದು.ಎ ರವರ ಮನೆಗೆ ಭೇಟಿ ನೀಡಿ ವಿದ್ಯಾರ್ಥಿನಿಯ ತಂದೆ ಅಶೋಕ್, ತಾಯಿ ಕರಿಬಸಮ್ಮನವರಿಗೆ ಸಹ ಅಭಿನಂದನೆ ಸಲ್ಲಿಸಿ ಸಿಹಿ ತಿನ್ನಿಸಿ ಶುಭಕೋರಿದರು. ಇದೇ ಸಮಯದಲ್ಲಿ ಹೊಯ್ಸಳ ಕಾಲೇಜಿನ ಪ್ರಾಂಶುಪಾಲ ಗೌರಿಶಂಕರ್, ಗೋಪಾಲ್ ಹಾಗೂ ಉಪಪ್ರಾಂಶುಪಾಲ ಚಿದಾನಂದ್ ಗೌಡರವರಿಗೆ ಸಹ ಸಿಹಿ ತಿನ್ನಿಸಿ ಶುಭಕೋರುವ ಮೂಲಕ ಮುಂದಿನ ದಿನಗಳಲ್ಲಿ ಮತ್ತಷ್ಟು ಮಕ್ಕಳು ರಾಜ್ಯಕ್ಕೆ ಟಾಪರ್ ಬರುವಂತೆ ಮಾಡಿ ಎಂದು ತಿಳಿಸಿದರು. ಅಭಿನಂದನೆ ಸಲ್ಲಿಸಿ ಮಾತನಾಡಿದ ಶಾಸಕ ಎನ್.ಶ್ರೀನಿವಾಸ್, ನಮ್ಮ ಕ್ಷೇತ್ರದ ಹೆಣ್ಣು ಮಗಳು ಬಿಂದು ರಾಜ್ಯಕ್ಕೆ ತೃತೀಯ ಸ್ಥಾನ ಪಡೆದು ಟಾಪರ್ ಆಗಿರುವುದು ಸಂತೋಷವಾಗಿದೆ. ಅವರ ಮನೆಗೆ ಬಂದು ಶುಭಕೋರಿದ್ದು, ಅವರಂತೆ ಕ್ಷೇತ್ರದ ವಿದ್ಯಾರ್ಥಿಗಳು ಸಾಧನೆ ಮಾಡಲಿ ಎಂಬುದು ನನ್ನ ಆಶಯ. ತಂದೆ-ತಾಯಿಯ ಸಹಕಾರ, ಹೊಯ್ಸಳ ಕಾಲೇಜಿನ ಶಿಕ್ಷಕವರ್ಗದ ಪರಿಶ್ರಮದ ಜತೆಗೆ ವಿದ್ಯಾರ್ಥಿನಿ ಸಾಧನೆ ಶ್ಲಾಘನೀಯ. ಮುಂದಿನ ದಿನಗಳಲ್ಲಿ ಅದ್ದೂರಿ ಪ್ರತಿಭಾಪುರಸ್ಕಾರ ಮಾಡಲಾಗುತ್ತದೆ ಎಂದರು. ಸಂದರ್ಭದಲ್ಲಿ ಬಿಜಿಎಸ್ ಕೆ.ಸಿ ರಮೇಶ್, ಎನ್‌ಪಿಎ ಅಧ್ಯಕ್ಷ ಎಂ.ಕೆ.ನಾಗರಾಜು, ನಗರಸಭೆ ಅಧ್ಯಕ್ಷ ಎನ್.ಗಣೇಶ್, ಎನ್‌ಪಿಎ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ್, ಹನುಮಂತೇಗೌಡ, ಹೊಯ್ಸಳ ಕಾಲೇಜು ಪ್ರಾಂಶುಪಾಲರಾದ ಗೌರಿಶಂಕರ್, ಗೋಪಾಲ್, ಟಿಎಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು, ಚೇತನ್, ಆನಂದ್, ಕೆ.ಕೃಷ್ಣಪ್ಪ, ಲಕ್ಷ್ಮೀನಾರಾಯಣ್, ಚಂದ್ರಕುಮಾರ್, ಸಿ.ಎಂ.ಗೌಡ, ಪದ್ಮನಾಭ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



CHANGE OF NAME

I, SIDDARTH BHOJAK residing at No.F-10, 2nd Floor, Opp IIMB, Bannerghatta Road, Bangalore - 560 076, have changed my name from **SIDHARTH BHOJAK** to **SIDDARTH BHOJAK,** vide affidavit dated 10/4/2026 sworn to before V Rajashekhara Advocate and Notary Bangalore.

IN THE COURT OF THE ADDL SENIOR CIVIL JUDGE AND J.M.F.C AT GUDIBANDA
O. S. NO.141/2017.

Plaintiff : Seetharamappa S/o Late Venkatashamy, Aged about 63 years, R/at- Bashettihalli village, Mandikal Hobli, Chickballapur Taluk. -V/S-
Defendants : 1. Harin kumar, and others
Defendant no.10 : Nanjappa S/o Dodda-Venkataramappa, Aged about 47 years, Permanent residents of Bushettahalli Village, Mandikal Hobli, Chickballapur taluk.

DRAFT PAPER PUBLICATION

Take steps to the defendant no 10, if any 5 rule 20(1)(a) read with section 151 of C.P.C. the plaintiff beg to submits as follows:-

Whereas, the plaintiff have filed suit against Defendants for the relief of declaration and permanent injunction.

SCHEDULE

The property land bearing Sy.No.48/2 measuring 4 acres 04 guntas out of this 2 acre 03 guntas consisting a house premises And cattle shed, stocked hay, situated Nandanaganahalli village, Mandikal Hobli, Chickballapur Taluk and District is bounded on East : Dyvarahalli - Subbamma.'s property. And his His own hosue, West by : B.B.Road and remaining property, North by : Chikkakemkpanna's property androad, South by : Avulareddy. You are defendant No.10 are interested persons in respect of above said suit the plaintiff have filed suit against defendants for the relief of declaration and Permanent injunction. You are hereby directed to appear in the above said court in person or through pleader duly instructed and able to answer all the material questions arising in the suit or to accompanied some person able to answer allowed; 1 such question on the day of **on. 24/04/2026** at 11:00 clock in forenoon.

Take notice that in default of your appearance on the date before mentioned in the appeal it will be heard and determine ex prate. Given under my hand seal of the court on the day of 01.04.2026.

By order of the Court
Chief Administrative officer
Senior Civil Judge & J.M.F.C At Gudibande
S. Gopalakrishna, Advocate, Chickballapur.

PUBLIC NOTICE

This is to inform to the General public that, the original sale deed dated:20-06-2006 registered as document No.3888/2013-14, registered in the office of sub-registrar Hoskote, Bengaluru Rural District, in respect of Sy No.126/2 situated at Hullur Amanikere Village, Kasaba Hobli, Hoskote Taluk, Bengaluru Rural District, Bengaluru which is more-fully described in the schedule hereunder.

SCHEDULE PROPERTY

All the piece and parcel of the property bearing Sy No.126/2, situated at Hullur Amanikere Village, Kasaba Hobli, Hoskote Taluk, Bengaluru Rural District, Bengaluru, measuring 1 Acres 10 Guntas with all right title and interest and all privileges attached thereto.

The aforesaid Registered sale deed registered in name of Savita.P.B W/o Krishnamurthy R/at:Poojena Agrahara Village, Anugondanahalli Hobli, Hoskote Taluk, Bengaluru Rural District, Bengaluru, pertaining to the schedule property mention herein above has been lost/misplaced while transit and Complaint dated:09-04-2026 in respect of the same had been lodged to the Hoskote Police station Bengaluru Rural District, Bengaluru to search and give the lost/misplaced registered sale deed to the complainant. I hereby request the General public at large or finder of the said registered sale deed is requested to contact the undersigned.

If anybody is claiming any right title and interest upon the schedule property herein above mentioned shall file their claim with documentary proof **within seven days** from the date of this public notice in the office of the undersigned, failing which the undersigned will be hold that, nobody has got any right title and interest in respect of the schedule property mentioned herein above.

VASANTHAPPA & ASSOCIATES
Advocate
No.17, Kasturi Towers, 2nd Floor, Kilari Road, Bengaluru-560053.
Mob: 9449751789. Dated:10-04-2026

IN THE COURT OF THE VI ADDL CITY CIVIL AND SESSIONS JUDGE AT BENGALURU (CCH-11)
P. & S.C. NO. 188/2026

BETWEEN: 1. Shivalingaiah, aged about 68 years, S/o Mallashetty, **2. Smt. Padma**, W/o. Shivalingaiah, aged about 56 years, **3. Geetha T.S.**, D/o. Shivalingaiah, W/o. Prakash R.M, aged about 36 years, **4. Smt. Priyanka**, W/o Late Praveen Kumar T.S., aged about 28 years, All are R/at: No. 62, M.S. Layout, Jaraganahalli, Chunchaghatta Main Road, J.P Nagar 6th Phase, Bangalore 560078 **...PETITIONERS**
AND: NIL ... RESPONDENT

NOTICE

Whereas the Petitioners have filed the above case in P & SC No. 188/2026 for succession certificate in the name of the petitioners in respect of the schedule property mentioned hereunder was held by deceased **Praveen Kumar.T.S** who is the son of the 1st and 2nd petitioner, brother of the 3rd Petitioner and Husband of the 4th petitioner, died on 03/02/2026.

Interested parties are hereby summoned to appear before this Hon'ble court in personally or by a Pleader duly instructed to answer all material question relating to the suit on **09/06/2026** at **11:00 AM.** Filing wherein the suit will be heard and determined by placing as ex prate."

SCHEDULE

Golden Ornaments pledged by the deceased Praveen Kumar with Muthoot Finance corporation, Yelachenahalli Branch, Bengaluru 560078, to the tune of Rs. 24,28,600/-.

Given under my hand and seal of the Court on this 10/04/2026

By order of the Court, Senior Sheristedar, City Civil Court, Bengaluru.

BEFORE THE MOTOR ACCIDENT CLAIMS TRIBUNAL AT BANGALORE
MVC NO. 4538/2025

DEEPAKKUMAR ... PETITIONER -V/s- **BAJAJ ALLIANZ Gen Ins Co ltd** and another. ... **RESPONDENT**

NOTICE TO THE SECOND RESPONDENT

Arun E, S/o Eshwar Gowda .B.N, No.825, 7th Main, Narmada Nadi Road, Brundavananagar, Srinagar, Banashankari, Bengaluru-560050. Karnataka. (RC owner of Auto No. KA-01-AR-1388) ... **RESPONDENT 2**

Whereas the petitioner has instituted the above claim petition against you claiming compensation amount of Rs. 20,00,000/-(Rs Twenty Lakhs only) together with cost and interest for the injuries sustained in the Motor Vehicle Accident occurred on 18-04-2025 at about 12.30 PM by Auto No. KA-01-AR-1388 belonging to you, near Bus Stop K.H. Circle, Dr. Marigowda Road, Bengaluru City, hence take notice and appear before SCCH No.18 on **14/05/2026** at **11:00 A.M** in person or by a pleader duly instructed and able to answer all material questions relating to the claim petition.

In default of your appearance on the date and time aforementioned the petition will be heard and disposed off by exparte.

Given under my hand the seal of the court on this 07/04/2026

By order of the Court, Assistant Registrar, Court of Small Causes, Bangalore

ASHA .A, Advocate
#6, 2nd Floor, Naidu Layout, Next to Golden Park Apartment, Devarachikkanahalli Main Road, IIM Post, Bommanahali, Bangalore-560076

BEFORE THE MOTOR ACCIDENT CLAIMS TRIBUNAL, AT BENGALURU (SCCH-14)
M.V.C.No. 6281/2024

BETWEEN : SRI M. SAMPANGI ...PETITIONER
AND : M/S. STAR RMC AND OTHERS ...RESPONDENTS

NOTICE TO THE RESPONDENT NO.03

Address of the Respondent No.03
SANTOSH GOODA, S/O BIPRA CHARAN, AGED ABOUT 31 YEARS, R/AT : STAR RMC YARD, AVADANAHALLI, KASABA, ANEKAL, BENGALURU RURAL

Whereas the above named petitioner has filed the claim petition against the respondents claiming for a sum of Rs.50,00,000/- (Fifty lakhs only), on the account of injury in a road traffic accident at about 5 P.M on 28.02.2024 on Anekal Bus stand Road, Anekal Gandhi circle in front of Apollo Medical store, Ramakutira Anekal taluk, Bengaluru Rural Dist, offending by your tipper lorry bearing Vehicle No. KA-51-AJ-2510 driver by name Santhosh Gooda' Respondent No.03 of the above tipper lorry is here by directed to appear before this Hon'ble Tribunal (SCCH-14), Small causes court, City Civil Court Complex, Bengaluru, in person or through the pleader on **21/4/2026 at 11 A.M.**, if failing which the matter will be heard Ex-parte and it will be disposed off in accordance with law.

Given under, my hand and seal of the court on this day10/4/26.

By Order of the Court
Sd/- Assistant Registrar
Court of Small Causes, Bengaluru

Address of the Advocate:
Manjunath B, Advocate.
Office at No. 78/1, 'Garuda', 2nd Floor, New KR Road, Basavanagudi, Bengaluru-560 004.

IN THE COURT OF THE 56th ADDL. CITY CIVIL AND SESSIONS JUDGE AT BANGALORE
O.S. NO. 8846 / 2024 (CCH-57)

BETWEEN : BANK OF BARODA,
(Jalahalli Branch, Bengaluru)
Rep. by its Chief Manager ...Plaintiff
AND: Mrs. CHANNAJAMMA ...Defendants

NOTICE/SUMMONS TO DEFENDANT BY WAY OF PP

Mrs. CHANNAJAMMA
W/o Siddachar, Aged about 49 years, R/at #60 A, 1st Main Road, (Near Garments) Adakamaranahalli Colony, Bangalore North - 562 123.

WHEREAS the aforementioned plaintiff bank has filed **O.S.No.8846/2024 before the Hon'ble 56th Addl. City Civil & Sessions Judge (CCH-57) at Bangalore** for recovery of a sum of **Rs.7,80,646.70 (Rupees Seven Lakhs Eighty Thousand Six Hundred and Forty Six and Paise Seventy only)** from the Defendant with Court Costs and future normal interest at the rate of 15.90% p.a. together with penal interest at the rate of 2% p.a. compounded monthly, from 24.11.2024 to till realization in full, with costs. The case is now posted for hearing on **11.06.2026.** Therefore you are hereby summoned to appear before this Hon'ble Court on **11.06.2026 at 11.00 AM.** either in person or by pleader duly instructed without fail, failing which the matter will be heard and determined in your absence.

Given under my hand and seal of the court this 10th day of April, 2026.

By order of the Court, Senior Sheristedar
City Civil Court, Bangalore.

NAGARAJ DAMODAR, Advocate,
544, Near Sai Baba Temple, Sampige Road, Malleshwaram, Bangalore - 560003.

IN THE HON'BLE COURT OF 1st ADDL. SENIOR CIVIL JUDGE, AT NELAMANGALA
OS No. 665/2021

PLAINTIFFS : Smt. Nagamma and Others
-V/s-
DEFENDANTS: Smt. Sannarangamma and Others

ADRESS OF THE DEFENDANT No.17 & 18

17. SMT CHANDRAKALA @ CHANDRA .M, W/o G. Kumar, aged about 42 years
18. G. KUMAR, aged about 47 years, Both defendant No. 17&18, R/at No. 101, Teacher Colony, Nandaramaiahnapalya, Arishinakunte Post, Nelamangala Taluk, Bangalore Rural District.

PUBLIC NOTICE

WHEREAS, the plaintiffs have filed the above case against defendants for the relief of Partition and separate possession and for other reliefs in the above case with respect to suit schedule property. The Hon'ble Court has posted the above case on **15/06/2026** at **11:00 A.M.** for your appearance personally or through your counsel, on that day. Hence, you are summoned to appear before the court on the said date personally or through your counsel, on that day otherwise the Hon'ble Court will be deciding the matter in your absence by placing you ex-parte.

SCHEDULE

1. The agricultural land bearing old Sy.No.161 new Sy.No.161/1 measuring to an extent of 1 acre situated at Kambalu village, Sompura Hobli, Nelamangala Taluk, Bangalore Rural District Bonded on: **2.** The agricultural land bearing old Sy.No.161 new Sy.No.161/4 measuring to an extent of 1 acre 28 guntas situated at Kambalu village, Sompura Hobli, Nelamangala Taluk, Bangalore Rural District Bonded on: **3.** The agricultural land bearing old Sy.No.161 new Sy.No.161/2 measuring to an extent of 1 acre situated at Kambalu village, Sompura Hobli, Nelamangala Taluk, Bangalore Rural District Bonded on: **4.** The agricultural land bearing old Sy. No.161 new Sy.No. 161/3 measuring to an extent of 1 acre situated at Kambalu village, Sompura Hobli, Nelamangala Taluk, Bangalore Rural District Bonded on: **5.** The agricultural land bearing Sy. No. 150/1 measuring to an extent of 12 guntas situated at Kambalu village, Sompura Hobli, Nelamangala Taluk, Bangalore Rural District Bonded on: **6.** All the part and parcel of Agricultural land bearing Sy. No.151/4 measuring to an extent of 0-30 guntas situated at Kambalu village, Sompura Hobli, Nelamangala Taluk, Bangalore Rural District Bonded on:

Given under my hand and seal of this court on this 09/04/2026

By order of the Court, Sheristedar, Court of Senior Civil Judge & J.M.F.C Nelamangala

SRI. C. BASAVARAJU, DEVARAJAIAH .A
Advocates
No. 81, Opposite to Canara Bank ATM, Devanga Street, Nelamangala Town, Nelamangala 562123

IN THE COURT OF THE DEPUTY COMMISSIONER: KOLAR DISTRICT AT KOLAR
RA: 282/2025

BETWEEN: NAGARAJA.B.P S/o Papaiah Aged about 50 years, R/at Bandarahalli Village,Duggasandra Hobli,Mulbagal Taluk,Kolar District. **...APPELLANT**
AND: The Asst.Commissioner,Kolar Sub Division,Kolar & others **...RESPONDENTS**

NOTICE TO RESPONDENT No.5 UNDER ORDER 5 RULE 20 OF CPC

Sri.Basavaraju S/o Eranna Aged about 55 years, R/o M.Agrahara village, Duggasandra Hobli, Mulbagal Taluk.

Whereas the appellant above named has preferred the above appeal against the orders dated 04/04/2025 passed by the respondent No.1 in RA: 118/2023 pertaining to land bearing Sy.No.35/2 mg 0.11 guntas of M.Agrahara Village, Duggasandra Hobli, Mulbagal Taluk. You being the Respondent No.5 in the above case is evading to take notice issued by this Hon'ble court and hence you are hereby summoned to appear before this Hon'ble Court in person or by a Pleader duly instructed by you on 28/ 4/2026 at 3:00 to answer the same, failing which the above appeal will be disposed off ex-parte in your absence.

DEPUTY COMMISSIONRE
KOLAR DISTRICT, KOLAR
Advocate for Appellant
L.NAGARAJA,Advocate, Kolar.

ಜಾಹೀರಾತಿಗಾಗಿ ಸಂಪರ್ಕಿಸಿ
9845438807
9611755391

IN THE COURT OF THE DEPUTY COMMISSIONER AT KOLAR
RAP.NO.422/2025

Appellant : Venkateshappa and others
-V/s -
Respondents : The Asst. Commissioner & others.

NOTICE UNDER ORDER 5 RULE 20 OF CPC TO Respondent No.5 & R3

T.A.Dwarakanatha S/o T.A.Iyer R/ at Nandi Nilaya, Chinmaya New Extension Kolar.
R3. Ramadasappa S/o late Narayan appa, a/b 58 years, R/at Behind Nandini Bar, Near Reddappa House, Kolar Town, Kolar.

Whereas, the appellant have filed this appeal against the orders passed by the Assistant Commissioner, Kolar. This Hon'ble court be pleased to issued notice to the proposed **RESPONDENT No.5 & R3** intentionally evading and avoiding to receive the summons issued by this Hon'ble court. Hence you proposed **RESPONDENT R No. 5** is hereby notice to appear in this court in person or by an advocate on 28.04.2026 at 3.00 p.m. to file objections to the appeal, in default of your appearance on the same day the court take as exparte.

Given under my hand seal and signature on this day.10.04.of 2026 at Kolar.

By order of the court.
The Deputy Commissioner
Kolar
Advocate of appellants
C.R.Krishna Muthy, Advocate, Kolar
Kolar Date: 7/4/2026

IN THE COURT OF THE PRINCIPAL CIVIL JUDGE & JMFC AT MANGALURU
O.S.NO.1437/2025

Between:
Smt. Girija J. Moily and others ...Plaintiffs
AND
Mr. Fakruddin Kunil and Others ...Defendants

NOTICE

To,
Mr. A.N. Khan,
Adult, Advocate & Notary,
Hassan District,
Hassan, Karnataka.

Take notice, the Plaintiffs instituted a suit against you for the reliefs claimed in the Plaint and it is posted on **11.06.2026 at 11 A.M.** for your appearance in this court in person or by a pleader duly instructed and able to answer all material questions relating to this suit or who shall be accompanied by some person able to answer all such questions and if you fail to appear on the above said date the same will be proceeded by setting you exparte.

Given under my hand and seal of the Court this 8th day of April 2026.

(By order of the court)
Sd/- Chief Ministerial Officer
Civil Judge & J.M.F.C. Court, at Mangaluru
Sd/- (B.R.Kumar)
Advocate for Plaintiffs

IN THE COURT OF III ADDL. DISTRICT AND SESSIONS BENGALURU RURAL DIST AT ANEKAL.
G & W.C. No. 5010/2026

BETWEEN : 1. KAVITHA RAMESH, W/o Ramesh, D/o Late Chikkanna, Aged about 43 years, **2. Master THIMMARAJU** S/o Late Chikkanna, Aged about 17 Years, Both R/at, No. 2/141 Kottaiulimangalam Village, Ulimangalam, Hosur Taluk, Krishnagiri. **...PETITIONERS**
AND : Nil ...RESPONDENT

PUBLIC NOTICE

WHEREAS, the petitioners filed the above case for issue guardian certificate in favor of Petitioner No.1 and to alienate schedule property of Agricultural Land bearing Sy.No. 2/13 measuring 0-01gunta out of 0-21.02 Guntas, situated at Ballur Village, Attibele Hobli, Anekal Taluk, Bengaluru District. G & W.C. No. 5010/2026. On the file 3rd Additional District and Session Judge at Anekal, an anybody have any objection pleased to appear in this Hon'ble court in person by an advocate duly instructed **on 02.06.2026 at 11.00 A.M** to Answer to claim. Take notice that in default of your appearance on the day about mentioned the matter will be heard and decided in your absence as per law.

SCHEDULE PROPERTY

All the part and parcel of the property bearing Sy.No. 2/13 measuring 0-01 gunta out of 0-21.02 Guntas, situated at Ballur Village, Attibele Hobli, Anekal Taluk, Bengaluru District.

East by : Property belongs to Shanthamma, **West by :** Road, **North by :** Rajakaluve, **South by :** Property belong to Seenappa.

Given under my hand and seal of the court this is the 09.04.2026.

By Order of the Court, Chief Ministerial Officer, III Addl. Dist. & Sessions Judge's Court, Anekal, Bangalore Rural Dist.
Advocate for petitioner : **M. SREENIVASAN**
No.7, STB Complex, Near Anekal Court Attibele Road, Anekal Taluk, Bengaluru District-562106.

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ದೂರವಾಣಿ : +91-80-29619801 ಮಿಂಚೆ ಅಂಚೆ : md.ksmscl@gmail.com

No: KSMSCL/EQPT/HFW/CH/TND/47/2025-26 Date: 10.04.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ:

1. KSMSCL/EQPT/HFW/CH/TND/47/2025-26 (IND 0374) Date: 18.03.2026.
2. KSMSCL/EQPT/HFW/NCD/PD/TND/48/2025-26 (IND 0375) Date: 18.03.2026.
3. KSMSCL/EQPT/HFW/PMABHIM/IPHL/TND/49/2025-26 (IND 0376) Date: 18.03.2026.
4. KSMSCL/EQPT/HFW/MH/15TH FC /TND/50/2025-26 (IND 0377) Date: 18.03.2026.

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

1. ಮಕ್ಕಳ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - **IND 0374**
2. **NCD** ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - **IND 0375**
3. **PMABHIM** ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - **IND 0376**
4. ತಾಯಿ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಉಪಕರಣಗಳ ಪೂರೈಕೆಗೆ ಸಂಬಂಧಿಸಿದ ಟೆಂಡರ್ - **IND 0377**

ತಾಂತ್ರಿಕ ವಿವರಣೆ, ಇ.ಎಮ್.ಡಿ. ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ **https://kppp.karnataka.gov.in** ನಲ್ಲಿ ದಿನಾಂಕ: **04.02.2026** ರಿಂದ ಟೆಂಡರ್‌ಗಳನ್ನು, ದಾಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಉ&ಸ)
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾ.ಮಾ.ಸ.ಇ/ವಾತ್ರ/144/ಆಡಳಿತ/2026-27

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಧಾರವಾಡ
ಫೋ: 0836-2213838 Email: cedharwad@gmail.com

ನಂ.ಎಚ್.ಡಿ.ಎಂ.ಸಿ/66/07/02/2026-27 ದಿನಾಂಕ:- 10-04-2026

ಅಲ್ಪಾವಧಿ/ಪೂರ್ಣಾವಧಿ ಇ-ಟೆಂಡರ್ ಅಧಿಸೂಚನೆ

ಜಾಹಿರಾತು ನಂ:- ದಿನಾಂಕ:

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಯೋಜನೆ ಅನುದಾನದಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, PWD ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರು ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಪಾಲಿಕೆ ಹಾಗೂ ವಾರ್ಡ ಸದಸ್ಯರ ಅನುದಾನ :-

1) ಇಂಡೆಂಟ ನಂ. 42526/27.35 ಲಕ್ಷ/ಸಾಮಾನ್ಯ 2) ಇಂಡೆಂಟ ನಂ. 48787/5.00ಲಕ್ಷ/ಸಾಮಾನ್ಯ 3) ಇಂಡೆಂಟ ನಂ. 48794/25.00ಲಕ್ಷ/ಸಾಮಾನ್ಯ 4) ಇಂಡೆಂಟ ನಂ. 48303/14.00ಲಕ್ಷ/ಸಾಮಾನ್ಯ 5) ಇಂಡೆಂಟ ನಂ. 53110/6.20ಲಕ್ಷ/ಸಾಮಾನ್ಯ
6) ಇಂಡೆಂಟ ನಂ. 57163/22.00ಲಕ್ಷ/ಪ್ರವರ್ಗ-1 7) ಇಂಡೆಂಟ ನಂ. 57160/10.00ಲಕ್ಷ/ಸಾಮಾನ್ಯ 8) ಇಂಡೆಂಟ ನಂ. 57162/10.00ಲಕ್ಷ/ಪರಿಶಿಷ್ಟ ಜಾತಿ 9) ಇಂಡೆಂಟ ನಂ. 57161/8.00ಲಕ್ಷ/ಪ್ರವರ್ಗ-2ಎ 10) ಇಂಡೆಂಟ ನಂ. 57190/6.00ಲಕ್ಷ/ಸಾಮಾನ್ಯ
11) ಇಂಡೆಂಟ ನಂ. 57165/7.50ಲಕ್ಷ/ಸಾಮಾನ್ಯ 12) ಇಂಡೆಂಟ ನಂ. 57166/40.00ಲಕ್ಷ/ಸಾಮಾನ್ಯ 13) ಇಂಡೆಂಟ ನಂ. 56772/18.00ಲಕ್ಷ/ಸಾಮಾನ್ಯ 14) ಇಂಡೆಂಟ ನಂ. 56758/4.80ಲಕ್ಷ/ಸಾಮಾನ್ಯ 15) ಇಂಡೆಂಟ ನಂ. 57191/7.90ಲಕ್ಷ/ಸಾಮಾನ್ಯ
16) ಇಂಡೆಂಟ ನಂ. 57196/3.50ಲಕ್ಷ/ಪರಿಶಿಷ್ಟ ಪಂಗಡ 17) ಇಂಡೆಂಟ ನಂ. 57197/5.70ಲಕ್ಷ/ಸಾಮಾನ್ಯ 18) ಇಂಡೆಂಟ ನಂ. 57210/3.36ಲಕ್ಷ/ಸಾಮಾನ್ಯ 19) ಇಂಡೆಂಟ ನಂ. 57212/1.70ಲಕ್ಷ/ಸಾಮಾನ್ಯ 20) ಇಂಡೆಂಟ ನಂ. 57259/25.20ಲಕ್ಷ/ಪ್ರವರ್ಗ-2ಎ 21) ಇಂಡೆಂಟ ನಂ. 57258/10.00ಲಕ್ಷ/ಪರಿಶಿಷ್ಟ ಜಾತಿ 22) ಇಂಡೆಂಟ ನಂ. 52330/16.00ಲಕ್ಷ/ಸಾಮಾನ್ಯ 23) ಇಂಡೆಂಟ ನಂ. 57256/94.30ಲಕ್ಷ/ಪರಿಶಿಷ್ಟ ಜಾತಿ 24) ಇಂಡೆಂಟ ನಂ. DMA/2026-27/SE7670/47.72ಲಕ್ಷ/ಸಾಮಾನ್ಯ

ಒಟ್ಟು **24** ಕಾಮಗಾರಿಗಳು ಮೊತ್ತ **ರೂ. 419.23** ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು ಧಾರವಾಡ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ **0836-2213838** ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ **http://www.kppp.karnataka.gov.in** ರಲ್ಲಿ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪ್ರೊಕ್ಯೂರಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರ ಇ-ಪ್ರೊಕ್ಯೂರಮೆಂಟ್‌ನಲ್ಲಿ ಅ.ನಂ. **1** ರಿಂದ **24** ರವರೆಗೆ ದಿನಾಂಕ: **13-04-2026** ರಿಂದ ಪಡೆಯಬಹುದಾಗಿದೆ.

ಈ ಮೇಲಿನ ಕಾಮಗಾರಿಗಳಿಗೆ (1 ರಿಂದ 21)

1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	:	**02/05/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ	:	**04/05/2026 ಬೆಳಗ್ಗೆ 10.30 ಗಂಟೆ**

ಈ ಮೇಲಿನ ಕಾಮಗಾರಿಗಳಿಗೆ (22 ರಿಂದ 24)

1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	:	**23/04/2026 ಸಂಜೆ 04.00 ಗಂಟೆ**
2) ಟೆಂಡರ್ ತೆರೆಯುವ ದಿನಾಂಕ	:	**24/04/2026 ಸಂಜೆ 04.30 ಗಂಟೆ**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	**29/04/2026 ಬೆಳಗ್ಗೆ 10.30 ಗಂಟೆ**

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಧಾರವಾಡ

ವಾ.ಸಾ.ಇ./ಧಾರವಾಡ/43/2026-27/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-477/110/2026-27 (E-192471) ದಿನಾಂಕ: 09.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಕೆ. ಸತೀಶ್ ಕುಮಾರ್ ಮತ್ತು ಇತರರು	ಯಲಹಂಕ	ಜಾಲ	ಬಾಗಲೂರು	9/1	1-8.08	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನ ಸುತ್ತಲೂ ಅಭಿವೃದ್ಧಿ ಹೊಂದಿರುವುದರಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿದ್ದು, ಪರಿಸರದಲ್ಲಿ ವಾಸದ ಬೆಳವಣಿಗೆಗಳು ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಪ್ರದೇಶವನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಹಾಗೂ ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು "ವ್ಯವಸಾಯ" ವಲಯದಿಂದ "ವಸತಿ" ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24x7). @BDAOfficialGoK

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶಿರಸಿ ಉಪ ವಿಭಾಗ, ಶಿರಸಿ-581401

ದೂರವಾಣಿ (PHONE): 08384-226445, e-mail: acfsirsi445@gmail.com
ಕ್ರಸಂ.: ಎ2/ಟೆಂಡರ/KPPP/Out Source/ವಿವ-06(2)/2026-27/61 ದಿನಾಂಕ: 06-04-2026

ಟೆಂಡರ್ ಪ್ರಕಟಣೆ

2026-27ನೇ ಸಾಲಿಗೆ ಸಾರ್ವಜನಿಕರಿಗೆ ಹಾಗೂ ನೋಂದಾಯಿತ ಹೊರಸಂಪನ್ಮೂಲ ಏಜನ್ಸಿಯವರಿಂದ ವೃತ್ತ ಕಛೇರಿ, ವಿಭಾಗೀಯ ಕಛೇರಿ, ಉಪ-ವಿಭಾಗೀಯ ಕಛೇರಿ ಹಾಗೂ ವಲಯ ಅರಣ್ಯಾಧಿಕಾರಿಗಳ ಕಛೇರಿಗಳಲ್ಲಿ ಅಗತ್ಯವಿರುವ ಕಾವಲುಗಾರರು, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು, ಕ್ಯಾಂಪ್ ಕಾವಲುಗಾರರ ಸೇವೆಯನ್ನು ಒದಗಿಸುವ ಬಗ್ಗೆ ಪಾರದರ್ಶಕ ನಿಯಮಗಳನುಸಾರ KPPP ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದ್ದು, ಈ ಕಛೇರಿಯಲ್ಲಿ 2026-27ನೇ ಸಾಲಿಗೆ ಶಿರಸಿ ಅರಣ್ಯ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೋಂದಣಿ ಹೊಂದಿರುವವರು ಇ-ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 27-04-2026 ಆಗಿದ್ದು, ಹೆಚ್ಚಿನ ಮಾಹಿತಿ/ ವಿವರವಾದ ಟೆಂಡರ ಪ್ರಕಟಣೆಯನ್ನು ಕಛೇರಿ ವೇಳೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಶಿರಸಿ ಉಪ ವಿಭಾಗ, ಶಿರಸಿರವರನ್ನು ಸಂಪರ್ಕಿಸುವುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಉಪ ವಿಭಾಗ, ಶಿರಸಿ

DIPR/KWR/KSMCA/41/26-27 Dt.10.04.2026

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಕಾರ್ಯನಿರ್ವಾಹಕ ಇಂಜಿನೀಯರ,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2025-26/47
ದಿನಾಂಕ : 09-04-2026

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ
Standard Bid Document KW-1, 2, 3

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ Standard Bid Document KW-1, 2, 3.ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 8 ಕಾಮಗಾರಿಗಳ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 2024-25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ 5054 ಯೋಜನೆ, 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos : 1) WORK_INDENT : 24860, 24858, 24856, 23927/CALL-2, 23897/CALL-2, 26070, 28788, 25787

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. **6.70** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **75.47** ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **10-04-2026** ರಿಂದ **24-04-2026** ರಂದು 16.00 ಗಂಟೆಯವರೆಗೆ. ಟೆಂಡರ ತೆರೆಯುವ ದಿನಾಂಕ : **27-04-2026** ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ-ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಪಂ.ರಾಜ್. ಇಂಜಿನೀಯರಿಂಗ್ ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್ಎಂಸಿಎ/12/2026-27

ಕಿರುಸುದ್ದಿ

ವಿಶೇಷ ಆಯುಕ್ತರಾಗಿ ಸುಷ್ಮಾ ಗೋಡ್ಬೋಲೆ ನೇಮಕ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ, ಚುನಾವಣೆ ಮತ್ತು ವಿಪತ್ತು ನಿರ್ವಹಣೆ, ಸಾರ್ವಜನಿಕ ಸಂಪರ್ಕ ಮತ್ತು ಸಮನ್ವಯ ವಿಭಾಗದ ವಿಶೇಷ ಆಯುಕ್ತರನ್ನಾಗಿ ಐಎಎಸ್ ಅಧಿಕಾರಿ ಸುಷ್ಮಾ ಗೋಡ್ಬೋಲೆ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ದೀರ್ಘಕಾಲದಿಂದ ನಿಯೋಜನೆಯ ನಿರೀಕ್ಷೆಯಲ್ಲಿದ್ದ ಸುಷ್ಮಾ ಅವರು 2008ರ ಬ್ಯಾಚಿನ ಕರ್ನಾಟಕ ಕೆಡರ್ ಐಎಎಸ್ ಅಧಿಕಾರಿಯಾಗಿದ್ದಾರೆ. ವಿಶೇಷವಾಗಿ ವಿಪತ್ತು ನಿರ್ವಹಣೆ ಮತ್ತು ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ವಿಶೇಷ ಆಯುಕ್ತರನ್ನು ಸರ್ಕಾರ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ ಆದೇಶ ಹೊರಡಿಸಿದೆ.

ವಿದ್ಯಾಭ್ಯಾಸ, ಕ್ರೀಡೆಯಲ್ಲೂ ಅಭಿನವ ಕೆ.ಮೂರ್ತಿ ಸಾಧನೆ



ಬೆಂಗಳೂರು: ವಿ.ವಿ.ಪುರಂನ ಜೈನ್ ಕಾಲೇಜಿನ ವಿದ್ಯಾರ್ಥಿ ಅಭಿನವ ಕೆ. ಮೂರ್ತಿ ಅವರು ವಿದ್ಯಾಭ್ಯಾಸ ಹಾಗೂ ಕ್ರೀಡೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಎಲ್ಲರ ಗಮನ ಸೆಳೆದಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ರಲ್ಲಿ 592 ಅಂಕಗಳನ್ನು ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಅವರ ಈ ಸಾಧನೆ ನಿಯಮಿತ ಅಭ್ಯಾಸ, ಸ್ಪಷ್ಟವಾದ ಅರ್ಥಗ್ರಹಣ ಹಾಗೂ ಕಠಿಣ ಪರಿಶ್ರಮದ ಫಲವಾಗಿದೆ. ವಿದ್ಯಾಭ್ಯಾಸದ ಜೊತೆಗೆ ಅಭಿನವ ಅವರು ಟೇಬಲ್ ಟೆನ್ನಿಸ್ ಕ್ರೀಡೆಯಲ್ಲಿ ಕೂಡ ಅಪಾರ ಪ್ರತಿಭೆ ತೋರಿಸಿದ್ದಾರೆ. ಅವರು ಕರ್ನಾಟಕ 19 ವರ್ಷಕ್ಕಿಂತ ಕೆಳಗಿನ ವಿಭಾಗದಲ್ಲಿ ರಾಜ್ಯ ನಂ.1 ಹಾಗೂ ಪುರುಷರ ವಿಭಾಗದಲ್ಲಿ ನಂ.2 ಸ್ಥಾನಗಳನ್ನು ಪಡೆದಿದ್ದಾರೆ. ವಿದ್ಯಾಭ್ಯಾಸ ಮತ್ತು ಕ್ರೀಡೆಯನ್ನು ಸಮತೋಲನದಲ್ಲಿ ಮುಂದುವರಿಸಿದ ಅಭಿನವ ಅವರ ಶ್ರಮ, ಶಿಸ್ತು ಮತ್ತು ಸಮರ್ಪಣೆ ಶ್ಲಾಘನೀಯವಾಗಿದೆ. ಅವರು ಮುಂದಾಗಿ ಬಿ.ಕಾಂ ಜೊತೆ ಚಾರ್ಟರ್ಡ್ ಅಕೌಂಟೆನ್ಸಿ ಮಾಡುವ ಉದ್ದೇಶ ಹೊಂದಿದ್ದಾರೆ.

ಕೋಸ್ಟ್ ಗಾರ್ಡ್‌ಗೆ ಹೆಲಿಕಾಪ್ಟರ್‌ಗಳ ಹಸ್ತಾಂತರ

ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತೀಯ ಕೋಸ್ಟ್ ಗಾರ್ಡ್‌ಗೆ ನಾಲ್ಕು ಎಎಲ್‌ಎಚ್ ಎಂಕೆ-3 ಮ್ಯಾರಿಟೈಮ್ ರೋಲ್ (ಎಂಆರ್) ಹೆಲಿಕಾಪ್ಟರ್‌ಗಳನ್ನು ಹಸ್ತಾಂತರಿಸಿತು. ಏರೋನಾಟಿಕಲ್ ಕ್ವಾಲಿಟಿ ಅಶ್ಯೂರೆನ್ಸ್ (ಒಆರ್‌ಡಿಎಕ್ಯೂಎ) ಪ್ರಾದೇಶಿಕ ನಿರ್ದೇಶಕರ ಕಚೇರಿ ಮತ್ತು ಹೆಲಿಕಾಪ್ಟರ್ ವಿಭಾಗವು ಕೊಚ್ಚಿ ಮತ್ತು ಪೋರಬಂದರ್‌ನ ಕೋಸ್ಟ್ ಗಾರ್ಡ್ ಸ್ಕ್ವಾಡ್ರನ್‌ಗಳಿಗೆ ಹೆಲಿಕಾಪ್ಟರ್ ದಾಖಲೆಗಳನ್ನು ಹಸ್ತಾಂತರಿಸಿತು. ಈ ವಿತರಣೆಗಳು ಮಾರ್ಚ್ 2024ರಲ್ಲಿ ಸಹಿ ಹಾಕಲಾದ ಒಂಬತ್ತು ಎಎಲ್‌ಎಚ್ ಎಂಕೆ-3 (ಎಂಆರ್) ಒಪ್ಪಂದದ ಭಾಗವಾಗಿದೆ. ಈ ಸಂದರ್ಭದಲ್ಲಿ ಕೋಸ್ಟ್ ಗಾರ್ಡ್ ಕಮಾಂಡರ್ (ಪಶ್ಚಿಮ ಸಮುದ್ರ ತೀರ) ಡಿಐಜಿ ರಾಜೇಶ್ ಮಕ್ವಾನಾ, ಟಿಎಂ ಅ್ಯಂಡ್ ಬಾರ್ ಸಿಎಸ್‌ಒ (ವಿಮಾನಯಾನ) ಹೆಲಿಕಾಪ್ಟರ್ ಸಂಕೀರ್ಣದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪಿ.ಬಿ. ರಂಗರಾವ್ ಉಪಸ್ಥಿತರಿದ್ದರು. ಎಚ್‌ಎಎಲ್ 2022 ರವರೆಗೆ ಭಾರತೀಯ ಕರಾವಳಿ ಕಾವಲು ಪಡೆಗೆ 16 ಎಎಲ್‌ಎಚ್ ಎಂಕೆ-3 (ಎಂಆರ್) ಹೆಲಿಕಾಪ್ಟರ್‌ಗಳನ್ನು ತಲುಪಿಸಿದೆ. ಮಾರ್ಚ್ 2026 ರಲ್ಲಿ ಇನ್ನೂ ಆರು ಹೆಲಿಕಾಪ್ಟರ್‌ಗಳಿಗೆ ಹೆಚ್ಚುವರಿ ಆದೇಶಕ್ಕೆ ಸಹಿ ಹಾಕಲಾಗಿದೆ.

ವಿಶೇಷತೆಗಳೇನು?: ಎಎಲ್‌ಎಚ್ ಎಂಕೆ-3 (ಎಂಆರ್) ಸ್ಥಳೀಯ ಧ್ರುವ್ ಅಡ್ವಾನ್ಸ್ಡ್ ಹೆಲಿಕಾಪ್ಟರ್‌ನ ಕಡಲ ರೂಪಾಂತರವಾಗಿದೆ. ಇದು ಬಹು-ಪಾತ್ರದ ಅವಳಿ-ಎಂಜಿನ್ ಹೆಲಿಕಾಪ್ಟರ್ ಆಗಿದೆ. ಕಡಲ ಕಣ್ಗಾವಲು, ಹುಡುಕಾಟ ಮತ್ತು ರಕ್ಷಣೆ, ಅಪಘಾತ ಸ್ಥಳಾಂತರಿಸುವಿಕೆ, ಕರಾವಳಿ ಭದ್ರತೆ, ಕಾನೂನು ಜಾರಿ, ವಿಐಪಿ ಪ್ರಯಾಣ, ಲಾಜಿಸ್ಟಿಕ್ಸ್ ಮತ್ತು ಕಡಲ್ಗಳ್ಳತನ ವಿರೋಧಿ ಸೇರಿದಂತೆ ಬೇಡಿಕೆಯ ಕಡಲ ಕಾರ್ಯಾಚರಣೆಗಳಿಗೆ ಇದು ಸಜ್ಜುಗೊಂಡಿದೆ. ಸುಧಾರಿತ ಏವಿಯಾನಿಕ್ಸ್, ಆಧುನಿಕ ಗಾಜಿನ ಕಾಕ್‌ಪಿಟ್ ಮತ್ತು ರಾತ್ರಿ ಕಾರ್ಯಾಚರಣೆ ಸಾಮರ್ಥ್ಯದೊಂದಿಗೆ ಸಜ್ಜುಗೊಂಡಿರುವ ಎಎಲ್‌ಎಚ್ ಎಂಕೆ-3 (ಎಂಆರ್) ವೈವಿಧ್ಯಮಯ ಕಡಲ ಸನ್ನಿವೇಶಗಳಲ್ಲಿ ಭಾರತೀಯ ಕರಾವಳಿ ಕಾವಲು ಪಡೆಯ ಕಾರ್ಯಾಚರಣೆಯ ಸಿದ್ಧತೆಯನ್ನು ಗಮನಾರ್ಹವಾಗಿ ಬಲಪಡಿಸುತ್ತದೆ.

ಕಳೆದ ಬಾರಿ ರಾಜ್ಯದಲ್ಲಿ 12 ಸ್ಥಾನ ಈ ಬಾರಿ 18ನೇ ಸ್ಥಾನಕ್ಕೆ | ಪ್ರಯತ್ನ ನಿರೀಕ್ಷಿತ ಫಲ ನೀಡಿಲಿಲ್ಲ

ಫಲಿತಾಂಶದಲ್ಲಿ 6 ಸ್ಥಾನ ಕುಸಿದ ಮೈಸೂರು

ಮೈಸೂರು: 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆ ಮೈಸೂರು ಕಳೆದ ಬಾರಿಗಿಂತ 6 ಸ್ಥಾನ ಕುಸಿದಿದೆ. ಕಳೆದ ಬಾರಿ 12 ನೇ ಸ್ಥಾನದಲ್ಲಿ ಜಿಲ್ಲೆ ಈ ಬಾರಿ 18ನೇ ಸ್ಥಾನಕ್ಕೆ ಕುಸಿದಿದೆ. ಆದರೆ ಸಮಾಧಾನದ ವಿಷಯ ಎಂದರೆ ಕಳೆದ ಬಾರಿ ಶೇ.74.30ರಷ್ಟು ಫಲಿತಾಂಶ ಪಡೆದಿತ್ತು. ಈ ಬಾರಿ ಶೇ 10.30 ರಷ್ಟು ಹೆಚ್ಚಿಸಿಕೊಂಡು

ಶೇ.84.80 ರಷ್ಟು ಸಾಧನೆ ಮಾಡಿದರೂ, ಒಟ್ಟಾರೆ ರಾಜ್ಯದಲ್ಲಿ ಕಳೆದ ವರ್ಷಕ್ಕಿಂತಲೂ 6 ಸ್ಥಾನ ಕುಸಿದಿರುವುದು ಜಿಲ್ಲೆಯ ಅಧಿಕಾರಿಗಳಿಗೆ ತೀವ್ರ ಬೇಸರವನ್ನುಂಟು ಮಾಡಿದೆ.

ಈ ಬಾರಿ ರಾಜ್ಯದ ಟಾಪ್ 10ರ ಒಳಗೆ ಫಲಿತಾಂಶ ಪಡೆಯಬೇಕೆಂಬುದನ್ನು ಸವಾಲಾಗಿ ಸ್ವೀಕರಿಸಿದ್ದ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಫಲಿತಾಂಶವನ್ನು ಉತ್ತಮಪಡಿಸಲು ನಡೆಸಿದ ಹಲವು ಕಾರ್ಯಕ್ರಮಗಳು, ನಡೆಸಿದ ಪ್ರಯತ್ನಗಳು ನಿರೀಕ್ಷೆಯ ಫಲವನ್ನು ಕೊಟ್ಟಿಲ್ಲ.

ಈ ಬಾರಿ ಫಲಿತಾಂಶ ಹೆಚ್ಚಳಕ್ಕಾಗಿ ಮೇಲಿಂದ ಮೇಲೆ ಎಲ್ಲ ಕಾಲೇಜುಗಳ ಪ್ರಾಂಶುಪಾಲರ ಸಭೆ ನಡೆಸಿದ್ದಲ್ಲದೆ, ವಿಶೇಷ ತರಗತಿಗಳೊಂದಿಗೆ ಶೈಕ್ಷಣಿಕ ಚಟುವಟಿಕೆಗಳ ಪೂರಕ ಯೋಜನೆಗಳನ್ನು ರೂಪಿಸಲಾಗಿದ್ದರೂ, ಜಿಲ್ಲೆಯನ್ನು ಟಾಪ್ 10ರ ಒಳಗಿನ ಸ್ಥಾನಕ್ಕೆ ತರುವಲ್ಲಿ ನಡೆಸಿದ ಪ್ರಯತ್ನಗಳು ವಿಫಲವಾಗಿದೆ.

28,390 ವಿದ್ಯಾರ್ಥಿಗಳು ತೇರ್ಗಡೆ: ಈ ಬಾರಿ ಒಟ್ಟು 35,265 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಇದರಲ್ಲಿ



28,390 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಪೈಕಿ ಹೊಸದಾಗಿ 32,374 ವಿದ್ಯಾರ್ಥಿಗಳು, 2,199 ಪುನರಾವರ್ತಿತ, ಖಾಸಗಿ ಯಾಗಿ 692 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ ಹೊಸದಾಗಿ ಪರೀಕ್ಷೆ ಬರೆದಿದ್ದ 32,374 ವಿದ್ಯಾರ್ಥಿ ಗಳಲ್ಲಿ 27,454 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.80.8 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ಬರೆದಿದ್ದ 2,199 ಪುನರಾವರ್ತಿತ ವಿದ್ಯಾರ್ಥಿ ಗಳ ಪೈಕಿ 590 ವಿದ್ಯಾರ್ಥಿಗಳು ಪಾಸಾಗಿದ್ದು, ಕೇವಲ ಶೇ.26.83 ಫಲಿತಾಂಶ ಬಂದಿದೆ. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಂಡಿದ್ದ 692 ವಿದ್ಯಾರ್ಥಿಗಳ ಪೈಕಿ 346 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.50 ಫಲಿತಾಂಶ ಬಂದಿದೆ. ಈ ಬಾರಿಯೂ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆ ಬರೆದ 19,846 ವಿದ್ಯಾರ್ಥಿನಿಯರ ಪೈಕಿ 17,028 ವಿದ್ಯಾರ್ಥಿನಿಯರು ಪಾಸಾಗಿದ್ದು, ಶೇ.85.8 ಫಲಿತಾಂಶ ಬಂದಿದೆ. ಪರೀಕ್ಷೆ ಬರೆದ 15,419 ವಿದ್ಯಾರ್ಥಿಗಳ ಪೈಕಿ 11,362 ವಿದ್ಯಾರ್ಥಿಗಳು , 73.69 ಫಲಿತಾಂಶ ದೊರೆತಿದೆ.

ಕಲಾ ವಿಭಾಗದಲ್ಲಿ ಫಲಿತಾಂಶ ಕುಸಿತ: ಈ ಬಾರಿ ಬೇರೆ ವಿಷಯಗಳಿಗೆ ಹೋಲಿಸಿದರೆ ದ್ವಿತೀಯ ಪಿಯುಸಿ ಕಲಾ ವಿಭಾಗದ ಶೇಕಡಾವಾರು ಫಲಿತಾಂಶದಲ್ಲಿ ಇಳಿಕೆಯಾಗಿದೆ. ಈ ಬಾರಿ ಶೇ.64.31 ರಷ್ಟು ಫಲಿತಾಂಶ ಬಂದಿದೆ. ಈ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದ 7,619 ವಿದ್ಯಾರ್ಥಿಗಳ ಪೈಕಿ 4,900 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದಿದ್ದ 12,362 ವಿದ್ಯಾರ್ಥಿಗಳ ಪೈಕಿ 10,204 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.82.54ರಷ್ಟು ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ 15,284 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 13,286 ಮಂದಿ ಉತ್ತೀರ್ಣರಾಗಿದ್ದಾರೆ. ಈ ಮೂಲಕ ಶೇ.86.93 ರಷ್ಟು ಫಲಿತಾಂಶ ಲಭಿಸಿದೆ.

ಫಲಿತಾಂಶದಲ್ಲಿ ನಗರ ಪ್ರದೇಶದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆ ಬರೆದಿದ್ದ 25,918 ವಿದ್ಯಾರ್ಥಿಗಳ ಪೈಕಿ 21,139 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಒಟ್ಟಾರೆ ನಗರ ಪ್ರದೇಶದಲ್ಲಿ ಶೇ.81. 56ರಷ್ಟು ಫಲಿತಾಂಶ ಬಂದಿದೆ. ಗ್ರಾಮೀಣ ಪ್ರದೇಶದಲ್ಲಿ ಶೇ.77.58 ಫಲಿತಾಂಶ ಲಭಿಸಿದ್ದು, ಪರೀಕ್ಷೆ ಬರೆದಿದ್ದ 9,347 ವಿದ್ಯಾರ್ಥಿಗಳ ಪೈಕಿ 7,251 ವಿದ್ಯಾರ್ಥಿಗಳು ಮಾತ್ರ ತೇರ್ಗಡೆಯಾಗಿದ್ದಾರೆ. ಮೈಸೂರಿನ ವಿಜಯನಗರ ಎರಡನೇ ಹಂತದ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪಿಯು ಕಾಲೇಜಿನ ಡಿ.ಎಸ್.ಧನ್ವಿ ವಿಜ್ಞಾನ ವಿಭಾಗದಲ್ಲಿ 597 ಅಂಕ ಪಡೆದು ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಕೆ.ಚಿತ್ರಾ ಸ್ಫೂರ್ತಿ 597 ಅಂಕ ಪಡೆದು ನಾಲ್ಕನೇ ಸ್ಥಾನ ಪಡೆಯುವ ಜೊತೆಗೆ ಜಿಲ್ಲೆಗೆ ಟಾಪರ್ ಆಗಿದ್ದಾರೆ. ಮೈಸೂರು ನಗರದ ಮರಿಮಲ್ಲಪ್ಪ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಹೀರಾ ಎಂ. ಕಂಬಲಿ ಕಲಾ ವಿಭಾಗದಲ್ಲಿ 590 (ಶೇ.98.33) ಅಂಕ ಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ನಗರದ ನಾರಾಯಣ ಶಾಸ್ತ್ರಿ ರಸ್ತೆಯ ಸದ್ವಿದ್ಯಾ ಕಾಲೇಜಿನ ಕೆ.ಚಿತ್ರಾ ಸ್ಫೂರ್ತಿ ವಾಣಿಜ್ಯ ವಿಭಾಗದಲ್ಲಿ 597 (ಶೇ.99.50)ನಾಲ್ಕನೇ ಸ್ಥಾನ ಪಡೆಯುವ ಜೊತೆಗೆ ಜಿಲ್ಲೆಗೆ ಟಾಪರ್ ಆಗಿದ್ದಾರೆ.

> **ಅನೇಕ ಕಾರ್ಯಕ್ರಮಗಳನ್ನು ನಡೆಸಲಾಗಿತ್ತು. ಅರ್ಧ ವಾರ್ಷಿಕ, ಪೂರ್ವ ತಯಾರಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿ ಗಳನ್ನು ಕರೆದು ಮಾತುಕತೆ ನಡೆಸಿ ಹೆಚ್ಚಿನ ಪಾಠ ಮಾಡಲಾಗಿತ್ತು. ಕೆಲವು ಉಪನ್ಯಾಸಕರು ವಿದ್ಯಾರ್ಥಿನಿಲಯಗಳಿಗೆ ತೆರಳಿ ವಿಶೇಷ ತರಗತಿ ನಡೆಸಿದ್ದರು. ಹೀಗಾಗಿ ಈ ಸಾಲಿನಲ್ಲಿ ಒಟ್ಟಾರೆ ಫಲಿತಾಂಶದಲ್ಲಿ ಶೇ.84.80 ರಷ್ಟು ಸಾಧನೆ ಆಗಿದೆ. ಆದರೆ, ರಾಜ್ಯಮಟ್ಟದಲ್ಲಿ ಕೊಂಚ ಇಳಿಕೆ ಕಂಡಿದೆ. ಮುಂದಿನ ಬಾರಿ ಟಾಪ್ 10ರೊಳಗೆ ಸ್ಥಾನ ಪಡೆಯಲು ಶ್ರಮಿಸಲಾಗುವುದು.**
> ■ ನಾಗಮ್ಮ, ಉಪ ನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮೈಸೂರು

ಹೂಡಿಕೆಗೆ ಈಶಾನ್ಯ ಭಾರತ ಸೂಕ್ತ



ಬೆಂಗಳೂರು: ದಶಕಗಳ ಕಾಲ ಹಿಂದುಳಿದ ಪ್ರದೇಶ ಎಂಬ ಹಣೆಪಟ್ಟಿಯಲ್ಲಿದ್ದ ಈಶಾನ್ಯ ಭಾರತ ಈಗ ದೇಶದ ಅಭಿವೃದ್ಧಿಯ ಹೊಸ ಎಂಜಿನ್ ಆಗಿ ರೂಪಾಂತರಗೊಳ್ಳುತ್ತಿದೆ. ವಿಶೇಷವಾಗಿ ತ್ರಿಪುರ ರಾಜ್ಯವು ಆಗ್ನೇಯ ಏಷ್ಯಾದ ರಾಷ್ಟ್ರಗಳಿಗೆ ಭಾರತದ ಪ್ರವೇಶ ದ್ವಾರವಾಗಿ ಹೊರಹೊಮ್ಮುತ್ತಿದ್ದು, ಹೂಡಿಕೆಗೆ ಸ್ವರ್ಗಾಹರ್ತಾಣವಾಗಿ ಮಾರ್ಪಟ್ಟಿದೆ ಎಂದು ತ್ರಿಪುರ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿ ಕಿರಣ್ ಗಿಟ್ಟೆ ಹೇಳಿದರು.

ಶುಕ್ರವಾರ ನಗರದಲ್ಲಿ ತ್ರಿಪುರ ಸರ್ಕಾರ, ಎಫ್‌ಐಸಿಸಿಐ ಹಾಗೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಆಯೋಜಿಸಿದ್ದ ಗಮ್ಯಸ್ಥಾನ ತ್ರಿಪುರ-ವ್ಯಾಪಾರ ಸಮಾವೇಶ 2026 ಹೂಡಿಕೆದಾರರ ಸಮಾವೇಶದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಕಳೆದ ಹತ್ತು ವರ್ಷಗಳಲ್ಲಿ ಈಶಾನ್ಯ ರಾಜ್ಯಗಳ ಮೂಲಸೌಕರ್ಯಕ್ಕಾಗಿ ಬರೋಬ್ಬರಿ 15 ಲಕ್ಷಕೋಟಿಗೂ ಅಧಿಕ ಹೂಡಿಕೆ ಮಾಡಿದೆ. ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಡಿಜಿಟಲ್ ಸಂಪರ್ಕ ಹಾಗೂ ವಿಮಾನಯಾನ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿವೆ. ಪ್ರತಿ ಸಚಿವಾಲಯವೂ ತನ್ನ ಬಜೆಟ್‌ನ ಶೇ. 10 ರಷ್ಟನ್ನು ಈಶಾನ್ಯ ಭಾಗಕ್ಕೆ ಮೀಸಲಿಡಬೇಕು ಎಂಬ ಕಟ್ಟುನಿಟ್ಟಿನ ಆದೇಶವು ಈ ಭಾಗದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿದೆ ಎಂದು ತಿಳಿಸಿದರು. ತ್ರಿಪುರಾದ ಭೌಗೋಳಿಕ ಸ್ಥಾನಮಾನವೇ ಅದರ ದೊಡ್ಡ ಶಕ್ತಿ. 2015ರ ಪ್ರೋಟೋಕಾಲ್ ಒಪ್ಪಂದದಂತೆ ಬಾಂಗ್ಲಾದೇಶದ ಚಿತ್ತಗಾಂಗ್ ಬಂದರಿಗೆ ಸುಲಭ ಪ್ರವೇಶ ಲಭ್ಯವಾಗಿದೆ. ಐದು ಕಾರ್ಯನಿರತ ಭೂ ಬಂದರುಗಳು ಮತ್ತು ಹೂಗ್ಲಿ ನದಿ ಮೂಲಕ ವಾರಣಾಸಿವರೆಗಿನ ಜಲಮಾರ್ಗ ಸಂಪರ್ಕವು ತ್ರಿಪುರಾವನ್ನು ಜಾಗತಿಕ ಮಾರುಕಟ್ಟೆಗೆ ಜೋಡಿಸಿದೆ. ಇದು ಕೇವಲ ರಾಜ್ಯದ ಅಭಿವೃದ್ಧಿಯಲ್ಲ, ಇಡೀ ಆಗ್ನೇಯ ಏಷ್ಯಾದ ವ್ಯಾಪಾರ ಮಾರ್ಗದ ಮಹಾಪಥ ಅಭಿಪ್ರಾಯ ವ್ಯಕ್ತಪಡಿಸಿದರು.

ಶೇ. 74ರಷ್ಟು ಅರಣ್ಯ ಪ್ರದೇಶ ಹೊಂದಿರುವ ತ್ರಿಪುರಾದಲ್ಲಿ, ವಾಣಿಜ್ಯ ಬೆಳೆಯ ಬಿದಿರು ಹೇರಳವಾಗಿದೆ.

ರಪ್ತು ಗುಣಮಟ್ಟದ ಅನಾನಸ್, ಹಲಸು ಹಾಗೂ ಮಸಾಲೆ ಪದಾರ್ಥಗಳ ಉತ್ಪಾದನೆಯಲ್ಲಿ, ರಾಜ್ಯ ಮುಂಚೂಣಿಯಲ್ಲಿದೆ. ನೈಸರ್ಗಿಕ ಅನಿಲದ ಗಣನೀಯ ನಿಕ್ಷೇಪವಿದ್ದು, ಕೈಗಾರಿಕೆಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ ಲಭ್ಯವಿದೆ. ಪ್ರಸ್ತುತ ತ್ರಿಪುರವು ಸುಮಾರು 200 ಮೆಗಾವ್ಯಾಟ್ ವಿದ್ಯುತ್ ಅನ್ನು ರಫ್ತು ಮಾಡುತ್ತಿದೆ ಎಂದು ತಿಳಿಸಿದರು.

ಎಲೆಕ್ಟ್ರಿಕ್ ಡಂಪ್ ಟ್ರಕ್ ಅನಾವರಣ

ಮೈಸೂರು: ಅರಮನೆ ನಗರಿ ಮೈಸೂರಿನಲ್ಲಿರುವ ದೇಶದ ರಕ್ಷಣಾ ಸಚಿವಾಲಯದ ಪಿಎಸ್‌ಯು ಕಂಪನಿಯಾದ ಬಿಇಎಂಎಲ್ ಲಿಮಿಟೆಡ್, ದೇಶದ ಮೊದಲ ಸ್ವದೇಶಿ 35 ಟನ್ ಎಲೆಕ್ಟ್ರಿಕ್ ಡಂಪ್ ಟ್ರಕ್‌ನ್ನು ನಿರ್ಮಿಸಿದೆ. ಈ ನೂತನ ಟ್ರಕ್ 35 ಟನ್‌ಗಳ ಪೇಲೋಡ್ ಸಾಮರ್ಥ್ಯ ಮತ್ತು ಸುಮಾರು 60 ಟನ್‌ಗಳ ಒಟ್ಟು ವಾಹನ ತೂಕ ಹೊಂದಿದೆ. ಸಾಂಪ್ರದಾಯಿಕ ಡೀಸೆಲ್-ಚಾಲಿತ ವಾಹನಗಳಿಗಿಂತ ಹೆಚ್ಚಿನ ದಕ್ಷತೆ ಹೊಂದಿದೆ. 60ರಿಂದ 90 ನಿಮಿಷಗಳಲ್ಲಿ ಶೇ 80ರಷ್ಟು ಚಾರ್ಜ್ ಆಗುತ್ತದೆ.

ಬೆಮೆಲ್‌ನಲ್ಲಿರುವ ತನ್ನ ಸಂಕೀರ್ಣದಲ್ಲಿ ಶುಕ್ರವಾರ ನೂತನ ಟ್ರಕ್‌ನ್ನು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಾಂತನು ರಾಯ್, ಎಸ್‌ಬಿಯು ಮುಖ್ಯಸ್ಥರು. ನಿರ್ದೇಶಕ (ಗಣಿಗಾರಿಕೆ ಮತ್ತು ನಿರ್ಮಾಣ)ರಾದ ಸಂಜಯ್ ಸೋಮ್ ಮತ್ತು ಮೇಧಾ ಅವರು ಅನಾವರಣಗೊಳಿಸಿದರು.

ಮೈಸೂರಿನ ಘಟಕದಲ್ಲಿ ನಿರ್ಮಿತವಾದ ಈ ಟ್ರಕ್, ಸುಸ್ಥಿರ ಗಣಿಗಾರಿಕೆ ಮತ್ತು ಮೂಲಸೌಕರ್ಯ ಪರಿಹಾರಗಳತ್ತ ಪ್ರಮುಖ ಹೆಜ್ಜೆಯಾಗಿದೆ. ಇದರೊಂದಿಗೆ ಮಹತ್ವದ ಮೈಲಿಗಲ್ಲು ಸ್ಥಾಪಿಸಿ



ದಂತಾಗಿದೆ' ಎಂದು ಕಂಪನಿ ತಿಳಿಸಿದೆ.

ಈ ಎಲೆಕ್ಟ್ರಿಕ್ ಡಂಪ್ ಟ್ರಕ್ ಅನ್ನು ಶೂನ್ಯ ಟೈಲ್ ಪೈಪ್ ಹೊರಸೂಸುವಿಕೆಯೊಂದಿಗೆ ಹೆಚ್ಚಿನ ಉತ್ಪಾದಕತೆ ನೀಡಲು ವಿನ್ಯಾಸಗೊಳಿಸಲಾಗಿದೆ. ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ, ಇಂಗಾಲ ಕಡಿತ ಗುರಿಯೊಂದಿಗೆ ಪಲಾಗಿದೆ. ಹೆಚ್ಚಿನ ದಕ್ಷತೆಯ ಪರ್ಮನೆಂಟ್ ಮ್ಯಾಗ್ನೆಟ್ ಸಿಂಕ್ರೋನಸ್ ಮೋಟಾರ್ (ಪಿಎಂಎಸ್‌ಎಂ)ನಿಂದ ಶಿವಾಗಿದೆ. ಗಣಿಗಾರಿಕೆ ಪರಿಸರದಲ್ಲಿ, ಕಾರ್ಯಾಚರಣೆಗಾಗಿ ವಿನ್ಯಾಸಗೊಳಿಸಲಾಗಿದೆ' ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ಶಾರದ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷ ಯೋಗೇಶ್ ಕೃಷ್ಣಪ್ಪ ಹೇಳಿಕೆ

ಶ್ರೀ ಶಾರದಾ ಕಾಲೇಜಿಗೆ 100% ಫಲಿತಾಂಶ

ಆನೇಕಲ್: ತಾಲೂಕಿನ ಅತ್ತಿಬೆಲೆಯ ಶ್ರೀ ಶಾರದಾ ಇಂಟರ್‌ನ್ಯಾಷನಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇ.100ರಷ್ಟು ಸಾಧನೆ ಮಾಡಿದ್ದಾರೆ ಎಂದು ಶಾರದ ಸಮೂಹ ವಿದ್ಯಾ ಸಂಸ್ಥೆಗಳ ಅಧ್ಯಕ್ಷ ಯೋಗೇಶ್ ಕೃಷ್ಣಪ್ಪ ತಿಳಿಸಿದರು.

ಅತ್ತಿಬೆಲೆ ಮಂಚನಹಳ್ಳಿ ರಸ್ತೆಯ ಶ್ರೀ ಶಾರದಾ ಇಂಟರ್‌ನ್ಯಾಷನಲ್ ಪಿಯು ಕಾಲೇಜಿನ ವಿದ್ಯಾರ್ಥಿನಿ ಚಂದನಾ.ಆರ್ ಅವರು 600ಕ್ಕೆ 593 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿನ ಪ್ರಥಮ ಸ್ಥಾನ ಪಡೆದಿದ್ದು ರಾಜ್ಯಕ್ಕೆ 7ನೇ ಸ್ಥಾನ ಪಡೆದಿದ್ದಾರೆ. ಚಂದನಾ ಅರ್ಥಶಾಸ್ತ್ರ, ಲೆಕ್ಕಶಾಸ್ತ್ರ, ಗಣಕಶಾಸ್ತ್ರ ವಿಭಾಗದಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಶಾಲೆಯ ಹೆಪ್ಸಿಬಾ ಜೋಏಸ್.ಎಸ್ ಅವರು 600ಕ್ಕೆ 585 ಅಂಕಗಳನ್ನು ಪಡೆದು ಕಾಲೇಜಿನ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅರ್ಚಿ ಕುಮಾರಿ ಅವರು ಶೇ.93ರಷ್ಟು ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ.



ಕಾಲೇಜಿನಲ್ಲಿ 17 ಮಂದಿ ವಿದ್ಯಾರ್ಥಿಗಳು ಶ್ರೇಷ್ಠ ದರ್ಜೆಯಲ್ಲಿ ಮತ್ತು 62 ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 28 ಮಂದಿ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಯೋಗೇಶ್ ಕೃಷ್ಣಪ್ಪ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಗೆ ವಿದ್ಯಾರ್ಥಿಗಳ ನಿರಂತರ ಅಭ್ಯಾಸವೇ ಪ್ರಮುಖ ಕಾರಣವಾಗಿದೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕಳೆದ 10 ವರ್ಷಗಳ ಹಳೆಯ ಪ್ರಶ್ನೆ ಪತ್ರಿಕೆಗಳ ಬಗ್ಗೆ ಮಾಹಿತಿ ನೀಡಿದ್ದರಿಂದ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆಯಲು ಸಾಧ್ಯವಾಯಿತು. ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಉನ್ನತ ಸ್ಥಾನಗಳನ್ನು ಪಡೆಯುವಂತಾಗಲಿ. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಜೆಇಇ, ನೀಟ್ ಸಂಬಂಧಿತವಾಗಿ ಬೋಧನೆ ಮಾಡಲಾಗಿದೆ. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ ನಮ್ಮ ಗುರಿಯಾಗಿದೆ ಎಂದರು.

ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪೋಷಕರು ಮತ್ತು ಕಾಲೇಜಿನ ಆಡಳಿತ ಮಂಡಳಿಯವರು ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು. ಕಾಲೇಜಿನ ಆಡಳಿತ ಮಂಡಳಿಯ ವತ್ಸಲ, ಪ್ರಾಚಾರ್ಯ ಅಮರೇಂದ್ರ ಶರ್ಮ ಮತ್ತು ಉಪಪ್ರಾಚಾರ್ಯ ಪ್ರವೀಣ್ ಕುಮಾರ್ ಇದ್ದರು.

ಐಫೋನ್ ಸುಲಿಗೆ ಪ್ರಕರಣ: ಮೂವರ ಸೆರೆ

ಬೆಂಗಳೂರು: ಕಸ್ತೂರಿನಗರದಲ್ಲಿ ನಡೆದಿದ್ದ ಐಫೋನ್ ಸುಲಿಗೆ ಪ್ರಕರಣವನ್ನು ಭೇದಿಸುವಲ್ಲಿ ರಾಮಮೂರ್ತಿನಗರ ಪೊಲೀಸರು ಯಶಸ್ವಿಯಾಗಿದ್ದು, ಈ ಸಂಬಂಧ ಓರ್ವ ಪ್ರಮುಖ ಆರೋಪಿ ಸೇರಿದಂತೆ ಒಟ್ಟು ಮೂವರನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ಸುಮಾರು 2.30 ಲಕ್ಷ ರೂ. ಮೌಲ್ಯದ 05 ಮೊಬೈಲ್ ಫೋನ್‌ಗಳು ಮತ್ತು 09 ಗ್ರಾಂ ತೂಕದ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದೆ. ಕಸ್ತೂರಿನಗರದ 2ನೇ ಮುಖ್ಯರಸ್ತೆಯಲ್ಲಿ ಪಿರ್ಯಾದುದಾರರು ಮೊಬೈಲ್‌ನಲ್ಲಿ ಮಾತನಾಡುತ್ತಾ ಹೋಗುತ್ತಿದ್ದಾಗ, ಅಪರಿಚಿತ ವ್ಯಕ್ತಿಯೊಬ್ಬರು ಅವರ ಕೈನಲ್ಲಿದ್ದ ಐಫೋನ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಕುರಿತು ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಬೆನ್ನತ್ತಿದ ಪೊಲೀಸರು ಡಿ.ಜೆ.ಹಳ್ಳಿಯಲ್ಲಿ ಮೊಬೈಲ್‌ಗಳನ್ನು ಸ್ವೀಕರಿಸಿ ಮಾರಾಟ ಮಾಡುತ್ತಿದ್ದ ಓರ್ವ ಮಹಿಳೆ ಮತ್ತು ಓರ್ವ ವ್ಯಕ್ತಿಯನ್ನು ಬಂಧಿಸಿದರು. ಇವರ ವಿಚಾರಣೆಯಿಂದ ಪ್ರಮುಖ ಆರೋಪಿಯ ಮಾಹಿತಿ ಲಭ್ಯವಾಯಿತು. ತನಿಖೆಯ ವೇಳೆ ಪ್ರಮುಖ ಆರೋಪಿಯು ಈಗಾಗಲೇ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯ ಮತ್ತೊಂದು ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವುದು ತಿಳಿದುಬಂದಿತ್ತು. ಆತನನ್ನು ಬಾಡಿ ವಾರೆಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆತ ನಗರದ ವಿವಿಧೆಡೆ ಮೊಬೈಲ್ ಕಳವು ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ. ತಾನು ಕಳವು ಮಾಡಿದ ಫೋನ್‌ಗಳನ್ನು ಮೈಸೂರಿನಲ್ಲಿದ್ದ ತನ್ನ ಸ್ನೇಹಿತರಿಗೆ ನೀಡಿರುವುದಾಗಿ ಮಾಹಿತಿ ನೀಡಿದ್ದಾನೆ. ಆತನ ಹೇಳಿಕೆಯ ಆಧಾರದ ಮೇಲೆ ಮೈಸೂರಿನಲ್ಲಿ ಕಾರ್ಯಾಚರಣೆ ನಡೆಸಿ ಉಳಿದ ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನ ಕಳ್ಳರ ಬಂಧನ

ಬೆಂಗಳೂರು: ನಗರದಲ್ಲಿ ಸರಣಿ ದ್ವಿಚಕ್ರ ವಾಹನಗಳ ಕಳ್ಳತನದಲ್ಲಿ ತೊಡಗಿದ್ದ ಇಬ್ಬರು ಆರೋಪಿಗಳನ್ನು ಕೋಣನಕುಂಟೆ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ ಸುಮಾರು 4 ಲಕ್ಷ ರೂ. ಮೌಲ್ಯದ ಒಟ್ಟು 08 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಯಲಚೇನಹಳ್ಳಿ ಮೆಟ್ರೋ ನಿಲ್ದಾಣ ಮತ್ತು ಪಿಜಿಯೊಂದರ ಮುಂಭಾಗದಲ್ಲಿ ನಡೆದಿದ್ದ ವಾಹನ ಕಳ್ಳತನ ಪ್ರಕರಣಗಳ ಬೆನ್ನತ್ತಿದ ಪೊಲೀಸರು, ವಿವಿಧ ಮೂಲಗಳಿಂದ ಮಾಹಿತಿ ಕಲೆಹಾಕಿ ಇಬ್ಬರು ಆರೋಪಿಗಳನ್ನು ಪ್ರತ್ಯೇಕವಾಗಿ ವಶಕ್ಕೆ ಪಡೆದಿದ್ದಾರೆ. ವಿಚಾರಣೆಯ ವೇಳೆ ಆರೋಪಿಗಳು ತಾವು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿದ್ದಲ್ಲದೆ, ವಾಹನಗಳನ್ನು ಮಾರಾಟ ಮಾಡುವ ಉದ್ದೇಶದಿಂದ ನಾರಾಯಣ ನಗರ ಮತ್ತು ಗಣಪತಿಪುರ ಕೆರೆಯ ಬಳಿಯ ಖಾಲಿ ಜಾಗಗಳಲ್ಲಿ ಅಡಗಿಸಿಟ್ಟಿರುವುದಾಗಿ ಮಾಹಿತಿ ನೀಡಿದರು.

ಈ ಕಾರ್ಯಾಚರಣೆಯ ಮೂಲಕ ಕೋಣನಕುಂಟೆ, ಪುಟ್ಟೇನಹಳ್ಳಿ, ಹುಳಿಮಾವು, ಮಾರತಹಳ್ಳಿ, ಕುಮಾರಸ್ವಾಮಿ ಲೇಔಟ್ ಮತ್ತು ನಂದಿನಿ ಲೇಔಟ್ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಒಟ್ಟು 08 ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಪ್ರಸ್ತುತ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಯಲಹಂಕ: ಯಲಹಂಕ ಕ್ಷೇತ್ರದ ಶಿವಕೋಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮತ್ಕೂರು ಗ್ರಾಮದಲ್ಲಿ ಸರ್ಕಾರಿ ಶಾಲೆ ಕಾಂಪೌಂಡ್ ನಿರ್ಮಾಣ ಕಾಮಗಾರಿ ಹಾಗೂ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಚರಂಡಿ ಅಭಿವೃದ್ಧಿ ಕಾಮಗಾರಿ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಶುಕ್ರವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಯಲಹಂಕ ತಾಲೂಕು ಸೊಸೈಟಿ ನಿರ್ದೇಶಕರು, ಶಿವಕೋಟೆ ಗ್ರಾ.ಪಂ. ಮಾಜಿ ಅಧ್ಯಕ್ಷ ಮಾವಳಿಪುರ ರಮೇಶ್, ಹೆಸರುಘಟ್ಟ ರೈತ ಸೇವಾ ಸಹಕಾರ ಸಂಘದ ಅಧ್ಯಕ್ಷ ಮಾದಪ್ಪನಹಳ್ಳಿ ಕೃಷ್ಣಮೂರ್ತಿ, ಗ್ರಾ.ಪಂ.ಮಾಜಿ ಅಧ್ಯಕ್ಷ ಸಂಜೀವಯ್ಯ, ಬಿಜೆಪಿ ಮುಖಂಡರಾದ ವಿಜಯ್ ಕುಮಾರ್, ಕಿರಣ್ ಕುಮಾರ್, ಮುನೇಲಪ್ಪ, ಕಿರಣ್, ಪಾರ್ವತಮ್ಮ ಮತ್ತಿತರರಿದ್ದರು.

ಮುಸ್ಲಿಂ ಅಭ್ಯರ್ಥಿ ವಿಚಾರವಾಗಿ ಗೊಂದಲ ಸೃಷ್ಟಿ ಸರಿಯಲ್ಲ: ಶಾಸಕ ರಿಜ್ವಾನ್

ಸಚಿವ ಜಮೀರ್ ವಿರುದ್ಧ ಅಸಮಾಧಾನ

ಬೆಂಗಳೂರು: ದಾವಣಗೆರೆಯಲ್ಲಿ ಮುಸ್ಲಿಂ ಅಭ್ಯರ್ಥಿ ವಿಚಾರವಾಗಿ ಒಳಗಡೆ ಒಪ್ಪಿಕೊಂಡು ಹೊರಗಡೆ ವಿರೋಧ ಮಾಡುವುದು ಸರಿಯಲ್ಲ, ಹೀಗಿದ್ದರೆ ಮೊದಲೇ ಒಪ್ಪಿಕೊಳ್ಳಬಾರದಿತ್ತು. ಪಕ್ಷದ ಪರವಾಗಿ ಕೆಲಸ ಮಾಡುತ್ತೇವೆ ಎಂದು ಒಂದೇ ಟೇಬಲ್‌ನಲ್ಲಿ ಕುಳಿತು ಒಪ್ಪಿಕೊಂಡಿರುವುದು ಸ್ಪಷ್ಟವಾಗಿದೆ ಎಂದು ಪರೋಕ್ಷವಾಗಿ ಸಚಿವ ಜಮೀರ್ ವಿರುದ್ಧ ಶಾಸಕ ರಿಜ್ವಾನ್ ಅರ್ಷದ್ ಅಸಮಾಧಾನ ಹೊರ ಹಾಕಿದರು.

ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ನಾಲ್ಕೈದು ಜನರ ಹೆಸರನ್ನು ಸೂಚಿಸಬೇಕಾಗಿತ್ತು. ಅಥವಾ ಮಲ್ಲಿಕಾರ್ಜುನ ಅವರಿಗೆ ನೀವೆ ಮುಸ್ಲಿಂ ಅಭ್ಯರ್ಥಿ ಹೆಸರನ್ನು ಸೂಚಿಸಿ ನಾವೆಲ್ಲರೂ ಸೇರಿ ಕೆಲಸ ಮಾಡುತ್ತೇವೆ ಎಂದು ಹೇಳಬೇಕಿತ್ತು. ಇದನ್ನು ಮಾಡದೇ ಇದ್ದ ಕಾರಣಕ್ಕೆ ನಾವು ಎಡವಿದೆವು ಎಂದು ಹೇಳಿದರು.

ನಾವೆಲ್ಲರು ಸೇರಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದು ನಿಜ. ಪಕ್ಷವೂ ಸಹ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂದು ಮನ್ನಿಸಿದ್ದು ನಿಜ. ಆದರೆ ನಾವೆಲ್ಲರೂ ಸೇರಿ ಒಮ್ಮತದ ಅಭ್ಯರ್ಥಿಯನ್ನು ನೀಡಬೇಕಿತ್ತು ಎಂದು ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ನಾನೇ ಸೂಕ್ತ ಅಭ್ಯರ್ಥಿ ಎಂದು ಒತ್ತಡ ಹಾಕಿದರು. ನಾವೆಲ್ಲರೂ ಸೇರಿ ಜಬ್ಬಾರ್ ಅವರಿಗೆ ನೀಡುವುದು ಎಂದು ತೀರ್ಮಾನ ಮಾಡಿದೆವು. ಈ ಬಗ್ಗೆ ಅಲ್ಪಸಂಖ್ಯಾತ ಶಾಸಕರು, ಸಚಿವರು ಮೂರು ನಾಲ್ಕು ಬಾರಿ ಸಭೆ ಸೇರಿದ್ದೆವು. ಅಲ್ಲಿ ಜಮೀರ್ ಅಹ್ಮದ್, ಹ್ಯಾರಿಸ್, ತನ್ವೀರ್ ಸೇಠ್, ನಜೀರ್ ಅಹಮದ್, ರಹೀಂಖಾನ್ ಸೇರಿದಂತೆ ಪ್ರಮುಖರೆಲ್ಲರೂ ಇದ್ದರು ಎಂದರು.

ಆದರೆ ತಳ ಮಟ್ಟದ ಕಾರ್ಯಕರ್ತರು, ಒಂದಷ್ಟು ಜನ ನಾಯಕರು ಅವರಿಗೆ ಜನಪ್ರಿಯತೆ ಇಲ್ಲ, ಜೊತೆಗೆ ಸ್ಥಾನ ಗೆಲ್ಲಲು ಆಗುವುದಿಲ್ಲ ಎನ್ನುವ ಅಭಿಪ್ರಾಯ ಬಂದಿತು. ಆದರೂ ನಾವು ಕೊನೆವರೆಗೂ ಅವರ ಹೆಸರನ್ನೇ ಹೇಳಿದ ಕಾರಣಕ್ಕೆ ನಮಗೆ ಹಿನ್ನಡೆ ಉಂಟಾಯಿತು. ಜವಾಬ್ದಾರಿ ನೀಡಿದ ಮೇಲೆ ಪ್ರತಿಯೊಬ್ಬ ಅಲ್ಪಸಂಖ್ಯಾತ ಶಾಸಕರು ದಾವಣಗೆರೆಗೆ ತೆರಳಿ ಕೆಲಸ ಮಾಡಿದ್ದಾರೆ. ಸಮುದಾಯದ ದ್ರೋಹಿಗಳು ಎಂದು ಸಾಮಾಜಿಕ ಜಾಲತಾಣದಲ್ಲಿ ಹೇಳುವುದು ಸರಿಯಲ್ಲ ಎಂದು ಹೇಳಿದರು.

> **ತಪ್ಪು ಗ್ರಹಿಕೆಗೆ ಬೇಸರ**
> **ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ ಮಾತನಾಡಿ, ಪಕ್ಷದ ಒಂದಷ್ಟು ಹಿರಿಯ ಮುಖಂಡರು ಪಕ್ಷವನ್ನು ಸೋಲಿಸಲು ದೊಡ್ಡ ಷಡ್ಯಂತ್ರ ಮತ್ತು ಹುನ್ನಾರ ಮಾಡಿದ್ದಾರೆ. ಆದರೂ ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷದ ಪರವಾಗಿ ಮತ ಚಲಾಯಿಸಿದ್ದಾರೆ. ಎಲ್ಲಾ ಅಲ್ಪಸಂಖ್ಯಾತ ಮುಖಂಡರ ಒಪ್ಪಿಗೆ ಮೇರೆಗೆ ಸಮರ್ಥ್ ಅವರಿಗೆ ಟಿಕೆಟ್ ನೀಡಲಾಯಿತು. ನಮ್ಮನ್ನೆಲ್ಲಾ ಕೂರಿಸಿಕೊಂಡು ಒಪ್ಪಿಗೆ ಪಡೆಯಲಾಯಿತು. ಆದರೂ ಒಂದಷ್ಟು ತಪ್ಪು ಗ್ರಹಿಕೆ ಉಂಟಾಯಿತು ಎಂದು ಬೇಸರ ವ್ಯಕ್ತಪಡಿಸಿದರು.**

ವಿದ್ಯಾರ್ಥಿಗಳಿಗೆ ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಸಲಹೆ

ಕೌಶಲ ಶಿಕ್ಷಣದಿಂದ ಉದ್ಯೋಗ ಪಡೆಯಿರಿ

ಬೆಂಗಳೂರು: ವಿದ್ಯಾರ್ಥಿಗಳು ಕಾಲಹರಣ ಮಾಡುವ ಬದಲು ಹೆಚ್ಚಿನ ಸಮಯ ಪ್ರಯೋಗಾಲಯದಲ್ಲಿ ಕಳೆಯುವ ಮೂಲಕ ಕೌಶಲ ಶಿಕ್ಷಣ ಪಡೆದುಕೊಂಡು ಉದ್ಯೋಗ ಪಡೆದುಕೊಳ್ಳಿ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಹೇಳಿದರು.

ಬಸವನಗುಡಿಯ ಬಿಎಂಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ್ದ ಬಿಎಂಎಸ್‌ಇ ಎಐಸಿಟಿಇ ಐಡಿಯಾ ಲ್ಯಾಬ್ ಮತ್ತು ಡಿಜಿಟಲ್ ಡಿಸ್‌ಪ್ಲೇ ಸಿಸ್ಟಂ ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ವಿದ್ಯಾರ್ಥಿಗಳಿಗೆ ತರಗತಿಗಿಂತ ಪ್ರಯೋಗಾಲಯದಲ್ಲಿ ಸಮಯ ಕಳೆಯಬೇಕು. ಏಕೆಂದರೆ, ಥಿಯರಿ ಶಿಕ್ಷಣಕ್ಕಿಂತ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತಿದೆ. ಇಲ್ಲಿ ವಿದ್ಯಾರ್ಥಿಗಳು ಪ್ರಯೋಗಾಲಯದಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ನೂತನ ಉತ್ಪನ್ನಗಳನ್ನು ನಿರೀಕ್ಷಿಸಬಹುದಾಗಿದೆ ಎಂದರು.




ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಭೀಮೇಶ ಆರ್ಯ ಮಾತನಾಡಿ, ಇದು ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣ ನೀಡುವ ಉದ್ದೇಶದಿಂದ ಲ್ಯಾಬ್ ತೆರೆಯಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ನೇರವಾಗಿ ಕೌಶಲ್ಯ ತರಬೇತಿ ನೀಡಲಿದೆ. ಇದರಿಂದ ವಿದ್ಯಾರ್ಥಿಗಳು ಕನಿಷ್ಠ ನಾಲ್ಕು ಕೌಶಲ ಕೋರ್ಸ್ ಅನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬಹುದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿ ಉದ್ಯೋಗ ಸಿಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಎಂಎಸ್‌ಇ ಟ್ರಸ್ಟಿ ಡಾ.ಬಿ.ಎಸ್.ರಾಗಿಣಿ ನಾರಾಯಣ್, ಅವಿರಾಮ್ ಶರ್ಮಾ, ಉಪ ಪ್ರಾಂಶುಪಾಲ ಡಾ.ಎಲ್.ರವಿಕುಮಾರ್ ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಐಸ್ ಕ್ರೀಂನಲ್ಲಿ ರಬ್ಬರ್, ಗ್ರಾಹಕರ ಆಕ್ರೋಶ

ನೆಲಮಂಗಲ: ನಗರದ ಸೊಂಡೆಕೊಪ್ಪ ಬೈಪಾಸ್‌ನ ಉಡುಪಿ ಗ್ರ್ಯಾಂಡ್ ಹೋಟೆಲ್‌ನಲ್ಲಿ ಖರೀದಿಸಿದ ಸ್ಕೂಪ್ ಐಸ್‌ಕ್ರೀಂನಲ್ಲಿ ರಬ್ಬರ್ ಪತ್ತೆಯಾಗಿದ್ದು ಅದೃಷ್ಟವಶಾತ್ ವಕೀಲ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಹೋಟೆಲ್ ಗೆ ಬಂದ ವಕೀಲ ಧನಂಜಯ್ ಹಾಗೂ ಸ್ನೇಹಿತರು 50ರೂ ನೀಡಿ ಸ್ಕೂಪ್ ಐಸ್‌ಕ್ರೀಂ ಖರೀದಿಸಿ ತಿನ್ನುವಾಗ ರಬ್ಬರ್ ಸಿಕ್ಕಿದ್ದು ತಕ್ಷಣ ಒಳಗೆ ನುಗ್ಗದೆ ನೋಡಿದಾಗ



ಪ್ಲಾಸ್ಟಿಕ್ ರಬ್ಬರ್ ಕಂಡುಬಂದಿದೆ. ಮಾಲೀಕರನ್ನು ಪ್ರಶ್ನೆ ಮಾಡಿದರೆ ಇದು ಕೆಲವು ಸಲ ಆಗುತ್ತದೆ ಎಂಬ ಉಡಾಫೆ ಉತ್ತರ ನೀಡಿದ್ದು ಗ್ರಾಹಕರು ತರಾಟೆಗೆ ತೆಗೆದುಕೊಳ್ಳುತ್ತಿದ್ದಂತೆ ಕ್ಷಮೆ ಕೇಳಿದ್ದಾನೆ.

ಮಕ್ಕಳೇ ಎಚ್ಚರ: ಬೇಸಿಗೆಯಾದ ಕಾರಣ ಮಕ್ಕಳಿಗೆ ಸ್ಕೂಪ್ ಐಸ್‌ಕ್ರೀಂ ನೀಡುವುದು ಹೆಚ್ಚು ಆದ್ದರಿಂದ ಪೋಷಕರು ಐಸ್ ಕ್ರೀಂ ಕೊಡಿಸಿದಾಗ ಪರಿಶೀಲನೆ ಮಾಡುವುದು ಉತ್ತಮ, ಇಲ್ಲದಿದ್ದರೆ ಮಕ್ಕಳು, ಹಿರಿಯರ ಪ್ರಾಣಕ್ಕೂ ಕುತ್ತು ಬರುವುದರಲ್ಲಿ ಸಂಶಯವಿಲ್ಲ, ಸ್ವಚ್ಛತೆ ಇಲ್ಲ ಅಧಿಕಾರಿಗಳ ಶಾಮೀಲು ಶಂಕೆ: ಹೋಟೆಲ್ ಕೆಲ ಭಾಗದಲ್ಲಿ ಕಸದ ರಾಶಿ ಬಿದ್ದಿದ್ದು, ಐಸ್ ಕ್ರೀಂ ಮಾರಾಟ ಮಾಡುವ ಒಳಭಾಗದಲ್ಲಿ ಸ್ವಚ್ಛತೆ ಇಲ್ಲದಿರುವುದು ಕಂಡುಬಂದಿದೆ. ಈ ಹೋಟೆಲ್ ಮೇಲೆ ಅನೇಕ ಬಾರಿ ಇದೇ ರೀತಿ ದೂರುಗಳು ಬಂದರೂ ಅಧಿಕಾರಿಗಳು ಯಾವುದೇ ಕ್ರಮವಹಿಸದೇ ಅವರ ಜತೆ ಶಾಮೀಲಾಗಿದ್ದಾರೆ ಎಂದು ಗ್ರಾಹಕರ ಆರೋಪ ಮಾಡಿದರು.

ಜಾನುವಾರುಗಳಿಗೆ ಮೇವಾದ ಹಿಪ್ಪುನೇರಳೆ ಸೊಪ್ಪು | ತೋಟದಲ್ಲೇ ಬೆಳೆ ಬಿಟ್ಟ ರೈತ

ಹಿಪ್ಪುನೇರಳೆ ಸೊಪ್ಪು ದರ ಕುಸಿತ; ರೈತ ಕಂಗಾಲು

▸ ತಾವರೆಕೆರೆ ಟಿ.ನಾಗರಾಜ್

ತಾವರೆಕೆರೆ: ಹೊಸಕೋಟೆ ತಾಲೂಕಿನಾದ್ಯಂತ ಅನೇಕ ರೈತರು ರೇಷ್ಮೆ ಸಾಕಣೆಕೆಯಿಂದ ಜೀವನ ನಡೆಸುತ್ತಿದ್ದು, ಅದರಲ್ಲೂ ನಂದಗುಡಿ ಹೋಬಳಿಯಲ್ಲಿ ಅನೇಕ ರೈತರು ಹಿಪ್ಪು ನೇರಳೆ ಸೊಪ್ಪು ಬೆಳೆದಿದ್ದು, ಇದರಿಂದ ತಮ್ಮ ಕುಟುಂಬಗಳ ಪೋಷಣೆ ಮಾಡುತ್ತಿದ್ದಾರೆ. ಆದರೆ ದಿಢೀರನೆ ಹಿಪ್ಪು ನೇರಳೆ ಸೊಪ್ಪಿನ ಬೆಲೆ ಕುಸಿತದಿಂದ ರೈತ ಕಂಗಲಾಗಿದ್ದು, ತೋಟಗಳಲ್ಲಿ ಆಳೆತ್ತರಕ್ಕೆ ಬೆಳೆದು ನಿಂತ ಹಿಪ್ಪು ನೇರಳೆ ಸೊಪ್ಪು ಮಾರಟವಾಗದೆ ಇದ್ದು, ಇದನ್ನು ದನ ಕರುಗಳಿಗೆ ಕೊಯ್ದು ಹಾಕುತ್ತಿದ್ದಾರೆ. ದನ ಕರು ಇಲ್ಲದವರು ತೋಟದಲ್ಲಿಯೇ ಹಾಗೆ ಬಿಡಿದ್ದಾರೆ.

ಮಾರ್ಚ್ ತಿಂಗಳಲ್ಲಿ ಒಂದು ಮೂಟೆ ಹಿಪ್ಪು ನೇರಳೆ ಸೊಪ್ಪಿನ ದರ 1000 ದಿಂದ 1200 ರೂ.ವರೆಗೆ ಮಾರಟವಾಗುತ್ತಿತ್ತು. ಆದರೆ ಈಗ ಬೇಡಿಕೆ ಕುಸಿದ ಪರಿಣಾಮ ಸೊಪ್ಪನ್ನು ಕೇಳುವವರಿಲ್ಲದೆ ತೋಟದಲ್ಲಿ ಹಾಗೆ ಬಿಟ್ಟಿದ್ದಾರೆ. ಕೆಲವು ರೈತರು ರೇಷ್ಮೆ ಹುಳು ಸಾಕಣೆ ಮಾಡುತ್ತಿದ್ದು, ತೋಟಗಳಲ್ಲಿ ಉಚಿತವಾಗಿ ಸೊಪ್ಪು ಕೊಯ್ದುಕೊಂಡು ಹೋಗುತ್ತಿದ್ದಾರೆ. ತಾಲೂಕಿನಾದ್ಯಂತ ಸುಮಾರು ಹೆಕ್ಟೇರ್ ಹಿಪ್ಪು ನೇರಳೆ ಸೊಪ್ಪು ಬೆಳೆಯಲಾಗುತ್ತಿದ್ದು, ಅನೇಕ ರೇಷ್ಮೆ ಬೆಳೆಗಾರರ ಕುಟುಂಬಗಳು ರೇಷ್ಮೆ ಸಾಕಾಣಿಕೆ ಮಾಡುತ್ತಿವೆ. ರೇಷ್ಮೆ ಬೆಳೆ ನಂಬಿ ಜೀವನ ನಡೆಸುವ ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ.

ಉತ್ತಮ ಮಳೆಯಿಂದಾಗಿ ಕೊಳವೆ ಬಾವಿಗಳಲ್ಲಿ ನೀರು ಇದ್ದು ತೋಟಗಳಲ್ಲಿ ಹಿಪ್ಪು ನೇರಳೆ ಸೊಪ್ಪು ಬೆಳೆಯಲು ಅನುಕೂಲವಾಗಿದೆ. ಆದರೆ ಬೆಳೆದ ಬೆಳೆಯನ್ನು ಖರೀದಿಸುವವರು ಇಲ್ಲದಂತಹ ಪರಿಸ್ಥಿತಿಯನ್ನು ಬೆಳೆಗಾರರು ಎದುರಿಸುತ್ತಿದ್ದಾರೆ. ರೇಷ್ಮೆ ಗೂಡಿನ ದರ ಇಳುಮುಖವಾಗಿದ್ದು ರೈತರು ರೇಷ್ಮೆ ಗೂಡು ಬೆಳೆಯಲು ಹಿಂಜರಿಯುತ್ತಿದ್ದಾರೆ. ಆದ್ದರಿಂದ ಸರ್ಕಾರ ಕೂಡಲೇ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವಂತೆ ಗೂಡಿನ ದರ ನಿಗದಿಗೊಳಿಸಿ ಬೆಂಬಲ ಬೆಲೆ ನೀಡಬೇಕು ಎಂಬುಂದು ಬೆಳೆಗಾರರ ಆಗ್ರಹವಾಗಿದೆ.



ಒಂದು ಎಕರೆ ರೇಷ್ಮೆ ತೋಟದಲ್ಲಿ 130 ರಿಂದ 160 ರೇಷ್ಮೆ ಮೊಟ್ಟೆ ಮೇಯಿಸಿ ಉತ್ತಮ ಇಳುವರಿಯ ರೇಷ್ಮೆಗೂಡು ಪಡೆಯಲು ಗುಣಮಟ್ಟದ ಸೊಪ್ಪು ಅಗತ್ಯ. 100 ಮೊಟ್ಟೆ ರೇಷ್ಮೆಗೂಡು ಸಾಕಾಣೆಕೆಗೆ ಕನಿಷ್ಠ 40 ರಿಂದ 45 ಮೂಟೆ ಹಿಪ್ಪುನೇರಳೆ ಸೊಪ್ಪು ಬೇಕಾಗುತ್ತದೆ. ಗುಣಮಟ್ಟದ ಉಪ್ಪು ನೇರಳೆ ಸೊಪ್ಪು ಬೆಳೆದರು ರೈತರು ಕೈಚೆಲ್ಲಿ ಕುಳಿತಿದ್ದಾರೆ. ಸರ್ಕಾರ ಮಧ್ಯ ಪ್ರವೇಶಿಸಿ ನಿಗದಿತ ದರ ನೀಡದಿದ್ದರೆ ಇದನ್ನೇ ನಂಬಿ ಜೀವನ ನಡೆಸುತ್ತಿರುವ ಕುಟುಂಬಗಳು ಬೀದಿ ಪಾಲಾಗುವ ಸಂಭವ ಇದೆ.

> ರೇಷ್ಮೆ ಬೆಳೆಗಾರರಿಗೆ ಸರ್ಕಾರ ದರ ನಿಗದಿಗೊಳಿಸಿ ರೇಷ್ಮೆ ಗೂಡು ಬೆಲೆ ಏರಿಸಬೇಕು. ರೇಷ್ಮೆ ಗೂಡು ಮತ್ತು ಹಿಪ್ಪು ನೇರಳೆ ಸೊಪ್ಪಿನ ಬೆಲೆಯೂ ಏರಿಳಿತ ಸಾಮಾನ್ಯ. ಹಿಂದೆ ದರ ದುಬಾರಿಯಾಗಿತ್ತು. ಇತ್ತೀಚೆಗೆ ಗೂಡಿನ ಬೆಲೆ ಕುಸಿತದಿಂದಾಗಿ ಸೊಪ್ಪಿನ ಬೇಡಿಕೆಯೂ ಸಹ ದಿಢೀರ್ ಕುಸಿದಿದೆ. ತೋಟದಲ್ಲಿನ ಹಿಪ್ಪು ನೇರಳೆ ಸೊಪ್ಪು ಬೆಳೆಯಲು ರೈತರು ಆಸಕ್ತಿ ತೋರುತ್ತಿಲ್ಲ. ಇನ್ನಾದರೂ ಸರ್ಕಾರ ರೈತರ ಪರ ನಿಂತು ನಮ್ಮ ಕುಟುಂಬಗಳು ಬೀದಿ ಪಾಲಾಗದಂತೆ ಎಚ್ಚರ ವಹಿಸಬೇಕೆಂದು.
>
> ■ ಮುನಿನಾರಾಯಣಪ್ಪ, ರೈತ, ಮಲ್ಲಿಯಪ್ಪನಹಳ್ಳಿ.

ದಿಗಂತ ವಿಶೇಷ



ಶ್ರೀವಾಣಿ ಪದವಿ ಪೂರ್ವ ಕಾಲೇಜಿಗೆ 99% ಫಲಿತಾಂಶ

ವಿಜ್ಞಾನ ವಿಭಾಗದಲ್ಲಿ ನಿಖಿಲ್ ರಾಜ್ಯಕ್ಕೆ 4ನೇ ಸ್ಥಾನ

ಆನೇಕಲ್: ಪಟ್ಟಣದ ಶ್ರೀವಾಣಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ ಶೇ.99 ರಷ್ಟು ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಜೆ.ಎನ್.ಸುರೇಶ್ ತಿಳಿಸಿದರು,

ಪಟ್ಟಣದ ಶ್ರೀವಾಣಿ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ನಿಖಿಲ್.ಎನ್ ಅವರು 600ಕ್ಕೆ 594 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ.ನಿಖಿಲ್.ಎನ್ ಅವರು ಕನ್ನಡ 100, ಇಂಗ್ಲಿಷ್ 95, ಭೌತಶಾಸ್ತ್ರ 100, ರಸಾಯನಶಾಸ್ತ್ರ 99, ಗಣಿತ,100, ಜೀವಶಾಸ್ತ್ರ 100, ಅಂಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿ ಕಾಲೇಜಿಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾನೆ ಎಂದು ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿ ಜೆ.ಸುರೇಶ್ ಮತ್ತು ನಿರ್ದೇಶಕರಾದ ಚಂದ್ರಶೇಖರ್.ಕೆ.ವಿ. ಅವರು ಅಭಿನಂದನೆಗಳು ಸಲ್ಲಿಸಿದ್ದರು, ಇನ್ನು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಒಟ್ಟು 117 ಇದ್ದು, ಅದರಲ್ಲಿ ಅತ್ಯುತ್ತಮ ಶ್ರೇಣಿ 33, ಹಾಗೂ ಪ್ರಥಮ ಶ್ರೇಣಿ 48 ಪಡೆಯುವ ಮೂಲಕ ವಾಣಿಜ್ಯ ಹಾಗೂ ವಿಜ್ಞಾನ ವಿಭಾಗದಲ್ಲಿ ಎಲ್ಲಾ ವಿದ್ಯಾರ್ಥಿಗಳು ಒಳ್ಳೆಯ ಅಂಕ ಗಳಿಸುವ ಮೂಲಕ ಉತ್ತಮ ಫಲಿತಾಂಶ ನೀಡಿದರೆ ಎಂದರು.

ಸರ್ಕಾರಿ ಶಾಲಾಭಿವೃದ್ಧಿಗೆ ಮುಂದಾದ ಎಲ್ಲಾರೆಡ್ಡಿ | ಶಾಸಕ ಶಿವಣ್ಣ ಪ್ರಶಂಸೆ

ಸಾಮಾಜಿಕ ಕಾರ್ಯಕ್ಕೆ ಉದಾರಿಗಳ ಸಹಕಾರ

ಆನೇಕಲ್: ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಸಾಕಷ್ಟು ಜನ ಸಮಾಜ ಅಭಿವೃದ್ಧಿಗೆ ಸಹಕಾರ ನೀಡುವುದು ಬಹಳ ವಿರಳ. ಈ ನಿಟ್ಟಿನಲ್ಲಿ ಉದಾರ ಮನಸ್ಸುಳ್ಳ ಕೆಲವರು ಮಾತ್ರ ಸಾಮಾಜಿಕ ಕಾರ್ಯಗಳಿಗೆ ಸಹಕಾರ ನೀಡುತ್ತಾರೆ ಎಂದು ಶಾಸಕ ಬಿ.ಶಿವಣ್ಣ ತಿಳಿಸಿದರು.

ತಾಲೂಕಿನ ನೆರಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿರುಮ ಗೊಂಡನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಶಾಲೆಯ ನಿರ್ಮಾಣಕ್ಕೆ ಎಲ್ಲಾರೆಡ್ಡಿ ರವರು ತಮ್ಮ ಸ್ವಂತ ಹಣದಲ್ಲಿ ಸುಮಾರು 2 ಕೋಟಿ 50 ಲಕ್ಷ ವೆಚ್ಚದ 12 ಕೊಠಡಿಗಳ ಕಟ್ಟಡ ಕಾಮಗಾರಿಗೆ ಪೂಜೆ ನೆರವೇರಿಸಿ ಮಾತನಾಡಿದರು,

ತಾಲ್ಲೂಕಿನಲ್ಲಿ ಸಾಕಷ್ಟು ಕೈಗಾರಿಕಾರಿಗಳು ಹಾಗೂ ಶ್ರೀಮಂತರು ತಮ್ಮ ಕೈಲಾದ ಮಟ್ಟಕ್ಕೆ ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡಬೇಕು ಎಂದರು, ಕಟ್ಟಡ ದಾನಿಗಳಾ ಎಲ್ಲಾರೆಡ್ಡಿ ಸರ್ಕಾರಿ ಶಾಲೆಯಲ್ಲಿ ಬಡವರು ಆಗಿರುತ್ತಾರೆ ಅವರಿಗೆ ಎಲ್ಲಾ ರೀತಿ ಮೂಲಭೂತ ಸೌಕರ್ಯಗಳನ್ನು ನೀಡಿದ್ದಾರೆ ಮಾತ್ರ ಮಕ್ಕಳು ಉತ್ತಮ ವಿದ್ಯಾ ಭ್ಯಾಸ ಮಾಡಲು ಈ ನಿಟ್ಟಿನಲ್ಲಿ ನನ್ನ ಸ್ವಂತ ಹಣದಲ್ಲಿ ಸರ್ಕಾರಿ ಶಾಲೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ, ಇನ್ನು ವಿದ್ಯಾರ್ಥಿ ಗಳ ಅನುಕೂಲಕ್ಕೆ ಶಿಕ್ಷಕರು ಕೊರತೆ ಇಲ್ಲದಂತೆ ನೋಡಿಕೊಳ್ಳಬೇಕು ಎಂದರು.



ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾ ಖೆಯ ಕೆ.ಶಿವಣ್ಣ, ಹಾಗೂ ಮುಖಂಡರಾದ ಶಶಿಕುಮಾರ್, ರಾಮಕೃಷ್ಣ, ಮತ್ತು ಜನಪ್ರತಿ ನಿಧಿಗಳು ಹಾಗೂ ಸ್ಥಳೀಯ ಮುಖಂಡರು. ಅಧಿಕಾರಿಗಳು ಭಾಗವಹಿಸಿದ್ದರು.

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಸಿ.ಜೆ.ಎಂ. ನ್ಯಾಯಾಧೀಶರ ನ್ಯಾಯಾಲಯ ಇವರ ಮುಂದೆ ದಾವಣಗೆರೆ

ಪಿ ಅಂಡ್ ಎಸ್ಸಿ ಸಂಖ್ಯೆ: 18/2026

ಅರ್ಜಿದಾರರು: ಶ್ರೀ ವೈ. ರುಕ್ಮಣಿಶೆಟ್ಟಿ ಬಿನ್ ಲೇಟ್ ಕೃಷ್ಣಶೆಟ್ಟಿ ಸುಮಾರು 75 ವರ್ಷ. 2. ಶ್ರೀಮತಿ ಅಂಬುಜಮ್ಮ ಆರ್. ಕೋಂ. ವೈ. ರುಕ್ಮಣಿಶೆಟ್ಟಿ ಸುಮಾರು 71 ವರ್ಷ. 3 ಶ್ರೀಮತಿ ಅಶ್ವಿನಿ ಎಂ. ... ಮೇಲೆ ತಿಳಿಸಿರುವ 1 to 4 ಅರ್ಜಿದಾರರ ವಾಸ: #3498, ... ದಾವಣಗೆರೆ – 577004. 5. ಸುಧೀಂದ್ರ ... ಬೆಂಗಳೂರು – 560 078 -: ವಿರುದ್ಧ :- ಎದುರುದಾರರು: ಇಲ್ಲ

ಆದೇಶ 5 ನಿಯಮ 20 ರ ದಿವಾಣಿ ಪ್ರಕ್ರಿಯಾ ಸಂಹಿತೆ ಪ್ರಕಾರ ಪತ್ರಿಕೆ ಪ್ರಕಟಣೆ

... ದಿ. **10.06.2026** ರಂದು ಬೆಳಿಗ್ಗೆ **11.00 ಗಂಟೆಗೆ** ಮುದ್ದತ್ತು ನಿಗದಿಪಡಿಸಿರುತ್ತದೆ. ...

ಷೆಡ್ಯೂಲ್: ... ಸ್ವತ್ತಿನ ನಂ.394 (ಮೂರು ನೂರ ತೊಂಬತ್ತಾಲ್ಕು) ನೇ ನಂಬರ್ ಖಾಲಿ ನಿವೇಶನದ ಸ್ವತ್ತಿಗೆ ಚಕ್ಕು ಬಂದಿ

ಪೂರ್ವಕ್ಕೆ: ಸ್ವತ್ತಿನ ನಂಬರ್ 395   ಪಶ್ಚಿಮಕ್ಕೆ: ಖಾಸಗಿ ಸ್ವತ್ತು
ಉತ್ತರಕ್ಕೆ: ರಸ್ತೆ   ದಕ್ಷಿಣಕ್ಕೆ: ಸ್ವತ್ತಿನ ನಂಬರ್ 414.

ನ್ಯಾಯಾಲಯದ ಮೊಹರು ಹಾಗು ಸಹಿಯೊಂದಿಗೆ ದಿನಾಂಕ: **09-04-2026** ರಂದು ನೀಡಲಾಗಿದೆ.

ಅರವಿಂದ್ ಕುಮಾರ್ ಜೆ.ಜಿ. ಅರ್ಜಿದಾರರ ಪರ ವಕೀಲರು
ದಿನಾಂಕ: 09-04-2026
ಸ್ಥಳ: ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/- ಹಿರಿಯ ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಸಿ.ಜೆ.ಎಂ. ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,

ಗುಂಡ್ಲುಪೇಟೆ-571 111, ಚಾಮರಾಜನಗರ ಜಿಲ್ಲೆ

ಇ-ಮೇಲ್: apmcgundlupet1997@gmail.com
ದೂರವಾಣಿ ಸಂಖ್ಯೆ: 08229-222215
ಕೃ.ಉ.ಮಾ.ಸ(ಗುಂಡ್ಲು): 05: 2026-27
ದಿನಾಂಕ: 06/04/2026

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಬಟುವಾಡೆ ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ಗಳಲ್ಲಿ ನೋಂದಾಯಿತ ಹಾಗೂ Standard Tender Documents KW-4 Clause 3 (with latest amendments)ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇ.ಎಂ.ಡಿ ಮೊಬಲಗು ರೂ. ಶೇ.1.50 ರಂತೆ ಅಥವಾ ಕನಿಷ್ಠ (ಇ.ಪೇಮೆಂಟ್)	ಕೆಲಸ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ)	ಅರ್ಹ ಗುತ್ತಿಗೆದಾರರ ದರ್ಜೆ	ಇ ಪ್ರೊಕ್ಯೂರ್‌ಮೆಂಟ್ ಫೀ(ಇ ಪೇಮೆಂಟ್)
1	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ 2025-26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಸಮಿತಿಯ ಮುಖ್ಯ ಮಾರುಕಟ್ಟೆ ಮತ್ತು ತೆರಕಣಾಂಬಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಸಿ.ಸಿ.ರಸ್ತೆ, ಸಿ.ಸಿ.ಚರಂಡಿ ಮತ್ತು ಡೆಕ್‌ಸ್ಲ್ಯಾಬ್‌ಗಳನ್ನು ನಿರ್ಮಿಸುವ ಕಾಮಗಾರಿ. (ಬಟುವಾಡೆ ಟೆಂಡರ್)	4,14,22,518=65	6,22,000=00	6 ತಿಂಗಳು	ಕೆ.ಡಬ್ಲ್ಯು-4 ಕ್ಲಾಸ್-3ರಲ್ಲಿ ಅರ್ಹರಿರುವ ಮತ್ತು ಲೋ.ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ

1. ಪ್ರೀ ಬಿಡ್ ಮೀಟಿಂಗ್ ದಿನಾಂಕ: 15.04.2026 ಬೆಳಿಗ್ಗೆ: 12.00 ಘಂಟೆಗೆ
2. ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: 21.04.2026 ಮತ್ತು ವೇಳೆ: ಸಂಜೆ 5.00 ಗಂಟೆ
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.04.2026 ಮತ್ತು ವೇಳೆ: ಮಧ್ಯಾಹ್ನ 5.00 ಗಂಟೆ
4. ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.04.2026 ಮತ್ತು ವೇಳೆ: ಮಧ್ಯಾಹ್ನ 3.00 ಗಂಟೆ

Tender documents may be downloaded from Government of Karnataka e-Procurement website https://kppp.karnataka.gov.in//portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ: ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ
ಪತ್ರ ವ್ಯವಹಾರದ ವಿಳಾಸ: ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ
ಸಹಿ/- ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಂಡ್ಲುಪೇಟೆ

ಸಂ.ವಾಸಾಸಂಇ:: ಚಾ.ನಗರ:32;2026-27

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಮದ್ದೂರು.

ಸಿ.ಮಿಸ್.45/2026

ಅರ್ಜಿದಾರರು: 1) ಕೃಷ್ಣಮೂರ್ತಿ ಬಿನ್.ಲೇಟ್ ದೊಡ್ಡ ಮುತ್ತಯ್ಯ, ವಯಸ್ಸು 75 ವರ್ಷ, 2) ಚನ್ನಮ್ಮ ಕೋಂ ಕೃಷ್ಣಮೂರ್ತಿ, ವಯಸ್ಸು 68 ವರ್ಷ 3) ಸುಕನ್ಯಾ ಕೋಂ.ಲೇಟ್.ಅಪ್ಪಾಜಿ, ವಯಸ್ಸು 56 ವರ್ಷ, 4) ಪುಷ್ಪಲತಾ,ಎಸ್.ಕೆ ಬಿನ್ ಕೃಷ್ಣಮೂರ್ತಿ, ವಯಸ್ಸು 43 ವರ್ಷ, 5) ರವಿಕುಮಾರ್.ಕೆ.ಎಸ್ ಬಿನ್.ಕೃಷ್ಣಮೂರ್ತಿ, ವಯಸ್ಸು 41 ವರ್ಷ 6) ಮುತ್ತುರಾಜ್ ಬಿನ್. ಲೇಟ್.ಅಪ್ಪಾಜಿ, ವಯಸ್ಸು 27 ವರ್ಷ, 7) ಚಂದನ್.ಎಸ್.ಎ ಬಿನ್.ಲೇಟ್.ಅಪ್ಪಾಜಿ, ವಯಸ್ಸು 23 ವರ್ಷ, ಅರ್ಜಿದಾರರು 1 ರಿಂದ 7 ರವರು ವಾಸ ಶಂಕರಪುರ ಗ್ರಾಮ ಕೊಪ್ಪ ಹೋಬಳಿ ಮದ್ದೂರು ತಾಲ್ಲೋಕು ಮಂಡ್ಯ ಜಿಲ್ಲೆ

ವಿರುದ್ಧ

ಎದುರುದಾರರು: ಜನನ ಮತ್ತು ಮರಣಗಳ ನೋಂದಣಿ ಅಧಿಕಾರಿಗಳು, ತಹಸೀಲ್ದಾರ್, ತಾಲ್ಲೋಕು ಕಛೇರಿ, ಮದ್ದೂರು

ಪ್ರಕಟಣೆ

ಮೇಲ್ಕಂಡ 1ನೇ ಅರ್ಜಿದಾರರ ತಾಯಿ ಹಾಗೂ 2 ಮತ್ತು 3ನೇ ಅರ್ಜಿದಾರರ ಅತ್ತೆ ಹಾಗೂ 4 ರಿಂದ 7ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಲಿಂಗಮ್ಮ ಕೋಂ ಲೇಟ್ ದೊಡ್ಡಮುತ್ತಯ್ಯರವರು ದಿನಾಂಕ: 20-10-1996ರಂದು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಶಂಕರಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಆದ್ದರಿಂದ ಶ್ರೀಮತಿ.ಲಿಂಗಮ್ಮ ಕೋಂ ಲೇಟ್ .ದೊಡ್ಡಮುತ್ತಯ್ಯರವರ ಮರಣ ಪ್ರಮಾಣ ಪತ್ರಕ್ಕಾಗಿ ಈ ಘನ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರಕರಣವನ್ನು ದಾಖಲಿಸಿದ್ದು ಸದರಿ ಪ್ರಕರಣದ ಸುನಾವಣೆ ದಿನಾಂಕ: 19.05.2026ರಂದು ಬೆಳಿಗ್ಗೆ 11.00 ಗಂಟೆಗೆ ಇದ್ದು ಅಂದು ಯಾರಾದರೂ ಆಸಕ್ತಿಯುಳ್ಳವರು ಹಾಗೂ ತಕರಾರು ಸಲ್ಲಿಸುವವರು ಇದ್ದರೆ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸುವುದು ತಪ್ಪಿದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯಪಡಿಸುತ್ತಾ, ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ಪ್ರಕಟಿಸಲಾಗಿದ್ದು ದಿನಾಂಕ: 7.04.2026 ರಂದು ನೀಡಲಾಗಿದೆ.

ನ್ಯಾಯಾಲಯದ ಆಜ್ಞೆ ಮೇರೆಗೆ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಮದ್ದೂರು

ಅರ್ಜಿದಾರರ ಪರ ವಕೀಲರು
ಮಹೇಶ.ಎಂ. ಬಿ.ಎ.ಎಲ್.ಎಲ್.ಬಿ, ವಕೀಲರು, ಮದ್ದೂರು

IN THE COURT OF THE X ADDITIONAL CITY CIVIL AND SESSION JUDGE, AT; BENGALURU. (CCH-26)

P & SC. No: 633/2025

BETWEEN:- **Sri. T. NARAYANASWAMY**, S/o. Late. THIMMARAYAPPA, AGED 57 YEARS, R/at SY. NO; 42 & 61, NAGACHAMUNDESHWARI TEMPLE, 8TH CROSS ROAD, LAKSHMI LAYOUT, PUTTENAHALLI, J. P. NAGARA, VII PHASE, BANGALURU, KARNATAKA - 560078.
...PETITIONER

AND:-(1). **Smt. NANJAMMA**, W/o. late. THIMMARAYAPPA, AGED ABOUT 93 YEARS, (2). **Sri. NAGARAJ**, S/o. Late. THIMMAKKA & Late. THIMMARAYAPPA, AGED ABOUT 45 YEARS, (3). **Smt. MARIYAMMA**, D/o. late. THIMMARAYAPPA, & Smt. NANJAMMA, AGED ABOUT 66 YEARS, (4). **Sri. T. RAJU @ RAJAPPA**, S/o. Late. THIMMARAYAPPA, & Smt. NANJAMMA, AGED ABOUT 60 YEARS, (5). **Smt. GOWRAMMA**, D/o. Late. THIMMARAYAPPA, & Smt. NANJAMMA, AGED ABOUT 56 YEARS, (6). **Sri. MUNIYAPPA**, S/o. late. THIMMARAYAPPA, & Smt. NANJAMMA, AGED ABOUT 52 YEARS, (7). **Smt. CHANDRIKA**, D/o. late. THIMMARAYAPPA, & Smt. NANJAMMA, AGED ABOUT 45 YEARS, ALL ARE RESIDING AT; SY. NO; 42 & 61, NAGACHAMUNDESHWARI TEMPLE, 8TH CROSS ROAD, LAKSHMI LAYOUT, PUTTENAHALLI, J. P. NAGARA, VII PHASE, BANGALURU, KARNATAKA - 560078. ...RESPONDENTS.

PUBLIC NOTICE

Whereas, the above named Petitioner made this petition under Section 276 of the Indian succession Act - 1925 for grant the Probate or letter of administration in my name as per the register Will dated; 07-06-1984, which was executed by Mr. Thimmarayappa, (who Died on 22-08-1985) in respect of the Schedule Properties.

The Deceased Mr. Thimmarayappa who was the original owner of the suit schedule properties, expired on 22-08-1985 at Bengaluru and the Deceased Mr. Thimmarayappa. During his life time, he has executed the Register Will dated; 07-06-1984 and the Codicil Will date: 25-10-1984 in favour of the Petitioner herein in respect of the suit schedule properties, the same was herself acquired property. Hence, The petitioner has filed this present petition for seeking an order of Probate or Letter of Administration, if any Interested parties are hereby to appear before the Hon'ble X Additional City Civil and sessions judge, at Bengaluru in person or by your Pleader duly instructed on **03/06/2026 at 11 A.M.** to inform or to show cause against petitioner, failing wherein the appearance will be heard and declared as ex-parte.

SUIT SCHEDULE PROPERTY

ITEM NO: 1 ALL THE PIECE AND PARCEL OF THE AGRICULTURAL LAND / PROPERTY BEARING SY.NO.32., SITUATED AT PUTTENAHALLI VILLAGE, UTTARAHALLI HOBLI, BENGALURU SOUTH TALUK, BENGALURU URBAN DISTRICT. MEASURING 3 ACRES 35 GUNTAS BOUNDED BY **EAST BY** -: THE REMAINING LAND BEARING SY. NO.32, **WEST BY** : THE LAND BEARING SY.NO.40, **NORTH BY** : THE LAND BEARING SY. NO.33, **SOUTH BY** : THE LAND BEARING SY. NO.42 AND 61

SUIT SCHEDULE PROPERTY

ITEM NO: 2 ALL THE PIECE AND PARCEL OF THE AGRICULTURAL LAND / PROPERTY BEARING SY.NO.52, SITUATED AT PUTTENAHALLI VILLAGE, UTTARAHALLI HOBLI, BENGALURU SOUTH TALUK, BENGALURU URBAN DISTRICT. MEASURING 1 ACRE BOUNDED BY - **EAST BY** : THE LAND BEARING SY. NO. 36, **WEST BY** : THE REMAINING LAND BEARING SY.NO.52. **NORTH BY** : THE REMAINING LAND BEARING SY. NO; 52. **SOUTH BY** : ROAD,

SUIT SCHEDULE PROPERTY

ITEM NO; 3 ALL THE PIECE AND PARCEL OF THE AGRICULTURAL LAND / PROPERTY BEARING SY.NO.61., SITUATED AT PUTTENAHALLI VILLAGE, UTTARAHALLI HOBLI, BENGALURU SOUTH TALUK, BENGALURU URBAN DISTRICT. MEASURING 2 ACRES BOUNDED BY **EAST BY** : THE REMAINING LAND BEARING SY. NO. 61, **WEST BY** : THE LAND BEARING SY.NO.42 **NORTH BY** : THE LAND BEARING SY. NO.61, **SOUTH BY** : ARAKERE AND KOTTHNURU BORDER.

SUIT SCHEDULE PROPERTY

ITEM NO: 4 ALL THE PIECE AND PARCEL OF THE LAND / IMMOVABLE PROPERTY BEARING SY. NO: 42, MEASURING 1 ACRE 00 GUNTAS, SITUATED AT PUTTENAHALLI VILLAGE, UTTARAHALLI HOBLI, BENGALURU SOUTH TALUK, BOUNDED BY:- **EAST BY** : REMAINING LAND BEARING SY. NO. 61, **WEST BY** : REMAINING LAND BEARING SY. NO; 42. **NORTH BY** : REMAINING LAND BEARING SY. NO: 42, **SOUTH BY** : REMAINING LAND BEARING SY. NO. 42.

GIVEN UNDER MY HAND AND SEAL OF THE COURT THIS 9TH DAY OF APRIL 2026 AT BENGALURU.

By Order of the Court
Sd/- Senior Sheristedar
City Civil Court, Bengaluru

Address for Service
V. RANGARAMU & ASSOCIATES ADVOCATE OFFICE AT NO.24, 3RD CROSS, SAMPIGE ROAD, MALLESHWARAM, BENGLAURU, PH. NO: 9845510704. Suraksha7411@gmil.com

---

IN THE COURT OF THE I ADDL DISTRICT AND SESSIONS JUDGE AT TUMKUR.

LAC.No.284/2024

PETITIONER : Kanakappa dead by Lr's Kariyamma and others.

V/S

RESPONDENTS : SLAO & Another.

DRAFT FOR THE PUBLICATION

Propose Respondent No-3: Rajalakshmamma L.K D/o Late. Kanakappa W/o Eranna. T R/o Thimalapura village, Dodder Hobli, Madhugiri taluk Tumkur District.

NOTICE

The Petitioner has filed the suit in LAC No.284/2024 before the Hon'ble Court I Additional District and Session Judge at Tumkur, For Enhancement of Compensation for acquisition of land for Railway Construction project with respect to property Sy.No.217/4 totally Measuring 1.20.00 acres situated at Sebi- Agrahara village, Kallambella Hobli, Tumuru District. That you are the Proposed Respondent No.3 in the above suit. Hence your appearance is required in person or through pleader **12-06-2026** at 11.00 am before the Hon'ble I Additional District and Session Judge at Tumkur to defend the case and in default of your appearance on the day specified, the case will be heard by placing you ex-parte.

Given under my hand the seal of the court this 10th day of April 2026.

By order of the Court
Chief Administrative Officer
Dist. & Sessions Court TUMKUR

Advocate for Petitioner :
T.G.Devaraju, B.A.L., L.L.B Advocate, Room No.9, 1st Floor, P.L.D. Bank, Near Court Complex.

IN THE COURT OF HON'BLE I-ADDL CIVIL JUDGE & JMFC AT K.G.F.

C.M.C. No: 106/2026.

PETITIONERS: 1. SMT. CHENNAMMA W/o Late Shankarappa Aged about 86 years, **2. SMT. KANTHAMMA** D/o Shankarappa W/o H.N.Krishnappa Aged about 60 years, Both are R/at: Nallagattur Village, Srinivasandra Post, Kyasamballi Hobli, KGF Taluk.

-V/S-

RESPONDENT : THE TAHSILDHAR, KGF TALUK KGF.

PUBLIC NOTICE

WHEREAS, the petitioner are filed a Petition under section 13(3) of Registration of Birth & Death Act 1969, for obtaining the Death Certificate of the Petitioner No.1 deceased Husband SRI. **SHANKARAPPA,** S/o late Venkataramappa & late Akkayamma, was died **on : 14-04-2002** due to ill-health at Nallagattur Village, Srinivasandra Post, Kyasamballi Hobli, KGF Taluk, Karnataka State.

The hearing date of the case is posted **on: 19.05.2026** if any person having any claim or objection has to appear before this Hon'ble Court in person or by pleader in the above said hearing date at about 11.00am to answer the same, failing which the petition will be disposed off as ex-parte. Given under my hand and seal of this Court on this 24/3/2026.

By The Order of the Court
CHIEF MINISTERAL OFFICER
PRL CIVIL JUDGE AND JMFC COURT
KOLAR GOLD FIELDS.

Advocate for Petitioners :
SRI. SUHAS RAJ. R, B.A, LL.B., Advocate, K.G.F. PLACE: K.G.F. DATE: 24-03-2026.

ನ್ಯಾಯಾಲಯದ ಆಜ್ಞೆಯ ಮೇರೆಗೆ, ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಶ್ರೀರಂಗಪಟ್ಟಣ.
ಅರ್ಜಿದಾರರ ಪರ ವಕೀಲರು: [illegible]
ದಿನಾಂಕ: 07-04-2026 ಸ್ಥಳ: ಶ್ರೀರಂಗಪಟ್ಟಣ.

Chief Ministeral Officer
Prl Civil Judge & JMFC Doddaballapura.

By Order of the Court
Chief Ministerial Officer
Prl Civil Judge & JMFC Doddaballapura.

ಲೆಬನಾನ್ ಜತೆ ಐತಿಹಾಸಿಕ ಶಾಂತಿ ಒಪ್ಪಂದ: ನೆತನ್ಯಾಹು

ಹೆಜ್ಬೊಲ್ಲಾ ನಾಶವೇ ಇಸ್ರೇಲ್‌ನ ಗುರಿ

• **ಟೆಲ್ ಅವೀವ್:** ಇರಾನ್‌ನೊಂದಿಗೆ ಘೋಷಿಸಲಾದ ಕದನ ವಿರಾಮವು ಲೆಬನಾನ್ ವಿಚಾರದಲ್ಲಿ ಪರಿಣಾಮ ಬೀರುವುದಿಲ್ಲ, ಹೆಜ್ಬೊಲ್ಲಾ ಮೇಲೆ ಇನ್ನಷ್ಟು ಪ್ರಖರ ದಾಳಿ ನಡೆಸುತ್ತೇವೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಲೆಬನಾನ್ ಮನವಿ ಮಾಡಿಕೊಂಡರೆ ಅದರೊಂದಿಗೆ ಶಾಂತಿ ಮಾತುಕತೆ ನಾವು ಸಿದ್ಧರಿದ್ದೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹೆಜ್ಬೊಲ್ಲಾ ನಿಷ್ಕ್ರಿಯಗೊಳಿಸುವುದೇ ನಮ್ಮ ಗುರಿ. ಲೆಬನಾನ್ ಸರ್ಕಾರದೊಂದಿಗಿನ ಐತಿಹಾಸಿಕ ಶಾಂತಿ ಒಪ್ಪಂದ ಸಾಧಿಸಲು ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ ಎಂದು ನೆತನ್ಯಾಹು ಹೇಳಿದ್ದಾರೆ. ಲೆಬನಾನ್ ಸರ್ಕಾರದ ಮನವಿ ಹಿನ್ನೆಲೆ, ಕಳೆದ ರಾತ್ರಿ ನೇರ ಮಾತುಕತೆಗಳನ್ನು ಆರಂಭಿಸಲು ಸಚಿವ ಸಂಪುಟಕ್ಕೆ ಸೂಚನೆ ನೀಡಿದ್ದೇನೆ. ಹೆಜ್ಬೊಲ್ಲಾ ಉಗ್ರ ಸಂಘಟನೆ ನಿಷ್ಕ್ರಿಯಗೊಳಿಸುವುದು ನಮ್ಮ ಮೊದಲ ಗುರಿ. ಎರಡನೆಯದು ಇಸ್ರೇಲ್ ಮತ್ತು ಲೆಬನಾನ್ ನಡುವಿನ ಐತಿಹಾಸಿಕ ಶಾಂತಿ ಒಪ್ಪಂದ ಎಂದು ಹೇಳಿದರು. ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ಹೊಸ ದಾಳಿಗಳನ್ನು ಪ್ರಾರಂಭಿಸಿದೆ. ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಉಗ್ರ ಸಂಘಟನೆಯ ಉಡಾವಣಾ ಕೇಂದ್ರಗಳ ಮೇಲೆ ದಾಳಿ ಆರಂಭಿಸಲಾಗಿದೆ ಎಂದು ಐಡಿಎಫ್ ತನ್ನ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಯುದ್ಧ ವಿರಾಮ ಏಕೈಕ



ಪರಿಹಾರವೆಂದ ಲೆಬನಾನ್: ದೇಶದ ಪ್ರಸ್ತುತ ಪರಿಸ್ಥಿತಿಗೆ ಯುದ್ಧ ವಿರಾಮವೇ ಏಕೈಕ ಪರಿಹಾರವೆಂದು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹೇಳಿದ್ದಾರೆ. ಕದನ ವಿರಾಮದ ಪ್ರಸ್ತಾವನೆ ಹಾಗೂ ಇಸ್ರೇಲ್ ಜತೆ ನೇರ ಮಾತುಕತೆಯ ಪ್ರಕ್ರಿಯೆ ಈಗಾಗಲೇ ಶುರುವಾಗಿದೆ ಮತ್ತು ಇದುವರೆಗೆ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ ಎಂದು ತಿಳಿಸಿದ್ದಾರೆ.

ಲೆಬನಾನ್‌ನಲ್ಲಿ ಶಾಂತಿ, ಸುರಕ್ಷತೆಗೆ ಭಾರತ ಕರೆ

ಲೆಬನಾನ್ ರಾಷ್ಟ್ರದಲ್ಲಿ ಸುಮಾರು 1,000ಕ್ಕೂ ಅಧಿಕ ಭಾರತೀಯರಿದ್ದಾರೆ. ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳಲು ಭಾರತ ತನ್ನ ಬದ್ಧತೆಯನ್ನು ಹೊಂದಿದೆ. ಲೆಬನಾನ್ ಮೇಲಿನ ಇಸ್ರೇಲ್ ಸೇನೆಯ ದಾಳಿಗಳು ಆತಂಕಕಾರಿ. ಭಾರತೀಯರ ಸುರಕ್ಷತೆ ನಮ್ಮ ಮೊದಲ ಆದ್ಯತೆಯೆಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.





ಅಮೆರಿಕದ ದುಬಾರಿ ಡ್ರೋನ್ ಹಾರ್ಮುಜ್ ಸಮೀಪ ಕಣ್ಮರೆ!

• **ಟೆಹ್ರಾನ್:** ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್ ಜಲಸಂಧಿಯ ಮೇಲೆ ಕಣ್ಗಾವಲು ನಡೆಸುತ್ತಿದ್ದ ಅಮೆರಿಕ ಸೇನೆಯ 200 ದಶಲಕ್ಷ ಡಾಲರ್ ಮೌಲ್ಯದ ಎಂಕ್ಯೂ-4ಸಿ ಟ್ರಿಟನ್ ಡ್ರೋನ್ ಕಾಣೆಯಾಗಿದೆ. ಇದು ಕೊನೆಯದಾಗಿ ಇರಾನ್ ವಾಯು ಪ್ರದೇಶದಲ್ಲಿ ಕಾಣಿಸಿಕೊಂಡಿದ್ದು, ಅಮೆರಿಕ-ಇರಾನ್ ನಡುವಿನ ಕದನ ವಿರಾಮ ಘೋಷಣೆಯ ಬಳಿಕ ಘಟನೆ ನಡೆದಿದೆ. ಡ್ರೋನ್ ಪತನಗೊಂಡಿತೋ ಅಥವಾ ಇರಾನಿಯನ್ನರು ಹೊಡೆದುರುಳಿಸಿದ್ದಾರೋ ಎಂಬ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಅಮೆರಿಕದ ದುಬಾರಿ ಎಂಕ್ಯೂ-4ಸಿ ಟ್ರಿಟನ್ ಡ್ರೋನ್, ಪರ್ಷಿಯನ್ ಗಲ್ಫ್ ಮತ್ತು ಹಾರ್ಮುಜ್‌ನ ಮೇಲೆ ಸುಮಾರು 3 ಗಂಟೆಗಳ ಕಾಲ ಕಣ್ಗಾವಲು ನಡೆಸಿದ ಬಳಿಕ ಇಟಲಿಯ ಸಿಗೊನೆಲ್ಲಾ ನೌಕಾನೆಲೆಗೆ ಹೋಗುತ್ತಿತ್ತು ಎಂದು ವರದಿಯಾಗಿದೆ. ಆದರೆ ಅದು ಸಿಗೊನೆಲ್ಲಾ ಸೇನಾನೆಲೆಯನ್ನು ತಲುಪಿಲ್ಲ. ಡ್ರೋನ್ ಕಾಣೆಯಾಗುವ ಮುನ್ನ ಸಹಾಯಕ್ಕಾಗಿ ತುರ್ತು ಪರಿಸ್ಥಿತಿ ಕೋಡ್ 7700 ಕಳುಹಿಸಿತ್ತು. ಹಾರ್ಮುಜ್‌ನಲ್ಲಿ ಅಮೆರಿಕ ಮತ್ತು ಇರಾನ್ ಕದನ ವಿರಾಮ ಒಪ್ಪಂದಕ್ಕೆ ಒಪ್ಪಿಕೊಂಡ 2 ದಿನಗಳ ಬಳಿಕ ಡ್ರೋನ್ ಕಾಣೆಯಾಗಿದೆ. ಇದು ಸುಮಾರು 50,000 ಅಡಿ ಎತ್ತರದಲ್ಲಿ 24 ಗಂಟೆಗಳಿಗೂ ಅಧಿಕ ಕಾಲ 13,705 ಕಿ.ಮೀ. ದೂರದವರೆಗೆ ಕಣ್ಗಾವಲು ಸಾಮರ್ಥ್ಯವನ್ನು ಹೊಂದಿದೆ. 2025ರ ವರದಿಯ ಪ್ರಕಾರ, ಇಂತಹ 20 ಡ್ರೋನ್‌ಗಳನ್ನು ಹೊಂದಿರುವ ಅಮೆರಿಕ ನೌಕಾಪಡೆ ಇನ್ನೂ 7 ಖರೀದಿಸಲಿದೆ.

ಆಪರೇಷನ್ ರೋರಿಂಗ್ ಲಯನ್

ಇಸ್ರೇಲ್ ಸೇನೆ (ಐಡಿಎಫ್), ಇರಾನ್ ಮೇಲಿನ ತನ್ನ ಆಪರೇಷನ್ ರೋರಿಂಗ್ ಲಯನ್ ಅಂಕಿ ಸಂಖ್ಯೆಯನ್ನು ಶುಕ್ರವಾರ ಹಂಚಿಕೊಂಡಿದೆ.

4,000+ ಗುರಿಗಳ ಮೇಲೆ ಇಸ್ರೇಲ್ ವೈಮಾನಿಕ ದಾಳಿ

18,000+ ಬಾಂಬ್‌ಗಳಿಂದ ಇರಾನ್ ಮೇಲೆ ದಾಳಿ

8,500+ ಇರಾನ್‌ನಲ್ಲಿ ನಡೆಸಿದ ಕಾರ್ಯಾಚರಣೆ ಹಾರಾಟ

1,000+ ಇಸ್ರೇಲ್ ಯುದ್ಧ ವಿಮಾನಗಳ ದಾಳಿ ಹಾರಾಟ

10,800+ ಇರಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿ

6,700+ ಇರಾನ್ ಸೇನಾ ಮೂಲಸೌಕರ್ಯಗಳು, ವ್ಯವಸ್ಥೆಗಳ ನಾಶ



ಕದನ ವಿರಾಮ ಇನ್ನೂ ಅಸ್ಥಿರ!

ಕದನ ವಿರಾಮದ ಭವಿಷ್ಯ ಇನ್ನೂ ಅನಿಶ್ಚಿತವಾಗೇ ಉಳಿದುಕೊಂಡಿದೆ. ಯಾಕೆಂದರೆ ಹಲವು ಪ್ರಮುಖ ವಿಚಾರಗಳ ಬಗ್ಗೆ ರಾಷ್ಟ್ರಗಳ ನಡುವೆ ಯಾವುದೇ ಸ್ಪಷ್ಟತೆಯಿಲ್ಲ. ಪರಮಾಣು ಹಾಗೂ ಕ್ಷಿಪಣಿ ನಿರ್ಮಾಣ ಯೋಜನೆಯನ್ನು ಇರಾನ್ ಕೈಬಿಡುವುದು, ಹೆಚ್ಚುವರಿ ಯುರೇನಿಯಂ ಸಂಗ್ರಹಿಸುವುದನ್ನು ನಿಲ್ಲಿಸುವುದು ಅಮೆರಿಕ ಮತ್ತು ಇಸ್ರೇಲ್‌ನ ಪ್ರಮುಖ ಗುರಿಗಳಾಗಿವೆ. ಆದರೆ ತನ್ನ ಪರಮಾಣು ಬಾಂಬ್ ಯೋಜನೆ ಶಾಂತಿಯುತವಾಗಿದ್ದು, ಯುರೇನಿಯಂ ಸಂಸ್ಕರಣೆ ಹಕ್ಕನ್ನು ಉಳಿಸಿಕೊಳ್ಳುವುದು ಇರಾನ್ ಗುರಿಯಾಗಿದೆ. ಯುದ್ಧ ವಿರಾಮ ಘೋಷಿಸಲ್ಪಟ್ಟಿದ್ದರೂ, ಪರಿಸ್ಥಿತಿ ಇನ್ನೂ ಗಂಭೀರವಾಗಿದೆ ಮತ್ತು ಶಾಶ್ವತ ಶಾಂತಿ ಸಾಧಿಸಲು ಇನ್ನೂ ಬಹಳ ಪ್ರಯತ್ನ ಅಗತ್ಯವಿದೆ.

ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ

ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಅಸ್ಥಿರವಾದ ಹಿನ್ನೆಲೆ ಶುಕ್ರವಾರ ಉನ್ನತ ಮಟ್ಟದ ಮಾತುಕತೆಗೆ ಎರಡೂ ರಾಷ್ಟ್ರಗಳ ಸಂಧಾನಕಾರರು ಸಿದ್ಧತೆ ನಡೆಸುತ್ತಿದ್ದಾರೆ. ಈ ಅಸ್ಥಿರತೆಯ ಮಧ್ಯೆ, ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ಗುಂಡಿನ ಚಕಮಕಿ ಏರ್ಪಟ್ಟಿದ್ದು, ಹಾರ್ಮುಜ್ ಜಲಸಂಧಿಯನ್ನು ತೆರೆಯದೆ ಇರಾನ್ ತನ್ನ ಹಿಡಿತ ಸಾಧಿಸಿದೆ. ಕದನ ವಿರಾಮ ಅನುಷ್ಠಾನಕ್ಕೆ ಹಲವು ಅಡೆತಡೆಗಳು ಇನ್ನೂ ಉಳಿದುಕೊಂಡಿವೆ. ಶಾಶ್ವತ ಕದನ ವಿರಾಮ ಒಪ್ಪಂದ ಮಾತುಕತೆಗೆ ಹಲವು ಸವಾಲುಗಳಿವೆ. ಇರಾನ್ ಮಾಧ್ಯಮಗಳ ಪ್ರಕಾರ, ಲೆಬನಾನ್ ಮೇಲೆ ಇಸ್ರೇಲ್ ದಾಳಿಗಳನ್ನು ನಿಲ್ಲಿಸದಿದ್ದರೆ ಮಾತುಕತೆ ನಡೆಯುವುದು ಸಂಶಯ.

ಇರಾನ್ ವಿರುದ್ಧ ಟ್ರಂಪ್ ಅಸಮಾಧಾನ

ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರವನ್ನು ನಿರ್ಬಂಧಿಸಿದ ಇರಾನ್ ಅನ್ನು ಟೀಕಿಸಿದ್ದಾರೆ. ಇರಾನ್ ತನ್ನ ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಿಲ್ಲ. ಇದರಿಂದ ಜಾಗತಿಕ ತೈಲ ಪೂರೈಕೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಹಡಗುಗಳ ಮುಕ್ತ ಸಂಚಾರಕ್ಕೆ ಇರಾನ್ ತಡೆಯೊಡ್ಡಿರುವುದು ಆರ್ಥಿಕ ಅಸ್ಥಿರತೆ ಉಂಟುಮಾಡುತ್ತಿದೆ ಎಂದು ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇರಾನ್ ಕದನ ವಿರಾಮ ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ.

ಕುವೈತ್ ಮೇಲೆ ಡ್ರೋನ್ ದಾಳಿ ಆರೋಪ

ಈ ಮಧ್ಯೆ, ಕುವೈತ್ ಗುರುವಾರ ತಡರಾತ್ರಿ ಇರಾನ್ ಡ್ರೋನ್ ದಾಳಿ ನಡೆಸಿದೆಯೆಂದು ಆರೋಪಿಸಿದೆ. ಇರಾನ್ ಮತ್ತದರ ಸೇನಾ ಮೈತ್ರಿಗಳು ದಾಳಿ ನಡೆಸಿರುವುದಾಗಿ ಕುವೈತ್ ದೂರಿದೆ. ಆದರೆ ಈ ದಾಳಿಯಲ್ಲಿ ತಮ್ಮ ಪಾತ್ರವಿಲ್ಲವೆಂದು ಇರಾನ್ ಸೇನೆ (ಐಆರ್‌ಜಿಸಿ) ಸ್ಪಷ್ಟೀಕರಣವನ್ನು ನೀಡಿದೆ. ಈ ಹಿಂದಿನ ಕೆಲವೊಮ್ಮೆ ಐಆರ್‌ಜಿಸಿ ದಾಳಿ ನಡೆಸಿದ್ದರೂ ಅಧಿಕೃತವಾಗಿ ಒಪ್ಪಿಕೊಂಡಿಲ್ಲ.

ಇಸ್ರೇಲ್-ಲೆಬನಾನ್ ಮಧ್ಯೆ ನೇರ ಮಾತುಕತೆ

ಇಸ್ರೇಲ್ ಮತ್ತು ಲೆಬನಾನ್ ನಡುವಿನ ನೇರ ಮಾತುಕತೆಗಳು ಶೀಘ್ರದಲ್ಲೇ ಆರಂಭವಾಗುವ ನಿರೀಕ್ಷೆಯಿದೆ. ಅಮೆರಿಕದ ವಾಷಿಂಗ್ಟನ್‌ನಲ್ಲಿ ಇಸ್ರೇಲ್ ಮತ್ತು ಲೆಬನಾನ್ ನಡುವಿನ ಶಾಂತಿ ಮಾತುಕತೆಗಳು ನಡೆಯಲಿವೆ. ಸಭೆಯಲ್ಲಿ ಅಮೆರಿಕದ ಅಧಿಕಾರಿಗಳ ಉಪಸ್ಥಿತಿ ಇರಲಿದೆ ಎಂದು ಮೂಲಗಳು ತಿಳಿಸಿವೆ. ಲೆಬನಾನ್ ಜತೆಗಿನ ಶಾಂತಿ ಸಭೆಯಲ್ಲಿ ಹೆಜ್ಬೊಲ್ಲಾ ಮೇಲಿನ ಯುದ್ಧ ವಿರಾಮ ಒಳಗೊಂಡಿಲ್ಲ ಎಂಬ ವಾದ ಇಸ್ರೇಲ್‌ನದ್ದಾಗಿದೆ. ಅಮೆರಿಕ-ಇರಾನ್ ಕದನ ವಿರಾಮ ಘೋಷಿಸಿದ ದಿನವೇ ಬೈರುತ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, 300ಕ್ಕೂ ಅಧಿಕ ಜನರು ಬಲಿಯಾಗಿದ್ದರು. ಇದೇ ವೇಳೆ ದಾಳಿ ಕಡಿಮೆ ಮಾಡುವಂತೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಮನವಿ ಮಾಡಿದ್ದಾರೆ. ಉತ್ತರ ಇಸ್ರೇಲ್ ಕಡೆಗೆ ಲೆಬನಾನ್ ಹಾರಿಸಿದ ರಾಕೆಟ್‌ಗಳಿಗೆ ಇಸ್ರೇಲ್ ಪ್ರತಿದಾಳಿ ನಡೆಸಿದೆ. ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿದರೆ ಕಠಿಣ ಪ್ರತಿಕ್ರಿಯೆ ನೀಡುತ್ತೇವೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗಾರ್ ಖಾಲಿಬಫ್ ಎಚ್ಚರಿಕೆ ನೀಡಿದ್ದಾರೆ.

ಲೆಬನಾನ್ ಜತೆ ಸಂಬಂಧ ಮರುಸ್ಥಾಪನೆಗೆ ಪ್ರಯತ್ನ: ನೆತನ್ಯಾಹು

ಲೆಬನಾನ್ ಜೊತೆ ಶೀಘ್ರ, ಮಾತುಕತೆ ಆರಂಭಿಸಲು ಸಿದ್ಧರಿದ್ದೇವೆ. ಹೆಜ್ಬೊಲ್ಲಾ ಉಗ್ರ ಸಂಘಟನೆಯನ್ನು ನಿಷ್ಕ್ರಿಯಗೊಳಿಸುವುದೇ ನಮ್ಮ ಪ್ರಮುಖ ಗುರಿ. ಇಸ್ರೇಲ್ ಮತ್ತು ಲೆಬನಾನ್ ನಡುವೆ ಸಂಬಂಧ ಪುನಸ್ಥಾಪನೆಗೆ ಪ್ರಯತ್ನಿಸುತ್ತೇವೆ ಎಂದು ನೆತನ್ಯಾಹು ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿ: ವಿವಾದಗಳ ಕೇಂದ್ರಬಿಂದು

ಹಾರ್ಮುಜ್ ಜಲಸಂಧಿ ಮೇಲಿನ ಇರಾನ್ ನಿಯಂತ್ರಣವು ಜಾಗತಿಕ ಆರ್ಥಿಕತೆ, ಇಂಧನ ಪೂರೈಕೆ, ವ್ಯಾಪಾರದ ಮೇಲೆ ಪ್ರಭಾವ ಬೀರಿದೆ. ಜಾಗತಿಕ ತೈಲ ಪೂರೈಕೆಯ ಸುಮಾರು ಶೇ.20ರಷ್ಟು ಭಾಗ ಈ ಮಾರ್ಗದಲ್ಲಿ ಸಾಗುತ್ತದೆ. ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಶೇ.30ಕ್ಕಿಂತ ಅಧಿಕ (ಬ್ರೆಂಟ್ ಕಚ್ಚಾ ತೈಲ ಬ್ಯಾರೆಲ್‌ಗೆ 97 ಡಾಲರ್) ಏರಿಕೆ ಕಂಡಿದೆ. ಹಾರ್ಮುಜ್ ಮುಚ್ಚಿರುವುದರಿಂದ ಷೇರು ಮಾರುಕಟ್ಟೆ ಕುಸಿತ ಕಂಡಿದೆ.



ಕಿರುಸುದ್ದಿ

ಮಹಾಭಿಯೋಗ ಭೀತಿ: ನ್ಯಾ.ವರ್ಮಾ ರಾಜೀನಾಮೆ

• **ಹೊಸದಿಲ್ಲಿ:** ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಲೋಕಸಭಾ ಸ್ಪೀಕರ್ ಆರಂಭಿಸಿದ್ದ ಮಹಾಭಿಯೋಗ ಪ್ರಕ್ರಿಯೆ ಆರಂಭಿಸುವ ಭೀತಿಯಿಂದ ಅವರೇ ರಾಜೀನಾಮೆ ನೀಡಿದ್ದಾರೆ. ಯಶವಂತ ವರ್ಮಾ ರಾಜೀನಾಮೆ ನೀಡಿರುವುದರಿಂದ ಅವರನ್ನು ವಜಾಗೊಳಿಸುವ ಪ್ರಕ್ರಿಯೆ ನಿರರ್ಥಕವೆಂದು ಹಿರಿಯ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ನ್ಯಾಯಮೂರ್ತಿ ವರ್ಮಾ ಸಲ್ಲಿಸಿದ್ದಾರೆ. ದಿಲ್ಲಿ ಹೈಕೋರ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿಯೇ ಅವರ ದಿಲ್ಲಿ ನಿವಾಸದಲ್ಲಿ ಸುಟ್ಟ ಕರೆನ್ಸಿ ನೋಟುಗಳು ಪತ್ತೆಯಾಗಿ ವಿವಾದಕ್ಕೆ ಸಿಲುಕಿಕೊಂಡಿದ್ದರು.

ಮಥುರಾ: ನದಿಯಲ್ಲಿ ದೋಣಿ ಮುಳುಗಿ 10 ಭಕ್ತರ ಸಾವು

• **ಲಖನೌ:** ಉತ್ತರ ಪ್ರದೇಶದ ಮಥುರಾದ ಕೇಶಿ ಘಾಟ್ ಬಳಿ ಯಮುನಾ ನದಿಯಲ್ಲಿ ಶುಕ್ರವಾರ ದೋಣಿ ಮುಳುಗಿ ಕನಿಷ್ಠ 10 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳೀಯ ಅಧಿಕಾರಿಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಪೊಲೀಸ್ ಅಧಿಕಾರಿಗಳ ಪ್ರಕಾರ, 22 ಮಂದಿಯನ್ನು ನದಿಯಿಂದ ರಕ್ಷಿಸಲಾಗಿದ್ದು, ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಮಥುರಾ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಚಂದ್ರ ರಾವತ್ ಈ ಘಟನೆಯನ್ನು ದೃಢಪಡಿಸಿದ್ದು, ಕೇಶಿ ಘಾಟ್ ಬಳಿಯ ಯಮುನಾ ನದಿಯಲ್ಲಿ ದೋಣಿ ಮುಳುಗಿದೆ.

ಪ.ಬಂಗಾಳ ಸಿಎಂ ದೀದಿ ಬಳಿ ಸ್ವಂತ ಕಾರು, ಮನೆ ಇಲ್ಲ!

• **ಕೋಲ್ಕತ್ತಾ:** ಈ ಬಾರಿಯ ವಿಧಾನಸಭೆ ಚುನಾವಣೆಗೆ ಭವಾನೀಪುರ ವಿಧಾನಸಭಾ ಕ್ಷೇತ್ರದಿಂದ ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. ಮಮತಾ ಬ್ಯಾನರ್ಜಿ ಅವರು ದೀರ್ಘಕಾಲ ರಾಜಕೀಯದಲ್ಲಿದ್ದರೂ ಮನೆ, ಕಾರು ಅಥವಾ ಯಾವುದೇ ಪ್ರಮುಖ ಸ್ಥಿರ ಆಸ್ತಿ ಹೊಂದಿಲ್ಲವೆಂದು ಅವರ ಚುನಾವಣಾ ಅಫಿಡವಿಟ್‌ನಲ್ಲಿ ಉಲ್ಲೇಖವಾಗಿದೆ. ದೇಶದ ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿಗಳಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟಿರುವ ಮಮತಾ ಬ್ಯಾನರ್ಜಿ ಅವರ ಒಟ್ಟು 15.4 ಲಕ್ಷ ರೂ ಮೌಲ್ಯದ ಆಸ್ತಿಯನ್ನು ಘೋಷಿಸಿದ್ದಾರೆ.



ಪಾಕ್ ಬೆಂಬಲಿತ 11 ಶಂಕಿತ ಉಗ್ರರ ಬಂಧನ

• **ಹೊಸದಿಲ್ಲಿ:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಹಾಗೂ ಖಾಲಿಸ್ತಾನಿ ಉಗ್ರ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಶನಲ್ ಬೆಂಬಲ ಹೊಂದಿದೆ ಎನ್ನಲಾದ ಅಂತಾರಾಜ್ಯ ಗೂಢಚರ ಹಾಗೂ ಭಯೋತ್ಪಾದಕ ಜಾಲವನ್ನು ದೆಹಲಿ ಪೊಲೀಸ್ ವಿಶೇಷ ದಳ ಭೇದಿಸಿದ್ದು, ದಿಲ್ಲಿ, ಪಂಜಾಬ್‌ನಲ್ಲಿ ಒಟ್ಟು 11 ಮಂದಿಯನ್ನು ಬಂಧಿಸಿದೆ.

ಬಂಧಿತರು ದೇಶದ ವಿವಿಧ ಸಂವೇದನಾಶೀಲ ರಕ್ಷಣಾ ಮತ್ತು ಭದ್ರತಾ ಕೇಂದ್ರಗಳ ಸುತ್ತ ನಿಗಾ ಸಾಧನಗಳನ್ನು ಅಳವಡಿಸಿ, ಅದರ ನೇರ ದೃಶ್ಯಗಳನ್ನು ಪಾಕಿಸ್ತಾನದಲ್ಲಿರುವ ಹ್ಯಾಂಡ್ಲರ್‌ಗಳಿಗೆ ರವಾನಿಸುತ್ತಿದ್ದರೆಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆರೋಪಿಗಳು ಎನ್‌ಕ್ರಿಪ್ಟ್ ಮಾಡಿದ ಮೆಸೇಜಿಂಗ್ ಆಪ್‌ಗಳ ಮೂಲಕ ಪಾಕ್ ಮೂಲದ ಸಂಚಾಲಕರೊಂದಿಗೆ ಸಂಪರ್ಕದಲ್ಲಿದ್ದು, ರಾಷ್ಟ್ರ ಭದ್ರತೆಗೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳಿಗೆ ಸೂಚನೆ ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಆರು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಜಾಲದ ವಿಸ್ತೃತ ಸಂಪರ್ಕಗಳು ಪತ್ತೆಯಾಗಿದ್ದು, ಒಟ್ಟು 11 ಮಂದಿಯನ್ನು ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ ಒಂಬತ್ತು ಸೌರಶಕ್ತಿ ಆಧಾರಿತ ಸಿಸಿಟಿವಿ ಘಟಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಾಧನಗಳನ್ನು ಸಂವೇದನಾಶೀಲ ಸೈನಿಕ ಹಾಗೂ ಭದ್ರತಾ ಕೇಂದ್ರಗಳ ಬಳಿ ಅಳವಡಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತರಲ್ಲಿ ಕೆಲವರು ಪಂಜಾಬ್‌ನಲ್ಲಿ ಸಕ್ರಿಯವಾಗಿದ್ದ ಉಗ್ರ ಹಾಗೂ ಶಸ್ತ್ರಾಸ್ತ್ರ ಕಳ್ಳಸಾಗಣೆ ಘಟಕಗಳೊಂದಿಗೆ ಸಂಪರ್ಕ ಹೊಂದಿದ್ದರೆಂಬ ಶಂಕೆಯೂ ವ್ಯಕ್ತವಾಗಿದೆ.

ಸಿಡಬ್ಲ್ಯುಸಿ ಸಭೆ: ಮಹಿಳಾ ಮೀಸಲು ಕಾಯ್ದೆ ಬಗ್ಗೆ ಚರ್ಚೆ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ಕಾನೂನು, ಕ್ಷೇತ್ರ ಮರುವಿಂಗಡಣೆ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ಕೇಂದ್ರ ಸರ್ಕಾರದ ಕ್ರಮದ ಬಗ್ಗೆ ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ(ಸಿಡಬ್ಲ್ಯುಸಿ) ಶುಕ್ರವಾರ ಸಭೆ ನಡೆಸಿದೆ.

ಕಾಂಗ್ರೆಸ್‌ನ ಇಂದಿರಾ ಭವನದ ಪ್ರಧಾನ ಕಚೇರಿಯಲ್ಲಿ ನಡೆದ ಈ ಸಭೆಯಲ್ಲಿ, ಮಹಿಳಾ ಮೀಸಲಾತಿ ಕಾಯ್ದೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ತಿದ್ದುಪಡಿ ಮಾಡುವ ಪ್ರಸ್ತಾಪವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಕಾರ್ಯತಂತ್ರವಾಗಿ ಬಳಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪಶ್ಚಿಮಬಂಗಾಳ ಮತ್ತು ತಮಿಳುನಾಡು ಚುನಾವಣೆಗಳಲ್ಲಿ ರಾಜಕೀಯ ಲಾಭ ಪಡೆಯಲು ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಮರುವಿಂಗಡಣೆ ಸಂಬಂಧಿಸಿದ ಮಸೂದೆಗಳನ್ನು ಅಂಗೀಕರಿಸಲು ಸರ್ಕಾರವು ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದು ಮಾದರಿ ನೀತಿ ಸಂಹಿತೆಯ ಸಂಪೂರ್ಣ ಉಲ್ಲಂಘನೆ ಎಂದು ಆರೋಪಿಸಿದೆ.

ತರಾತುರಿಯಲ್ಲಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗೆ ಒತ್ತಾಯಿಸುವುದರಿಂದ ದೇಶದ ಬೆಳವಣಿಗೆಗೆ ಅಪಾಯಕಾರಿ ಪರಿಣಾಮಗಳು ಉಂಟಾಗುತ್ತವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಎಂದು ಆರೋಪಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಿರಿಯ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ವಾದ್ರಾ, ಕೆ.ಸಿ. ವೇಣುಗೋಪಾಲ, ಜೈರಾಮ್ ರಮೇಶ್, ಸಚಿನ್ ಪೈಲಟ್, ಕರ್ನಾಟಕದ ಸಿಎಂ ಸಿದ್ದರಾಮಯ್ಯ, ತೆಲಂಗಾಣ ಸಿಎಂ ಎ. ರೇವಂತ್ ರೆಡ್ಡಿ ಇದ್ದರು.

ಅಂತಿಮ ಪಟ್ಟಿಗೆ 84 ಲಕ್ಷ ಮತದಾರರು ಸೇರ್ಪಡೆ

• **ಲಖನೌ:** ಉತ್ತರ ಪ್ರದೇಶದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿ ಬಿಡುಗಡೆ ಮಾಡಿದೆ.

ಕರಡು ಪಟ್ಟಿಯಲ್ಲಿ ಇದ್ದ ಮತದಾರರ ಸಂಖ್ಯೆಗಿಂತ 84 ಲಕ್ಷ ಮಂದಿ ಹೆಚ್ಚುವರಿ ಮತದಾರರು ಅಂತಿಮ ಮತಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ. ಈ ಮೂಲಕ ಒಟ್ಟು ಮತದಾರರ ಸಂಖ್ಯೆ 13.39 ಕೋಟಿಗೆ ಏರಿಕೆಯಾಗಿದೆ. ಇಲ್ಲಿನ ಲೋಕಭವನ ಮಾಧ್ಯಮ ಕೇಂದ್ರದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಉತ್ತರ ಪ್ರದೇಶದ ಮುಖ್ಯ ಚುನಾವಣಾ ಅಧಿಕಾರಿ ನವದೀಪ್ ರಿನ್ವಾ, ಎಸ್‌ಐಆರ್ ಪ್ರಕ್ರಿಯೆಯನ್ನು 2025ರ ಅಕ್ಟೋಬರ್ 27ರಿಂದ 2026ರ ಏಪ್ರಿಲ್ 10ರವರೆಗೆ ನಡೆಸಲಾಗಿದೆ. ರಾಜ್ಯದಾದ್ಯಂತ ಎಲ್ಲಾ 75 ಜಿಲ್ಲೆಗಳು, 403 ವಿಧಾನಸಭಾ ಕ್ಷೇತ್ರಗಳು ಮತ್ತು ಮತದಾನ ಕೇಂದ್ರಗಳನ್ನು ಒಳಗೊಂಡಿದೆ.

75 ಜಿಲ್ಲಾ ಚುನಾವಣಾ ಅಧಿಕಾರಿಗಳು (ಡಿಇಒಗಳು), 403 ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒಗಳು), 12,758 ಸಹಾಯಕ ಇಆರ್‌ಒಗಳು (ಎಇಆರ್‌ಒಗಳು), 18,026 ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮೇಲ್ವಿಚಾರಕರು ಮತ್ತು 1,77,516 ಬಿಎಲ್‌ಒಗಳ ಕೊಡುಗೆಯೊಂದಿಗೆ 166 ದಿನಗಳ ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಜ.6ರಂದು ಪ್ರಕಟವಾದ ಕರಡು ಮತದಾರರ ಪಟ್ಟಿಯಲ್ಲಿ 6.88 ಕೋಟಿ ಪುರುಷ ಮತದಾರರು, 5.67 ಕೋಟಿ ಮಹಿಳಾ ಮತದಾರರು ಮತ್ತು 4,119 ತೃತೀಯ ಲಿಂಗಿ ಮತದಾರರು ಸೇರಿದಂತೆ 12,55,56,025 ಮತದಾರರಿದ್ದಾರೆ ಎಂದು ರಿನ್ವಾ ಹೇಳಿದರು.


ಗಗನಯಾನ ಯೋಜನೆ: ಏರ್ ಡ್ರಾಪ್ ಟೆಸ್ಟ್ ಯಶ

• **ಹೊಸದಿಲ್ಲಿ:** ಭಾರತೀಯ ಬಾಹ್ಯಾಕಾಶ ಇತಿಹಾಸದಲ್ಲೇ ಅತ್ಯಂತ ಮಹತ್ವಾಕಾಂಕ್ಷೆಯ ಮಾನವ ಸಹಿತ ಗಗನಯಾನ್ ಯೋಜನೆ ಅಂಗವಾಗಿ ಎರಡನೇ ಇಂಟಿಗ್ರೇಟೆಡ್ ಏರ್ ಡ್ರಾಪ್ ಪರೀಕ್ಷೆಯನ್ನು (ಐಎಡಿಟಿ-02) ಆಂಧ್ರಪ್ರದೇಶದ ಶ್ರೀಹರಿಕೋಟಾ ಬಾಹ್ಯಾಕಾಶ ಕೇಂದ್ರದಲ್ಲಿ ಶುಕ್ರವಾರ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯಶಸ್ವಿಯಾಗಿ ಪೂರೈಸಿದೆ. 2027ರ ಮಾನವ ಸಹಿತ ಗಗನಯಾನ ಯೋಜನೆಯ ಕ್ಯಾಪ್ಸೂಲ್ ಅನ್ನು ಗಗನಯಾತ್ರಿಗಳಿಗೆ ಯಾವುದೇ ಅಪಾಯವಾಗದಂತೆ ಸುರಕ್ಷಿತವಾಗಿ ಭೂಮಿಯತ್ತ ಕೆಳಗಿಳಿಸುವ ಪರೀಕ್ಷೆ ಇದಾಗಿದ್ದು, 2ನೇ ಹಂತದ ಪರೀಕ್ಷೆಯನ್ನು ಶುಕ್ರವಾರ ಇಸ್ರೋ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಗಗನಯಾತ್ರಿಗಳು ಕುಳಿತುಕೊಳ್ಳುವ ಕ್ಯಾಪ್ಸೂಲ್ ಭೂಕಕ್ಷೆಯಿಂದ ಭೂಮಿಯತ್ತ ಮರಳುವ ವೇಳೆ ಭಾರೀ ವೇಗದಿಂದ ಧುಮುಕುವುದು ಸಾಮಾನ್ಯ. ಈ ಸಂದರ್ಭ ಕ್ಯಾಪ್ಸೂಲ್ ಯಾವುದೇ ಸಮಸ್ಯೆಯಿಲ್ಲದೆ, ಗಗನಯಾತ್ರಿಗಳಿಗೆ ಅಪಾಯವಿಲ್ಲದೆ ಭೂಮಿಗೆ ಮರಳುವುದನ್ನು ಖಚಿತಪಡಿಸಲು ಪರೀಕ್ಷೆಗಳನ್ನು ನಡೆಸುತ್ತದೆ.

ಮಹಾವೀರ ಚಕ್ರ ಪುರಸ್ಕೃತ ಯೋಧನಿಗೆ ದೇಶದ ವಂದನೆ

ಕಾರ್ಗಿಲ್ ಯೋಧ ಕರ್ನಲ್ ಸೋನಂ ವಾಂಗ್ಚುಕ್ ನಿಧನ

• **ಲೇಹ್:** ಕಾರ್ಗಿಲ್ ಯುದ್ಧದ ಶೌರ್ಯಗಾಥೆಗೆ ಪ್ರತೀಕವಾಗಿದ್ದ ಮಹಾವೀರ ಚಕ್ರ ಪುರಸ್ಕೃತ ನಿವೃತ್ತ ಕರ್ನಲ್ ಸೋನಂ ವಾಂಗ್ಚುಕ್ ಅವರು ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಅವರು ಲಡಾಖ್‌ನಲ್ಲಿ ಕೊನೆಯುಸಿರೆಳೆದಿದ್ದಾರೆ ಎಂದು ಸೇನಾ ಮೂಲಗಳು ತಿಳಿಸಿವೆ.



ಕಾರ್ಗಿಲ್ ಯುದ್ಧದ ಸಮಯದಲ್ಲಿ ಅಸಾಧಾರಣ ಸಾಹಸ ತೋರಿದ ವಾಂಗ್ಚುಕ್ ಅವರನ್ನು ಭಾರತೀಯ ಸೇನೆಯಲ್ಲಿ 'ಲಯನ್ ಆಫ್ ಲಡಾಖ್' ಎಂದೇ ಕರೆಯಲಾಗುತ್ತಿತ್ತು. 1999ರ ಕಾರ್ಗಿಲ್ ಸಮರದ ವೇಳೆ ಬಟಾಲಿಕ್ ವಲಯದ ಚೋರ್ಬಟ್ ಲಾ ಪ್ರದೇಶದಲ್ಲಿ ಪಾಕಿಸ್ತಾನಿ ಅತಿಕ್ರಮಣಕಾರರ ವಿರುದ್ಧ ನಡೆಸಿದ ಧೈರ್ಯಶಾಲಿ ಕಾರ್ಯಾಚರಣೆಗೆ ಅವರಿಗೆ ಮಹಾವೀರ ಚಕ್ರ ಪ್ರದಾನಿಸಲಾಗಿತ್ತು.


ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸಂತಾಪ ಸೂಚಿಸಿ, 'ಕರ್ನಲ್ ಸೋನಂ ವಾಂಗ್ಚುಕ್ ಭಾರತೀಯ ಸೇನೆಯ ಅತ್ಯಂತ ಶೌರ್ಯಶಾಲಿ ಅಧಿಕಾರಿಗಳಲ್ಲಿ ಒಬ್ಬರು. ಅವರ ಧೈರ್ಯ, ನಾಯಕತ್ವ ಮತ್ತು ಕರ್ತವ್ಯನಿಷ್ಠೆ ಸದಾ ಸ್ಮರಣೀಯ' ಎಂದು ಹೇಳಿದ್ದಾರೆ.

ಭಾರತೀಯ ಸೇನೆಯೂ ಅಧಿಕೃತವಾಗಿ ಸಂತಾಪ ಸೂಚಿಸಿ, 'ರಾಷ್ಟ್ರಕ್ಕಾಗಿ ಅಪಾರ ಸೇವೆ ಸಲ್ಲಿಸಿದ ವೀರ ಯೋಧನನ್ನು ನಾವು ಕಳೆದುಕೊಂಡಿದ್ದೇವೆ. ದುಃಖದ ಈ ಘಳಿಗೆಯಲ್ಲಿ ಅವರ ಕುಟುಂಬದೊಂದಿಗೆ ನಾವಿದ್ದೇವೆ' ಎಂದು ತಿಳಿಸಿದೆ. ಲಡಾಖ್‌ನ ಹೆಮ್ಮೆಯ ಪುತ್ರನಾಗಿದ್ದ ವಾಂಗ್ಚುಕ್ ಅವರ ನಿಧನಕ್ಕೆ ರಾಜಕೀಯ, ಸೇನಾ ಮತ್ತು ಸಾಮಾಜಿಕ ವಲಯಗಳಿಂದ ಶ್ರದ್ಧಾಂಜಲಿಗಳ ಮಹಾಪೂರವೇ ಹರಿದುಬಂದಿದೆ.

ಸೈಬರ್ ಅಪರಾಧ ತಡೆಯಲು ಚಿಂತನೆ | ಆನ್‌ಲೈನ್ ವಹಿವಾಟುಗಳಿಗೆ ಕಿಲ್ ಸ್ವಿಚ್ ವ್ಯವಸ್ಥೆ

ಆನ್‌ಲೈನ್ ಪಾವತಿ 1 ಗಂಟೆ ತಡ?

• **ಹೊಸದಿಲ್ಲಿ:** ದೇಶದಲ್ಲಿ ವೇಗವಾಗಿ ಹೆಚ್ಚುತ್ತಿರುವ ಡಿಜಿಟಲ್ ಪಾವತಿ ಮೋಸಗಳನ್ನು ತಡೆಯಲು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಮಹತ್ವದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ಆನ್‌ಲೈನ್ ವಹಿವಾಟುಗಳಲ್ಲಿ ತಪ್ಪಾಗಿ ಹಣ ವರ್ಗಾವಣೆ ಆಗಿದ್ದರೆ ತಕ್ಷಣ ನಿಲ್ಲಿಸಲು ಕಿಲ್ ಸ್ವಿಚ್ ವ್ಯವಸ್ಥೆ ಪರಿಚಯಿಸುವ ಪ್ರಸ್ತಾವನೆ ಮುಂದಿಟ್ಟಿದೆ.



ಡಿಜಿಟಲ್ ಪಾವತಿಗಳ ಬಳಕೆ ಹೆಚ್ಚಿದಂತೆ, ಮೋಸಪ್ರಕರಣಗಳ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗಿದ್ದು, ಇದನ್ನು ನಿಯಂತ್ರಿಸುವುದು ಆರ್‌ಬಿಐಗೆ ದೊಡ್ಡ ಸವಾಲಾಗಿದೆ. 2021ರಿಂದ 2025ರವರೆಗೆ ಡಿಜಿಟಲ್ ಮೋಸ ಪ್ರಕರಣಗಳು ಲಕ್ಷಾಂತರ ಸಂಖ್ಯೆಯಲ್ಲಿ ಹೆಚ್ಚಾಗಿರುವುದಾಗಿ ವರದಿಗಳು ಸೂಚಿಸುತ್ತವೆ.

ಕಿಲ್ ಸ್ವಿಚ್ ಎಂದರೆ ಏನು? ಆರ್‌ಬಿಐ ಸೂಚಿಸಿರುವ ಕಿಲ್ ಸ್ವಿಚ್ ವ್ಯವಸ್ಥೆ ಮೂಲಕ, ಗ್ರಾಹಕರು ಮೋಸದ ಅನುಮಾನ ಬಂದ ಕೂಡಲೇ ತಮ್ಮ ಖಾತೆಯ ಎಲ್ಲಾ ಡಿಜಿಟಲ್ ಪಾವತಿಗಳನ್ನು ತಕ್ಷಣ ಸ್ಥಗಿತಗೊಳಿಸಬಹುದು. ಇದರಿಂದ ಹಣ ಕಳುವಾಗುವುದನ್ನು ತಡೆಯಲು ಸಾಧ್ಯವಾಗಲಿದೆ.

ಮೋಸಗಳ ವಿರುದ್ಧ ಕಠಿಣ ಕ್ರಮ

ಬ್ಯಾಂಕ್ ಖಾತೆಗಳ ದುರುಪಯೋಗ, ನಕಲಿ ಕಾಲ್ ಸೆಂಟರ್‌ಗಳು, ಡೀಪ್‌ಫೇಕ್ ತಂತ್ರಜ್ಞಾನಗಳ ಮೂಲಕ ನಡೆಯುವ ಮೋಸಗಳನ್ನು ತಡೆಯಲು ಆರ್‌ಬಿಐ ಬಹುಮುಖಿ ಕ್ರಮಗಳನ್ನು ರೂಪಿಸಿದೆ. ಈ ಕ್ರಮಗಳು ಗ್ರಾಹಕರಿಗೆ ಹೆಚ್ಚಿನ ನಿಯಂತ್ರಣ ಮತ್ತು ಸುರಕ್ಷತೆ ನೀಡುವ ಉದ್ದೇಶ ಹೊಂದಿದೆ.

ಒಂದು ಗಂಟೆ ವಿಳಂಬ ಯೋಜನೆ: ಇದರ ಜೊತೆಗೆ, 10,000 ರೂ.ಗಿಂತ ಹೆಚ್ಚಿನ ಮೊತ್ತದ ವಹಿವಾಟುಗಳಿಗೆ ಒಂದು ಗಂಟೆಯ ವಿಳಂಬ ನೀಡುವ ಯೋಜನೆಯನ್ನೂ ಆರ್‌ಬಿಐ ಪರಿಗಣಿಸಿದೆ. ಈ ಅವಧಿಯಲ್ಲಿ ಗ್ರಾಹಕರು ತಮ್ಮ ವ್ಯವಹಾರವನ್ನು ಮರುಪರಿಶೀಲಿಸಿ ರದ್ದುಪಡಿಸುವ ಅವಕಾಶ ಸಿಗುತ್ತದೆ.

ಹಿರಿಯ ನಾಗರಿಕರಿಗೆ ಹೆಚ್ಚುವರಿ ಭದ್ರತೆ: ಹಿರಿಯ ನಾಗರಿಕರು ಮತ್ತು ದಿವ್ಯಾಂಗರಿಗೆ ಹೆಚ್ಚುವರಿ ರಕ್ಷಣೆ ನೀಡಲು, 50,000 ರೂ.ಗಿಂತ ಹೆಚ್ಚಿನ ವಹಿವಾಟುಗಳಿಗೆ 'ನಂಬಿಕಸ್ತ ವ್ಯಕ್ತಿ ' ಅನುಮತಿ ಪಡೆಯುವ ವ್ಯವಸ್ಥೆಯನ್ನೂ ಆರ್‌ಬಿಐ ಯೋಚಿಸಿದೆ.

ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನ: ಈ ಎಲ್ಲಾ ಕ್ರಮಗಳ ಬಗ್ಗೆ ಆರ್‌ಬಿಐ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಿದ್ದು, ನಂತರ ಅಂತಿಮ ಮಾರ್ಗಸೂಚಿಗಳನ್ನು ಪ್ರಕಟಿಸುವ ನಿರೀಕ್ಷೆಯಿದೆ.

ಮಾನ್ಯ ಗೌರವಾನ್ವಿತ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಸಿ.ಮಿಸ್. ನಂ. 148/2026

[illegible]

ದಿನಾಂಕ : 26.05.2026 [illegible]

ದಿನಾಂಕ: 02.04.2026 [illegible]

PUBLIC NOTICE

The general public is hereby informed that, my client, **Mr. Mohammed Ali Khan**, S/o Late Ramat Ali Khan, is the absolute owner of the Schedule Property having acquired the same from one Mrs. Tarannum Fathima and Mrs. Tabassum Fathima Rep by their GPA Holder Mr. S. Fazil. The same is registered before the SRO J.P Nagar bearing Document No. BNG(U)JPN8565-2011-12. General Public is hereby informed that my client has lost the Original Documents from his custody and he has disposed the same on an affidavit dated 20.06.2020 duly sworn before the Notary Public. Therefore, General public is hereby informed not to deal with the above said property in any manner. Anybody doing so, may do at his/her own cost and risk and the same shall not be binding on my clients which please note.

If anybody is in custody of the said documents pertaining to schedule property, they are requested to hand over the same on the below given address.

SCHEDULE PROPERTY

All that piece and parcel of the property bearing Vacant Site House List No. 279, Khata NO. 61, situated at Puttenahalli Village, Uttarahalli Hobli, Bangalore South Taluk now comes under the limits of BBMP, Arekere Sub Division, Bangalore measuring East to West 40 Ft and North to South 60 Ft. totally measuring 2400 Sq Ft and bounded on the: **East by**: House List no. 285, **West by**: Road, **North by**: House list no. 281, **South by**: House list no.278

M.A.K. USMANI, Advocate
SF NO. 28, 2nd Floor, HMS Complex,
Cubbonpet Main Road,
Bangalore-560 002. Mob: 9916267541

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಅನಿಲ್ ಜಾನ್ ಬಿನ್ ಜಾಯ್ ಜೋಸೆಫ್ ಇವರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಇವರು ಪ್ರೇಮ ಬಾಯಿ ಕೋಂ ಪವನ್ ಕುಮಾರ ವಾಸ ಕುದುರ ಪೇಟೆ, ಹೊಸಕೋಟೆ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಇವರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಟೌನ್‌ಗೆ ಸೇರಿದ ಸರ್ವೆ ನಂಬರ್ 354 ರಿಂದ 354/3 ಹೊಸ ಸರ್ವೆ ನಂಬರ್ 354/1 ಮತ್ತು ಜಮೀನು ವಿಸ್ತೀರ್ಣ 0.03 ಗುಂಟೆ (ಮೂರು) ಗುಂಟೆ ಜಮೀನು ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ : ಖರಾಬು ಬಾಕಿ ನಿವೇಶನ, ಪಶ್ಚಿಮಕ್ಕೆ : ಇದೇ ಸರ್ವೆ ನಂಬರ್ ಪೈಕಿ ದಕ್ಷಿಣ ಉತ್ತರ 10 ಅಡಿಗಳ ದಾರಿ ನಂತರ ಎಮ್. ಕೊಂಡಪ್ಪರವರ ಜಮೀನು, ಉತ್ತರಕ್ಕೆ : ಇದೇ ಸರ್ವೆ ನಂಬರ್ ಪೈಕಿ ಪೂರ್ವ ಪಶ್ಚಿಮ 25 ಅಡಿಗಳ ರಸ್ತೆ ನಂತರ ಎಮ್. ಶ್ರೀನಿವಾಸರವರ ಜಮೀನು, ದಕ್ಷಿಣಕ್ಕೆ : ಎಮ್. ಶ್ರೀನಿವಾಸರವರ ಜಮೀನು ಸದರಿ ಜಮೀನನ್ನು ನನ್ನ ಕಕ್ಷಿದಾರರವರು ಕ್ರಯ ಪಡೆಯಲು (ಕ್ರಯಮಾಡಿ) ಬರೆಸಿಕೊಳ್ಳಲು ಒಪ್ಪಿರುತ್ತಾರೆ.

ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದ ತಂಟೆ ತಕರಾರು ಇದ್ದಲ್ಲಿ 15 ದಿನಗಳ ಒಳಗಾಗಿ ಮನಗಾಣಿರ ಅಧಾರ ನನ್ನ ಕಚೇರಿಯ ಮೊಬೈಲ್ ನಂಬರ್ ಸಂಪರ್ಕಿಸಬೇಕೆಂದು ಎಂದು ತಿಳಿಸಿರುತ್ತೇನೆ. ಮೊಬೈಲ್ ನಂ.: 9243021601.

ಎಸ್. ಗೋವಿಂದ ಗೌಡ, ವಕೀಲರು
ಎಸ್.ಎಫ್.ಸಿ.ಎಸ್. ಬಿಲ್ಡಿಂಗ್,
ಟಿ.ಬಿ. ಎಕ್ಸ್‌ಟೆನ್ಷನ್, ಹೊಸಕೋಟೆ
ಮೊಬೈಲ್ ನಂಬರ್ : 9448448872, 6360633971

ಮಾನ್ಯ ಗೌರವಾನ್ವಿತ 1ನೇ ಅಧಿಕ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನೆಲಮಂಗಲ

ಸಿ.ಮಿಸ್. ನಂ. 140/2026

[illegible]

ಸಾರ್ವಜನಿಕ ಪ್ರಕಟಣೆ

[illegible] ದಿನಾಂಕ: 14.12.1977 [illegible] ದಿನಾಂಕ : 05.05.2026 [illegible]

ದಿನಾಂಕ: 25.03.2026 [illegible]

By Order of the Court, Chief Ministerial Officer, Court of the Civil Judge, Junior Division and JMFC, Nelamanagala.

[illegible] 9449911133, 9448866573

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ ಹಾಗೂ ಜೆ.ಎಂ.ಎಫ್.ಸಿ.) ಆನೇಕಲ್

ಸಿ.ಮಿಸ್. ಸಂಖ್ಯೆ : 232/2026

[illegible] ದಿನಾಂಕ: 27.04.2017 [illegible] ದಿನಾಂಕ: 10.06.2026 [illegible] 11.00 [illegible]

[illegible] ದಿನಾಂಕ 08.04.2026 [illegible]

By Order of the Court, Sheristedar, Civil Judge (Jr.Dn) and JMFC Court, Anekal.

[illegible]

ಗುಬ್ಬಿ ಅಧಿಕ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ

ಅಸಲು ದಾವಾ ನಂ.372/2024

[illegible]

ದಾವಾ ಸಂಖ್ಯೆ:372/2024 [illegible] 02.05.2026 [illegible] 2026 [illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು, ಅಧಿಕ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ, ಗುಬ್ಬಿ

[illegible]

IN THE COURT OF THE CITY 56th ADDL CIVIL & SESSIONS JUDGE AT BANGALORE
O.S. No. 8848/2024 (CCH-57)

BETWEEN: BANK OF BARODA
(Jalahalli Branch, Bengaluru) Rep. by its Chief Manager ...PLAINTIFF
AND: Mrs. RADHIKA N. ...DEFENDANT

NOTICE/SUMMONS TO DEFENDANT BY WAY OF PP

Mrs. RADHIKA N, W/o. Ravi Kumar S.
Aged about 26 years, R/at: #147, 6th Cross, Gokak Road, Adkamaranahalli, Makali Post, Dasanapura Hobli, Bangalore North - 562162

Whereas the aforementioned plaintiff bank has filed O.S. No.8848/2024 before the Hon'ble City 56th addl Civil and Sessions Judge, at Bangalore (CCH-57) for recovery of a sum of **Rs.8,43,866.76 (Rupees Eight Lakhs Forty Three Thousand Eight Hundred Sixty Six and paise Seventy Six only)** from the Defendant together with Court Costs and future normal interest at the rate of 14.90% p.a along with penal interest at the rate of 2% p.a compounded monthly, from 01.12.2024 to till realization in full, with costs. The case is now posted for hearing on 11/06/2026. Therefore you are hereby summoned to appear before this Hon'ble Court on **11/06/2026 at 11.00 A.M.** either in person or by pleader duly instructed without fail, failing which the matter will be heard and determined in your absence.

Given under my hand and seal of the court this 9th day of April 2026.

By the Order of the Court, Asst. Registrar City Civil Court, Bangalore

Nagaraj Damodar, Advocate
#544, Near Sai Baba Temple,
13th Cross, Sampige Road,
Malleshwaram, Bengaluru 560 003.

IN THE COURT OF THE CITY 56th ADDL CIVIL & SESSIONS JUDGE AT BANGALORE
O.S. No. 8847/2024 (CCH-57)

BETWEEN: BANK OF BARODA
(Jalahalli Branch, Bengaluru)
Rep by its Chief Manager ...PLAINTIFF
AND: Mrs. PARVATHAMMA ...DEFENDANT

NOTICE/SUMMONS TO DEFENDANT BY WAY OF PP

Mrs. PARVATHAMMA D/o. Gullappa,
W/o. Eshwarappa, Aged about 39 years.
R/at, #24, 1st Cross, Near Subramanya Temple, Prakruthinagar, Anchepalya, Nagasandra Post, Bangalore-560 073

Whereas the aforementioned plaintiff bank has filed O.S. No.8847/2024 before the Hon'ble City 56th addl Civil and Sessions Judge, at Bangalore (CCH-57) for recovery of a sum of **Rs.8,59,858.06** (Rupees Eight Lakhs Fifty Nine Thousand Eight Hundred Fifty Eight and paise Six only)from the Defendant together with Court Costs and future normal interest at the rate of 16.50% p.a. along with penal interest at the rate of 2% p.a. compounded monthly, from 24.11.2024 to till realization in full, with costs. The case is now posted for hearing on **11/06/2026** Therefore you are hereby summoned to appear before this Hon'ble Court on **11/06/2026 11.00 A.M.** either in person or by pleader duly instructed without fail, failing which the matter will be heard and determined in your absence.

Given under my hand and seal of the court this 9th day of April 2026.

By the Order of the Court, Asst. Registrar City Civil Court, Bangalore

Nagaraj Damodar, Advocate
#544, Near Sai Baba Temple,
13th Cross, Sampige Road,
Malleshwaram, Bengaluru 560 003.

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದೊಡ್ಡಬಳ್ಳಾಪುರ

ಓ.ಎಸ್.ನಂ.618/2026

[illegible]

PUBLIC NOTICE

The General Public is hereby notified that Sri.A.R.Swamy, Smt.Ashwini A. and Smt.Kruthika A. all residing at # 639, 8th 'B' Main, 2nd Block, 3rd Stage, Basaveshwaranagar, Bangalore North, Bangalore, Basaveshwaranagar, Karnataka – 560 079 are the joint owners of the Schedule Property described infra.

It is noticed that original rectification deed dated 01.10.2004 (doc.no.28859/2004-05) pertaining to the schedule property is lost / misplaced.In this connection, an E-Complaint has been lodged on 09.04.2026 at Bangalore City Police Station, Bangalore, bearing Serial no.2148216.

The finder of the said document is requested to surrender the original rectification deed dated 01.10.2004 (doc.no.28859/2004-05) to the undersigned within 10 days from this day, failing which, it shall be deemed that the rectification deed is irretrievably lost and duplicate / certified copy of the same shall be obtained from the office of Sub-registrar of Assurances in lieu of lost original for the purpose of records.

SCHEDULE PROPERTY

All that piece and parcel of property bearing site no.154, comprised in & carved out of converted land bearing Sy.no.14/4, situated at Giddadhakonnenahalli Village, Yeshwanthapura Hobli, Bangalore North Taluk, Bangalore, measuring East to West on the Northern side : 49 ½ ft., on the Southern side : 40 ft., and North to South on the Eastern side : 92 ft., on the Western side : 119 ft., in all measuring 4721.12 Sq. ft., and bounded as follows : On the **East by**: Site no.153, **West by**: 30 feet Road, **North by**: 60 feet Road, **South by**: Site no.155.

VAISHNAVI .M, Advocate
No.520, III Floor, Prabhat Complex,
K.G Road, Bangalore-560 009.
Ph - 41247862 & 41224958
Date: 10.04.2026

BEFORE THE HONORABLE FAMILY COURT, KASARAGOD
O.P. No. 1012/2025

Between:
Vinisha Marita Crasta ...Petitioner
Ruben Das @ Ruben Keshav Das,
And
...Respondent

To:- Respondent :
Ruben Das @ Ruben Keshav Das, S/o. Keshav Das, R/at 4th Rathna House, PNB Layout, 3rd cross, Konanakunte, Bangalore, Karnataka -560062.

Please take notice that the above case stands posted for your appearance on **02.06.2026 at 11.A.M.** before the above said court If you failed to appear on that day, the matter will be heard and decide treating you as 'Exparte'.

By order of the Family Court Kasaragod.
Sd/- Thomas D Souza
Advocate for Petitioner
Kasaragod.
13.03.2026

IN THE COURT OF THE 56th ADDL. CITY CIVIL AND SESSIONS JUDGE AT BANGALORE
O.S. NO. 8845 / 2024 (CCH-57)

BETWEEN : BANK OF BARODA,
(CBI Road Branch, R.T. Nagar Bengaluru)
Rep. by its Senior Br. Manager ...Plaintiff
AND: Mrs. RASHMI PATIL ...Defendants

NOTICE/SUMMONS TO DEFENDANT BY WAY OF PP

MRS LAKSHMI PATIL
W/o Anand Patil, Aged about 43 years,
No.28, Ground Floor, 7th Main,
AGS Colony, Anand Nagar, Hebbal,
Bengaluru-560 024.

WHEREAS the aforementioned plaintiff bank has filed **O.S.No.8845/2024 before the Hon'ble 56th Addl. City Civil & Sessions Judge (CCH-57) at Bangalore** for recovery of a sum of **Rs.2,73,687.57 (Rupees Two Lakhs Seventy Three Thousand Six Hundred eighty Seven and Paise Fifty Seven only)** from the Defendant with Court Costs and future normal interest at the rate of 2% p.a. together with penal interest at the rate of 2% p.a. compounded monthly, from 01.12.2024 to till realization in full, with costs. The case is now posted for hearing on **11.06.2026.** Therefore you are hereby summoned to appear before this Hon'ble Court on **11.06.2026 at 11.00 AM**, either in person or by pleader duly instructed without fail, failing which the matter will be heard and determined in your absence.

Given under my hand and seal of the court this 10th day of April, 2026.

By order of the Court, Senior Sheristedar
City Civil Court, Bangalore.
NAGARAJ DAMODAR, Advocate,
544, Near Sai Baba Temple,
Sampige Road, Malleshwaram,
Bangalore - 560003.

ಮಾನ್ಯ 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯ ಮೈಸೂರು

ಎಂ.ಸಿ.ಸಂಖ್ಯೆ : 1260/2025

ಅರ್ಜಿದಾರರು : [illegible] ವಯಸ್ಸು 65 ವರ್ಷ, [illegible] ನಂ.290/ಎಫ್, 15ನೇ [illegible] ಮೈಸೂರು -ವಿರುದ್ಧ- ಎದುರುದಾರರು: [illegible] ವಯಸ್ಸು 76 ವರ್ಷ, [illegible] ನಂ.290/ಎಫ್, 15ನೇ [illegible] ಮೈಸೂರು

ಮರು ಜಾಹೀರಾತು ನೋಟಿಸ್

[illegible]

[illegible] parashivajngmail.com

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ:ಬೆಂಅಪ್ರಾ/ನಯೋಸ/CLU-479/109/2026-27 (E-192480) ದಿನಾಂಕ: 09.04.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಮಾಯಾ ಎಸ್ ನಾನ್‌ವಾನಿ ಪರವಾಗಿ ಜಿ.ಪಿ.ಎ. ಹೋಲ್ಡರ್ ಸುರೇಶ್ ಗೋಪಾಲ್ ರಾವ್ ನಾನ್‌ವಾನಿ	ಯಲಹಂಕ	ಜಾಲ	ಹೊಸ ಮಾರನಹಳ್ಳಿ	165/6	0-33	ವ್ಯವಸಾಯ	ವಾಣಿಜ್ಯ
					165/9	1-00		
					166/1	1-00		
					ಒಟ್ಟು	2-33ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಅಭಿವೃದ್ಧಿ ಕಾಮಗಾರಿಗಳು (ನಿರ್ಮಾಣ) ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಸದರಿ ಜಮೀನನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತವೆ. ಸದರಿ ಜಮೀನುಗಳಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯೋಗಗಳು ದೊರಕುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 9483166622 (24x7). @BDAOfficialGok

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

pnb Housing

[illegible]

www.pnbhousing.com

[illegible] auction@pnbhousing.com [illegible] www.auction@pnbhousing.com [illegible]

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಎಂ.ಪಿ.ವಿಭಾಗ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ದೂರವಾಣಿ: 080-27271259 ಇ-ಮೇಲ್: eempdrmgm@gmail.com

ಸಂಖ್ಯೆ: ಕಾಇ/ಎಂ.ಪಿ.ವಿಭಾಗ/ರಾ.ನ/ಟೆಂ-01/2026-27 ದಿನಾಂಕ: 02.04.2026

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ಸಂಖ್ಯೆ: 01/26-27 ದಿನಾಂಕ: 09.04.2026
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರುಗಳಿಂದ **https://kppp.karnataka.gov.in** ಮುಖಾಂತರ ನೆಲಮಂಗಲ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಪ್ರಕಟಣೆಯನ್ನು ಕಾರಣಾಂತರದಿಂದ ವಿಸ್ತರಣೆ ಮಾಡಿ ಪ್ರಕಟಿಸಿದೆ. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ:15.04.2026 ರ ಸಂಜೆ: 4.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:16.04.2026 ರ ಸಂಜೆ:4.30 ಗಂಟೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ:21.04.2026 ರ ಬೆಳಗ್ಗೆ:11.00 ಗಂಟೆ** ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಎಂ.ಪಿ.ವಿಭಾಗ, ರಾಮನಗರ.

DIPR/BSD/05(A)/SA/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರವರ ಕಛೇರಿ,
ಲೋ.ಇ. ಉಡುಪಿ ವಿಭಾಗ - ಉಡುಪಿ - 576101

ದೂರವಾಣಿ & ಫ್ಯಾಕ್ಸ್: (0820) 2531802

ಸಂ. ಪಿಡಬ್ಲ್ಯುಡಿ:ಯುಡಿಪಿಎಸ್:ಎಸ್‌ಬಿಟಿ: 60:2025-26: ವಿಸಿ-2 ದಿನಾಂಕ: 09.04.2026

ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರೂ. 5.92 ಲಕ್ಷ ಮತ್ತು 12.32 ಲಕ್ಷದ -3054- ಜಿಲ್ಲಾ, ಮುಖ್ಯ ರಸ್ತೆ ನಿರ್ವಹಣೆ ಮತ್ತು 1-2059-ಇಲಾಖಾ ಕಟ್ಟಡಗಳ ನಿರ್ವಹಣೆ ಯೋಜನೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆಕ್ಟ್ -2023ರಲ್ಲಿ ನಿರೂಪಿತ ಶರ್ತಗಳೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು-577101

(Autonomous Medical Institution Government of Karnataka)
Phone : 08262-295347
E-Mail: directorcims 2020@gmail.com

ಸಂಖ್ಯೆ:ಸಿಮ್ಸ್/ಆಸ್ಪತ್ರೆ/ಡಯಟ್/ಪೂರ್ ಟೆಂಡರ್/ಪತ್ರಿಕಾ ಪ್ರಕಟಣೆ/02/2026-27 ದಿನಾಂಕ:06.04.2026

ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಾಗುವ ಒಳರೋಗಿಗಳಿಗೆ ಸಿದ್ಧಪಡಿಸಿದ ಆಹಾರವನ್ನು ಸರಬರಾಜು ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಲು ಕ್ರಮವಹಿಸಲಾಗಿದೆ. ಈ ಸಂಬಂಧ ಟೆಂಡರ್ ಪ್ರಕ್ರಿಯೆ ಮತ್ತಿತರ ವಿವರಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಹಾಗೂ ಈ ಕಛೇರಿಯಲ್ಲಿ ಕರ್ತವ್ಯದ ವೇಳೆಯಲ್ಲಿ ಪಡೆಯಬಹುದು.

ಸಹಿ/- ನಿರ್ದೇಶಕರು
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಿಕ್ಕಮಗಳೂರು

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ಸಂ.ಲೋ.ಇ./ಚಿ.ವಿ./ಸ.ಇಂ.-2/ಟೆಂಡರ/2026-27/114 ದಿನಾಂಕ: 08/04/2026

ಅಲ್ಪಾವಧಿ ಇ-ಟೆಂಡರ್ /ಮರು ಟೆಂಡರ್ ಪ್ರಕಟಣೆ (Call-1 & Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಜಿಮುರ ಸುಧಾರಣೆ ಅಡಿ 1 ಕಾಮಗಾರಿ, 4059-ನ್ಯಾಯಾಲಯ ಕಟ್ಟಡ ನಿರ್ಮಾಣ ಅಡಿ 1 ಕಾಮಗಾರಿ ಹಾಗೂ 3054-ಜಿಮುರ ನಿರ್ವಹಣೆ ಅಡಿ 2 ಕಾಮಗಾರಿಗಳು, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಅಲ್ಪಾವಧಿ ಇ-ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 1, 3 & 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:21-04-2026 ರಂದು (11.00 ಗಂಟೆಗೆ), 2) ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:22-04-2026 (ಸಾಯಂಕಾಲ 5.30 ಗಂಟೆಯ ವರೆಗೆ), 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:24-04-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):27-04-2026 (ಸಾಯಂಕಾಲ 4.30 ಗಂಟೆಗೆ), 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ". 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:23-04-2026 ರಂದು (11.00 ಗಂಟೆಗೆ), 2) ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:24-04-2026 (ಸಾಯಂಕಾಲ 5.30 ಗಂಟೆಯ ವರೆಗೆ), 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:28-04-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):30-04-2026 (ಸಾಯಂಕಾಲ 4.30 ಗಂಟೆಗೆ), 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆ ಯಾದ ನಂತರ". 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-83/KSMCA/2026-27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ. Phone No.: 08372-238782 Fax No.: 08372-237268
E-Mail: eepwdgad@gmail.com

ಸಂ:ಕಾನಿಅಂಗಲೋಇಪಿವ-1 3 4 :ಪವಿಧ: 2026-27/102 ದಿನಾಂಕ: 08-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1308.15** ಲಕ್ಷ ಮೊತ್ತದಲ್ಲಿ ಒಟ್ಟು **07** ಕಾಮಗಾರಿಗೆ (ಕನಿಷ್ಠ ಮೊತ್ತ ರೂ: **1.15** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **900.00** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣೆ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯು-1, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http:// www. kppp. Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No:- Part-1 33839/Call-3, 32784 Category-2A, 32782 , 34835

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ- 15-04-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ- 17-04-2026 ಮಧ್ಯಾಹ್ನ 4.00 ಗಂಟೆಯ ವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕ- 18-04-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ- 21-04-2026.

Work Indent No:- Part-2 34882, 34849-SC, 30969/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ- 27-04-2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ- 28-04-2026 ಮಧ್ಯಾಹ್ನ 4.00 ಗಂಟೆಯ ವರೆಗೆ , ತಾಂತ್ರಿಕ ಬಿಡ್ ತೆರೆಯುವ ದಿನಾಂಕ- 29-04-2026. ಆರ್ಥಿಕ ಬಿಡ್ ತೆರೆಯುವ ದಿನಾಂಕ- 30-04-2026.

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/-
ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ

ವಾ.ಸಾ.ಇ.,ಗದಗ/66/2026-27/ದೇಶಪಾಂಡೆಪ್ರಕಟ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ.

ಇ-ಮೇಲ್: eemimandya@gmail.com

ಸಂಖ್ಯೆ:ಕಾ.ಇಂ/ಸ.ನೀ/ಮಂ/ತಾಂಶಾ/ಸ.ಇಂ-1/ಟೆ.ಪ್ರ-1/2026-27/1016 ದಿನಾಂಕ:09.04.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: 01/2026-27 ದಿನಾಂಕ: 09.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಕೆಪಿಪಿ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-1,2,3& 4 ರ ಪ್ರಕಾರ "ಕೆಪಿಪಿ" - ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಆಧಾರದ ಮೇಲೆ ಒಟ್ಟು 7 ಸಂಖ್ಯೆ ಕಾಮಗಾರಿಗಳು ಮತ್ತು "ಕೆಪಿಪಿ" ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ 7 ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ (7-ಕಾಮಗಾರಿಗಳು ಮತ್ತು 7-ಮೀನು ಪಾಶುವಾರು ಹಕ್ಕು ವಿಲೇವಾರಿ) ಟೆಂಡರ್ ಅನ್ನು ಟೆಂಡರಿಗಿಟ್ಟ ಅಂದಾಜು ಮೊತ್ತ ಕನಿಷ್ಠ ರೂ.17226.00 ಗಳಿಂದ ಗರಿಷ್ಠ ರೂ:310.00 ಲಕ್ಷಗಳವರೆಗೆ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತೆ ಇವೆ.

ಕ್ರ ಸಂ	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಬಿಡ್ ಅಪ್ಲೋಡ್ ಮಾಡಲು ಕಡೆಯ ದಿನಾಂಕ & ಸಮಯ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ	ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ
1	4702- ಟಿ.ಎಸ್.ಪಿ-ಚೆಕ್ ಡ್ಯಾಂ	1	22.04.2026 17.29 ಗಂಟೆವರೆಗೆ	23.04.2026 17.30 ಗಂಟೆ	24.04.2026 17.30 ಗಂಟೆ
2	4702- ಎಸ್.ಸಿ.ಪಿ-ಕೊಳವೆಭಾವಿ	3	05.05.2026 17.29 ಗಂಟೆವರೆಗೆ	06.05.2026 17.30 ಗಂಟೆ	07.05.2026 17.30 ಗಂಟೆ
3	4702- ಟಿ.ಎಸ್.ಪಿ-ಕೊಳವೆಭಾವಿ	1			
4	4702- ಕೆರೆಗಳ ಆಧುನೀಕರಣ	2			

"ಕೆಪಿಪಿ" ಮುಖಾಂತರ ನೇರ ಹರಾಜು ಪ್ರಕ್ರಿಯೆ ಮುಖಾಂತರ ಕೆರೆಗಳ ಮೀನು ಪಾಶುವಾರು ಹಕ್ಕು ವಿಲೇವಾರಿ

ಕ್ರ ಸಂ	ಹಕ್ಕು ವಿಲೇವಾರಿ ವಿವರ	ಒಟ್ಟು ಕೆರೆಗಳು	ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಿಡ್ಡುದಾರರು ದೃಢೀಕರಿಸಲು ಕಡೆಯ ದಿನಾಂಕ & ಸಮಯ	ಹರಾಜು ಪ್ರಕ್ರಿಯೆ ಮಾಡಲು ನಿಗಧಿಯಾದ ದಿನಾಂಕ & ಸಮಯ	ಹರಾಜು ಬಿಡ್ ತೆರೆಯುವ ದಿನಾಂಕ ದಿನಾಂಕ & ಸಮಯ
1	ಮಂಡ್ಯ ಜಿಲ್ಲೆ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕು ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಇ-ಟೆಂಡರ್ ಮುಖೇನ ಮೀನುಪಾಶುವಾರು ಹಕ್ಕು ವಿತರಣೆ ಮದ್ದೂರು ತಾಲ್ಲೂಕು ಕೆರೆಗಳು: (1) ಕೆಸ್ತೂರು ಕೆರೆ, (2) ಮಾಚಹಳ್ಳಿ ಕೆರೆ (3) ದುಂಡನಹಳ್ಳಿ ಕೆರೆ (4) ಆತಗೂರು ಕೆರೆ (5) ಚಾಕನಕೆರೆ ಕೆರೆ (6) ಕೊಳಗೆರೆ ಕೆರೆ ಮಳವಳ್ಳಿ ತಾಲ್ಲೂಕು ಕೆರೆ: (7) ನಿಟ್ಟೂರು ಕೆರೆ	7	ದಿ:16.05.2026 17.29 ಗಂಟೆವರೆಗೆ	ಹರಾಜು ಪ್ರಕ್ರಿಯೆ ಪ್ರಾರಂಭ: ದಿ:18.05.2026 10.00 ಗಂಟೆಯಿಂದ ಮುಕ್ತಾಯ: ದಿ:24.05.2026 17.30 ಗಂಟೆವರೆಗೆ	ದಿ:25.05.2026 17.30 ಗಂಟೆ

ಗುತ್ತಿಗೆದಾರರು ಟೆಂಡರ್‌ನ ನಿಗದಿತ ನಮೂನೆಗಳನ್ನು www.kppp.karnataka.gov.in ನಲ್ಲಿ ಅವಶ್ಯ ದಾಖಲೆಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಮೇಲ್ಕಂಡ ಕಾಲಂಗಳನ್ವಯ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ದಾಖಲೆ/ಮಾಹಿತಿಯನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯ ಬಹುದು. ಮಂಡ್ಯ ಜಿಲ್ಲಾ ವ್ಯಾಪ್ತಿಯ ಸಣ್ಣ ನೀರಾವರಿ ಇಲಾಖೆಯ ಕೆರೆ/ಜಲಸಂಪನ್ಮೂಲಗಳ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in). ಕೆರೆ/ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡಲು ಇ-ಟೆಂಡರ್ ದಸ್ತಾವೇಜು ಅನ್ನು ಈ ಕಚೇರಿಯಲ್ಲಿ ಅಥವಾ ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ಪಡೆಯಬಹುದು. (www.kppp.karnataka.gov.in). ವಿ.ಸೂ: ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ರವರು ಕಾಯ್ದಿರಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಕೆಪಿಪಿಪಿ" - ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ/ದಿನಾಂಕಗಳನ್ನು ಮುಂದೂಡುವ ಬಗ್ಗೆ ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳನ್ನು ಪ್ರತಿ ಇಂಡೆಂಟ್‌ಗೆ ಪ್ರತ್ಯೇಕವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಪ್ರತ್ಯೇಕ ಪತ್ರಿಕೆ ಪ್ರಕಟಣೆ ನೀಡಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಸ.ನೀ. ಮತ್ತು ಅಂ.ಅ. ವಿಭಾಗ, ಮಂಡ್ಯ

ವಾವಾಸಂಇ/ಪಿಸಿಸಿ-ಮಂ/ಕೆಡಿಪಿ.ಎಂ.ಸಿ.ಎ/036/2026-27

ಜಂಟಿ ಆಯುಕ್ತರ ವಿರುದ್ಧ ಕ್ರಮಕ್ಕೆ ರಮೇಶ್ ಒತ್ತಾಯ

ಸಾರ್ವಜನಿಕ ಕೆಲಸಗಳಿಗೆ ನಿರ್ಲಕ್ಷ್ಯ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ಪಾಲಿಕೆಗಳ 10 ಮಂದಿ ಜಂಟಿ ಆಯುಕ್ತರು ಅಕ್ರಮ ಹಣ ಗಳಿಕೆಯ ಹಾದಿ ಬಂದ್ ಆಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಕೆಲಸಗಳಿಗೆ ಅಸಡ್ಡೆ ತೋರುತ್ತಿದ್ದಾರೆ ಎಂದು ಬಿಜೆಪಿ ನಾಯಕ ಎನ್.ಆರ್.ರಮೇಶ್ ಗಂಭೀರ ಆರೋಪ ಮಾಡಿದ್ದಾರೆ. ಕೂಡಲೇ 10 ಮಂದಿ ಜಂಟಿ ಆಯುಕ್ತರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿ ರುವ ಎನ್.ಆರ್. ರಮೇಶ್, ಈ ಹಿಂದೆ ನಗರ ಯೋಜನೆ ಇಲಾಖೆಯ ನಕ್ಷೆ ಮಂಜೂರಾತಿ, ಸಿ.ಸಿ. ಮತ್ತು ಓ.ಸಿ. ನೀಡುವ ಪ್ರಕ್ರಿಯೆಗಳ ಮೂಲಕ ಜಂಟಿ ಆಯುಕ್ತರುಗಳು ತಿಂಗಳಿಗೆ ಲಕ್ಷಾಂತರ ರೂ. ಅಕ್ರಮ ಹಣ ಗಳಿಸುತ್ತಿದ್ದರು. ಆದರೆ, 2025ರ ಸೆಪ್ಟೆಂಬರ್‌ನಿಂದ ಕಡತಗಳು ಹಾಗೂ ಗುತ್ತಿಗೆದಾರರ ಬಿಲ್ ಪಾವತಿ ಕಡತಗಳು ಇವರ ಬಳಿ ಬರದೇ ಇರುವುದರಿಂದ, ಅವರು ಉದ್ದೇಶಪೂರ್ವಕವಾಗಿಯೇ ಪಾಲಿಕೆಯ ಕೆಲಸಗಳಲ್ಲಿ ಸಹಕರಿಸುತ್ತಿಲ್ಲ ಎಂದು ಆರೋಪಿಸಿದ್ದಾರೆ.

ವೇತನದ ಹೊರೆ: 10 ಮಂದಿ ಹಿರಿಯ ಕೆಎಎಸ್ ಶ್ರೇಣಿಯ ಅಧಿಕಾರಿಗಳ ವೇತನ ಮತ್ತು ಭತ್ಯೆಗಳಿಗಾಗಿ ಸುಮಾರು 30 ಲಕ್ಷ ರೂ. ತೆರಿಗೆ ಹಣ ವ್ಯರ್ಥವಾಗುತ್ತಿದೆ. ಆದರೆ ಪ್ರಸ್ತುತ ಜಾರಿಯಲ್ಲಿರುವ ಇ-ಖಾತಾ ನೀಡಿಕೆ ಮತ್ತು ಕಂದಾಯ ವಸೂಲಿ ಕಾರ್ಯಗಳಲ್ಲಿ ಜಂಟಿ ಆಯುಕ್ತರು ಕಿಂಚಿತ್ತೂ ಆಸಕ್ತಿ ತೋರುತ್ತಿಲ್ಲ. ಮೇಲಾಧಿಕಾರಿಗಳ ಅಸಡ್ಡೆಯಿಂದಾಗಿ ಕೆಳ ಹಂತದ ನೌಕರರು ಕೆಲಸದ ಒತ್ತಡದಿಂದ ಹೈರಾಣಾಗಿದ್ದಾರೆ ಎಂದು ದೂರಿದ್ದಾರೆ.

ಕೇವಲ ಅಕ್ರಮ ಸಂಪಾದನೆಯನ್ನೇ ಗುರಿಯಾಗಿಸಿಕೊಂಡು ಕೆಲಸ ಮಾಡುವ 5 ನಗರ ಪಾಲಿಕೆಗಳಲ್ಲಿರುವ 10 ವಲಯಗಳ 10 ಮಂದಿ ಜಂಟಿ ಆಯುಕ್ತರನ್ನು ಕೂಡಲೇ ರಾಜ್ಯದ ಯಾವುದೇ ಪ್ರಾಮುಖ್ಯತೆಯಿಲ್ಲದ ಇಲಾಖೆಗಳಿಗೆ ವರ್ಗಾವಣೆ ಮಾಡಬೇಕು. ಈ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು ಉಸ್ತುವಾರಿ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ಪತ್ರ ಬರೆಯಬೇಕೆಂದು ಒತ್ತಾಯಿಸಿದ್ದಾರೆ.

ಆಕರ್ಷಕ ಸಂವಾದಾತ್ಮಕ ಅಧಿವೇಶನ ಯಶಸ್ವಿ

• **ಬೆಂಗಳೂರು:** ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರವು, ರಷ್ಯನ್ ಹೌಸ್ ಸಹಯೋಗದೊಂದಿಗೆ, ಶುಕ್ರವಾರ ರಷ್ಯನ್ ಗಗನಯಾತ್ರಿಯೊಂದಿಗೆ ಸಂವಾದ ಎಂಬ ಶೀರ್ಷಿಕೆಯ ಆಕರ್ಷಕ ಸಂವಾದಾತ್ಮಕ ಅಧಿವೇಶನವನ್ನು ಯಶಸ್ವಿಯಾಗಿ ಆಯೋಜಿಸಿತು.



ಕಾರ್ಯಕ್ರಮದಲ್ಲಿ ರಷ್ಯಾದ ಪ್ರಸಿದ್ಧ ಗಗನಯಾತ್ರಿ ಡೆನಿಸ್ ಮಟ್ವೀವ್ ಅವರೊಂದಿಗಿನ ಸಂವಾದಾತ್ಮಕ ಅಧಿವೇಶನದಲ್ಲಿ ಅವರು, ಬಾಹ್ಯಾಕಾಶದಲ್ಲಿನ ತಮ್ಮ ಅನುಭವಗಳಿಂದ ಪ್ರೇಕ್ಷಕರನ್ನು ಆಕರ್ಷಿಸಿದರು. ಮಾನವ ದೇಹದ ಮೇಲೆ ಜಿ-ಬಲದ ಪರಿಣಾಮಗಳಿಂದ ಹಿಡಿದು ಭೂಮ್ಯತೀತ ಜೀವನದ ಸಾಧ್ಯತೆಯ ಬಗ್ಗೆ ಕುತೂಹಲಕಾರಿ ಪ್ರಶ್ನೆಗಳವರೆಗೆ ವ್ಯಾಪಕ ಶ್ರೇಣಿಯ ಪ್ರಶ್ನೆಗಳನ್ನು ಕೇಳಿದರು. ಗಗನಯಾತ್ರಿ ಸ್ಪಷ್ಟತೆ ಮತ್ತು ಉತ್ಸಾಹದಿಂದ ಪ್ರತಿಕ್ರಿಯಿಸಿದ್ದು, ಅಧಿವೇಶನವನ್ನು ಮಾಹಿತಿಯುಕ್ತ ಮತ್ತು ಸ್ಫೂರ್ತಿದಾಯಕವಾಗಿಸಿದರು.

ಈ ವೇಳೆ ರಷ್ಯನ್ ಅಕಾಡೆಮಿ ಆಫ್ ಸೈನ್ಸಸ್‌ನಲ್ಲಿ ಹೈಪೋಕೈನೆಟಿಕ್ ಇಂಪ್ಯಾಕ್ಟ್‌ನ ಶಾರೀರಿಕ ಪರಿಣಾಮಗಳ ಪ್ರಯೋಗಾಲಯದ ಮುಖ್ಯಸ್ಥ ಅಲೆಕ್ಸಿ ಶಪಕೋವ್, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ರಮೇಶ್ ಬಿ, ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕಿ ಡಾ. ಜ್ಯೋತಿ ವೆಂಕಟೇಶ್ ಸೇರಿದಂತೆ ಇತರರಿದ್ದರು.

ಮಳೆ ಸಿಂಚನ



ಕಳೆದ ಹಲವು ದಿನಗಳಿಂದ ಬಿಸಿಲಿನ ಬೇಗೆಯಿಂದ ಹೈರಾಣಾಗಿದ್ದ ಬೆಂಗಳೂರಿಗರಿಗೆ ಶುಕ್ರವಾರ ಸಂಜೆ ಮಳೆರಾಯನ ಸಿಂಚನ, ಹಲವು ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ.

ಕಿರುಸುದ್ದಿ

ಎಲ್‌ಪಿಜಿ ದರ ನಿಗದಿ: ಬಂಕ್‌ಗಳ ವಿರುದ್ಧ ಧರಣಿ



• **ಬೆಂಗಳೂರು:** ಇರಾನ್ ಇಸ್ರೇಲ್ ಅಮೆರಿಕ ಯುದ್ಧದ ಕಾರಣದಿಂದ ಆಟೋ ಎಲ್‌ಪಿಜಿ ಕೊರತೆ ಉಂಟಾಗಿದ್ದು, ಇದನ್ನೇ ಬಂಡವಾಳ ಮಾಡಿಕೊಂಡ ಬಂಕುಗಳು ಒಂದೊಂದು ಬಂಕಿನಲ್ಲಿ ಮನಬಂದಂತೆ ದರಗಳನ್ನು ನಿಗದಿ ಮಾಡುತ್ತಿರುವ ವಿರುದ್ಧವಾಗಿ ಬೆಂಗಳೂರು ನಗರ ಜಿಲ್ಲೆ ಜಯ ಕರ್ನಾಟಕ ಸಂಘಟನೆ ವತಿಯಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆ ಧರಣಿ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾತನಾಡಿದ ಬಿ.ಎನ್.ಯೋಗಾನಂದ, ಆಟೋ ಚಾಲಕರು ದಿನನಿತ್ಯ ದುಡಿಮೆ ಮೇಲೆ ತಮ್ಮ ಬದುಕನ್ನು ಕಂಡುಕೊಂಡಿರುತ್ತಾರೆ. ಬಂಕಿನ ಮಾಲೀಕರು ಯುದ್ಧವನ್ನೇ ಬಂಡವಾಳ ಮಾಡಿಕೊಂಡು ಮನಬಂದಂತೆ ಎಲ್‌ಪಿಜಿ ದರ ಏರಿಸುತ್ತಿರುವುದು ಸರಿಯಲ್ಲ, ಹೀಗೆ ಮುಂದುವರೆದರೆ ಜಯ ಕರ್ನಾಟಕ ಸಂಘಟನೆ ವತಿಯಿಂದ ಕ್ಷೇತ್ರ ವ್ಯಾಪ್ತಿ ಪ್ರತಿಭಟನೆ ಹಮ್ಮಿಕೊಂಡು ಹೋರಾಟ ಮಾಡುವ ಮುನ್ನ ಎಚ್ಚೆತ್ತುಕೊಂಡು ಏಕರೂಪ ಬೆಲೆಯನ್ನು ನಿಗದಿಪಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಆಟೋ ಘಟಕದ ಅಧ್ಯಕ್ಷ ತಾಜುದ್ದೀನ್, ರಾಜ್ಯ ಕಾರ್ಯಾಧ್ಯಕ್ಷ ಮುನಿಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ರಜತ್ ಮುಂತಾದವರಿದ್ದರು.

ಮಹಿಳಾ ಕಥಾಸ್ಪರ್ಧೆಗೆ ಕಥೆಗಳ ಆಹ್ವಾನ

• **ಬೆಂಗಳೂರು:** ವೈದ್ಯೆ ಡಾ.ಅನುಪಮಾ ನಿರಂಜನ ಅವರ ಹುಟ್ಟುಹಬ್ಬದ ಅಂಗವಾಗಿ ಕನ್ನಡ ಸಂಘರ್ಷ ಸಮಿತಿ ವತಿಯಿಂದ ಉದಯೋನ್ಮುಖ ಕಥೆಗಾರ್ತಿಯರಿಗೆ ಮಹಿಳಾ ಕಥಾ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ಹೇಳಿದರು. ಇದುವರೆಗೂ ಒಂದೂ ಕಥಾ ಸಂಕಲನ ಪ್ರಕಟಿಸದೆ ಇರುವವರು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕಥೆಯು ಸ್ವಂತ ರಚನೆಯಾಗಿದ್ದು, ಮಹಿಳಾ ಕೇಂದ್ರಿತ ಕಥಾವಸ್ತು ಆಗಿರಬೇಕು. ಸ್ಪರ್ಧೆಗೆ ಕಳುಹಿಸುವ ಕಥೆಯು ಈ ಮೊದಲು ಎಲ್ಲೂ ಪ್ರಕಟವಾಗಿರಬಾರದು. 1200 ಪದಗಳನ್ನು ಮೀರದ ಅಥವಾ ಎ4 ಅಳತೆಯ ಕಾಗದದಲ್ಲಿ 5 ಪುಟಗಳು ಮೀರದಂತೆ ಹಾಳೆಯ ಒಂದೇ ಮಗ್ಗುಲಲ್ಲಿ ಕನ್ನಡದಲ್ಲಿ ಕೈಯಲ್ಲಿ ಬರೆದಿರಬಹುದು ಅಥವಾ ಡಿಟಿಪಿ ಮಾಡಿಸಬಹುದು. 200 ರೂ. ಪ್ರವೇಶ ಶುಲ್ಕದೊಡನೆ (ಪ್ರವೇಶ ಶುಲ್ಕ ರೂ.200/-ಗಳನ್ನು ಕನ್ನಡ ಸಂಘರ್ಷ ಸಮಿತಿ, ಉಳಿತಾಯ ಖಾತೆ ಸಂಖ್ಯೆ: 20030001105 1,ಐಎಫ್‌ಸಿ ಕೋಡ್ ಎಚ್‌ಡಿಎಫ್‌ಸಿ0ಸಿಎಸ್‌ಆರ್‌ಬಿ ಬ್ಯಾಂಕ್: ಶ್ರೀ ರಾಮ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಲ್ಲೇಶ್ವರ ಖಾತೆಗೆ ಜಮಾ ಮಾಡಬಹುದಾಗಿದೆ) ಕಥೆ ಮೇ 10ರ ಒಳಗೆ ತಲುಪುವಂತೆ ಕಳುಹಿಸಿಕೊಡಬೇಕು. ಕಥೆಯನ್ನು ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560 056 ವಿಳಾಸಕ್ಕೆ ಕಳುಹಿಸಿಕೊಡಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9739001410ಕ್ಕೆ ಸಂಪರ್ಕಿಸಬಹುದು ಎಂದು ಎ.ಎಸ್.ನಾಗರಾಜಸ್ವಾಮಿ ತಿಳಿಸಿದ್ದಾರೆ.

ಪ್ರವಾಹ ಉಂಟಾಗುವ ಸ್ಥಳಗಳ ಪರಿಶೀಲಿಸಿದ ಅಧಿಕಾರಿ ತಂಡ | ಮಳೆಗಾಲಕ್ಕೂ ಮುನ್ನ ಕಾಮಗಾರಿ ಪೂರ್ಣಗೊಳಿಸಿ

ಮಳೆ ಅವಾಂತರ ಎದುರಿಸಲು ಜಿಬಿಎ ಸಿದ್ಧತೆ

• **ಬೆಂಗಳೂರು:** ನಗರದಲ್ಲಿ ಮಳೆಗಾಲದಲ್ಲಿ ಆಗುವ ಅವಾಂತರ ಹಾಗೂ ಪ್ರವಾಹ ಉಂಟಾಗುವುದನ್ನು ಸಮರ್ಥವಾಗಿ ಎದುರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಸಿದ್ಧತೆ ನಡೆಸುತ್ತಿದ್ದು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪಾಲಿಕೆ ಅಧಿಕಾರಿಗಳು ಪ್ರವಾಹ ಉಂಟಾಗಬಹುದಾದ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಜಿಬಿಎ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಉಂಟಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಿ, ಮಳೆಗಾಲಕ್ಕೂ ಮುನ್ನ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಿದ್ದಾರೆ.

ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಪ್ರದೇಶ ಹಾಗೂ ಕೋಗಿಲು ಜಂಕ್ಷನ್‌ನಲ್ಲಿ ಪ್ರವಾಹ ತಡೆಗಟ್ಟುವ ನಿಟ್ಟಿನಲ್ಲಿ ನಿರ್ಮಿಸಲಾಗುತ್ತಿರುವ 2.7 ಕಿ.ಮೀ ಉದ್ದದ ರಾಜಕಾಲುವೆ ಹಾಗೂ ಎರಡೂ ಬದಿಯಲ್ಲಿ 30 ಅಡಿ ರಸ್ತೆ ನಿರ್ಮಾಣ ಕಾರ್ಯವನ್ನು ತ್ವರಿತವಾಗಿ ಮುಗಿಸಿ,ಪ್ರವಾಹ ಉಂಟಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದ್ದಾರೆ.

ಟಾಟಾ ನಗರ ಪ್ರವಾಹ ಪೀಡಿತ ಪ್ರದೇಶದಲ್ಲಿ ದೊಡ್ಡಬೊಮ್ಮಸಂದ್ರ ಕೆರೆಯಿಂದ ಟಾಟಾನಗರವರೆಗೆ 900 ಮೀ. ಉದ್ದದ 20 ಅಡಿ ಅಗಲದ ಮಳೆನೀರುಗಾಲುವೆ ನಿರ್ಮಾಣ ಮಾಡಲಾಗುತ್ತಿದ್ದು, ತಡೆಗೋಡೆಯನ್ನು ಎತ್ತರಿಸಲಾಗುತ್ತಿದೆ. ಎಲ್ಲಾ ಕಾಲುವೆಗಳಲ್ಲಿ ಹೂಳೆತ್ತುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ.



ಹೆಬ್ಬಾಳ ಕೆರೆ ವೆಟ್‌ಲ್ಯಾಂಡ್ ಇನ್ ಲೆಟ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಅದನ್ನು ತ್ವರಿತವಾಗಿ ಪೂರ್ಣಗೊಳಿಸಿ. ಹೆಬ್ಬಾಳ ಜಂಕ್ಷನ್ ಕೆಳಭಾಗದಲ್ಲಿ ಮಳೆನೀರನ್ನು ಕೆರೆಗೆ ಹರಿಸುವ ವ್ಯವಸ್ಥೆ ಮಾಡಲಾಗುತ್ತಿದ್ದು, ವೆಟ್‌ಲ್ಯಾಂಡ್ ಅಭಿವೃದ್ಧಿ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಿದರು.

ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಆಗುತ್ತಿದ್ದ ಜಲಾವೃತವನ್ನು ತಪ್ಪಿಸಲು ನಡೆಯುತ್ತಿರುವ ಕಾಮಗಾರಿಯನ್ನು ಏಪ್ರಿಲ್ ಅಂತ್ಯದೊಳಗಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದ್ದಾರೆ.

> ರಾಜಕಾಲುವೆಗಳ ಬಳಿ ಕ್ಯಾಮೆರಾಗಳನ್ನು ಅಳವಡಿಸಲು ಮತ್ತು ಕೆಎಸ್‌ಎನ್‌ಡಿಎಂಸಿ ಅವರೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಮಳೆಗಾಲ ಎದುರಿಸಲು ಜಿಬಿಎ ಅಗತ್ಯ ಕ್ರಮ ಕೈಗೊಳ್ಳಲಿದೆ.
>
> ■ **ಮಹೇಶ್ವರ್ ರಾವ್**, ಜಿಬಿಎ ಮುಖ್ಯ ಆಯುಕ್ತ



ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಪ್ರವಾಹ ತಡೆಯಲು ಕಾಮಗಾರಿ

ಮಾನ್ಯತಾ ಟೆಕ್ ಪಾರ್ಕ್ ಹಾಗೂ ವೀರಣ್ಣಪಾಳ್ಯ ಹೊರ ವರ್ತುಲ ರಸ್ತೆಯಲ್ಲಿ ಜಲಾವೃತ ಸಮಸ್ಯೆ ದೀರ್ಘಕಾಲದಿಂದ ಇದೆ. ಕೆಲವು ಜಾಗಗಳು ಖಾಸಗಿ ಮಾಲೀಕತ್ವದಲ್ಲಿರುವುದು ಕಂಡುಬಂದರೂ, ಅವುಗಳನ್ನು ಪಡೆದು ಖಾಸಗಿ ವೆಚ್ಚದಲ್ಲೇ ಮಳೆನೀರುಗಾಲುವೆ ನಿರ್ಮಾಣ ಮಾಡಲಾಗುತ್ತಿದೆ.ವೀರಣ್ಣಪಾಳ್ಯದಿಂದ ಹೆಬ್ಬಾಳ ವ್ಯಾಲಿವರೆಗೆ 1.2 ಕಿ.ಮೀ ಉದ್ದದ ಎರಡು ಮಾನವ ನಿರ್ಮಿತ ಕಾಲುವೆಗಳ ಕಾಮಗಾರಿ ಪ್ರಗತಿಯಲ್ಲಿದ್ದು, 800 ಮೀ. ಆರ್‌ಸಿ ತಡೆಗೋಡೆ ನಿರ್ಮಿಸಲಾಗಿದೆ. ಉಳಿದ ಭಾಗದಲ್ಲೂ ಆರ್‌ಸಿಸಿ ಕಾಮಗಾರಿ ಕೈಗೊಳ್ಳಲು ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ನಾಗವಾರ ಜಂಕ್ಷನ್ ಪರಿಶೀಲನೆ, ಎಚ್.ಬಿ.ಆರ್ ಲೇಔಟ್ ಪರಿಶೀಲನೆ, ಗೆದ್ದಲಹಳ್ಳಿ ರೈಲ್ವೆ ವೆಂಟ್ ಕಾಮಗಾರಿಗಳನ್ನು ಪರಿಶೀಲನೆ ನಡೆಸಿ ಕಾಮಗಾರಿ ನಡೆಸುತ್ತಿರು ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ನಿರ್ದಿಷ್ಟ ಸಮಯದೊಳಗೆ ಕಾಮಗಾರಿ ಮುಗಿಸಲು ನಿರ್ದೇಶನ ನೀಡಿದ್ದಾರೆ.



ಜೆ.ಪಿ.ನಗರ 2ನೇ ಹಂತದ ರಾಜಕಾಲುವೆ ಪಕ್ಕದಲ್ಲಿ ನೂತನವಾಗಿ ಪಾದಚಾರಿ ಮಾರ್ಗವನ್ನು ನಿರ್ಮಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕ ಸಿ.ಕೆ. ರಾಮಮೂರ್ತಿ ಅವರು ನಿರ್ದೇಶನ ನೀಡಿದರು. ಈ ವೇಳೆ ಸ್ಥಳೀಯರು ಉಪಸ್ಥಿತರಿದ್ದರು.

ಜಾಲತಾಣದಲ್ಲಿ ಸುಳ್ಳು ಮಾಹಿತಿ ಹಂಚಿದರೆ ಕಠಿಣ ಕ್ರಮ

• **ಬೆಂಗಳೂರು:** ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆಗಾಗಿ ಸುಳ್ಳು ಮಾಹಿತಿ ಹಾಗೂ ದಾರಿ ತಪ್ಪಿಸುವ ವಿಡಿಯೋಗಳನ್ನು ಹಂಚಿಕೊಳ್ಳುವವರ ವಿರುದ್ಧ ಬೆಂಗಳೂರು ಪೊಲೀಸರು ಕಠಿಣ ಕ್ರಮಕ್ಕೆ ಮುಂದಾಗಿದ್ದಾರೆ.

ನಗರದಲ್ಲಿ ಮೂರ್ನಾಲ್ಕು ದಿನಗಳಿಂದ ಸಾರ್ವಜನಿಕರನ್ನು ಆತಂಕಕ್ಕೆ ತಳ್ಳಿದ್ದ ಜಾಂಬಿ ಡ್ರಗ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಡಿಯೋ ಹರಿಬಿಟ್ಟಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ವಿದ್ಯಾರಣ್ಯಪುರದ ನಿವಾಸಿ ಹೇಮಂತ್ ಬಂಧಿತ ವ್ಯಕ್ತಿ.

ಪೊಲೀಸರ ವಿಚಾರಣೆ ವೇಳೆ ತಾನು ಏನೂ ತಿಳಿಯದೆ ಕೇವಲ ಕುತೂಹಲಕ್ಕೆ ವಿಡಿಯೋ ಮಾಡಿ ಸಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದಾಗಿ ಆತ ಒಪ್ಪಿಕೊಂಡಿದ್ದಾನೆ. ಅಲ್ಲದೆ, ತನ್ನ ಈ ಕೃತ್ಯದಿಂದ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಯಾಗಿದ್ದಕ್ಕೆ ಕರ್ನಾಟಕದ ಜನತೆಯ ಕ್ಷಮೆಯನ್ನೂ ಕೇಳಿದ್ದಾನೆ.

> ಯಾವುದೇ ಆಧಾರವಿಲ್ಲದ ಸುಳ್ಳು ಸುದ್ದಿಗಳನ್ನು ಶೇರ್ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ವೀಡಿಯೊವನ್ನು ಹಂಚಿಕೊಂಡ ಇತರ ವ್ಯಕ್ತಿಗಳಿಗೂ ನೋಟಿಸ್ ಜಾರಿ ಮಾಡಲಾಗುತ್ತಿದೆ. ಸಾರ್ವಜನಿಕರು ಇಂತಹ ವದಂತಿಗಳಿಗೆ ಕಿವಿಗೊಡಬಾರದು.
>
> 
>
> ■ **ಸೀಮಂತ್ ಕುಮಾರ್ ಸಿಂಗ್**, ನಗರ ಪೊಲೀಸ್ ಆಯುಕ್ತ

ಸೀಮಂತ್ ಕುಮಾರ್ ಸಿಂಗ್ ಮಧ್ಯಮಗಳ ಜತೆಗೆ ಮಾತನಾಡಿ, ಇದು ಕೇವಲ ಸುಳ್ಳು ಸುದ್ದಿ ಎಂದು ಸಾಬೀತಾಗಿದೆ. ಈ ಬಗ್ಗೆ ನಮ್ಮ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ನಗರದಲ್ಲಿ ಯಾವುದೇ ಜಾಂಬಿ ಡ್ರಗ್ಸ್ ಪತ್ತೆಯಾಗಿಲ್ಲ ಮತ್ತು ಅಂತಹ ವದಂತಿ ಹರಡಿದ ವ್ಯಕ್ತಿಯನ್ನು ಈಗಾಗಲೇ ಬಂಧಿಸಲಾಗಿದೆಂದು ತಿಳಿಸಿದ್ದಾರೆ.

ಇತ್ತೀಚೆಗೆ ಸಾಮಾಜಿಕ ಜಾಲತಾಣ ಗಳಲ್ಲಿ ವೀಡಿಯೊವೊಂದು ವೈರಲ್ ಆಗಿತ್ತು. ಅದರಲ್ಲಿ ವ್ಯಕ್ತಿಯೊಬ್ಬ ರಸ್ತೆ ಬದಿಯಲ್ಲಿ ವಿಚಿತ್ರವಾಗಿ ಮತ್ತು ಸ್ಥಿರ (ಜಡವಾಗಿ ನಿಂತಿರುವುದನ್ನು ತೋರಿಸಿ, ಆತ ಜಾಂಬಿ ಡ್ರಗ್ಸ್ ಸೇವಿಸಿದ್ದಾನೆ ಎಂದು ಬಿಂಬಿಸಲಾಗಿತ್ತು. ಈ ವಿಡಿಯೋ ಬೆಂಗಳೂರಿನ ಮೀನಾಕ್ಷಿ ಕಾಲೇಜು ಬಳಿ ಚಿತ್ರೀಕರಿಸಲಾಗಿತ್ತು. ಈದೃಶ್ಯ ಜನರಲ್ಲಿ ಭಯ ಹುಟ್ಟಿಸಿತ್ತು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು ತನಿಖೆ ನಡೆಸಿದಾಗ ಸತ್ಯಾಂಶ ಹೊರಬಂದಿದೆ. ವೀಡಿಯೊದಲ್ಲಿದ್ದ ವ್ಯಕ್ತಿ ಲಾರಿ ಚಾಲಕನಾಗಿದ್ದು, ಆತ ಅತಿಯಾಗಿ ಮದ್ಯಪಾನ ಮಾಡಿದ್ದ ಮತ್ತು ಅರ್ಥ್ರೈಟಿಸ್ ಸಂಬಂಧಿತ ಮಾತ್ರೆ ಸೇವಿಸಿದ್ದು ದೃಢಪಟ್ಟಿದೆ.

ಲಾಲ್‌ಬಾಗ್‌ನ ನೈಸರ್ಗಿಕ ಸ್ಮಾರಕ ರಕ್ಷಿಸಿ

• **ಬೆಂಗಳೂರು:** ನಗರದ ಐತಿಹಾಸಿಕ ತಾಣ ಲಾಲ್‌ಬಾಗ್‌ನಲ್ಲಿ ಹಳೆಯದಾದ ಪೆನಿನ್ಸುಲರ್ ನೈಸ್ ಶಿಲಾಜಾಲಕ್ಕೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಸುರಂಗ ರಸ್ತೆ ಯೋಜನೆಯಿಂದ ಸಂಚಕಾರ ಎದುರಾಗಲಿದೆ. ಈ ಹಿನ್ನೆಲೆಯಲ್ಲಿ ಈ ಅಮೂಲ್ಯ ನೈಸರ್ಗಿಕ ಸ್ಮಾರಕವನ್ನು ರಕ್ಷಿಸಬೇಕು ಮತ್ತು ಇದಕ್ಕೆ ಯುನೆಸ್ಕೋ ಮಾನ್ಯತೆ ದೊರಕಿಸಿಕೊಡಬೇಕೆಂದು ಆಗ್ರಹಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಗೆ (ಜಿಎಸ್‌ಐ) ಸಾರ್ವಜನಿಕರು ಮನವಿ ಸಲ್ಲಿಸಿದ್ದಾರೆ.

ಲಾಲ್‌ಬಾಗ್‌ನಲ್ಲಿರುವ ಶಿಲಾಜಾಲವು ಕೇವಲ ಕಲ್ಲಿನ ಗುಡ್ಡವಲ್ಲ, ಇದು ಭೂಮಿಯ ವಿಕಾಸದ ಕಥೆ ಹೇಳುವ ಅಪರೂಪದ ವೈಜ್ಞಾನಿಕ ಸಾಕ್ಷಿಯಾಗಿದೆ. ಆದರೆ ಹೆಬ್ಬಾಳದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ ಸುಮಾರು 17.5 ಕಿ.ಮೀ ಉದ್ದದ ಸುರಂಗ ರಸ್ತೆ ನಿರ್ಮಿಸಲು ಸರ್ಕಾರ ಯೋಜಿಸಿದೆ. ಸುರಂಗ ರಸ್ತೆಗೆ ಪೆನಿನ್ಸುಲರ್ ನೈಸ್ ಶಿಲಾಜಾಲದ ಅಡಿಯಲ್ಲಿ ಮತ್ತು ಸುತ್ತಮುತ್ತ ಬೃಹತ್ ಪ್ರಮಾಣದ



ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆಗೆ ಸಾರ್ವಜನಿಕರ ಮನವಿ

ಸುರಂಗ ಕೊರೆಯು ವುದರಿಂದ ಈ ನೈಸರ್ಗಿಕ ಸ್ಮಾರಕದ ಅಸ್ತಿತ್ವಕ್ಕೇ ಧಕ್ಕೆ ಬರಬಹುದು ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಲಾಲ್‌ಬಾಗ್ ಬೆಂಗಳೂರಿನ ಜ್ಞಾನಕೋಶವಾಗಿದ್ದು, ಪೆನಿನ್ಸುಲರ್ ನೈಸ್ ಶಿಲಾಜಾಲದ ರಕ್ಷಣೆಗೆ ಜಿಎಸ್‌ಐ ಮುಂದೆ ಬರಬೇಕು. ಅಲ್ಲದೆ ಯುನೆಸ್ಕೋದಿಂದ 'ವಿಶ್ವ ಪರಂಪರೆಯ ತಾಣ' ಎಂಬ ಮಾನ್ಯತೆ ಸಿಗುವಂತೆ ಜಿಎಸ್‌ಐ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಜಿಎಸ್‌ಐ ಮನವಿ ಸಲ್ಲಿಸಿದ್ದಾರೆ.

ಅನುತ್ತೀರ್ಣ: ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣು

• **ಬೆಂಗಳೂರು:** ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಫಲಿತಾಂಶದ ಸಂಭ್ರಮ ಮನೆ ಮಾಡಿದ್ದರೆ, ಇತ್ತ ಹೆಬ್ಬಾಳದ ಮನೋರಾಯನಪಾಳ್ಯದಲ್ಲಿ ವಿದ್ಯಾರ್ಥಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ಬೇಸರದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತನುಶ್ರೀ (18) ಮೃತ ವಿದ್ಯಾರ್ಥಿನಿ. ಈಕೆ ಗುರುವಾರ ಮಧ್ಯಾಹ್ನ ಫಲಿತಾಂಶ ಪ್ರಕಟವಾದ ನಂತರ ಪರೀಕ್ಷೆಯಲ್ಲಿ ಫೇಲ್ ಆಗಿರುವುದನ್ನು ತಿಳಿದು ಮಾನಸಿಕ ಆಘಾತಕ್ಕೆ ಒಳಗಾಗಿದ್ದರು ಎನ್ನಲಾಗಿದೆ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಮನನೊಂದು ಈ ನಿರ್ಧಾರ ಕೈಗೊಂಡಿದ್ದಾರೆ. ಸಂಜೆ ವೇಳೆಗೆ ವಿಷಯ ಬೆಳಕಿಗೆ ಬಂದಿದ್ದು, ತಕ್ಷಣವೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಪ್ರಯತ್ನ ನಡೆಸಲಾಯಿತಾದರೂ ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದರು.ಸ್ಥಳಕ್ಕೆ ಹೆಬ್ಬಾಳ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ಕುಟುಂಬಸ್ಥರಿಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಇಟಿ ಪರೀಕ್ಷೆ ಪ್ರವೇಶ ಪತ್ರ ಬಿಡುಗಡೆ

• **ಬೆಂಗಳೂರು:** ಇಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.23 ಮತ್ತು 24 ರಂದು ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಏ.22ರಂದು ನಡೆಯುವ ಕನ್ನಡ ಭಾಷಾ ಪರೀಕ್ಷೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರವೇಶ ಪತ್ರ ಬಿಡುಗಡೆ ಮಾಡಿದೆ. ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿರುವ ಅರ್ಹ ಅಭ್ಯರ್ಥಿಗಳು ಕೆಇಎ ವೆಬ್‌ಸೈಟ್‌ಗೆ ಭೇಟಿ ನೀಡಿ, ನಿಗದಿತ ಲಿಂಕ್ ಮೂಲಕ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಹಸಿರು ಲ್ಯಾಂಬೊರ್ಗಿನಿ ಕಾರಿನಲ್ಲಿ ಹೋಗಿ ರಸ್ತೆ ಕಸ ಗುಡಿಸಿ

» ನಿರ್ಲಕ್ಷ್ಯದಿಂದ ಕಾರು ಓಡಿಸಿದ ಆರೋಪ
» ಚಾಲಕನಿಗೆ ಹೈಕೋರ್ಟ್ ಮೌಖಿಕ ಹೇಳಿಕೆ

• **ಬೆಂಗಳೂರು:** ಮೈಸೂರು ರಸ್ತೆಯಲ್ಲಿ ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಕಾರು ಓಡಿಸಿದ ಆರೋಪಕ್ಕೆ ಗುರಿಯಾಗಿರುವ ಬೆಂಗಳೂರಿನ ವ್ಯಕ್ತಿಯು ಸಮುದಾಯ ಸೇವೆ ಮಾಡುವುದಾಗಿ ಹೇಳಿರುವುದನ್ನು ಪರಿಗಣಿಸಿರುವ ಹೈಕೋರ್ಟ್ ಹಸಿರು ಲ್ಯಾಂಬೊರ್ಗಿನಿ ಕಾರಿನಲ್ಲಿ ಹೋಗಿ ರಸ್ತೆ ಕಸ ಗುಡಿಸಿ, ಮತ್ತೆ ಲ್ಯಾಂಬೊರ್ಗಿನಿಯಲ್ಲಿ ಬನ್ನಿ ಎಂದು ಗುರುವಾರ ಮೌಖಿಕವಾಗಿ ಹೇಳಿದೆ.

ಅಂತಿಮವಾಗಿ ಯಾವ ರೀತಿಯ ಸಮುದಾಯ ಸೇವೆಯನ್ನು ಬೆಂಗಳೂರಿನ ಸಿ.ವಿ.ರಾಮನ್ ನಗರದ ಬಿ.ಆರ್. ಚಿರಂತ್ ಮಾಡಬೇಕು ಎಂಬುದನ್ನು ಆದೇಶದಲ್ಲಿ ವಿವರಿಸುವುದಾಗಿ ಹೇಳಿರುವ ನ್ಯಾ.ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಅರ್ಜಿ ಇತ್ಯರ್ಥಪಡಿಸಿದೆ.

ವಿಚಾರಣೆ ಆರಂಭವಾಗುತ್ತಿದ್ದಂತೆ ಪೀಠವು ಚಿರಂತ್‌ಗೆ ಪಶ್ಚಾತಾಪವಾಗಿದೆ.ಬಿಎನ್‌ಎಸ್‌ಎಸ್‌ನಲ್ಲಿ10ರೀತಿಯಸಮುದಾಯ ಸೇವೆಗಳಿವೆ. ಲ್ಯಾಂಬೊರ್ಗಿನಿಯಲ್ಲಿ ಹೋಗಿ, ರಸ್ತೆ ಕಸ ಗುಡಿಸಿ, ಮತ್ತೆ ಲ್ಯಾಂಬೊರ್ಗಿನಿಯಲ್ಲಿ ಬನ್ನಿ. ಸಂಚಾರ ನಿಯಮ ಉಲ್ಲಂಘಿಸಿರುವುದರಿಂದ ಸಂಚಾರ ನಿಯಮದ ಪಾಠ ಮಾಡುತ್ತೀರಾ? ನಿಯಮ ಉಲ್ಲಂಘಿಸಿ, ಕಲಿಯುವುದು ಹೇಗೆ ಎಂದು ಮಕ್ಕಳು ಕಲಿಯುತ್ತಾರೆ. ಯಾವ ಸೇವೆ ಮಾಡಬೇಕು ಎಂದು ಬರೆಯುತ್ತೇನೆ, ಅದನ್ನು ಮಾಡಬೇಕು ಎಂದಿತು.

ಅರ್ಜಿದಾರರ ಪರ ವಕೀಲ ರಜತ್ ಅವರು ಚಿರಂತ್ ಅವರನ್ನು ಅಫೆಂಡರ್ ಎಂದು ತೋರಿಸಲಾಗಿದೆ. ಚಿರಂತ್ ಅವರು ಯಾವುದೇ ಅಪರಾಧ ಮಾಡಿಲ್ಲ, ಆದರೂ, ಅವರು ಸಮುದಾಯ ಸೇವೆ ಮಾಡುವ ಇಚ್ಛೆ ಹೊಂದಿದ್ದಾರೆ. ಸಂಚಾರ ನಿಯಮಗಳ ಬಗ್ಗೆ ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತಾರೆ. ಸಂಚಾರ ನಿಯಮ ಉಲ್ಲಂಘಿಸದಂತೆ ಮಕ್ಕಳಿಗೆ ತಿಳಿಸುತ್ತಾರೆ. ಇಡೀ ದೇಶದಲ್ಲೇ ಇದು ಮೊದಲ ಪ್ರಕರಣವಾಗಲಿದೆ. ವಿನಾಯಿತಿ ತೋರಬೇಕು ಎಂದರು.

ಹೆಚ್ಚುವರಿ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ಲ್ಯಾಂಬೊರ್ಗಿನಿ ಕಾರನ್ನು ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ವ್ಯಕ್ತಿ ಶಾಲೆಯಲ್ಲಿ ಸಂಚಾರ ನಿಯಮದ ಪಾಠ ಮಾಡುವುದೇ? ಗಿಡಗಳನ್ನು ನೆಡುವುದು ಸೂಕ್ತ ಎಂದರು.

ಸುಧಾರಿತ ವಾಯುಯಾನ ಪ್ರದರ್ಶನ ಒಳಗೊಂಡ ಮ್ಯೂಸಿಯಂ

ಏರೋಸ್ಪೇಸ್ ಮ್ಯೂಸಿಯಂ ಉದ್ಘಾಟನೆ

• **ಬೆಂಗಳೂರು:** ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್)ನ ಉನ್ನತೀಕರಿಸಿದ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ ಅನ್ನು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ.ಡಿ.ಕೆ.ಸುನೀಲ್ ಶುಕ್ರವಾರ ಅನಾವರಣಗೊಳಿಸಿದರು.

ಮ್ಯೂಸಿಯಂನ ಆಧುನೀಕರಣವು ಮಂತ್ರಮುಗ್ಧಗೊಳಿಸುವ ಸ್ಥಾಪನೆಗಳು ಮತ್ತು ಸುಧಾರಿತ ವಾಯುಯಾನ ಪ್ರದರ್ಶನಗಳನ್ನು ಒಳಗೊಂಡಿದೆ. ಇದು ಏ. 13 ರಂದು ಸಾರ್ವಜನಿಕರಿಗೆ ಮತ್ತೆ ತೆರೆಯಲಿದೆ.

2001ರಲ್ಲಿ ಸ್ಥಾಪನೆಯಾದ ಎಚ್‌ಎಎಲ್ ಹೆರಿಟೇಜ್ ಸೆಂಟರ್ ಮತ್ತು ಏರೋಸ್ಪೇಸ್ ಮ್ಯೂಸಿಯಂ ಭಾರತದ ಮೊದಲ ಏರೋಸ್ಪೇಸ್ ಮ್ಯೂಸಿಯಂ ಮತ್ತು ಬೆಂಗಳೂರಿನ ಸಾಂಪ್ರದಾಯಿಕ ಹೆಗ್ಗುರುತುಗಳಲ್ಲಿ ಒಂದಾಗಿದೆ. ಇದೀಗ ನವೀಕರಣಗೊಂಡು ಎಚ್‌ಎಎಲ್ ಅನ್ನು ವ್ಯಾಖ್ಯಾನಿಸುವ ನಾವೀನ್ಯತೆ, ಎಂಜಿನಿಯರಿಂಗ್ ಶ್ರೇಷ್ಠತೆ ಮತ್ತು ರಾಷ್ಟ್ರೀಯ ಸೇವೆಯ ಉತ್ಸಾಹಕ್ಕೆ ಸಂದರ್ಶಕರನ್ನು ಹತ್ತಿರ ತರುವ ಕ್ರಿಯಾತ್ಮಕ ಅನುಭವವನ್ನು ನೀಡುತ್ತದೆ. ಹೊಸ ಅನುಭವವನ್ನು ಆನಂದಿಸಲು ನಾವು ಸಾರ್ವಜನಿಕರನ್ನು ಆಹ್ವಾನಿಸುತ್ತೇವೆ ಎಂದು ಡಾ. ಡಿ.ಕೆ. ಸುನೀಲ್ ಹೇಳಿದರು.

ಎಚ್‌ಎಎಲ್ ನಿರ್ದೇಶಕ (ಹಣಕಾಸು) ಡಾ. ಬರೇನ್ಯ ಸೇನಾಪತಿ, ನಿರ್ದೇಶಕ (ಕಾರ್ಯಾಚರಣೆ) ರವಿ ಕೆ., ನಿರ್ದೇಶಕ (ಮಾನವ ಸಂಪನ್ಮೂಲ) ಎಂ.ಜಿ. ಬಾಲಸುಬ್ರಹ್ಮಣ್ಯ, ನಿರ್ದೇಶಕ (ಎಂಜಿನಿಯರಿಂಗ್ ಮತ್ತು ಆರ್ ಅ್ಯಂಡ್ ಡಿ) ಅಜಯ್ ಕುಮಾರ್ ಶ್ರೀವಾಸ್ತವ ಮತ್ತು ಇತರ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಶೇಷ ವೈಶಿಷ್ಟ್ಯಗಳು : ವಸ್ತುಸಂಗ್ರಹಾಲಯವು ಹಿಂದೂಸ್ತಾನ್ ಟರ್ಬೊ ಫ್ಯಾನ್ ಎಂಜಿನ್ (ಎಚ್‌ಟಿಎಫ್‌ಇ-25)ನ ಜೀವ ಗಾತ್ರದ ಪ್ರತಿಕೃತಿ ಮತ್ತು ಎಚ್‌ಎಎಲ್‌ನ ಐಕಾನಿಕ್ ವಿಮಾನ - ಪ್ರಚಂಡ್ ಮತ್ತು ತೇಜಸ್ ಅನ್ನು ಒಳಗೊಂಡ 3 ಅನಾಮಾರ್ಫಿಕ್ ರನ್‌ವೇ ಸೇರಿದಂತೆ ಅತ್ಯಾಧುನಿಕ ಸ್ಥಾಪನೆಗಳನ್ನು ಒಳಗೊಂಡಿದೆ. ವಸ್ತುಸಂಗ್ರಹಾಲಯವು ಸ್ಥಿರ-ವಿಂಗ್ ವಿಮಾನಗಳು, ರೋಟರಿ-ವಿಂಗ್ ಪ್ಲಾಟ್‌ಫಾರ್ಮ್‌ಗಳು, ನಾಗರಿಕ ವಿಮಾನಯಾನ, ಎಂಜಿನ್‌ಗಳು, ವ್ಯವಸ್ಥೆಗಳು ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳನ್ನು ಒಳಗೊಂಡ ಎಚ್‌ಎಎಲ್‌ನ ಪ್ರಮುಖ ಉತ್ಪನ್ನಗಳ ವಿವರವಾದ 3ಡಿ ಮಾದರಿಗಳೂ ಇಲ್ಲಿವೆ.

ಏ.16ರಿಂದ ಪ್ಲಂಬೆಕ್ಸ್ ಪ್ರದರ್ಶನ

• **ಬೆಂಗಳೂರು:** ದೇಶದಲ್ಲಿ ಹೆಚ್ಚುತ್ತಿರುವ ಜಲ ಕೊರತೆ ಮತ್ತು ನಗರ ಜಲ ನಿರ್ವಹಣೆಯ ಸವಾಲುಗಳ ನಡುವೆ, ಇಂಡಿಯನ್ ಪ್ಲಂಬಿಂಗ್ ಅಸೋಸಿಯೇಶನ್ ವತಿಯಿಂದ ಏ.16ರಿಂದ 18ರವರೆಗೆ ಪ್ಲಂಬೆಕ್ಸ್ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ನೀರು, ನೈರ್ಮಲ್ಯ ಮತ್ತು ಪ್ಲಂಬಿಂಗ್ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಭಾರತದ ಪ್ರಮುಖ ವಾಣಿಜ್ಯ ಪ್ರದರ್ಶನವಾಗಿರುವ ಈ ಕಾರ್ಯಕ್ರಮವು ಉದ್ಯಮ ಸಹಯೋಗ, ತಂತ್ರಜ್ಞಾನ ಆವಿಷ್ಕಾರ ಮತ್ತು ಜ್ಞಾನ ವಿನಿಮಯಕ್ಕೆ ಪ್ರಮುಖ ವೇದಿಕೆಯಾಗಿ ಕಾಣಿಸಿಕೊಂಡಿದೆ.

ಈ ಮೂರು ದಿನಗಳ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಪ್ರದರ್ಶಕರು ಮತ್ತು 50ಕ್ಕೂ ಹೆಚ್ಚು ನವೋದ್ಯಮಿಗಳು ಭಾಗವಹಿಸಲಿದ್ದು, ಪ್ಲಂಬಿಂಗ್ ವ್ಯವಸ್ಥೆ, ಸ್ಮಾರ್ಟ್‌ವಾಟರ್ ತಂತ್ರಜ್ಞಾನಗಳು, ನೈರ್ಮಲ್ಯ ಮೂಲಸೌಕರ್ಯ ಮತ್ತು ಸುಸ್ಥಿರ ಕಟ್ಟಡ ಪರಿಹಾರಗಳ ಪ್ರದರ್ಶನ ನಡೆಯಲಿದೆ. 15,000ಕ್ಕೂ ಹೆಚ್ಚು ವೃತ್ತಿಪರ ಸಂದರ್ಶಕರು ಭಾಗವಹಿಸುವ ನಿರೀಕ್ಷೆಯಿದೆ.

ಕಾರ್ಯಕ್ರಮದಲ್ಲಿ ಐಪಿಎ ಅವಾರ್ಡ್ಸ್ ಆಫ್ ಎಕ್ಸಲೆನ್ಸ್, ವಿದ್ಯಾರ್ಥಿಗಳಿಗೆ ಅರೌಂಡ್ ದ ಟ್ರ್ಯಾಪ್ ಕಾರ್ಯಾಗಾರ ಹಾಗೂ ಐಪಿಎ ಬಾತ್‌ರೂಮ್ ಚಾಲೆಂಜ್ ಸೇರಿದಂತೆ ವಿವಿಧ ಚಟುವಟಿಕೆಗಳು ನಡೆಯಲಿವೆ. ಜಲ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ.

ಇಂದು ನಗರದಲ್ಲಿ...

- ಕೂರ್ಗ್-ದ ಲ್ಯಾಂಡ್ ಆಫ್ ಜನರಲ್ಸ್ ವತಿಯಿಂದ ಡಿವೈನ್ ಲೈಫ್ ಸೊಸೈಟಿ ಕ್ಯುಮಾನಿಟಿ ಪುಸ್ತಕ ಬಿಡುಗಡೆ ಸಮಾರಂಭ. ಸ್ಥಳ : ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕನ್ವೆನ್ಷನ್ ಸೆಂಟರ್, ಕೊಡವ ಸಮಾಜ, ವಸಂತನಗರ. ಬೆಳಗ್ಗೆ 10
- ಕಲಾ ಪ್ರಕಾಶಂ ಸೋಲ್ ಆಫ್ ಡ್ಯಾನ್ಸ್ ಸಂಸ್ಥೆಯ ಪ್ರೇಕ್ಷಾಂಜಲಿ ಕೊಪ್ಪದ ಅವರ ಶ್ರೀಪದಿ ಸ್ವರಂ ಭರತನಾಟ್ಯ ಪ್ರದರ್ಶನ. ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಸಂಜೆ 5.30
- ಕನ್ನಡ ನಾಟಕೋತ್ಸವ ಸಂಭ್ರಮ -2026ರ ವೆಂಕಟರಮಣಯ್ಯ ಡಿ. ನಿರ್ದೇಶನದ ಜಲಗಾರ ನಾಟಕ ಪ್ರದರ್ಶನ. ಸ್ಥಳ : ಉದಯಭಾನು ಕಲಾಸಂಘ, ಕೆಂಪೇಗೌಡನಗರ. ಸಂಜೆ 6.30

ಐಪಿಎಲ್ ಹವಾ 19
ಚುಟುಕು ಕ್ರಿಕೆಟ್ ಹಬ್ಬ
ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಶನಿವಾರ, 11 ಏಪ್ರಿಲ್ 2026
ಬೆಂಗಳೂರು

ಕಿರುಸುದ್ದಿ



ಜೂ. ಹಾಕಿ ತಂಡಕ್ಕೆ ವೈಟ್ ಕೋಚ್

• **ಹೊಸದಿಲ್ಲಿ:** ಭಾರತೀಯ ಮಹಿಳೆಯರ ಜೂನಿಯರ್ ಹಾಕಿ ತಂಡಕ್ಕೆ ಟೀಮ್ ವೈಟ್ ಅವರನ್ನು ಮುಖ್ಯ ತರಬೇತುದಾರರನ್ನಾಗಿ ಮಾಡಲಾಗಿದೆ. ಶುಕ್ರವಾರದಂದು ಈ ಬಗ್ಗೆ ಭಾರತೀಯ ಹಾಕಿ ಸಂಸ್ಥೆ ಅಧಿಕೃತವಾಗಿ ತಿಳಿಸಿದ್ದು, ಆಸ್ಟ್ರೇಲಿಯಾದ ಹೈಪರ್ಫಾರ್ಮನ್ಸ್ ತರಬೇತುದಾರರಾದ ವೈಟ್ ಅವರ ನೇತೃತ್ವದಲ್ಲಿ ನಮ್ಮ ತಂಡ ಇನ್ನಷ್ಟು ಸದೃಢಗೊಳ್ಳಲಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ಹಾಕಿ ಇಂಡಿಯನ್ ಲೀಗ್ ಪಂದ್ಯಾವಳಿಯಲ್ಲಿ ತಮಿಳು ನಾಡು ತಂಡದ ತರಬೇತುದಾರರಾಗಿದ್ದ ಅವರು, ಬೆಲ್ಜಿಯಂ ತಂಡಕ್ಕೆ ತರಬೇತಿ ನೀಡಿದ್ದರು. ಅವರದ್ದೇ ನೇತೃತ್ವದಲ್ಲಿ ಅಲ್ಲಿನ ಅಂಡರ್-21 ತಂಡವು 2025ರ ವಿಶ್ವಕಪ್ ಪಂದ್ಯಾವಳಿಯಲ್ಲಿ ಕಂಚಿನ ಪದಕ ಗೆದ್ದುಕೊಂಡಿತು. 2001ರಿಂದ 2004ರವರೆಗೂ ಅವರು ಬೆಲ್ಜಿಯಂ ಮಹಿಳಾ ಹಾಕಿ ತಂಡದ ತರಬೇತುದಾರರ ತಂಡದಲ್ಲಿದ್ದರು. ಅಲ್ಲದೆ, ಆಸ್ಟ್ರೇಲಿಯಾ ಜೂನಿಯರ್ ತಂಡದ ಮುಖ್ಯ ಕೋಚ್ ಕೂಡ ಅವರು ಆಗಿದ್ದರು. ಕೋಚ್ ಆದ ಬಗ್ಗೆ ಮಾತನಾಡಿರುವ ಅವರು, ಇತ್ತೀಚೆಗೆ ನಾನು ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ತಮಿಳುನಾಡು ತಂಡದ ಭಾಗವಾಗಿದ್ದೆ. ನಾನು ಭಾರತದಲ್ಲಿ ಕಾಲ ಕಳೆದಿದ್ದೇನೆ. ಅಲ್ಲಿನ ಹಾಕಿ ಉತ್ಸಾಹ ಮೆಚ್ಚುವಂಥದ್ದು. ಭಾರತದಲ್ಲಿ ಜನರು ಕೌಶಲ ಹೊಂದಿದ್ದಾರೆ. ತಂಡವನ್ನು ಸದೃಢಗೊಳಿಸಿ ಚಾಂಪಿಯನ್ ಆಗಿಸುವುದೇ ನನ್ನ ಉದ್ದೇಶ ಎಂದು ಹೇಳಿದ್ದಾರೆ.

ಹೈರಾಕ್ಸ್ ಸ್ಪರ್ಧೆಗೆ ಕೌರ್, ಸಿಂಧು



• **ಬೆಂಗಳೂರು:** ಭಾರತದ ಅತಿ ದೊಡ್ಡ ಫಿಟ್ನೆಸ್ ರೇಸ್ ಆಗಿ ಹೊರಹೊಮ್ಮುತ್ತಿರುವ ಅಲ್ಟಾಹ್ಯೂಮನ್ ಹೈರಾಕ್ಸ್ ಬೆಂಗಳೂರು ಸ್ಪರ್ಧೆಗೆ ಈ ಬಾರಿ ತಾರೆಯರ ಕಳೆ ಸೇರ್ಪಡೆಯಾಗಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ. ವಿ. ಸಿಂಧು ಹಾಗೂ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಶನಿವಾರ ಮತ್ತು ಭಾನುವಾರದಂದು ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಈ ಸ್ಪರ್ಧೆಯಲ್ಲಿ 8,200ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಇದು ಭಾರತದಲ್ಲಿ ಮೊದಲ ಎರಡು ದಿನಗಳ ಹೈರಾಕ್ಸ್ ಸ್ಪರ್ಧೆಯಾಗಿದ್ದು, ಮುಂಬೈ ಮತ್ತು ದೆಹಲಿಯ ಬಳಿಕ ಬೆಂಗಳೂರು ಮೂರನೇ ನಗರವಾಗಿ ಆತಿಥ್ಯ ವಹಿಸುತ್ತಿದೆ. ಹೈರಾಕ್ಸ್ ಸ್ಪರ್ಧೆಯ ವಿನ್ಯಾಸ ಜಾಗತಿಕ ಮಟ್ಟದಲ್ಲಿ ಒಂದೇ ರೀತಿಯಾಗಿದೆ. 8 ಬಾರಿ 1 ಕಿಮೀ ಓಟದ ಜೊತೆಗೆ 8 ವಿಧದ ಶಾರೀರಿಕ ವ್ಯಾಯಾಮಗಳನ್ನು ಒಳಗೊಂಡಿದೆ. ಸ್ಕೀ ಎರ್ಗ್, ಸ್ಲೆಡ್ ಪುಶ್, ಸ್ಲೆಡ್ ಪುಲ್, ಬರ್ಪಿ ಬ್ರಾಡ್ ಜಂಪ್ಸ್, ರೋಯಿಂಗ್, ಫಾರ್ಮರ್ಸ್ ಕ್ಯಾರಿ, ಸ್ಯಾಂಡ್‌ಬ್ಯಾಗ್ ಲಂಜಸ್ ಮತ್ತು ವಾಲ್ ಬಾಲ್ಸ್ ಮೊದಲಾದ ವ್ಯಾಯಾಮಗಳು ಸ್ಪರ್ಧಿಗಳ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ. ಅಲ್ಟಾಹ್ಯೂಮನ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋಹಿತ್ ಕುಮಾರ್ ಮಾತನಾಡಿ, ದೇಹದ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಪ್ರದರ್ಶನದ ಮೂಲ. ನಿದ್ರೆ ಮತ್ತು ಪುನಶ್ಚೇತನದ ಮಾಹಿತಿಯನ್ನು ಉಪಯೋಗಿಸಿ ಜನರು ಆರೋಗ್ಯ ಸುಧಾರಿಸಬಹುದು ಎಂದು ಹೇಳಿದರು.

ಬಿಲ್ಲಿ ಜೀನ್ ಕಪ್: ಭಾರತಕ್ಕೆ ಸೋಲು

• **ಹೊಸದಿಲ್ಲಿ:** ಇಂಡೋನೇಷ್ಯಾ ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಭಾರತ ಮಹಿಳೆಯರ ತಂಡವು ಬಿಲ್ಲಿ ಜೀನ್ ಕಿಂಗ್ ಕಪ್ ಪಂದ್ಯಾವಳಿ ಪ್ಲೇಆಫ್‌ಗೇರುವ ಅವಕಾಶ ಕಳೆದುಕೊಂಡಿದೆ. ದಿಲ್ಲಿಯಲ್ಲಿ ಶುಕ್ರವಾರದಂದು ನಡೆದ ಪಂದ್ಯದಲ್ಲಿ ಭಾರತ ಎದುರಾಳಿ ಇಂಡೋನೇಷ್ಯಾದೊಂದಿಗೆ ಸೋತಿತು. ಬುಧವಾರ ನಡೆದಿದ್ದ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆದ್ದಿದ್ದ ಭಾರತ ಪ್ಲೇಆಫ್‌ಗೇರುವ ಅವಕಾಶ ಉಳಿಸಿಕೊಂಡಿತು. ಆದರೆ ಶುಕ್ರವಾರ 3-0ರಿಂದ ಸೋತು ಹೊರನಡೆಯಿತು. ಆರಂಭಿಕ ಪಂದ್ಯದಲ್ಲಿ ಸಹಜಾ, ಜಾನಿಸ್ ವಿರುದ್ಧ 6-2, 6-1ರಿಂದ ಗೆದ್ದರು. ನಂತರ ವೈಷ್ಣವಿ, ಪ್ರೀಕ್ಷಾ ಅವರೊಂದಿಗೆ ಸೋತರು. ಮೂರನೇ ಪಂದ್ಯದಲ್ಲಿ ಜುನಿಲ್ ಮತ್ತು ಅಲ್ದಿಲ್ಲಾ, ಅಂಕಿತಾ ಹಾಗೂ ರುತುಜಾ ಅವರನ್ನು ಸೋಲಿಸಿದೆ.

ಕುಸಿದ ಆರ್‌ಸಿಬಿಗೆ ನಾಯಕ ಆಸರೆ | ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ

ರಜತ್ ಪಾಟಿದಾರ್ ಆರ್ಭಟ

• **ಗುವಾಹಟಿ:** ಒಂದು ಬದಿಯಲ್ಲಿ ವಿಕೆಟ್ ಬಿದ್ದರೂ ಮತ್ತೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತುಕೊಂಡ ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್(63) ಆರ್‌ಸಿಬಿ ತಂಡವನ್ನು ಕುಸಿಯಲು ಬಿಡಲಿಲ್ಲ. ಅತ್ಯಂತ ಅವಶ್ಯ ಸಮಯದಲ್ಲಿ ತಮ್ಮ ಅರ್ಧ ಶತಕದೊಂದಿಗೆ ರಾಜಸ್ಥಾನಕ್ಕೆ ಸ್ಪರ್ಧಾತ್ಮಕ ಗುರಿ ಕೊಟ್ಟರು.

ರನ್ ಗಳಿಸಿದ್ದರೂ ವಿಕೆಟ್‌ಗಳನ್ನು ಬೇಗನೆ ಕಳೆದುಕೊಂಡ ಆರ್‌ಸಿಬಿ ತಂಡವನ್ನು ರಾಜಸ್ಥಾನ ಅಂದುಕೊಂಡ ಮೊತ್ತದಲ್ಲಿ ಕಟ್ಟಿಹಾಕಲಿಲ್ಲ. ಏಳು ಬೀಳುಗಳ ಮಧ್ಯೆ ಮತ್ತೊಮ್ಮೆ ಮಿಂಚಿದ ಆರ್‌ಸಿಬಿ ಕಟ್ಟಿಹಾಕಬಹುದಾದ ಗುರಿ ನಿರ್ಮಿಸಿದ ನಂತರ ಶುಕ್ರವಾರದ ಗೆದ್ದವರ ನಡುವಿನ ಪಂದ್ಯ ಮೊದಲ ಇನ್ನಿಂಗ್ಸ್ ಭಾರೀ ಪೈಪೋಟಿಗೆ ಸಾಕ್ಷಿಯಾಯಿತು. ಪಾಟಿದಾರ್ ಅವರ ನಾಯಕನಾಟದ ಬಲದೊಂದಿಗೆ 20 ಓವರ್‌ವರೆಗೂ ಬ್ಯಾಟಿಂಗ್ ಮಾಡಿದ ರಾಯಲ್ ಬೆಂಗಳೂರು 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿದೆ.

ಕೊಹ್ಲಿ ಕಿಕ್-ಸ್ಟಾರ್ಟ್: ಮೊದಲು ಬ್ಯಾಟಿಂಗ್‌ಗಿಳಿದ ಬೆಂಗಳೂರು ಮೊದಲನೇ ಎಸೆತದಲ್ಲೇ ಫಿಲಿಪ್ ಸಾಲ್ಟ್ ಅವರ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂಕದಲ್ಲಿ ಬಂದ ದೇವದತ್ತ ಪಡಿಕ್ಕಲ್ ಎಂದಿನಂತೆ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಇತ್ತ ಕೊಹ್ಲಿ ಮೊದಲಿಗೆ ಎರಡು ಬಾರಿ ಜೀವದಾನ ಪಡೆದರು. ಮುಂದಿನ 10 ಬಾಲ್‌ಗಳಲ್ಲಿ 7 ಬೌಂಡರಿ ಬಾರಿಸಿದ ಅವರು, 32 ರನ್ ಗಳಿಸಿದರು. ಕ್ರಮೇಣ ಆರ್‌ಸಿಬಿ ದಂಡಿಸಲಾರಂಭಿಸಿತು. ತೀರಾ ಅಬ್ಬರಿಸುವ ಹೊತ್ತಲ್ಲಿ ಅನಿರೀಕ್ಷಿತವಾಗಿ ಬಂದ ರವಿ ಬಿಷ್ಣೋಯ್ ತಮ್ಮ ಕರಾರುವಾಕ್ ಗೂಗ್ಲಿಯೊಂದಿಗೆ ಕೊಹ್ಲಿ ವಿಕೆಟ್ ಪಡೆದರು. ಇದಕ್ಕೂ ಮುನ್ನವೇ ಪಡಿಕ್ಕಲ್ 14 ರನ್‌ಗೆ ವಿಕೆಟ್ ಒಪ್ಪಿಸಿದ್ದರು.

ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಕೃಣಾಲ್ ಪಾಂಡ್ಯ ಸೆಟ್ ಆಗುವ ನಿರೀಕ್ಷೆ ಮುಗಿಸಿಕೊಳ್ಳುವಷ್ಟರಲ್ಲಿ 1 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಆರ್‌ಆರ್ 62 ರನ್‌ಗಳಿಗೆ 4 ವಿಕೆಟ್ ಕಬಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ಜಿತೇಶ್ ಶರ್ಮಾ, 5 ರನ್‌ಗೆ ವಿಕೆಟ್ ಒಪ್ಪಿಸಿದರು. ಆರ್‌ಸಿಬಿ 80 ರನ್ ದಾಟುವ ಮೊದಲೇ 5 ವಿಕೆಟ್ ಕಳೆದುಕೊಂಡಿತು. ಕಳೆದ ಪಂದ್ಯದಲ್ಲಿ ವಿಸ್ಫೋಟಕ ಬ್ಯಾಟಿಂಗ್ ಮಾಡಿದ್ದ ಟೀಮ್ ಡೇವಿಡ್ 13 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಪಾಟಿದಾರ್ ನಾನ್‌ಸ್ಟ್ರೈಕ್‌ನಲ್ಲಿ ನಿಂತವರೆ ನಿಂತರು ಇನ್ನುಳಿದ ಬ್ಯಾಟಿಗರು ವಿಕೆಟ್ ಒಪ್ಪಿಸುತ್ತಾ ಬಂದರು.



ಆರ್‌ಸಿಬಿ ಪಡೆಗೆ ಜೋಶ್

ಗೆಲುವಿನ ಹಾದಿಯಲ್ಲಿರುವ ಬೆಂಗಳೂರು ತಂಡಕ್ಕೆ ಆಸೀಸ್ ವೇಗಿ ಹ್ಯಾಜೆಲ್ವುಡ್ ಜೋಶ್ ತಂದರು. ಗಾಯದಿಂದ ಚೇತರಿಸಿಕೊಳ್ಳುತ್ತಿದ್ದ ಹ್ಯಾಜೆಲ್ವುಡ್ ಶನಿವಾರದಂದು ಮೈದಾನಕ್ಕಿಳಿದರು. ಕಳೆದ ಎರಡು ಪಂದ್ಯಗಳಲ್ಲಿ ಹೊರಗುಳಿದಿದ್ದ ಅವರು, ಸಂಪೂರ್ಣ ಚೇತರಿಸಿಕೊಂಡಿದ್ದರೂ ಫಿಟ್ನೆಸ್‌ನಿಂದಾಗಿ ಪ್ರಮಾಣಪತ್ರಕ್ಕಾಗಿ ಕಾಯುತ್ತಿದ್ದರು. ಹ್ಯಾಜೆಲ್ವುಡ್ ಆ್ಯಶಸ್ ಸಮಯದಲ್ಲೇ ಗಾಯದಿಂದಾಗಿ ಹೊರಗುಳಿದಿದ್ದರು. ಕಾರಣ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲೂ ಆಡಿರಲಿಲ್ಲ. ಹೈದರಾಬಾದ್ ವಿರುದ್ಧ ಆರ್‌ಸಿಬಿ ಆಡಿದ್ದಾಗಲೇ ತಂಡ ಸೇರಿಕೊಂಡರೂ ಕಳೆದ ಎರಡು ಪಂದ್ಯಗಳಲ್ಲಿ ಅವರು ಕಣಕ್ಕಿಳಿದಿರಲಿಲ್ಲ. ರಾಜಸ್ಥಾನ ವಿರುದ್ಧದ ಪಂದ್ಯಕ್ಕೆ ಅವರು ಜೇಕಬ್ ಡಫಿ ಬದಲಾಗಿ ಆಡಿದರು. ಇದರೊಂದಿಗೆ ಬಲಿಷ್ಠ ಪಡೆಗೆ ಅನುಭವದ ಬಲ ತಂದಿದ್ದಾರೆ.

ಅಯ್ಯರ್ ಕಣಕ್ಕೆ

ರೋಮಾರಿಯೊ ಶೇಫರ್ಡ್ ಕೆಲ ಹೊತ್ತು ತಮ್ಮ ಬ್ಯಾಟಿಂಗ್ ಮಾಡಿದರು. ಆದರೆ ಜಡೇಜಾ ಹೋಡಿದ ಎಸೆತಕ್ಕೆ ಕ್ಯಾಚ್ ಆದರು. ಅವರ ವಿಕೆಟ್ ಬಿದ್ದಂತೆ ಇದೇ ಮೊದಲ ಬಾರಿಗೆ ವೆಂಕಟೇಶ್ ಅಯ್ಯರ್ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದರು. ಒಂದಿಷ್ಟು ಸಮಯ ಪಿಚ್‌ಗೆ ಹೊಂದಿಕೊಳ್ಳುತ್ತಿದ್ದಂತೆ ಇತ್ತ ಸೆಟ್ ಆಗಿದ್ದ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಂದು ಹಂತದಲ್ಲಿ ನೂರಕ್ಕೂ ಕಡಿಮೆ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡುತ್ತಿದ್ದ ಅವರು, ಸ್ಲಾಗ್ ಓವರ್‌ಗಳಲ್ಲಿ 250 ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡತೊಡಗಿದರು. ಇದರೊಂದಿಗೆ 40 ಬಾಲ್‌ಗಳಲ್ಲಿ 63 ರನ್ ಬಾರಿಸಿದರು. ಇದರಲ್ಲಿ 4 ಸಿಕ್ಸರ್ ಮತ್ತು ಬೌಂಡರಿಗಳಿವೆ. ಕೊನೆಯ ಓವರ್‌ಗಳಲ್ಲಿ ವೆಂಕಟೇಶ್ ಅಯ್ಯರ್ ಉತ್ತಮ ಬ್ಯಾಟಿಂಗ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು.

ಚೆನ್ನೈ-ದಿಲ್ಲಿ ಪೈಪೋಟಿ

• **ಚೆನ್ನೈ:** ಗೆಲುವಿನ ಹಾದಿಯಲ್ಲಿರುವ ಪಂಜಾಬ್ ಕಿಂಗ್ಸ್ ಮತ್ತು ಎರಡು ಸೋಲುಗಳೊಂದಿಗೆ ಹಿನ್ನಡೆ ಅನುಭವಿಸಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಶನಿವಾರದ ಡಬಲ್ ಹೆಡರ್‌ನ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಕೊನೆಯ ಕ್ಷಣದಲ್ಲಿ ಗುಜರಾತ್ ಟೈಟಾನ್ಸ್ ವಿರುದ್ಧ ಸೋತು ಗೆಲುವಿನ ಹಳಿ ತಪ್ಪಿಸಿಕೊಂಡಿರುವ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶನಿವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ವೀಕೆಂಡ್‌ನ ಸೂಪರ್ ಪಂದ್ಯಗಳು ಅಭಿಮಾನಿಗಳಿಗೆ ಮನರಂಜನಾ ರಸದೌತಣ ನೀಡುವುದಕ್ಕೆ ಸಿದ್ಧವಾಗಿದೆ.

ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಉತ್ತಮ ಪ್ರದರ್ಶನ ನೀಡುತ್ತಿರುವ ಪಂಜಾಬ್ ಕಿಂಗ್ಸ್ ತಂಡವು ಕಳೆದ ಪಂದ್ಯದಲ್ಲಿ ಕೆಕೆಆರ್‌ನೊಂದಿಗೆ ಅಂಕ ಹಂಚಿಕೊಂಡಿದೆ. ಇತ್ತ ಹೈದರಾಬಾದ್ ಕಳೆದ ಪಂದ್ಯದಲ್ಲಿ ಸೋಲನುಭವಿಸಿದೆ. ಹೀಗಿರುವಾಗ ಮೊದಲನೇ ಪಂದ್ಯದಲ್ಲಿ ಭಾರೀ ಪೈಪೋಟಿ ನೋಡಲು ಸಿಗುವುದು ಖಚಿತ ಎನ್ನಬಹುದು. ಇನ್ನು ಎರಡನೇ ಪಂದ್ಯದಲ್ಲಿ ಆಡುತ್ತಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಸೋಲಿನಿಂದ ಹೊರಬರುವ ಯೋಜನೆ ಹಾಕಿಕೊಂಡರೆ, ದಿಲ್ಲಿ ಮತ್ತೆ ಲಯಕ್ಕೆ ಬರಲು ಸಿದ್ಧವಾಗಿದೆ.

ಪಂಜಾಬ್-ಹೈದರಾಬಾದ್ ಪೈಪೋಟಿ: ಪಂಜಾಬ್ ಕಿಂಗ್ಸ್ ಮೆಗಾ ಹರಾಜಿನಲ್ಲಿ ತಂಡವನ್ನು ಬದಲಾಯಿಸಿಕೊಂಡು ಹೊಸ ರೂಪ ಪಡೆದಿಕೊಂಡಿದೆ. ಕಳೆದ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿತ್ತು. ಈ ಬಾರಿಯೂ ತನ್ನ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದೆ. ಬ್ಯಾಟಿಂಗ್ ಬಲ ಹೊಂದಿರುವ ತಂಡವು ಪ್ರಿಯಾಂಶ್, ಕೊನೊಲಿ, ಶ್ರೇಯಸ್ ಅಯ್ಯರ್ ಅವರಿಂದ ಬಲಗೊಂಡಿದೆ. ಅಲ್ಲದೆ ಶಶಾಂಕ್ ಸಿಂಗ್, ಸ್ಟೋಯಿನಿಸ್, ಪ್ರಭುಸಿಮ್ರನ್ ಅಂಥವರೂ ತಂಡದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಅರ್ಷದೀಪ್ ಸಿಂಗ್, ವೈಶಾಖ್, ಯಾನ್ಸನ್ ಅಂಥವರು ಲಯದಲ್ಲಿದ್ದಾರೆ. ಮುಖ್ಯವಾಗಿ ಸ್ಪಿನ್ ವಿಭಾಗದಲ್ಲಿ ಚಾಹಲ್ ಕೂಡ ವಿಕೆಟ್ ಕಿತ್ತಿದ್ದಾರೆ. ಇನ್ನು ಕಿಶನ್ ನೇತೃತ್ವದಲ್ಲಿ ಆಡುತ್ತಿರುವ ಹೈದರಾಬಾದ್ ಕೂಡ ವಿಶ್ವಾಸದಲ್ಲಿ ಕಾಣಿಸಿಕೊಂಡಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ. ಹೆಡ್, ಅಭಿಷೇಕ್ ಲಯಕ್ಕೆ ಮರಳಿದ್ದಾರೆ. ಲಖನೌ ವಿರುದ್ಧದ ಪಂದ್ಯದಲ್ಲಿ ರನ್ ಮಾಡದಿದ್ದರೂ, ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಹೈದರಾಬಾದ್ ಹೊಂದಿದೆ. ಆದರೆ ಒಂದು ಕಡೆ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ.

ಚೆನ್ನೈ-ದಿಲ್ಲಿ ಹಣಾಹಣಿ: ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗುತ್ತಿರುವ ದಿಲ್ಲಿ ಹಾಗೂ ಚೆನ್ನೈ ಎರಡೂ ಪಂದ್ಯಗಳು ಲಯ ಕಳೆದುಕೊಂಡಿವೆ. ಮಿಲ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರೂ ಕಳೆದ ಪಂದ್ಯದಲ್ಲಿ ಸೋತಿತ್ತು ದಿಲ್ಲಿ. ಚೆನ್ನೈ ಆಡಿರುವ ಮೂರೂ ಪಂದ್ಯಗಳಲ್ಲಿ ಸೋತಿದೆ. ಮುಖ್ಯವಾಗಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಸಮತೋಲಿತ ತಂಡ ದಿಲ್ಲಿ ಹೊಂದಿದ್ದರೆ ಚೆನ್ನೈನಲ್ಲಿ ಅನುಭವದ ಕೊರತೆ ಕಾಣಿಸಿಕೊಳ್ಳುತ್ತಿದೆ. ಇತ್ತ ದಿಲ್ಲಿ ಕಡೆ ಉತ್ತಮ ಬೌಲಿಂಗ್ ಪಡೆಯಿದ್ದರೂ ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸಿದೆ. ರಾಹುಲ್ ಲಯಕ್ಕೆ ಬಂದಿರುವುದು ಬಲ ತಂದರೂ ಮಧ್ಯಮ ಕ್ರಮಾಂಕದಲ್ಲಿ ಹಿನ್ನಡೆ ಅನುಭವಿಸುತ್ತಿದೆ.



ಪಂದ್ಯಗಳ ವಿವರ
ಹೈದರಾಬಾದ್-ಪಂಜಾಬ್, ಎಲ್ಲಿ: ಚಂಡೀಗಢ
ಸಮಯ: ಮಧ್ಯಾಹ್ನ 3:30, ಚೆನ್ನೈ-ದಿಲ್ಲಿ, ಎಲ್ಲಿ: ಚೆನ್ನೈ, ಸಮಯ: ಸಂಜೆ 7:30,
ಉಭಯ ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್‌ನಲ್ಲಿ ಪ್ರಸಾರವಾಗಲಿವೆ.

ಸೆಮಿಫೈನಲ್‌ಗೆ ಆಯುಷ್ ಶೆಟ್ಟಿ

• **ಹೊಸದಿಲ್ಲಿ:** ಕನ್ನಡಿಗರಾದ ಆಯುಷ್ ಶೆಟ್ಟಿ ಅವರ ಬಲಿಷ್ಠ ಆಟ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮುಂದುವರಿದಿದೆ. ನಾಕೌಟ್ ಪಂದ್ಯಗಳಲ್ಲಿ ಅಚ್ಚಳಿಯದ ಪ್ರದರ್ಶನ ನೀಡುತ್ತಿರುವ ಅವರು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜೋನಾಥನ್ ಕ್ರಿಸ್ಟಿ ಅವರನ್ನು ಸೋಲಿಸಿ ಸೆಮಿಫೈನಲ್‌ಗೇರಿದರು.

ವಿಶ್ವ ಬ್ಯಾಡ್ಮಿಂಟನ್ ಆಟಗಾರರಲ್ಲಿ ನಾಲ್ಕನೇ ಸ್ಥಾನ ಹೊಂದಿರುವ ಜೋನಾಥನ್ ಎದುರು ಮಾಜಿ ಜೂನಿಯರ್ ಚಾಂಪಿಯನ್‌ಶಿಪ್ ಪಂದ್ಯಾವಳಿಯ ವಿನ್ನರ್ ಆಯುಷ್ ಮೊದಲಿನಿಂದಲೂ ಆಕ್ರಮಣಕಾರಿ ಆಟ ಆಡಿದರು. ಮೊದಲನೇ ಸೆಟ್‌ನಲ್ಲಿ ಉಭಯ ಆಟಗಾರರು ಪೈಪೋಟಿ ನಡೆಸಿದರು. ಆರಂಭದಲ್ಲಿ ಜೋನಾಥನ್ ಮುನ್ನಡೆ ಸಾಧಿಸಿದರೂ ಆಯುಷ್ ಸ್ಥೈರ್ಯದೊಂದಿಗೆ ಎದುರಿಸಿದರು. ತಮ್ಮ ಆಕ್ರಮಣಕಾರಿ ಮನಸ್ಥಿತಿಯೊಂದಿಗೆ ಚಾಣಾಕ್ಷ ಆಟ ಜೋಡಿಸಿ ಎದುರಾಳಿ ಮೇಲೆ ಭಾರೀ ಒತ್ತಡ ಹೇರಿದರು. ಮಧ್ಯಮ ಪಂದ್ಯದಲ್ಲಿ ಸ್ಕೋರ್ ಸಮಗೊಂಡವು. ಮತ್ತೆ ಜೋನಾಥನ್ ಮುನ್ನಡೆ ಸಾಧಿಸಿದರು. ಆದರೆ ಇದೆಲ್ಲದಕ್ಕೂ ತಕ್ಕ ಉತ್ತರ ನೀಡಿದ ಆಯುಷ್ ಸ್ಕೋರ್ ಅನ್ನು ಸಮಗೊಳಿಸಿದರು. ಗೇಮ್ ಪಾಯಿಂಟ್‌ಗಳಿಗಾಗಿ ಉಭಯ ಆಟಗಾರರು ಹೋರಾಡಬೇಕಾಯಿತು.

ಗೇಮ್ ಪಾಯಿಂಟ್‌ನಲ್ಲಿ ಆಯುಷ್ ಮುನ್ನಡೆ ಸಾಧಿಸಿದರೂ ಗೆಲ್ಲಲು ಬಿಡಲಿಲ್ಲ ಜೋನಾಥನ್. ಆದರೆ ಈ ಹಂತದಲ್ಲಿ ಮತ್ತೊಮ್ಮೆ ಆಕ್ರಮಣಕಾರಿ ಪ್ರದರ್ಶನ ನೀಡಿದ ಆಯುಷ್ ಸೆಟ್ ಅನ್ನು 23-21ರಿಂದ ಗೆದ್ದರು. ಎರಡನೇ ಸೆಟ್ ಈಗ ನಿರ್ಣಾಯಕ. ಅಲ್ಲಿಯೂ ಆಯುಷ್ ಮುನ್ನಡೆ ಸಾಧಿಸಿದರು. ಆದರೆ ತ್ವರಿತ ಕಂಬ್ಯಾಕ್ ಮಾಡಿದ ಎದುರಾಳಿ ಜೋನಾಥನ್ ಪಂದ್ಯವನ್ನು ರೋಚಕ ಹಂತಕ್ಕೆ ಕೊಂಡೊಯ್ದರು. ಆದಾಗ್ಯೂ ಎದುರಾಳಿಗೆ ಮುನ್ನಡೆ ಬಿಟ್ಟುಕೊಡದೆ 21-17ರಿಂದ ಗೆಲುವು ಸಾಧಿಸಿದ ಆಯುಷ್ ಸೆಮಿಫೈನಲ್‌ಗೇರಿದರು.

ದಿನದ ಮತ್ತಷ್ಟು ಪಂದ್ಯಗಳಲ್ಲಿ ಚೀನಾದ ವೆಂಗ್ ವಿರುದ್ಧ ವಿಟಿದಾಸ್ರಾನ್ ಗೆಲುವು ಸಾಧಿಸಿದರು. ಕೊರಿಯಾದ ನರಾವೊಕಾ ವಿರುದ್ಧದ ಪಂದ್ಯದಲ್ಲಿ ಶಿ ಗೆಲುವು ಸಾಧಿಸಿದರು. ಲೋಹ್ ವಿರುದ್ಧ ಚೌ ಗೆಲುವು ಸಾಧಿಸಿದರು. ಸೆಮಿಫೈನಲ್ ಪಂದ್ಯಗಳು ಶನಿವಾರ ನಡೆಯಲಿವೆ. ಅಲ್ಲಿ ಅವರು ಕುನ್ಲಾವುಟ್ ವಿಟಿಸ್ರಾನ್ ಅವರನ್ನು ಎದುರಿಸಲಿದ್ದಾರೆ. ಇನ್ನುಳಿದಂತೆ ಯಾವುದೇ ವಿಭಾಗದಲ್ಲೂ ಭಾರತೀಯರು ಭಾಗವಹಿಸುತ್ತಿಲ್ಲ. ಏಕೆಂದರೆ ಸಿಂಧು-ಪೂಜಾ ಹೊರಬಿದ್ದ ನಂತರ ಮಹಿಳಾ ವಿಭಾಗದಲ್ಲಿ ಅಭಿಯಾನ ಅಂತ್ಯಗೊಂಡರೆ, ಉಳಿದ ವಿಭಾಗಗಳಲ್ಲಿ ಭಾರತೀಯರು ಪರಾಭವಗೊಂಡಿದ್ದಾರೆ.



» ನಾಲ್ಕನೇ ಶ್ರೇಯಾಂಕಿತ ಜೋನಾಥನ್ ಸೋಲಿಸಿದ ಕನ್ನಡಿಗ
» ರೋಚಕ ಪಂದ್ಯದಲ್ಲಿ ನೇರ ಸೆಟ್ ಗೆಲುವು

ಬೆಂಗಳೂರಿಗೆ ಕೇರಳ ಬ್ಲಾಸ್ಟರ್ಸ್ ಸವಾಲು!

• **ಬೆಂಗಳೂರು:** ಬೆಂಗಳೂರು ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್ ವಿರುದ್ಧದ ಮಹತ್ವದ ಹಣಾಹಣಿಗೆ ಸಜ್ಜಾಗುತ್ತಿದ್ದು, ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರದಂದು ಪಂದ್ಯ ನಡೆಯಲಿದೆ.

ಈ ಪಂದ್ಯಕ್ಕೆ ಇನ್ನಷ್ಟು ಉತ್ಸಾಹ ತುಂಬುತ್ತಿರುವುದು ಆಶ್ಲೇ ವೆಸ್ಟ್‌ವುಡ್ ಅವರ ಮರಳುವಿಕೆ. ಬೆಂಗಳೂರು ತಂಡದ ಆರಂಭಿಕ ಯಶಸ್ಸಿನ ರೂವಾರಿ ಹಾಗೂ ಎರಡು ಐ-ಲೀಗ್ ಪ್ರಶಸ್ತಿಗಳ ಹರಿಕಾರರಾಗಿದ್ದ ಅವರು, ಈಗ ಪ್ರತಿಸ್ಪರ್ಧಿ ತಂಡದ ಮುಖ್ಯ ತರಬೇತುದಾರರಾಗಿ ಮರಳುತ್ತಿದ್ದಾರೆ. ಹಾಂಗ್ ಕಾಂಗ್ ಮತ್ತು ಅಫ್ಘಾನಿಸ್ತಾನ ತಂಡಗಳೊಂದಿಗೆ ಅಂತಾರಾಷ್ಟ್ರೀಯ ಅನುಭವ ಪಡೆದಿರುವ ವೆಸ್ಟ್‌ವುಡ್, ಈಗ ಅಂಕಪಟ್ಟಿಯಲ್ಲಿ 13ನೇ ಸ್ಥಾನದಲ್ಲಿರುವ ಕೇರಳ ತಂಡವನ್ನು ಮುನ್ನಡೆಸುತ್ತಿದ್ದಾರೆ.

ಇನ್ನೊಂದೆಡೆ, ಗೋವಾ ವಿರುದ್ಧ 2-0 ಅಂತರದ ಭರ್ಜರಿ ಜಯ ಸಾಧಿಸಿರುವ ಪೆಪ್ ಮುನಿಯೊಜ್ ನೇತೃತ್ವದ ಬೆಂಗಳೂರು ತಂಡ, ತನ್ನ ತವರು ಮೈದಾನದ ಪ್ರಾಬಲ್ಯವನ್ನು ಮುಂದುವರಿಸುವ ವಿಶ್ವಾಸದಲ್ಲಿದೆ. ಕಂಠೀರವ ಕ್ರೀಡಾಂಗಣದಲ್ಲಿ ಕೇರಳ ಬ್ಲಾಸ್ಟರ್ಸ್ ವಿರುದ್ಧ ಆಡಿದ 9 ಐಎಸ್‌ಎಲ್ ಪಂದ್ಯಗಳಲ್ಲಿ ಬೆಂಗಳೂರು ಎಫ್‌ಸಿ ಈಗಾಗಲೇ 7 ಗೆಲುವುಗಳನ್ನು ದಾಖಲಿಸಿ ಐತಿಹಾಸಿಕ ಮೇಲುಗೈ ಹೊಂದಿದೆ. ಪಂದ್ಯಕ್ಕೂ ಮುನ್ನ ಕ್ಲಬ್‌ನ ದಂತಕಥೆ ಸುನಿಲ್ ಛೆತ್ರಿ ಮಾತನಾಡಿ, ಡರ್ಬಿ ಪಂದ್ಯಗಳಲ್ಲಿ ಅಂಕಪಟ್ಟಿಯ ಸ್ಥಾನಕ್ಕೆ ಮಹತ್ವವಿಲ್ಲ, ಕೇರಳ ತಂಡವು ಯಾವಾಗಲೂ ಹೋರಾಟದ ಮನೋಭಾವದೊಂದಿಗೇ ಕಣಕ್ಕಿಳಿಯುತ್ತದೆ. ನಾವು ಪಂದ್ಯದ ಆರಂಭದಿಂದಲೇ ಚುರುಕಾಗಿರಬೇಕು. ಪೂರ್ಣ 90 ನಿಮಿಷಗಳ ಕಾಲ ಏಕಾಗ್ರತೆಯನ್ನು ಕಾಯ್ದುಕೊಳ್ಳಬೇಕು. ನಮ್ಮ ಆಟದ ಮೇಲೆ ಮಾತ್ರ ಗಮನ ಹರಿಸಬೇಕು, ಎಂದು ಹೇಳಿದರು.

ಲಖನೌಗೆ ಎರಡನೇ ಗೆಲುವು, ಕೋಲ್ಕತ್ತಾಗೆ ಮೂರನೇ ಸೋಲು

ಕೆಕೆಆರ್‌ನಿಂದ ಗೆಲುವು ಕಸಿದ ಮುಕುಲ್

• **ಕೋಲ್ಕತ್ತಾ:** ಕೋಲ್ಕತ್ತಾ ನೈಟ್ ರೈಡರ್ಸ್ ಬಾಯಿಯಿಂದ ಗೆಲುವು ಕಸಿದ 21 ವರ್ಷದ ಯುವಕ ಮುಕುಲ್ ಚೌದರಿ ನಿಬ್ಬೆರಗಾಗಿರುವ ಬ್ಯಾಟಿಂಗ್‌ನೊಂದಿಗೆ ಲಖನೌ ಸೂಪರ್ ಜೈಂಟ್ಸ್‌ಗೆ ಎರಡನೇ ಜಯ ತಂದರು.

ಕೋಚ್ ಜಸ್ಟಿನ್ ಲ್ಯಾಂಗರ್, ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಹೇಳಿಕೆಯನ್ನು ಅವಲೋಕಿಸುವಂತೆ ಮಾಡಿದ ಮಧ್ಯಮ ಕ್ರಮಾಂಕದ ಬ್ಯಾಟರ್ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ನೆನಪಿಡಲೇಬೇಕಾದ ಇನ್ನಿಂಗ್ಸ್ ಆಡಿಬಿಟ್ಟರು. ಕೆಕೆಆರ್ ನೀಡಿದ್ದ 182 ರನ್ ಗುರಿ ಬೆನ್ನತ್ತುವಾಗ ಲಖನೌ ಬೇಗನೆ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿ ಸಿಲುಕಿಕೊಂಡಿತ್ತು. ಬದೋನಿ ಆಸರೆಯಾದರು. ಆದರೆ ಅವರೂ 54 ರನ್ ಗಳಿಸಿ ವಿಕೆಟ್ ಕೊಟ್ಟ ನಂತರ ಲಖನೌ ತೀರಾ ಹಿನ್ನಡೆಯಲ್ಲಿತ್ತು. ಆದರೆ ಮುಕುಲ್ ಚೌದರಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ಲಖನೌ 3 ವಿಕೆಟ್‌ಗಳ ಗೆಲುವು ಸಾಧಿಸಿದೆ. ಪಂದ್ಯದ ರೂವಾರಿ ಮುಕುಲ್ ಶ್ರೇಷ್ಠ ಆಟಗಾರ ಅನ್ನಿಸಿಕೊಂಡರು. ಬೆಸ್ಟ್ ಬೌಲರ್ ಪಟ್ಟ ಅಂಕುಲ್ 2 ವಿಕೆಟ್ ಪಡೆದರೂ ಅದು ಲಖನೌನ ದಿಗ್ವೇಶ್ ರಾಥಿ ಅವರ ಏಕನಾಮಿಗೆ ಹೋಯಿತು. ಈ ಗೆಲುವಿನೊಂದಿಗೆ ಲಖನೌ ಎರಡನೇ ಗೆಲುವು ಸಾಧಿಸಿದರೆ ಕೆಕೆಆರ್ ಮೂರನೇ ಸೋಲನುಭವಿಸಿದೆ.

ಸಂಕ್ಷಿಪ್ತ ಸ್ಕೋರ್
ಕೆಕೆಆರ್: 20 ಓವರ್‌ಗಳಲ್ಲಿ 181/4;
ರಘುವಂಶಿ 45, ರಹಾನೆ 41; ದಿಗ್ವೇಶ್ 25/1
ಲಖನೌ: 20 ಓವರ್‌ಗಳಲ್ಲಿ 182/7;
ಮುಕುಲ್ 54★, ಆಯುಷ್ 54;
ಅಂಕುಲ್ 32/2



ಪಂದ್ಯದ ದಿಕ್ಕನ್ನೇ ಬದಲಾಯಿಸಿದ ಮುಕುಲ್

ಲಖನೌ ತಂಡದ ಪ್ರಮುಖ ಬ್ಯಾಟರ್‌ಗಳು 104 ರನ್ ಆಗುವಷ್ಟರಲ್ಲಿ ಕಳೆದುಕೊಂಡಿದ್ದರು. ಸುನಿಲ್ ನರೈನ್ ತಮ್ಮ ಮಾರಕ ದಾಳಿಯಿಂದಾಗಿ ಪಂದ್ಯದ ದಿಕ್ಕು ದಿಸೆ ಬದಲಾಯಿಸಿದ್ದರು. ವೈಭವ್ ಆರೋರಾ ಕರಾರುವಾಕ್ ದಾಳಿಯೊಂದಿಗೆ ಮಿಂಚಿದ್ದರು. ಇತ್ತ ಲಖನೌ ಪಡೆಯಲ್ಲಿ ಹೋರಾಟ ಮಾಡುತ್ತಿದ್ದ ಆಯುಷ್ ಬದೋನಿ ಕೂಡ ಔಟಾದರು. ಅಲ್ಲಿಂದ ಕೆಕೆಆರ್‌ನ ಗೆಲುವಿನ ಶೇ. 85ಕ್ಕೇರಿತ್ತು. ಲಖನೌ ಗೆಲುವಿನಾಸೆ ಕೈಚೆಲ್ಲುವ ಹಂತಕ್ಕೇರಿತು. ಮೊದಲಿಗೆ ಭಾರೀ ಪರದಾಟ ನಡೆಸಿದ್ದ ಮುಕುಲ್ 8 ಬಾಲ್‌ನಲ್ಲಿ ಗಳಿಸಿದ್ದು 2 ರನ್. ಒಂದೊಂದು ರನ್‌ಗೂ ಪರದಾಡುತ್ತಿದ್ದ ಮುಕುಲ್ ಪಂದ್ಯವನ್ನೇ ಗೆಲ್ಲಿಸುತ್ತಾರೆ ಎಂಬ ಊಹೆ ಇರಲೇ ಇಲ್ಲ. ಕೊನೆಯ 3 ಓವರ್‌ಗಳಲ್ಲಿ ಲಖನೌಗೆ 43 ರನ್ ಬೇಕಿದ್ದವು. ಅಲ್ಲಿಂದ ಸಿಕ್ಸರ್‌ಗಳನ್ನು ಬಾರಿಸಿದ ಮುಕುಲ್ ಭರವಸೆಯ ಬೆಳಕಾದರು. ಮುಂದಿನ ಕೆಲವು ಬಾಲ್‌ಗಳು ಡಾಟ್ ಆದಂತೆ ಲಖನೌಗೆ ಬೇಕಾಗಿದ್ದದ್ದು 10 ಬಾಲ್‌ಗಳಲ್ಲಿ 30 ರನ್. 19ನೇ ಓವರ್ ಮಾಡಲು ಬಂದ ಗ್ರೀನ್ 16 ರನ್ ಬಿಟ್ಟುಕೊಟ್ಟರು. ಅದರಲ್ಲಿ ಒಂದು ಹೆಲಿಕಾಪ್ಟರ್ ಹಾಗೂ ಒಂದು ಸ್ಫೋಟಕ ಸಿಕ್ಸರ್ ಸೇರಿದೆ. ಕೊನೆಯ ಓವರ್‌ನಲ್ಲಿ ಬೇಕಾಗಿರುವುದು 14 ರನ್. ಮುಖ್ಯವಾಗಿ ವೇಗಿ ಆವೇಶ್ ಖಾನ್ ಸ್ಟ್ರೈಕ್‌ಗೆ ಬಂದರು. ಮೊದಲನೇ ಬಾಲ್ ಸಿಂಗಲ್ ತೆಗೆದಂತೆ ಇತ್ತ ಎರಡನೇ ಬಾಲ್‌ನಲ್ಲಿ ಮತ್ತೊಂದು ಸಿಕ್ಸರ್ ಬಾರಿಸಿದ ಮುಕುಲ್ ಪಂದ್ಯದ ಗೆಲುವಿನ ರೇಖೆ ಎಳೆದರು. ಮೂರು ಮತ್ತು ನಾಲ್ಕನೇ ಬಾಲ್ ಡಾಟ್ ಆದರೂ, ಐದನೇ ಬಾಲ್ ಮತ್ತೊಂದು ಸಿಕ್ಸರ್ ಬಾರಿಸಿದ ಅವರು ಒಂದು ಬಾಲ್ ಒಂದು ರನ್‌ಗೆ ತಂದಿಟ್ಟರು. ಕೊನೆಯ ಬಾಲ್ ಕೂಡ ಡಾಟ್ ಆಯಿತು. ಆದರೆ ರನ್ ಕದ್ದ ಲಖನೌ ಪಂದ್ಯ ಗೆದ್ದುಕೊಂಡಿತು. ಮುಕುಲ್ ಸಾಹಸದಲ್ಲಿ 54 ರನ್ ಸೇರಿವೆ. 7 ಬಾನೆತ್ತರದ ಸಿಕ್ಸರ್‌ಗಳು ಸೇರಿವೆ.

ಆರ್ಚರಿ: ಭಾರತಕ್ಕೆ ಕಂಚಿನ ನಿರೀಕ್ಷೆ

• **ಹೊಸದಿಲ್ಲಿ:** ಮ್ಯಾಕ್ಸಿಕೋದಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ಮೊದಲನೇ ಹಂತದ ಕೂಟದಲ್ಲಿ ಪ್ರಗತಿ ಮತ್ತು ಓಜಸ್ ಇರುವ ಕಾಂಪೌಂಡ್ ತಂಡವು ಉತ್ತಮ ಪ್ರದರ್ಶನದೊಂದಿಗೆ ಮಿಂಚಿದ್ದು, ಕಂಚಿನ ಸ್ಪರ್ಧೆಗೆ ಅರ್ಹತೆ ಪಡೆದುಕೊಂಡರು.

ಮೊದಲನೇ ಸುತ್ತಿನ ಪಂದ್ಯದಲ್ಲಿ ಬೈ ಪಡೆದ ಅವರು, ಎರಡನೇ ಹಂತದಲ್ಲಿ ತೈವಾನ್‌ನೊಂದಿಗೆ ಉತ್ತಮ ಪ್ರದರ್ಶನ ನೀಡಿ 155-151ರಿಂದ ಗೆದ್ದಿತು. ಮೂರನೇ ಸುತ್ತಿನಲ್ಲಿ ಟರ್ಕಿ ತಂಡವನ್ನ 154-152ರಿಂದ ಸೋಲಿಸಿ ಸೆಮಿಫೈನಲ್‌ಗೇರಿತು. ಇಬ್ಬರ ಪ್ರದರ್ಶನ ಚಿನ್ನದ ಪದಕದ ನಿರೀಕ್ಷೆ ಮೂಡಿಸುತ್ತಿದ್ದಂತೆ ಡೆನ್ಮಾರ್ಕ್ ಜೋಡಿ ಎದುರು ಸೆಮಿನಲ್ಲಿ ಸೋತಿತು. ಆದರೆ ಕಂಚಿನ ಪದಕ ಗೆಲ್ಲುವ ಅವಕಾಶವನ್ನು ಹೊಂದಿದ್ದು ಅದರಲ್ಲಿ ಅಮೆರಿಕ ತಂಡವನ್ನು ಎದುರಿಸಲಿದೆ. ಇತ್ತ ರಿಕರ್ವ್ ವಿಭಾಗದಲ್ಲಿ ಧೀರಜ್ ಮತ್ತು ಯಶದೀಪ್ ಜೋಡಿ ಸ್ಪೇನ್ ವಿರುದ್ಧ ಸೋತರೆ, ಕುಂಕುಮ್ ಹಾಗೂ ದೀಪಿಕಾ ಕುಮಾರಿ ಗ್ರೇಟ್ ಬ್ರಿಟನ್ ವಿರುದ್ಧ ಗೆದ್ದರೂ ಎರಡನೇ ಸುತ್ತಿನ ಪಂದ್ಯದಲ್ಲಿ ಟರ್ಕಿ ವಿರುದ್ಧ 4-5 ರಿಂದ ಸೋತಿತು. ಮಿಶ್ರ ತಂಡ ಕೂಡ ಬ್ರೆಜಿಲ್ ವಿರುದ್ಧ ಸೋತಿದೆ.

ಏಷ್ಯನ್ ಬಾಕ್ಸಿಂಗ್: ವಿಶ್ವನಾಥ್ ಸುರೇಶ್‌ಗೆ ಚಿನ್ನ

• **ಹೊಸದಿಲ್ಲಿ:** ಪುರುಷರ 50 ಕೆಜಿ ವಿಭಾಗದಲ್ಲಿ ವಿಶ್ವನಾಥ್ ಸುರೇಶ್ ಜಪಾನ್‌ನ ಡೈಚಿ ಇವೈ ವಿರುದ್ಧ 5-0 ಅಂತರದಲ್ಲಿ ಭರ್ಜರಿ ಜಯ ಸಾಧಿಸಿ ಚಿನ್ನದ ಪದಕ ಗೆದ್ದಿದ್ದು, ಮಂಗೋಲಿಯಾದ ಉಲಾನ್‌ಬಾತರ್‌ನಲ್ಲಿ ನಡೆದ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತನ್ನ ಅಭಿಯಾನವನ್ನು 16 ಪದಕಗಳೊಂದಿಗೆ ಸಮಾಪ್ತಿಗೊಳಿಸಿದೆ.

ಈ ಆವೃತ್ತಿಯಲ್ಲಿ ವಿಶ್ವನಾಥ್ ಚಿನ್ನ ಗೆದ್ದ ಏಕೈಕ ಭಾರತೀಯ ಪುರುಷ ಬಾಕ್ಸರ್ ಆಗಿ ಅವರು ಹೊರಹೊಮ್ಮಿದರು. ಪುರುಷರ 60 ಕೆಜಿ ವಿಭಾಗದ ಫೈನಲ್‌ನಲ್ಲಿ ಸಚಿನ್ ಸಿವಾಚ್ ಕಜಕಸ್ತಾನದ ವಿಶ್ವ ಚಾಂಪಿಯನ್ ಒರಾಜ್ಬೆಕ್ ಅಸ್ಸಿಲ್ಬೆಕೊವ್ ವಿರುದ್ಧ 2-3 ಅಂತರದಲ್ಲಿ ಸೋಲು ಕಂಡರು.

ನಾಲ್ವರಿಗೆ ಕಂಚಿನ ಪದಕ: ಇನ್ನೂ ನಾಲ್ವರು ಭಾರತೀಯ ಪುರುಷರು ಹರ್ಷ್ ಚೌಧರಿ (90 ಕೆಜಿ), ಆಕಾಶ್ (75 ಕೆಜಿ), ಲೋಕೇಶ್ (85 ಕೆಜಿ) ಮತ್ತು ನರೇಂದ್ರ (+90 ಕೆಜಿ) ಕಂಚಿನ ಪದಕಗಳಿಗೆ ತೃಪ್ತಿಪಟ್ಟರು. ಮಹಿಳೆಯರ ವಿಭಾಗದಲ್ಲಿ ಎಲ್ಲಾ 10 ಭಾರತೀಯ ಬಾಕ್ಸರ್‌ಗಳು ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಮೀನಾಕ್ಷಿ ಹೂಡಾ (48 ಕೆಜಿ), ಪ್ರೀತಿ ಪವಾರ್ (54 ಕೆಜಿ), ಪ್ರಿಯಾ ಘಂಘಾಸ್ (60 ಕೆಜಿ) ಮತ್ತು ಅರುಂಧತಿ ಚೌಧರಿ (70 ಕೆಜಿ) ಚಿನ್ನದ ಪದಕ ಗೆದ್ದರು. ಜೈಸ್ಮಿನ್ ಲಾಂಬೋರಿಯಾ (57 ಕೆಜಿ) ಮತ್ತು ಅಲ್ಫಿಯಾ ಪಠಾಣ್ (+80 ಕೆಜಿ) ಬೆಳ್ಳಿ ಪದಕ ಪಡೆದುಕೊಂಡರು.


ಕಂಚಿನ ಪದಕ ವಿಜೇತರಾಗಿ ನಿಖತ್ ಜರೀನ್ (51 ಕೆಜಿ), ಅಂಕುಶಿತಾ ಬೋರೋ (65 ಕೆಜಿ), ಲವ್ಲಿನಾ ಬೋರ್ಗೊಹೈನ್ (75 ಕೆಜಿ) ಮತ್ತು ಪೂಜಾ ರಾಣಿ (80 ಕೆಜಿ) ತಮ್ಮ ತಮ್ಮ ವಿಭಾಗಗಳಲ್ಲಿ ಮಿಂಚಿದರು.

ಭಾರತಕ್ಕೆ ಒಟ್ಟು 16 ಪದಕ



ಪದಬಂಧ 5950

» ರಾಜಾ ಸಂಗಮೇಶ ಹಿರೇಮಠ




ಎಡದಿಂದ ಬಲಕ್ಕೆ
3.ಶ್ರೇಷ್ಠವಾದ ನೆಲೆಯಾದ ಸ್ವರ್ಗ ಪತಿಯ ನಡುವೆ ಇದೆ (5)
5.ಆಹಾರ ಕೆಡದಂತೆ ಸಂರಕ್ಷಿಸುವ ಉಪಕರಣ (5)
6.ಬೆಳದಿಂಗಳನ್ನುಂಡು ಬದುಕುವ ಪಕ್ಷಿ (4)
7.ರಾಜೀವನಿಗಿರುವ ಪ್ರಾಣ (2)
8.ಸೋಮಾರಿ ಗುಣವಿಲ್ಲಿ ತಿರುಗಿದೆ (4)
10.ನಗುವಿನ ನಡುವೆ ಕನಸು ಸಾಕಾರಗೊಂಡಿದೆ (4)
12.ಆಭರಣವಾಗಿ ಬಳಸುವ ಕಲ್ಲು (2)
13.ರಾಮಸೀತೆಯರು ವನವಾಸದಲ್ಲಿ ಧರಿಸಿದ ಬಟ್ಟೆ (4)
15.ಹಿಂದೂಗಳ ಪ್ರಸಿದ್ಧ ಧಾರ್ಮಿಕ ಗ್ರಂಥ (5)
16.ವಿಷವನ್ನು ಧರಿಸಿದ ಕೊರಳುಳ್ಳವನು-ಶಿವ (5)

ಮೇಲಿನಿಂದ ಕೆಳಕ್ಕೆ
1.ಪ್ರಭಾವ ಬಳಸಿಕೊಂಡು ವಿಷಯ ಸಾಧಿಸುವುದು (3)
2.ಶಿವ-ಪತಿ ಸೇರಿ ಜೋಳವಾದರು (5)
3.ಸಮಾಚಾರ ಬರೆದು ಕಳಿಸುವ ಕಾಗದ (2)
4.ಭಿಕ್ಷುಕ-ಯಾಚಕನೀತ (3)
6.ಅಶ್ವಿನಿ ದೇವತೆಗಳಿಂದ ಯೌವನ ಮರಳಿ ಪಡೆದ ಋಷಿ (3)
9.ಧಾನ್ಯ ಸ್ವಚ್ಛಗೊಳಿಸುವ ಸಾಧನ (3)
11.ಅಸ್ಥಿರ ಚಿತ್ತವಿಲ್ಲಿ ತಲೆಕೆಳಗಾಗಿದೆ (5)
13.ಸ್ವರ್ಗದಲ್ಲಿರುವವನು-ದೇವತೆ (3)
14.ಕಟ್ಟು ಮೊದಲಿರುವ ವಿರಾಗಿ (3)
15.ಪ್ರಾಪಂಚಿಕ ವ್ಯವಹಾರ-ಅಸ್ತಿತ್ವ (2)

5949 ಉತ್ತರ

ಎಡದಿಂದ ಬಲಕ್ಕೆ:
1.ಪತ್ತೇದಾರ 5.ಆಧಾರ
6.ಮಂದಿರ 8.ಸನಾದಿ
9.ಜಹಜು 10.ಪ್ರತಾಪ
14.ವಜೀರ 16.ಪದಕ
17.ಸುಗತಿ 18.ಪರಿಪಾಕ

ಮೇಲಿನಿಂದ ಕೆಳಕ್ಕೆ :
2.ದಾವರ 3.ವಿರಸ
4.ದೈನಂದಿನ 5.ಆಸ್ತ್ರೇ
7.ದಿವಿಜ 11.ಪರದ
12.ಶಿವಗಣ 13.ವದಂತಿ
15.ಅಸುರ 16.ಪರಾರಿ



ಟೆರರ್ ಅರ್ಚಕನ ಮಗ ಗ್ಯಾಂಗ್‌ಸ್ಟರ್ ಆದ ಕಥೆ



ಚಿತ್ರ: ಟೆರರ್
ನಿರ್ದೇಶನ: ರಂಜನ್ ಶಿವರಾಮೇಗೌಡ
ನಿರ್ಮಾಪಕರು: ಸಿಲ್ಕ್ ಮಂಜು, ರವಿ, ಸ್ವತಾ ವಸಿಷ್ಠ,
ಸಂಗೀತ: ಹರ್ಷವರ್ಧನ್‌ರಾಜ್
ಛಾಯಾಗ್ರಹಣ: ನವೀನ್ ಅಕ್ಷಿ
ತಾರಾಗಣ: ಆದಿತ್ಯ, ಶ್ರೀನಗರ ಕಿಟ್ಟಿ, ಶರತ್ ಲೋಹಿತಾಶ್ವ, ಶಶಿಕುಮಾರ್, ಧರ್ಮ, ಜೋಸೈಮನ್ ಹಾಗೂ ಇತರರು...

ಹೊಸದೊಂದು ಮಾಫಿಯಾ ಸುತ್ತ ನಡೆಯುವ ವಿಭಿನ್ನವಾದ ಕಥಾಹಂದರ ಇಟ್ಟುಕೊಂಡು ನಿರ್ದೇಶಕ ರಂಜನ್ ಶಿವರಾಮಗೌಡ ಅವರು ಈ ವಾರ ತೆರೆಕಂಡಿರುವ ಟೆರರ್ ಚಿತ್ರವನ್ನು ನಿರೂಪಿಸಿದ್ದಾರೆ, ಇಲ್ಲಿ ನಟ ಆದಿತ್ಯ ಒಬ್ಬ ಯಂಗ್ ಗ್ಯಾಂಗ್‌ಸ್ಟರ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಎರಡು ಶೇಡ್‌ಗಳಲ್ಲಿ ಸ್ಟೈಲಿಶ್ ಆಗಿಯೇ ಅವರ ಪಾತ್ರ ಮೂಡಿಬಂದಿದೆ. ಪ್ರಾರಂಭದಲ್ಲಿ ನೆಗೆಟಿವ್ ಶೇಡ್‌ನಲ್ಲಿ ಸಾಗುವ ಅವರ ಪಾತ್ರ ನಂತರದಲ್ಲಿ ಪಾಸಿಟಿವ್ ಆಗಿ ಚೇಂಜ್ ಆಗುತ್ತಾ ಹೋಗುತ್ತದೆ, ದೇವಸ್ಥಾನದ ಅರ್ಚಕ ಪದ್ಮನಾಭರಾಯರ(ಕುಮಾರ್ ಬಂಗಾರಪ್ಪ) ಪುತ್ರ ಬಾಲಕ ಆದಿತ್ಯ, ಮುಂದೆ ಗ್ಯಾಂಗ್‌ಸ್ಟರ್ ವಿಜಯ್ ಆದಿತ್ಯರಾಯ್ ಆಗಿ ಹೇಗೆ ಹಂತ ಹಂತವಾಗಿ ಬದಲಾಗುತ್ತಾ ಹೋಗುತ್ತಾನೆ ಎಂಬುದನ್ನು ಟೆರರ್ ಚಿತ್ರದಲ್ಲಿ ಹೇಳಲಾಗಿದೆ, ತಂದೆಯ ಅಕಾಲಿಕ ನಿಧನದಿಂದ ಕಂಗೆಟ್ಟ ಆದಿತ್ಯ ಒಂದು ಸಂದರ್ಭದಲ್ಲಿ ಧೈರ್ಯದಿಂದ ಹೊಡೆದಾಟ ನಡೆಸುವುದನ್ನು ಕಂಡ ಭೈರವದಾಸ್(ಶರತ್ ಲೋಹಿತಾಶ್ವ) ಚುನಾವಣೆ ಸಮಯದಲ್ಲಿ ಜನರನ್ನು ಸೆಳೆಯಲು ಇಂಥ ಧೈರ್ಯವಂತ ಯುವಕ ಜತೆಗಿರಬೇಕೆಂದು ಸೇರಿಸಿಕೊಳ್ಳುತ್ತಾನೆ, ಆದರೆ ಅದು ಈತನ ಸಹೋದರ ಭರತ್‌ದಾಸ್(ಶ್ರೀನಗರ ಕಿಟ್ಟಿ)ಗೆ ಇಷ್ಟವಿರಲ್ಲ, ಬರು ಬರುತ್ತಾ ಇದು ಖಂಡಿತ ಅಸಾಧ್ಯ ಎನ್ನುವಂಥ ಕೆಲಸಗಳನ್ನು ತನ್ನ ಬುದ್ದಿವಂತಿಕೆಯಿಂದಲೇ ಮಾಡಿಕೊಂಡು ಬರುವ ಆದಿತ್ಯನ ಮೇಲೆ ಭೈರವದಾಸ್‌ಗೆ ಸಂಪೂರ್ಣ ಭರವಸೆ ಇರುತ್ತದೆ,

ಒಮ್ಮೆ ಚುನಾವಣೆಗೆಂದು ಬೇರೊಂದು ಕಡೆ ಅಡಗಿಸಿಟ್ಟಿದ್ದ ಅಪಾರ ಮೊತ್ತದ ಹಣವನ್ನು ಪೊಲೀಸರ ಕಣ್ಣು ತಪ್ಪಿಸಿ ತಮ್ಮ ಕಾರ್ಯಸ್ಥಾನಕ್ಕೆ ತರುವ ಜವಾಬ್ದಾರಿಯನ್ನು ವಿಜಯ್ ಆದಿತ್ಯನಿಗೆ ವಹಿಸುತ್ತಾನೆ, ಆ ಕೆಲಸವನ್ನೂ ಸಹ ವಿಜಯ್ ಆದಿತ್ಯ ತುಂಬಾ ಬುದ್ದಿವಂತಿಕೆ ಉಪಯೋಗಿಸಿ ನಿರ್ವಹಿಸಿ, ಆ ಹಣವನ್ನು ಬಚ್ಚಿಡಲು ಸುರಕ್ಷಿತ ಜಾಗ ಎಂದರೆ ದೇವಸ್ಥಾನ ಎಂದು ಅಲ್ಲೇ ಇಡುತ್ತಾನೆ, ಒಂದು ಮಗುವಿನ ಸಾವಿನಿಂದ ವಿಚಲಿತನಾದ ವಿಜಯ್ ದೇವಸ್ಥಾನದ ಹೆಸರಲ್ಲಿ ಮಾಡುತ್ತಿದ್ದ ಕೆಟ್ಟ ಕೆಲಸಗಳನ್ನು ಬಿಟ್ಟು ಒಳ್ಳೆಯ ಕೆಲಸಕ್ಕೆ ಮುಂದಾಗುತ್ತಾನೆ. ತನಗೆ ಬಂದ ಹಣದಿಂದ ಕಷ್ಟ ಹೇಳಿಕೊಂಡು ಬಂದ ಜನರ ತೊಂದರೆಗಳನ್ನು ಬಗೆಹರಿಸುತ್ತ ಬರುತ್ತಾನೆ. ಹೀಗೆ ಸಾಗುವ ಕಥೆಯಲ್ಲಿ ಅನೇಕ ಟ್ವಿಸ್ಟ್ ಅಂಡ್ ಟರ್ನ್‌ಗಳನ್ನಿಟ್ಟುಕೊಂಡು ನಿರ್ದೇಶಕ ರಂಜನ್ ಕೊನೇ ಸೀನ್‌ವರೆಗೂ ಸಹ ಚಿತ್ರವನ್ನು ಕುತೂಹಲಕರವಾಗಿ ತೆಗೆದುಕೊಂಡು ಹೋಗಿದ್ದಾರೆ,

ಖಡಕ್ ವಿಲನ್ ಭರತ್ ದಾಸ್ ಆಗಿ ಶ್ರೀನಗರ ಕಿಟ್ಟಿ ಅದ್ಭುತ ಅಭಿನಯ ನೀಡಿದ್ದಾರೆ, ನಾಯಕ ಆದಿತ್ಯ ಎರಡು ಶೇಡ್ ಪಾತ್ರಗಳಿಗೂ ಸಹ ನ್ಯಾಯ ಒದಗಿಸಿದ್ದಾರೆ, ರಾಜಕಾರಣಿಯಾಗಿ ಶರತ್ ಲೋಹಿತಾಶ್ವ ಎಂದಿನಂತೆ ಪಾತ್ರವೇ ತಾನಾಗಿ ನಟಿಸಿದ್ದಾರೆ, ಇಡೀ ನೆಟ್ ವರ್ಕ್ ಹಿಂದಿರುವ ಪಶುಪತಿಯ ಪಾತ್ರದಲ್ಲಿ ಹಿರಿಯನಟ ಶಶಿಕುಮಾರ್ ಅಭಿನಯಿಸಿದ್ದಾರೆ.

ಈ ಚಿತ್ರದ ಹೆಚ್ಚಿನ ಭಾಗದ ಚಿತ್ರೀಕರಣವನ್ನು ಬೆಂಗಳೂರು ನಗರದಲ್ಲೇ ನಡೆಸಲಾಗಿದೆ, ಹಿರಿಯನಟ ದೇವರಾಜ್, ಸಿದ್ಲಿಂಗು ಶ್ರೀಧರ್, ಧರ್ಮ ಇವರೆಲ್ಲ ತಮಗೆ ಸಿಕ್ಕ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ, ಚಿತ್ರದ ಸಂಭಾಷಣೆಗಳು ಕಥೆಗೆ ಪೂರಕವಾಗಿವೆ, ಹರ್ಷವರ್ಧನ್‌ರಾಜ್ ಅವರ ಸಂಗೀತದಲ್ಲಿ ಮೂಡಿಬಂದಿರುವ ಹಾಡುಗಳು ಚೆನ್ನಾಗಿವೆ, ನವೀನ್ ಅಕ್ಷಿ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕೆ ಪೂರಕವಾಗಿದೆ.

ಚಿತ್ರ ವಿಮರ್ಶೆ

ಪೀಟರ್ ಸ್ನೇಹದಲ್ಲಿ ಅಸೂಯೆ ಹುಟ್ಟಿದಾಗ..

» ಸತ್ಯಮೂರ್ತಿ



ಕರ್ನಾಟಕದ ಕರಾವಳಿ ಭಾಗದಲ್ಲಿ ಚಂಡೆ ಮೇಳದ ಮಹತ್ವ, ಅಲ್ಲಿ ಅದಕ್ಕಿರುವ ಗೌರವ, ಮತ್ತು ಅದರ ಸುತ್ತ ನಡೆಯುವ ಯುವಕರ ರಾಜಕೀಯ, ನಾಯಕ ಪೀಟರ್ (ರಾಜೇಶ್ ಧ್ರುವ)ನ ಏಳಿಗೆಯನ್ನು ಕಂಡು ಅದನ್ನು ಸಹಿಸದ ಸ್ನೇಹಿತ ಮಾಡುವ ಕುತಂತ್ರಕ್ಕೆ ಬಲಿಯಾಗಿ ಕೊಲೆ ಅಪವಾದ ಹೊತ್ತು ಊರನ್ನೇ ತೊರೆಯಬೇಕಾಗುತ್ತದೆ, ಪೀಟರ್ ಕ್ರಿಶ್ಚಿಯನ್ ಆದರೂ ಆತನಿಗೆ ಹಿಂದೂ ಸಂಸ್ಕೃತಿ, ಆಚಾರ ವಿಚಾರಗಳು ಎಂದರೆ ಅಪಾರ ಪ್ರೀತಿ, ಗೌರವ. ಗುರುಗಳಾದ ಕೊಂಚಟ್ಟ ಅವರಿಂದ ಕಲಿತ ಚಂಡೆ ಬಾರಿಸುವ ವಿದ್ಯೆಯನ್ನು ದೇವರ ಮುಂದೆ ಪ್ರದರ್ಶಿಸುತ್ತ ದೇವರಸೇವೆ ಮಾಡುವ ಚಂಡೆ ಮೇಳಕ್ಕೆ ಪೀಟರ್‌ನೇ ಸಾರಥಿ. ಈತನ ಬಲಗೈ ಬಂಟನಂತಿದ್ದ ಗೆಳೆಯ ಶಂಭೂ(ರಾಮನಾಡಗೌಡ) ಇದನ್ನು ಸಹಿಸದಾಗುತಾನೆ, ಬಹಳ ದಿನಗಳ ನಂತರ ಊರಿಗೆ ಮರಳುವ ಪೀಟರ್ ಹಿಂದಿನ ಕಥೆ ಒಂದೊಂದಾಗಿ ತೆರೆದುಕೊಳ್ಳುತ್ತಾ ಹೋಗುತ್ತದೆ,

ಊರಲ್ಲಿ ಕಾಲೇಜಿಗೆ ಬರುವ ಮೀರಾ(ರವೀಕ್ಷಾ ಶೆಟ್ಟಿ)ಳ ಕಣ್ಣಿಗೆ ಬೀಳುವ, ಪೀಟರ್‌ನ ನಡೆ ನುಡಿ ಆಕೆಗೆ ಇಷ್ಟವಾಗುತ್ತದೆ, ಪರಿಚಯ ಸ್ನೇಹವಾಗಿ ನಂತರ ಪ್ರೀತಿಯತ್ತ ತಿರುಗುತ್ತದೆ. ಆದರೆ ಪೀಟರ್ ಕುಟುಂಬದಲ್ಲಿ ನಡೆದ ಒಂದು ದುರ್ಘಟನೆಯಿಂದ ಮಾನಸಿಕ ಅಸ್ವಸ್ಥಳಾದ ತಾಯಿ ಮೇರಿ (ಪ್ರತಿಭಾ ನಾಯಕ್), ಸದಾ ಕುಡಿತದ ದಾಸನಾದ ತಂದೆ ಜೋಸೆಫ್(ರಾಧಾಕೃಷ್ಣ ಕುಂಬ್ಳೆ), ಮಗನ ಲೈಫ್‌ಲ್ಲಿ ನಡೆದ ಒಂದು ದುರಂತ ಘಟನೆ ಆ ಕುಟುಂಬವನ್ನು ಸದಾ ಕಾಡುತ್ತದೆ. ಇದೇ ಸಮಯಕ್ಕೆ ಪಿಟಿ ಟೀಚರ್ ರಾಧಾ(ಜಾನ್ವಿ ರಾಯಲ) ಹಾಗೂ ಆಕೆಯ ಪುತ್ರ ವಿನೀಶ್ ಪೀಟರ್ ಪಕ್ಕದ ಮನೆಗೆ ಬಾಡಿಗೆಗೆ ಬರುತ್ತಾರೆ, ಅಲ್ಲಿ ರಾಧಾಳ ಮನಸ್ಸಿನಲ್ಲೂ ಒಂದು ಆತಂಕ, ದ್ವೇಷದ ಕಿಚ್ಚು ಸದಾ ಕಾಡುತ್ತಲೇ ಇರುತ್ತದೆ. ಅದೇರೀತಿ ಅಸ್ವಸ್ಥ ಪೀಟರ್ ತಾಯಿಗೆ ರಾಧಾಳನ್ನು ಕಂಡಾಗಲ್ಲ ಸತ್ತುಹೋದ ಮಗನ ಪತ್ನಿ ಜೆಸ್ಸಿಯನ್ನೇ ನೋಡಿದಂತೆ ಭಾಸವಾಗಿ, ಆಕೆಯನ್ನು ಕೊಲ್ಲುವಷ್ಟು ಕೋಪ ಬರುತ್ತದೆ, ಹೀಗೆ ಗೊಂದಲದ ಗೂಡಾದ ಪೀಟರ್ ಮನಸ್ಥಿತಿಯಲ್ಲಿ ಏನು ಯುದ್ಧ ನಡೆಯುತ್ತದೆ, ಅದಕ್ಕೆ ಕಾರಣವಾದರೂ ಏನಿರಬಹುದು ಎಂಬುದನ್ನು ಚಿತ್ರದಲ್ಲಿ ಹಂತ ಹಂತವಾಗಿ ನಿರ್ದೇಶಕ ಸುಕೇಶ್ ಶೆಟ್ಟಿ ಎಳೆ ಎಳೆಯಾಗಿ ಬಿಡಿಸುತ್ತಾ ಹೋಗುತ್ತಾರೆ,

ಇದೆಲ್ಲದರ ಹಿಂದಿರುವ ಫ್ಲ್ಯಾಶ್‌ಬ್ಯಾಕ್ ಘಟನೆಗಳು ಪೀಟರ್ ಬದುಕಿನಲ್ಲಿ ಆಟವಾಡುತ್ತಾ ಸಾಗುತ್ತದೆ.

ನಿರ್ದೇಶಕ ಸುಕೇಶ್‌ಶೆಟ್ಟಿ ಆಯ್ಕೆ ಮಾಡಿಕೊಂಡಿರುವ ಕಥಾವಸ್ತು ವಿಭಿನ್ನವಾಗಿದ್ದು, ಸ್ನೇಹಿತ ಮಾಡುವ ದ್ರೋಹದಿಂದ ಏನೆಲ್ಲಾ ಅನಾಹುತಗಳಾಗುತ್ತದೆ ಎಂಬುದನ್ನು ಸೂಕ್ಷ್ಮವಾಗಿ, ಅಷ್ಟೇ ಅಚ್ಚುಕಟ್ಟಾಗಿ ತೆರೆಮೇಲೆ ತಂದಿದ್ದಾರೆ. ತಾಯಿ ಮಗನ ಬಾಂಧವ್ಯ, ಪ್ರೀತಿಯ ಸೆಳೆತ, ಗೆಳೆಯನ ಏಳಿಗೆಕಂಡು ಅಸೂಯೆಪಡುವುದು ಹೀಗೆ ಒಂದಷ್ಟು ಅಂಶಗಳು ಪ್ರೇಕ್ಷಕರ ಗಮನ ಸೆಳೆಯುತ್ತದೆ. ಚಿತ್ರದ ದ್ವಿತೀಯ ಭಾಗ ಹೆಚ್ಚು ಸೆಳೆಯುವಂತಿದೆ. ಹಾಗೆಯೇ ಈ ಚಿತ್ರದ ಮತ್ತೊಂದು ಹೈಲೈಟ್ ಎಂದರೆ ಸಂಗೀತ ಹಾಗೂ ಹಿನ್ನೆಲೆ ಸಂಗೀತ. ಇನ್ನು ಛಾಯಾಗ್ರಾಹಕರ ಕೈಚಳಕ ಅದ್ಭುತವಾಗಿದೆ. ಸಂಕಲನ ಸೇರಿದಂತೆ ತಾಂತ್ರಿಕವಾಗಿ ತಂಡ ಬಹಳಷ್ಟು ಶ್ರಮ ಹಾಕಿರುವುದು ತೆರೆಮೇಲೆ ಕಾಣಿಸುತ್ತದೆ, ಇನ್ನು ನಾಯಕ ರಾಜೇಶ್ ಧ್ರುವ ಪೀಟರ್ ಆಗಿಯೇ ಜೀವಿಸಿದ್ದಾರೆ. ಪಾತ್ರವನ್ನು ಸಮರ್ಥವಾಗಿ ನಿರ್ವಹಿಸುವುದರ ಜೊತೆಗೆ ತಮ್ಮ ಸಾಮರ್ಥ್ಯವನ್ನು ತೆರೆದಿಟ್ಟಿದ್ದಾರೆ. ತೆರೆಮೇಲೆ ಮುದ್ದಾಗಿ ಕಾಣುವ ರವೀಕ್ಷಾ ಶೆಟ್ಟಿ ಸಿಕ್ಕಂಥ ಅವಕಾಶದಲ್ಲಿ ಉತ್ತಮ ಅಭಿನಯ ನೀಡಿದ್ದು, ಎಲ್ಲರ ಗಮನ ಸೆಳೆಯುತ್ತಾರೆ. ವಿಭಿನ್ನಶೇಡ್‌ಗಳಲ್ಲಿ ಕಾಣಿಸಿಕೊಂಡಿರುವ ನಟಿ ಜಾನ್ವಿ ರಾಯಲ ಕೂಡ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ಕ್ಯಾಲೆಂಡರ್ ಮಹಿಳೆಯ ಸಮಸ್ಯೆಗೆ ನಾಯಕನ ಪರಿಹಾರ



ನಮ್ಮ ಬಹುತೇಕ ಮಹಿಳೆಯರು ಪ್ರತಿತಿಂಗಳು ಅನುಭವಿಸುವ ತೊಂದರೆಯ ಮೇಲೆ ಬೆಳಕು ಚೆಲ್ಲುವ ಕಥೆ ಇಟ್ಟುಕೊಂಡು ನಿರ್ದೇಶಕ ನವೀನ್ ಶಕ್ತಿ ಕ್ಯಾಲೆಂಡರ್ ಚಿತ್ರವನ್ನು ನಿರೂಪಿಸಿದ್ದಾರೆ. ಡಾಕ್ಟರ್ ಆಕಾಶ್(ಆದರ್ಶ ಗುಂಡುರಾಜ್) ಅಚಾನಕ್ಕಾಗಿ ಮಾರ್ಗಮಧ್ಯ ಸಿಗುವ ನಕ್ಷತ್ರ(ಸುಷ್ಮಿತಾನಾಯಕ್)ಳನ್ನ ನೋಡಿ ಇಷ್ಟಪಟ್ಟು ಪ್ರೀತಿಸುತ್ತಾನೆ. ಆ ಪ್ರೀತಿ ಮದುವೆಯ ಹಂತಕ್ಕೆ ಹೋಗಿದ್ದರೂ ಒಂದು ಚಿಕ್ಕ ಕಾರಣಕ್ಕೆ ಅವರಿಬ್ಬರೂ ದೂರಾಗಬೇಕಾಗುತ್ತದೆ. ನಂತರ ಕುಡಿತದ ಚಟ ಬೆಳೆಸಿಕೊಳ್ಳುವ ಡಾಕ್ಟರ್ ಆಕಾಶ್ ಜತೆ ನಿಲ್ಲುವ ಸ್ನೇಹಿತೆ ಮಾಳವಿಕ(ನಿವಿಷ್ಕ ಪಾಟೀಲ್)ಳ ಪತಿ ರಾಜ್ ಆಕಸ್ಮಿಕವಾಗಿ ಸಾವಿಗೀಡಾಗುತ್ತಾನೆ. ರಾಜ್ ತಂದೆ ಧನ್ವೀರ್‌ಸಿಂಗ್ (ಶಿವ್‌ಪ್ರದೀಪ್) ತನ್ನ ಪುತ್ರನ ಸಾವಿಗೆ ಕಾರಣರಾದವರನ್ನ ಹಿಡಿಯೋ ಜವಾಬ್ದಾರಿಯನ್ನು ವಿಶೇಷ ತನಿಖಾಧಿಕಾರಿ ಯುವರಾಜು ಒಂಟಿಮನಿ(ರಮೇಶ್ ಇಂದಿರಾ)ಯ ತಂಡಕ್ಕೆ ನೀಡುತ್ತಾನೆ. ಒಂದು ಕಡೆ ಇನ್ವೆಸ್ಟಿಗೇಷನ್ ಸಾಗಿದರೆ ಮತ್ತೊಂದು ಕಡೆ ಗೆಳೆಯ ಸೂರ್ಯ(ಗುರುನಂದನ್)ನ ಮೂಲಕ ಲಾಯರ್(ಸುಚೇಂದ್ರಪ್ರಸಾದ್)ಸಹಕಾರ ಕೇಳುತ್ತಾರೆ. ಹೀಗೆ ಸಾಗುವ ಘಟನೆಗಳ ಹಿಂದೆ ಕೆಲವರ ಮೇಲೆ ಅನುಮಾನ ಮೂಡುತ್ತಾ ಹೋಗುತ್ತದೆ. ಆದರೆ ಇದೆಲ್ಲದಕ್ಕೂ ಪಿಎಸ್‌ಎಂ ಎಂಬ ಮಹಳೆಯರ ಸಮಸ್ಯೆ ಕಾರಣ ಎಂಬ ಸೂಕ್ಷ್ಮ ವಿಷಯವನ್ನು ಆರೋಗ್ಯಸಚಿವೆ(ಮಾಲಾಶ್ರೀ) ಸಮ್ಮುಖದಲ್ಲಿ ಡಾಕ್ಟರ್‌ಗಳ ಮೂಲಕ ಸಮಾಜಕ್ಕೆ ತಿಳಿಸುವುದರೊಂದಿಗೆ ಕಥೆ ಮುಕ್ತಾಯಗೊಳ್ಳುತ್ತದೆ,

ಪೀರಿಯಡ್ ಸಮಯದಲ್ಲಿ, ಪೀರಿಯಡ್‌ಗೂ ಕೆಲದಿನಗಳ ಹಿಂದೆ ಹೆಣ್ಣುಮಕ್ಕಳ ಮನಸ್ಥಿತಿ ಹೇಗಿರುತ್ತದೆ, ಅದರಿಂದ ಅವರ ಮೇಲೆ ಆಗುವ ಪರಿಣಾಮಗಳನ್ನು ಸ್ಪಷ್ಟವಾಗಿ ತೆರೆಯಮೇಲೆ ತೋರುವ ಪ್ರಯತ್ನವನ್ನು ಮಾಡಿದ್ದಾರೆ. ಕ್ಲೈಮ್ಯಾಕ್ಸ್ ವರೆಗೂ ಚಿತ್ರಕಥೆ ಯಾವ ಹಾದಿಯಲ್ಲಿ ಸಾಗುತ್ತಿದೆ ಎಂಬ ಗೊಂದಲ ಪ್ರೇಕ್ಷಕರಲ್ಲಿ ಮೂಡುತ್ತದೆ. ಈ ಚಿತ್ರದ ಸಂಗೀತ, ಛಾಯಾಗ್ರಹಣ, ಸಂಕಲನ ತಕ್ಕಮಟ್ಟಿಗೆ ಮೂಡಿಬಂದಿದೆ. ನಿರ್ಮಾಣದ ಜೊತೆ ನಟನಾಗಿ ಅಭಿನಯಿಸಿರುವ ಆದರ್ಶ ಗುಂಡುರಾಜ್ ಕಷ್ಟಪಟ್ಟು ತಮ್ಮ ಪಾತ್ರವನ್ನು ನಿರ್ವಹಿಸಿದ್ದಾರೆ. ಇನ್ನಷ್ಟು ಪರಿಪಕ್ವತೆ ಬೇಕಿತ್ತು, ಕೆಲವು ಸನ್ನಿವೇಶಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಇನ್ನು ನಾಯಕಿ ಸುಶ್ಮಿತಾ ನಾಯಕ್ ಮುದ್ದು ಮುದ್ದಾಗಿ ನಗು ಮೊಗದಲ್ಲಿ ಸಿಕ್ಕ ಅವಕಾಶಕ್ಕೆ ನ್ಯಾಯ ಒದಗಿಸಿದ್ದಾರೆ.

ಇನ್ನೋರ್ವ ನಟಿ ನಿವಿಷ್ಕ ಪಾಟೀಲ್ ತಮ್ಮ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿದ್ದಾರೆ. ಹಾಗೆಯೇ ಹಿರಿಯನಟ ರಮೇಶ್ ಇಂದಿರಾ ತನಿಖಾಧಿಕಾರಿಯಾಗಿ ಗಮನ ಸೆಳೆಯುತ್ತಾರೆ, ಇನ್ನು ವಿಶೇಷ ಪಾತ್ರದಲ್ಲಿ ಅಭಿನಯಿಸಿರುವ ಮಾಲಾಶ್ರೀ ಸೇರಿದಂತೆ ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮ್ಮಿ ನಾಡು, ಸುಚೇಂದ್ರ ಪ್ರಸಾದ್ ಚಂದ್ರಪ್ರಭ ಈ ಎಲ್ಲಾ ಕಲಾವಿದರು ಚಿತ್ರದ ಓಟಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಹೆಚ್ಚು ಮನರಂಜನೆ ಅಪೇಕ್ಷಿಸದೆ ಮಹಿಳಾ ಪ್ರಧಾನ ಕಥೆಯನ್ನು ಒಳಗೊಂಡಿರುವ ಈ ಚಿತ್ರವನ್ನು ಒಮ್ಮೆ ನೋಡಲು ಅಡ್ಡಿಯೇನಿಲ್ಲ,

ಮಹಿಮಾ ಶೆಟ್ಟಿ ನಿರ್ದೇಶನದ ಗೂಡಾರ್ಥ

ಸಂಪ್ರದಾಯ, ನಿಗೂಢತೆ ಹಾಗೂ ಕಾಮಿಡಿ ಜಾನರ್ ಕಥಹಂದರ ಒಳಗೊಂಡ ಚಿತ್ರ ಗೂಡಾರ್ಥ. ಈ ಚಿತ್ರಕ್ಕೆ ಮಹಿಳಾ ನಿರ್ದೇಶಕಿ ಮಹಿಮಾ ಶೆಟ್ಟಿ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಕಳೆದ ಐದು ವರ್ಷಗಳಿಂದ ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ ಮಹಿಮಾ ಶೆಟ್ಟಿ ಅವರು ಗೂಡಾರ್ಥ ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟಿದ್ದಾರೆ. ಮಹಿಮಾ ಶೆಟ್ಟಿ ಫಿಲಂಸ್ ಲಾಂಛನದಲ್ಲಿ, ಮಹಿಮಾ ಶೆಟ್ಟಿ ಅವರೇ ನಿರ್ಮಿಸಿರುವ ಈ ಚಿತ್ರದಲ್ಲಿ ಮಂಜುಳಾ ಜನಾರ್ಧನ್, ಧೀಮಂತ್ ಪೊಳಲಿ, ಚಿಂತನ್, ಮಾನ್ವಿ ಶೆಟ್ಟಿ, ಅನುರಾಗ್ ಜೋಗಿ ತೊಡಾರ್, ವಿನೋದ್ ನೀರುಮಾರ್ಗ ಮುಂತಾದ ಹೊಸ ಪ್ರತಿಭೆಗಳನ್ನು ಬಳಸಿಕೊಳ್ಳಲಾಗಿದೆ, ಇನ್ನು ಈ ಚಿತ್ರದಲ್ಲಿ ಕರಾವಳಿ ಭಾಗದ ವಿಶೇಷ ಆಚರಣೆಗಳನ್ನು ವಿಶೇಷವಾಗಿ ಬಳಸಿಕೊಳ್ಳಲಾಗಿದೆ.



ಅಲ್ಲದೆ ಚಿತ್ರದ ಚಿತ್ರೀಕರಣವನ್ನೂ ಸಹ ಮಂಗಳೂರಿನ ಆಸುಪಾಸಿನ ಪರಿಸರದಲ್ಲಿಯೇ ನಡೆಸಲಾಗಿದೆ. ಸಂಪ್ರದಾಯ, ನಿಗೂಢತೆ, ಹಾಸ್ಯದಂಥ ಅಂಶಗಳು ಗೂಡಾರ್ಥ ಚಿತ್ರದ ಪ್ರಮುಖ ಕಂಟೆಂಟ್ ಆಗಿದೆ. ನಿರ್ದೇಶಕರೇ ಕಥೆ, ಚಿತ್ರಕಥೆಯ ಜತೆಗೆ ಸಂಭಾಷಣೆ ಬರೆದಿರುವ ಈ ಚಿತ್ರಕ್ಕೆ ಸುರೇಶ್‌ಗೌಡ ರಾಮಕುಂಜ ಅವರ ಛಾಯಾಗ್ರಹಣ, ಗಣೇಶ್ ನೀರ್ಚಾಲ್ ಅವರ ಸಂಕಲನ, ಗುರುಪ್ರಸಾದ್ ಬೆಳ್ತಂಗಡಿ ಅವರ ಕಲರಿಂಗ್, ಲಿಯೋನೆಲ್ ಡಿ.ಮೆಲ್ಲೋ (ಮೆಲೋಡಿಯಂ ಸ್ಟುಡಿಯೋ) ಅವರ ಸಂಗೀತ ನಿರ್ದೇಶನ, ಭರತ್ ತುಳುವ ಅವರ ಸಹಾಯಕ ನಿರ್ದೇಶನವಿದೆ.



ಐದು ಶಾಟ್‌ಗಳಲ್ಲಿ ಚಿತ್ರೀಕರಿಸಲಾದ ವಿಶ್ವದ ಮೊದಲ ಚಿತ್ರ ಅದಿತಿ





ಮಹಿಳಾಪ್ರಧಾನ ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಅದಿತಿ ಚಿತ್ರವು ಕೇವಲ 5 ಶಾಟ್‌ಗಳಲ್ಲಿ ಚಿತ್ರೀಕರಣಗೊಂಡ ವಿಶ್ವದ ಪ್ರಥಮ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ, ಲಿಬರ್ಟಿ ಎಂಬ ಅಡಿಬರಹ ಇರುವ ಈ ಚಿತ್ರಕ್ಕೆ ನೆಲ್ಸನ್ ರೋಜರ್ಸ್.ಡಬ್ಲ್ಯು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಇವರೊಂದಿಗೆ ಸೋಲೋಮನ್. ಕೆ.ಜಾರ್ಜ್ ಅವರು ನಿರ್ದೇಶನದಲ್ಲಿ ಕೈಜೋಡಿಸಿದ್ದಾರೆ. ಮಿಲೇನಿಯಂ ಆಡ್ ಮೀಡಿಯಾ ಬ್ಯಾನರ್ ಅಡಿಯಲ್ಲಿ ವ್ಯಾಲೆರಿನಾ ಮರಿಯ ರೋಜರ್ಸ್ ಮತ್ತು ನೆಲ್ಸನ್ ರೋಜರ್ಸ್.ಡಬ್ಲ್ಯು ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್, ಹಾಡುಗಳ ಬಿಡುಗಡೆ ಮತ್ತು ವೈ2ಕೆ ಮ್ಯೂಸಿಕ್ ಆಡಿಯೋ ಕಂಪನಿಯ ಲೋಗೋ ಲಾಂಚ್ ಸಮಾರಂಭ ಪಂಚತಾರಾ ಹೋಟೆಲ್‌ನಲ್ಲಿ ಅದ್ದೂರಿಯಾಗಿ ನೆರವೇರಿತು. ಆ ದಿನಗಳು ಖ್ಯಾತಿಯ ನಟ ಚೇತನ್ ಅವರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ನೆಲ್ಸನ್ ರೋಜರ್ಸ್ ಅವರು 'ಅದಿತಿ' ಸೈಕಲಾಜಿಕಲ್ ಥ್ರಿಲ್ಲರ್ ಕಾನ್ಸೆಪ್ಟ್ ಒಳಗೊಂಡ ಚಿತ್ರ. ಅದಿತಿ ಎಂಬ ಹುಡುಗಿ ಯಾರು? ಈಕೆ ಏಕೆ ಬಂದಳು? ಏನು ಮಾಡಿದಳು? ಅದಕ್ಕೆ ಕಾರಣವೇನು? ಇವೆಲ್ಲವನ್ನೂ ಕುತೂಹಲಕರ ಕಥೆಯೊಂದಿಗೆ ನಿರೂಪಿಸುವ ಪ್ರಯತ್ನ ಮಾಡಿದ್ದೇನೆ, ವಿಶೇಷವಾಗಿ 'ಅದಿತಿ' ಚಿತ್ರಕ್ಕೆ ವಿಶ್ವದಲ್ಲೇ ಮೊದಲಬಾರಿಗೆ ಕೇವಲ ಐದು ಶಾಟ್‌ಗಳಲ್ಲಿ ಇಡೀ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಚಿತ್ರದ ಪ್ರತಿಯೊಂದು ದೃಶ್ಯಗಳೂ 20ರಿಂದ 25 ನಿಮಿಷಗಳವರೆಗೆ ಇರುತ್ತದೆ. ಇದಕ್ಕಾಗಿ ತಿಂಗಳುಗಟ್ಟಲೆ ಕಲಾವಿದರಿಗೆ ಸೂಕ್ತ ತರಬೇತಿ ನೀಡಿ ನಂತರ ಅವರನ್ನು ಕ್ಯಾಮೆರಾ ಮುಂದೆ ತಂದು ಕೆಲಸ ತೆಗೆದುಕೊಂಡಿದ್ದೇವೆ. ಹಿರಿಯ ಛಾಯಾಗ್ರಾಹಕ ಪಿ.ಕೆ.ಹೆಚ್.ದಾಸ್ ಅವರು ಚಿತ್ರಕ್ಕೆ ತುಂಬಾ ಸಲಹೆ, ಸಹಕಾರ ನೀಡುವುದಲ್ಲದೆ ಅದ್ಭುತ ಶಾಟ್ಸ್‌ಗಳನ್ನು ತೆಗೆದುಕೊಟ್ಟಿದ್ದಾರೆ. ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು, ಮಲೆಯಾಳಂ ಹಾಗೂ ಕೊಂಕಣಿ ಭಾಷೆಗಳಲ್ಲಿ, ಅದಿತಿ ಚಿತ್ರವು ನಿರ್ಮಾಣವಾಗಿದ್ದು ಏಕಕಾಲಕ್ಕೆ ತೆರೆಗೆ ಬರಲಿದೆ. ಈ ಚಿತ್ರದ ಎಲ್ಲಾ ಭಾಷೆಗೂ ಮಹಿಳೆಯರೇ ಸಂಭಾಷಣೆ ಬರೆದಿರುವುದು ವಿಶೇಷ. ಕನ್ನಡದಲ್ಲಿ ಕುಮುದಹಳ್ಳಿ ಅರುಣಮೂರ್ತಿ ಅವರು ಪಂಚಿಂಗ್ ಡೈಲಾಗ್‌ಗಳನ್ನು ಬರೆದಿದ್ದಾರೆ. ಚಿತ್ರದಲ್ಲಿ ಎಂಟರ್‌ಟೈನ್‌ಮೆಂಟ್ ಇರಬೇಕು ಎನ್ನುವ ಸಲುವಾಗಿ ಎರಡು ಗ್ಲಾಮರಸ್ ಹಾಡುಗಳಿಗೆ ಪ್ರಿಯಾ ಮಾಲಿ, ಚೇತನ ನಾಯಕ್ ಅವರು ಧ್ವನಿಯಾಗಿದ್ದಾರೆ. ಇಂತಹ ಚಿತ್ರಕ್ಕೆ ಮಾಧ್ಯಮದ ಪ್ರೋತ್ಸಾಹ ಬೇಕು ಎಂದು ಹೇಳಿದರು.

ಅದಿತಿ ಚಿತ್ರದ ಮುಖ್ಯ ಪಾತ್ರದಲ್ಲಿ ಈಗಾಗಲೇ ಹಲವಾರು ಕನ್ನಡ ಚಿತ್ರಗಳಲ್ಲಿ ನಟಿಸಿ ಗುರುತಿಸಿಕೊಂಡಿರುವ ನಟಿ ಇಶಾನಾ ಸಜ್ಜಾಪ್ಪನವರ ನಟಿಸಿದ್ದಾರೆ. ಇವರೊಂದಿಗೆ ಹರ್ಷಿತಾ ಕಲ್ಲಿಂಗಲ್, ಆರತಿ, ನಿಸರ್ಗ ಮಂಜುನಾಥ್, ಯಶಾ, ಡ್ಯಾನಿ ಕುಟ್ಟಪ್ಪ, ಸುನಿಲ್, ಅಜಿತ್‌ಕುಮಾರ್, ಗೋಪಿ ಮುಂತಾದವರು ನಟಿಸಿದ್ದಾರೆ. ಇನ್ನು ಈ ಚಿತ್ರಕ್ಕೆ ರಮೇಶ್ ಕೃಷ್ಣ ಹಾಗೂ ಕೃಷ್ಣ ಪ್ರಿಯದರ್ಶನ್ ಅವರ ಸಂಗೀತ ಸಂಯೋಜನೆಯಿದೆ. ಕೊನೆಯ ಹಂತದ ಛಾಯಾಗ್ರಹಣವನ್ನು ವೆಂಕಟೇಶ್.ಆರ್. ನಿರ್ವಹಿಸಿದ್ದಾರೆ. ಸೋಲೋಮನ್.ಕೆ. ಜಾರ್ಜ್ ಅವರ ಸಂಕಲನ, ರಾಜ್ ಭಾಸ್ಕರ್ ಅವರ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ. ಬೆಂಗಳೂರು, ಕನಕಪುರದ ಸುತ್ತಮುತ್ತಲ ತಾಣಗಳಲ್ಲಿ ಅದಿತಿಗೆ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ತನ್ನೆಲ್ಲಾ ಕೆಲಸಗಳನ್ನು ಮುಗಿಸಿಕೊಂಡಿರುವ ಈ ಚಿತ್ರವು ಸದ್ಯದಲ್ಲೇ ಸೆನ್ಸಾರ್ ಅಂಗಳಕ್ಕೆ ಹೋಗಲಿದೆ. ಬರುವ ಜೂನ್ ತಿಂಗಳಲ್ಲಿ ಅದಿತಿ ಚಿತ್ರವನ್ನು ಬಿಡುಗಡೆ ಮಾಡಬೇಕೆಂದು ನಿರ್ಮಾಪಕರು ಯೋಜನೆ ಹಾಕಿಕೊಂಡಿದ್ದಾರೆ.



ಟಾಕ್ಸಿಕ್‌ಗೆ ಕಂಟಕವಾದ ಮತ್ತೊಂದು ಬಾಲಿವುಡ್ ಚಿತ್ರ



ರಾಕಿಂಗ್ ಸ್ಟಾರ್ ಯಶ್ ಅಭಿನಯ ಹಾಗೂ ತಮ್ಮದೇ ಸಂಸ್ಥೆಯ ನಿರ್ಮಾಣದ ಬಹು ನಿರೀಕ್ಷಿತ ಟಾಕ್ಸಿಕ್ ಚಿತ್ರದ ಬಿಡುಗಡೆಗೆ ಅದ್ಯಾಕೋ ಒಳ್ಳೇ ಮುಹೂರ್ತವೇ ಸಿಗುತ್ತಿಲ್ಲ, ಈ ಹಿಂದೆ ಧುರಂದರ್-2 ಚಿತ್ರದಿಂದ ತಪ್ಪಿಸಿಕೊಂಡ ಟಾಕ್ಸಿಕ್ ಚಿತ್ರಕ್ಕೀಗ ಮತ್ತೊಂದು ಕಂಟಕ ಎದುರಾಗಿದೆ. ಸದ್ಯ ಜೂನ್ 4ಕ್ಕೆ ಯಶ್ ಅಭಿನಯದ ಟಾಕ್ಸಿಕ್ ಚಿತ್ರ ರಿಲೀಸಾಗಲು ಅಣಿಯಾಗುತ್ತಿದೆ. ಆದರೆ ಬಾಲಿವುಡ್‌ನ ಸಲ್ಮಾನ್ ಖಾನ್ ಅಭಿನಯದ ಮಾತೃಭೂಮಿ ಎಂಬ ಬಿಗ್ ಬಜೆಟ್ ಚಿತ್ರವೂ ಸಹ ಜೂನ್ ಮೊದಲ ವಾರವೇ ಬಿಡುಗಡೆಯಾಗಲು ಸಜ್ಜಾಗಿದೆ.

ಈ ಮೊದಲು ಮೇ 15ರಂದೇ ಬಿಡುಗಡೆಯಾಗಬೇಕಿದ್ದ, ಮಾತೃಭೂಮಿ ಚಿತ್ರ ರೀಶೂಟ್, ಸೆನ್ಸಾರ್ ಸಮಸ್ಯೆಯಿಂದಾಗಿ ಮುಂದಕ್ಕೆ ಹೋಗಿದ್ದು, ಅದೂ ಸಹ ಜೂನ್ 4ರಂದೇ ದೇಶಾದ್ಯಂತ ತೆರೆಕಾಣಲು ಅಣಿಯಾಗುತ್ತಿದೆ. ಈ ಮೂಲಕ ಟಾಕ್ಸಿಕ್ ಚಿತ್ರದ ಸದ್ಯದ ಪರಿಸ್ಥಿತಿ ಈಗ ಬೆಂಕಿಯಿಂದ ಬಾಣಲಿಗೆ ಬಿದ್ದಂತಾಗಿದೆ, ಚಿತ್ರದಲ್ಲಿ ಕಾಂಟ್ರವರ್ಸಿ ಕಥೆಯಿದ್ದ ಕಾರಣದಿಂದ ಮಾತೃಭೂಮಿ ಚಿತ್ರಕ್ಕೆ ಈ ಮೊದಲಿದ್ದ ಬ್ಯಾಟಲ್ ಆಫ್ ಗಲ್ವಾನ್ ಎಂಬ ಟೈಟಲ್ ಹಾಗೂ ಕಥೆಯನ್ನೂ ಸಹ ಬದಲಿಸಿ 40 ದಿನಗಳ ಕಾಲ ಮರು ಚಿತ್ರೀಕರಣ ನಡೆಸಲಾಗಿದೆ.

ಮೇ 15, ಶಾಲಾ-ಕಾಲೇಜುಗಳಿಗೆ ರಜೆ ಇರುತ್ತದೆ ಎಂಬ ಕಾರಣಕ್ಕೇ ಸಲ್ಮಾನ್‌ಖಾನ್ ತಮ್ಮ ಮಾತೃಭೂಮಿ ಚಿತ್ರವನ್ನು ಅಂದು ರಿಲೀಸ್ ಮಾಡಲು ಮುಂದಾಗಿದ್ದರು, ಆದರೆ, ಚಿತ್ರದಲ್ಲಿ ಭಾರತ ಹಾಗೂ ಚೀನಾ ನಡುವಿನ ಗಲ್ವಾನ್ ಘರ್ಷಣೆಯ ವಿಷಯ ಇರುವುದರಿಂದ ಇದರಲ್ಲಿ ಸ್ವಲ್ಪ ಎಡವಟ್ಟಾದರೂ ಸಮಸ್ಯೆಯಾಗಬಹುದು ಎಂಬ ಕಾರಣಕ್ಕೆ ಚಿತ್ರಕಥೆಯಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳಲಾಯಿತು.

ಇದೀಗ ಸೆನ್ಸಾರ್ ಮಂಡಳಿ ಈ ಚಿತ್ರವನ್ನು ವಿಸ್ತೃತವಾಗಿ ನೋಡುವ ಸಾಧ್ಯತೆಯಿದೆ. ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಸಿನಿಮಾ ವೀಕ್ಷಣೆಗೆ ರೆಡಿಯಾಗಲು ಸಾಕಷ್ಟು ಸಮಯ ಬೇಕಾಗುತ್ತದೆ. ಹೀಗಾಗಿ, ಮಾತೃಭೂಮಿ ಚಿತ್ರ ಕೂಡ ಮೇ 15ಕ್ಕೆ ಬದಲಾಗಿ ಜೂನ್ 4ಕ್ಕೇ ತೆರೆಕಾಣುವ ಸಾಧ್ಯತೆಯೇ ದಟ್ಟವಾಗಿದೆ.

ಸದ್ಯ ಜೂನ್ 4ಕ್ಕೆ ಯಶ್ ಅಭಿನಯದ ಟಾಕ್ಸಿಕ್ ಚಿತ್ರ ರಿಲೀಸಾಗಲು ಅಣಿಯಾಗುತ್ತಿದೆ. ಆದರೆ ಬಾಲಿವುಡ್‌ನ ಸಲ್ಮಾನ್ ಖಾನ್ ಅಭಿನಯದ ಮಾತೃಭೂಮಿ ಎಂಬ ಬಿಗ್ ಬಜೆಟ್ ಚಿತ್ರವೂ ಸಹ ಜೂನ್ ಮೊದಲ ವಾರವೇ ಬಿಡುಗಡೆಯಾಗಲು ಸಜ್ಜಾಗಿದೆ. ಈ ಮೊದಲು ಮೇ 15ರಂದೇ ಬಿಡುಗಡೆಯಾಗಬೇಕಿದ್ದ, ಮಾತೃಭೂಮಿ ಚಿತ್ರ ರೀಶೂಟ್, ಸೆನ್ಸಾರ್ ಸಮಸ್ಯೆಯಿಂದಾಗಿ ಮುಂದಕ್ಕೆ ಹೋಗಿದ್ದು, ಅದೂ ಸಹ ಜೂನ್ 4ರಂದೇ ದೇಶಾದ್ಯಂತ ತೆರೆಕಾಣಲು ಅಣಿಯಾಗುತ್ತಿದೆ. ಈ ಮೂಲಕ ಟಾಕ್ಸಿಕ್ ಚಿತ್ರದ ಸದ್ಯದ ಪರಿಸ್ಥಿತಿ ಈಗ ಬೆಂಕಿಯಿಂದ ಬಾಣಲಿಗೆ ಬಿದ್ದಂತಾಗಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26